# www.karunaduexams.com

ಪ್ರಚಲಿತ ವಿದ್ಯಮಾನ ಮತ್ತು ಸಾಮಾನ್ಯ ಜ್ಞಾನ ಕ್ವಿಜ್-ಆಗಸ್ಟ, 2016

www.karunaduexams.com

**ಹೆಚ್ಚಿನ ಮಾಹಿತಿಗಾಗಿ,**

ನೀಮಗೆ ಯಾವುದೇ ಸಹಾಯದ ಅಗತ್ಯವಿದ್ದರೆ, WhatsApp ಮತ್ತು ಸಂದೇಶವನ್ನು ಮಾಡಿ, ದಯವಿಟ್ಟು ಕರೆ ಮಾಡಬೇಡಿ

Mobile: +91- 98805 33259 (Content related queries)

Mobile: +91-9844915689 (Technical and Marketing related queries)

Mobile:+91-9972355744(Management related queries)

1. ಬುಚೆಯೋನ್ ಇಂಟರ್‌ನ್ಯಾಷನಲ್ ಫೆಂಟಾಸ್ಟಿಕ್ ಫಿಲ್ಮ್ ಫೆಸ್ಟಿವಲ್ ನಲ್ಲಿ ಏಷ್ಯಾ ವಿಭಾಗದ ಅತ್ಯುತ್ತಮ ಪ್ರಶಸ್ತಿ ಪಡೆದ ಭಾರತದ ಸಿನಿಮಾ ಯಾವುದು?

   ಅ) ಸೈಕೊ ರಾಮನ್

   ಆ) ಕಬಾಲಿ

   ಇ) ಬಾಹುಬಲಿ

   ಈ) ಆಟೋ ಹೆಡ್

   ಸೈಕೊ ರಾಮನ್

   ಅನುರಾಗ್ ಕಶ್ಯಪ್ ಅವರ ಸರಣಿ ಕೊಲೆಗಳ ಕಥಾ ಹಂದರದ 'ಸೈಕೋ ರಾಮನ್' (ರಾಮನ್ ರಾಘವ್ 2.0) ಚಿತ್ರವು ಕೊರಿಯಾದಲ್ಲಿ ನಡೆದ ಬೈಫಾನ್ (ಬುಚೆಯೋನ್ ಇಂಟರ್‌ನ್ಯಾಷನಲ್ ಫೆಂಟಾಸ್ಟಿಕ್ ಫಿಲ್ಮ್ ಫೆಸ್ಟಿವಲ್)ಉತ್ಸವದಲ್ಲಿ ಏಷ್ಯಾ ವಿಭಾಗದ ಅತ್ಯುತ್ತಮ ಪ್ರಶಸ್ತಿಯನ್ನು ಪಡೆದುಕೊಂಡಿದೆ. ದೀಪಕ್ ಸಂಪತ್ ಅವರು ರೋಹಿತ್ ಮಿತ್ತಲ್ ಅವರ 'ಆಟೋ ಹೆಡ್' ಚಿತ್ರದಲ್ಲಿನ ನಟನೆಗಾಗಿ ಅತ್ಯುತ್ತಮ ನಟ ಪ್ರಶಸ್ತಿಯನ್ನು ಪಡೆದುಕೊಂಡರು.

2. ದೇಶದಲ್ಲೆ ಮೊದಲ ಬಾರಿಗೆ 'ಸುಖೀ ಇಲಾಖೆ' (Happiness Department) ಯನ್ನು ಪ್ರಥಮವಾಗಿ ಆರಂಭಿಸಿದ ರಾಜ್ಯ ಯಾವುದು?

   ಅ) ದೆಹಲಿ

   ಆ) ಮಧ್ಯ ಪ್ರದೇಶ

   **ಇ)** ಜಮ್ಮು ಮತ್ತು ಕಾಶ್ಮೀರ

   ಈ) ಸಿಕ್ಕಿಂ

   ಮಧ್ಯ ಪ್ರದೇಶ

www.karunaduexams.com

ಮಧ್ಯ ಪ್ರದೇಶ ಸರ್ಕಾರವು 'ಸುಖೀ ಇಲಾಖೆ' (Happiness Department) ಎಂಬ ಹೊಸ ಖಾತೆ/ಇಲಾಖೆಯನ್ನು ಇದೇ ಮೊದಲ ಬಾರಿಗೆ ಭಾರತದಲ್ಲಿ ಆರಂಭಿಸಿದ್ದು, ಈ ಇಲಾಖೆಯು ತನ್ನ ರಾಜ್ಯದ ಸಾರ್ವಜನಿಕರು ಆನಂದವಾಗಿರಲು ಬೇಕಾದಂತಹ ವಾತಾವರಣವನ್ನು ಪೂರಕವಾದ ಅಗತ್ಯಗಳನ್ನು ಒದಗಿಸಲಿದೆ. ಅಲ್ಲದೆ ಜನರ ಆನಂದವನ್ನು ಅಳೆಯಲು ಮಾನದಂಡವನ್ನು ಸಹ ಪಟ್ಟಿ ಮಾಡಲಿದೆ. ಮಧ್ಯ ಪ್ರದೇಶದ ಮುಖ್ಯಮಂತ್ರಿ ಶ್ರೀ ಶಿವರಾಜ್ ಸಿಂಗ್ ಚೌಹಾನ್ ಈ ಇಲಾಖೆಯ ಮುಖ್ಯಸ್ಥರಾಗಿದ್ದಾರೆ

3. ಇತ್ತೀಚೆಗೆ ಮುಕ್ತಾಯಗೊಂಡ ಮೈತ್ರಿ ಮಿಲಿಟರಿ ಸಮರಭ್ಯಾಸ (Maitree-2016)-2106 ಭಾರತ ಮತ್ತು ಯಾವ ದೇಶದ ನಡುವೆ ನಡೆಯಿತು?

ಅ) ಶ್ರೀಲಂಕಾ

ಆ) ಥಾಯ್ಲೆಂಡ್

ಇ) ಚೀನಾ

ಈ) ಜಪಾನ್

ಥಾಯ್ಲೆಂಡ್

ಭಾರತ-ಥಾಯ್ಲೆಂಡ್ ನಡುವಿನ ಮೈತ್ರಿ ಸಮರಭ್ಯಾಸ ಥಾಯ್ಲೆಂಡ್ ನ ಕ್ರಬಿಯಲ್ಲಿ ಮುಕ್ತಾಯಗೊಂಡಿತ್ತು. ರಾಯಲ್ ಥಾಯ್ಲೆಂಡ್ ಆರ್ಮಿಯಡಿಯಲ್ಲಿ ಜುಲೈ 15 ರಂದು ಆರಂಭಗೊಂಡಿತ್ತು. ಎರಡು ವಾರಗಳ ಕಾಲ ನಡೆದ ಸಮರಭ್ಯಾಸದಲ್ಲಿ ಭಾರತೀಯ ಸೇನೆಯ ೯೦ ಯೋದರು ಪಾಲ್ಗೊಂಡಿದ್ದರು. ಉಭಯ ದೇಶಗಳ ನಡುವೆ ಪರಸ್ಪರ ಸಹಕಾರ, ಭಯೋತ್ಪಾದನೆ ಹತ್ತಿಕ್ಕುವಿಕೆ ಮತ್ತು ಎರಡು ದೇಶಗಳ ನಡುವೆ ಯುದ್ದತಂತ್ರ ವಿನಿಮಯ ಮಾಡಿಕೊಳ್ಳುವುದು ಸಮರಭ್ಯಾಸದ ಮುಖ್ಯ ಗುರಿ.

4. 2016 ಅಂತರರಾಷ್ಟ್ರೀಯ ತಂಬಾಕು ನಿಯಂತ್ರಣ ಸಮ್ಮೇಳನ ಯಾವ ದೇಶದಲ್ಲಿ ನಡೆಯಲಿದೆ?

ಅ) ಬಾಂಗ್ಲದೇಶ

ಆ) ಚೀನಾ

ಇ) ಭಾರತ

ಈ) ಶ್ರೀಲಂಕಾ

ಭಾರತ

www.karunaduexams.com

ಅಂತರರಾಷ್ಟ್ರೀಯ ತಂಬಾಕು ನಿಯಂತ್ರಣ ಸಮ್ಮೇಳನವು ಉತ್ತರಪ್ರದೇಶದ ನೊಯ್ಡಾದಲ್ಲಿ ನವೆಂಬರ್ ನಲ್ಲಿ ನಡೆಯಲಿದೆ. ತಂಬಾಕು ಉತ್ಪನ್ನಗಳ ಅಕ್ರಮ ವ್ಯಾಪಾರ ತಡೆಯುವುದು ಈ ಸಮ್ಮೇಳನದ ಉದ್ದೇಶವಾಗಿದೆ. 180 ದೇಶಗಳ ಸುಮಾರು 1000-1800 ಪ್ರತಿನಿಧಿಗಳು ಸಮ್ಮೇಳನದಲ್ಲಿ ಭಾಗವಹಿಸಲಿದ್ದಾರೆ.

5. ರಾಮಾಯಣದಲ್ಲಿ ಉಲ್ಲೇಖಿತವಾಗಿರುವ ಸಂಜೀವಿನ ಸಸ್ಯದ ಶೋಧನೆಗಾಗಿ ಯಾವ ರಾಜ್ಯ ಸಮಿತಿಯನ್ನು ರಚಿಸಿದೆ?

ಅ) ಕರ್ನಾಟಕ

ಆ) ಉತ್ತರಖಂಡ

ಇ) ಉತ್ತರ ಪ್ರದೇಶ

ಈ) ಪಶ್ಚಿಮ ಬಂಗಾಳ

ಉತ್ತರಖಂಡ

ರಾಮಾಯಣದಲ್ಲಿ ಉಲ್ಲೇಖಿತವಾಗಿರುವ ಸಂಜೀವಿನ ಸಸ್ಯದ ಶೋಧನೆಗಾಗಿ ಉತ್ತರಖಂಡ ಸರ್ಕಾರ ಸಮಿತಿಯೊಂದನ್ನು ರಚಿಸಿದೆ. ಸಂಜೀವಿನಿ ಸಸ್ಯವು ಸತ್ತವರಲ್ಲಿ ಜೀವ ತುಂಬುವ ಶಕ್ತಿಯನ್ನು ಹೊಂದಿರುವುದಾಗಿ ರಾಮಾಯಣದಲ್ಲಿ ತಿಳಿಸಲಾಗಿದೆ. ಅನೇಕ ಔಷಧೀಯ ಗುಣಗಳನ್ನು ಹೊಂದಿದೆ ಎನ್ನಲಾದ ಈ ಸಸಿಗೆ ಭಾರಿ ಬೇಡಿಕೆಯಿದೆ ಆದರೆ ಇದುವರೆಗೂ ಪತ್ತೆ ಹಚ್ಚಲಾಗಿಲ್ಲ.

6. 2016 ಫಾಮುಲಾ ಒನ್ ಜರ್ಮನ್ ಗ್ರ್ಯಾನ್ ಪ್ರೀಕ್ಸ್ ಚಾಂಪಿಯಡಿಪ್ ಗೆದ್ದವರು ಯಾರು?

ಅ) ಲೇವಿಸ್ ಹ್ಯಾಮಿಲ್ಟನ್

ಆ) ನಿಕೋ ರೊಸ್ಬರ್ಗ್

ಇ) ಡೇನಿಯಲ್ ರಿಕಿಯಾಡೋ

ಈ) ಮ್ಯಾಕ್ಸ್ ವೆರ್ಸ್ಟಾಪೆನ್

**ಲೇವಿಸ್ ಹ್ಯಾಮಿಲ್ಟನ್**

ಮರ್ಸಿಡೀಸ್ ತಂಡದ ಚಾಲಕ ಲೇವಿಸ್ ಹ್ಯಾಮಿಲ್ಟನ್ ರವರು 2016 ಫಾಮುಲಾ ಒನ್ ಜರ್ಮನ್ ಗ್ರ್ಯಾನ್ ಪ್ರೀಕ್ಸ್ ಚಾಂಪಿಯಡಿಪ್ನಲ್ಲಿ ವಿಜೇತರಾದರು. ಸಹ ಚಾಲಕ ಜರ್ಮನಿಯ ನಿಕೋ ರೋಸ್‍ಬರ್ಗ್ ರವರು ಎರಡನೇ ಸ್ಥಾನವನ್ನು ಪಡೆದುಕೊಂಡರು.

7. ಈ ಕೆಳಗಿನ ಯಾವ ದೇಶ 2016 ರಲ್ಲಿ ನಡೆಯುವ ವಿಶ್ವಕಪ್ ಕಬಡ್ಡಿ ಟೂರ್ನಿಯ ಆತಿಥ್ಯ ವಹಿಸಲಿದೆ?

ಅ) ಪಾಕಿಸ್ತಾನ

ಆ) ಭಾರತ

ಇ) ಪೋಲೆಂಡ್



www.karunaduexams.com

ಈ) ಕೆನಡಾ

**ಭಾರತ**

2016 ವಿಶ್ವಕಪ್ ಕಬಡ್ಡಿ ಟೂರ್ನಿಯು ಅಕ್ಟೋಬರ್ ನಲ್ಲಿ ನಡೆಯಲಿದ್ದು, ಈ ಬಾರಿ ಭಾರತ ಟೂರ್ನಿಯ ಆತಿಥ್ಯವಹಿಸಲಿದೆ. ಟೂರ್ನಿಯಲ್ಲಿ ಅತಿಥೇಯ ಭಾರತ, ಅಮೆರಿಕ, ಕೆನಡಾ, ಇಂಗ್ಲೆಂಡ್, ಆಸ್ಟ್ರೇ ಲಿಯಾ, ಇರಾನ್, ಪೋಲೆಂಡ್, ಪಾಕಿಸ್ತಾನ, ಬಾಂಗ್ಲಾದೇಶ, ಕೊರಿಯಾ, ಜಪಾನ್ ಮತ್ತು ಕೆನ್ಯಾ ತಂಡಗಳು ಪ್ರಶಸ್ತಿಗಾಗಿ ಪೈಪೋಟಿ ನಡೆಸಲಿವೆ. ಈ ವಿಶ್ವಕಪ್ ನ ಪ್ರಸಾರ ಹಕ್ಕನ್ನು ಸ್ಟಾರ್ ಸ್ಪೋರ್ಟ್ ಪಡೆದುಕೊಂಡಿದೆ.

8. ಇತ್ತೀಚೆಗೆ ಅಂತರರಾಷ್ಟ್ರೀಯ ಪುಟ್ಬಾಲ್ ಗೆ ನಿವೃತ್ತಿ ಘೋಷಿಸಿದ "ಬಾಸ್ಟೀಯನ್ ಶ್ವಾನ್ಸ್ಟೀಗರ್" ಯಾವ ದೇಶದವರು?

   ಅ) ಜಪಾನ್

   ಆ) ಅರ್ಜೆಂಟೀನಾ

   ಇ) ಜರ್ಮನಿ

   ಈ) ಫ್ರಾನ್ಸ್

   **ಜರ್ಮನಿ**

   ಬಾಸ್ಟೀಯನ್ ಶ್ವಾನ್ಸ್ಟೀಗರ್ ರವರು ಜರ್ಮನಿಯ ಪ್ರಸಿದ್ದ ಪುಟ್ಬಾಲ್ ಆಟಗಾರ. ಮಿಡ್ ಫೀಲ್ಡ್ ಆಟಗಾರರಾಗಿದ್ದ, ಇವರು ಅನೇಕ ಬಾರಿ ತಂಡದ ಗೆಲುವಿಗೆ ಕಾರಣರಾಗಿದ್ದರು. 31 ವರ್ಷದ ಶ್ವಾನ್'ಸ್ಟೀಗರ್ ಅವರು 120 ಅಂತಾರಾಷ್ಟ್ರೀಯ ಪಂದ್ಯಗಳನ್ನು ಆಡಿದ್ದರು.

9. ದೆಹಲಿ ಮತ್ತು ಅಗರ್ತಲಾ ನಗರಗಳ ನಡುವೆ ಸಂಪರ್ಕ ಕಲ್ಪಿಸುವ ಯಾವ ರೈಲಿಗೆ ಇತ್ತೀಚೆಗೆ ಚಾಲನೆ ನೀಡಲಾಯಿತು?

   ಅ) ತ್ರಿಪುರ ಸುಂದರಿ ಎಕ್ಸಪ್ರೆಸ್

   ಆ) ಈಶಾನ್ಯ ರಾಣಿ ಎಕ್ಸಪ್ರೆಸ್

   ಇ) ಬ್ರಹ್ಮಪುತ್ರ ಎಕ್ಸಪ್ರೆಸ್

   ಈ) ನ್ಯಾಷನಲ್ ಎಕ್ಸಪ್ರೆಸ್

   ತ್ರಿಪುರ ಸುಂದರಿ ಎಕ್ಸಪ್ರೆಸ್

   ದೆಹಲಿ ಮತ್ತು ಅಗರ್ತಲಾ ನಡುವೆ ಸಂಚರಿಸಲಿರುವ 'ತ್ರಿಪುರ ಸುಂದರಿ ಎಕ್ಸ್‌ಪ್ರೆಸ್' ರೈಲಿಗೆ ರೈಲ್ವೆ ಸಚಿವ ಸುರೇಶ್ ಪ್ರಭು ರವರು ಚಾಲನೆ ನೀಡಿದರು. ಪ್ರತೀ ಭಾನುವಾರ ಅಗರ್ತಲಾದಿಂದ ಹೊರಡಲಿರುವ ತ್ರಿಪುರ ಸುಂದರಿ ಎಕ್ಸ್‌ಪ್ರೆಸ್

www.karunaduexams.com

ರೈಲು ಗುವಾಹತಿ, ನ್ಯೂ ಜಲಪಾಯಿ ಗುರಿ ಮೂಲಕ 47 ಗಂಟೆಗಳ ಸುದೀರ್ಘ ಪ್ರಯಾಣದ ನಂತರ ದೆಹಲಿ ತಲುಪಲಿದೆ.

10. ಲಂಡನ್ ಷೇರು ಪೇಟೆಯಲ್ಲಿ ಇದೇ ಮೊದಲ ಬಾರಿಗೆ ಮಸಾಲ ಬಾಂಡ್ ಗಳನ್ನು ವಿತರಿಸಿದ ಭಾರತದ ಹಣಕಾಸಿನ ಸಂಸ್ಥೆ ಯಾವುದು?

ಅ) HDFC

ಆ) SBI

ಇ) IDBI

ಈ) ICICI

HDFC

ಲಂಡನ್ ಷೇರು ಪೇಟೆಯಲ್ಲಿ ಭಾರತೀಯ ರೂಪಾಯಿಯ 'ಮಸಾಲ ಬಾಂಡ್' ಗಳನ್ನು The Housing Development Finance Corporation (HDFC) ಯು ವಿತರಿಸಿತು ಈ ಮೂಲಕ ಬ್ಯಾಂಕ್ ತನ್ನ ಹೂಡಿಕೆಯನ್ನು ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ವಿಸ್ತರಿಸಿಕೊಂಡಿದೆ ಅಲ್ಲದೆ ಭಾರತೀಯ ಕರೆನ್ಸಿಯಲ್ಲಿ ಬಾಂಡ್ ಗಳನ್ನು ವಿತರಿಸುವ ಮೂಲಕ ವಿದೇಶಿ ವಿನಿಮಯದಲ್ಲಿ ಉಂಟಾಗುವ ಅಸ್ಥಿರತೆಯನ್ನು ಸವಾಲಾಗಿ ಸ್ವೀಕರಿಸಲಿದೆ.

11. "ಕೇಂದ್ರ ನೇರ ತೆರಿಗೆ ಮಂಡಳಿ (Central Board of Direct Tax)" ನ ನೂತನ ಅಧ್ಯಕ್ಷರಾಗಿ ಯಾರು ನೇಮಕಗೊಂಡಿದ್ದಾರೆ?

ಅ) ಸುರೇಶ್ ಅಗರವಾಲ್

ಆ) ಕಿರಣ್ ಕಪಾಡಿಯಾ

ಇ) ರಾಣಿ ಸಿಂಗ್ ನಾಯರ್

ಈ) ಕೇಶವ್ ಜೊಂಡಲೆ

ರಾಣಿ ಸಿಂಗ್ ನಾಯರ್

ಹಿರಿಯ ಭಾರತೀಯ ಕಂದಾಯ ಸೇವೆ (IRS) ಅಧಿಕಾರಿ ರಾಣಿ ಸಿಂಗ್ ನಾಯರ್ ರವರನ್ನು ಕೇಂದ್ರ ನೇರ ತೆರಿಗೆ ಮಂಡಳಿ (Central Board of Direct Tax) ಯ ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗಿದೆ. ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸಂಪುಟ ನೇಮಕಾತಿ ಸಮಿತಿ ನಾಯರ್ ರವರ ನೇಮಕಾತಿಯನ್ನು ಧೃಡೀಕರಿಸಿದೆ. ನಾಯರ್ ರವರು 31 ಅಕ್ಟೋಬರ್ 2016 ರವರೆಗೆ ಅಧಿಕಾರದಲ್ಲಿರಲಿದ್ದಾರೆ. ಹಾಲಿ ಅಧ್ಯಕ್ಷರಾಗಿದ್ದ ಅತುಲೇಶ್ ಜಿಂದಾಲ್ ರವರು ಜುಲೈ 30 ರಂದು ನಿವೃತ್ತಿ ಹೊಂದಿದ ಕಾರಣ ಈ ಹುದ್ದೆ ತೆರವಾಗಿತ್ತು.

12. ಇತ್ತೀಚೆಗೆ ಮುಕ್ತಾಯಗೊಂಡ (ಜುಲೈ, 2016) ಪ್ರೋ-ಕಬಡ್ಡಿ ಲೀಗ್ ನಲ್ಲಿ ಪ್ರಶಸ್ತಿ ಗೆದ್ದ ತಂಡ ಯಾವುದು?

www.karunaduexams.com

ಅ) ಪಾಟ್ನಾ ಪೈರೇಟ್ಸ್

ಆ) ಯೂ ಮುಂಬಾ

ಇ) ಜೈಪುರ ಪಿಂಕ್ ಪ್ಯಾಂಥರ್ಸ್

ಈ) ತೆಲುಗು ಟೈಟಾನ್ಸ್

ಪಾಟ್ನಾ ಪೈರೇಟ್ಸ್

ಕಳೆದ ವರ್ಷ ಚಾಂಪಿಯನ್ ಆಗಿದ್ದ ಪಾಟ್ನಾ ಪೈರೇಟ್ಸ್ ತಂಡ 4ನೇ ಆವೃತ್ತಿಯ ಪ್ರೋ ಕಬಡ್ಡಿ ಲೀಗ್ ನಲ್ಲಿ ಫೈನಲ್ ಪಂದ್ಯದಲ್ಲಿ ಗೆಲುವು ಸಾಧಿಸುವ ಮೂಲಕ ಎರಡನೇ ಬಾರಿ ಕಿರೀಟವನ್ನು ಮುಡಿಗೇರಿಸಿಕೊಂಡಿತು. ಫೈನಲ್ ಪಂದ್ಯದಲ್ಲಿ ಜೈಪುರ ಪಿಂಕ್ ಪ್ಯಾಂಥರ್ಸ್ ತಂಡವನ್ನು 37-29 ರ ಅಂತರದಲ್ಲಿ ಸೋಲಿಸುವ ಮೂಲಕ ಪಾಟ್ನಾ ಪೈರೇಟ್ಸ್ ಗೆಲುವಿನ ನಗೆ ಬೀರಿತು. ಇದೇ ಮೊದಲ ಬಾರಿ ನಡೆದ ಮಹಿಳಾ ಕಬಡ್ಡಿ ಚಾಂಪಿಯನ್ ಷಿಪ್ ನಲ್ಲಿ ಕರ್ನಾಟಕದ ತೇಜಸ್ವಿನಿ ಬಾಯಿ ನೇತೃತ್ವದ ಸ್ಟ್ರೋರ್ಮ್ ಕ್ವೀನ್ ತಂಡ ಮಮತ ಪೂಜರಿ ನೇತೃತ್ವದ ಫೈರ್ ಬರ್ಡ್ಸ್ ತಂಡವನ್ನು 24-23 ಅಂತರದಲ್ಲಿ ಸೋಲಿಸುವ ಮೂಲಕ ಚಾಂಪಿಯನ್ ಆಯಿತು.

13. 2014-15ನೇ ಸಾಲಿನ ರಾಷ್ಟ್ರೀಯ ಪ್ರವಾಸೋದ್ಯಮ ಪ್ರಶಸ್ತಿಯಲ್ಲಿ ಪ್ರಥಮ ಸ್ಥಾನ ಪಡೆದ ರಾಜ್ಯ ಯಾವುದು?

ಅ) ಕರ್ನಾಟಕ

ಆ) ಮಧ್ಯಪ್ರದೇಶ

ಇ) ಆಂಧ್ರಪ್ರದೇಶ

ಈ) ತಮಿಳುನಾಡು

ಮಧ್ಯಪ್ರದೇಶ

ಮಧ್ಯಪ್ರದೇಶ 2014-15ನೇ ಸಾಲಿನ ರಾಷ್ಟ್ರೀಯ ಪ್ರವಾಸೋದ್ಯಮ ಪ್ರಶಸ್ತಿಯಲ್ಲಿ ಮೊದಲ ಸ್ಥಾನವನ್ನು ಪಡೆದುಕೊಂಡಿದೆ. ಗುಜರಾತ್ ರಾಜ್ಯ ಎರಡನೇ ಸ್ಥಾನ ಹಾಗೂ ಕರ್ನಾಟಕ ರಾಜ್ಯ ಮೂರನೇ ಸ್ಥಾನವನ್ನು ಪಡೆದುಕೊಂಡಿವೆ. ಲೋಕಸಭಾ ಸ್ಪೀಕರ್ ಸುಮಿತ್ರಾ ಮಹಜನ್ ರವರು ನವದೆಹಲಿಯಲ್ಲಿ ನಡೆದ ಸಮಾರಂಭದಲ್ಲಿ ಪ್ರಶಸ್ತಿಯನ್ನು ವಿತರಿಸಿದರು.

14. ಯಾವ ರಾಜ್ಯ ದೇಶದಲ್ಲೇ ಮೊದಲ ಬಾರಿಗೆ "ಭ್ರಷ್ಟಚಾರ ನಿಗ್ರಹ ಸೂಚ್ಯಂಕ"ವನ್ನು ಬಿಡುಗಡೆ ಮಾಡಲು ಸಿದ್ಧತೆ ನಡೆಸಿದೆ?

ಅ) ಕೇರಳ

ಆ) ಪಂಜಾಬ್

ಇ) ಗೋವಾ

ಈ) ತೆಲಂಗಣ

www.karunaduexams.com

ಕೇರಳ

ಕೇರಳದ ಆಡಳಿತಾರೂಢ ಎಲ್ಡಿಎಫ್ ಸರ್ಕಾರದ ಭ್ರಷ್ಟಾಚಾರ ತಡೆ ನೀತಿಯ ಅಂಗವಾಗಿ ದೇಶದಲ್ಲೇ ಮೊದಲ ಬಾರಿಗೆ ಕೇರಳವು ಭ್ರಷ್ಟಾಚಾರ ನಿಗ್ರಹ ಸೂಚ್ಯಂಕವನ್ನು ಸದ್ಯದಲ್ಲೇ ಬಿಡುಗಡೆ ಮಾಡಲಿದೆ. ಕೇರಳದ ಭ್ರಷ್ಟಾಚಾರ ನಿಗ್ರಹ ಹಾಗೂ ಜಾಗೃತ ಆಯೋಗವು ಈ ಯೋಜನೆಯನ್ನು ಕಾರ್ಯಗತಗೊಳಿಸುತ್ತಿದ್ದು, ಭ್ರಷ್ಟಾಚಾರದ ಪ್ರಮಾಣವನ್ನು ಪ್ರತಿ ತಿಂಗಳು ದಾಖಲಿಸಲಿದೆ. ಭ್ರಷ್ಟಾಚಾರದ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸುವ ಉದ್ದೇಶ ಹೊಂದಿರುವ ಈ ಯೋಜನೆ ಇನ್ನೂ ಅಭಿವೃದ್ಧಿ ಹಂತದಲ್ಲಿದೆ. ಸುಮಾರು 20ರಿಂದ 25 ಸೂಚಕಗಳು ಇದರಲ್ಲಿದ್ದು, ಇವು ಜನರು ಕೇಳಿದ, ನೋಡಿದ ಅಥವಾ ಅನುಭವಿಸಿದ ಭ್ರಷ್ಟಾಚಾರದ ಹಲವು ಮುಖಗಳನ್ನು ಸೂಚಿಸುತ್ತವೆ ಎಂದು ಆಯೋಗದ ನಿರ್ದೇಶಕ ಡಿಜಿಪಿ ಜಾಕೊಬ್ ಥಾಮಸ್ ತಿಳಿಸಿದ್ದಾರೆ. ಸೆಪ್ಟೆಂಬರ್-ಅಕ್ಟೋಬರ್ ವೇಳೆಗೆ ಇದು ಅಸ್ತಿತ್ವಕ್ಕೆ ಬರಲಿದ್ದು, ಭ್ರಷ್ಟಾಚಾರ ತಡೆಗೆ ನೆರವಾಗಲಿದೆ.

15. ರಾಷ್ಟ್ರೀಯ ಡೈರಿ ಅಭಿವೃದ್ಧಿ ಮಂಡಳಿ (NDDB) ಯ ನೂತನ ಅಧ್ಯಕ್ಷರಾಗಿ ಯಾರು ಅಧಿಕಾರವಹಿಸಿಕೊಂಡರು?

ಅ) ದಿಲೀಪ್ ರಾಥ್

ಆ) ಸುಜಯ್ ಬಂಗ್ಲ

ಇ) ಮಮತಾ ಜೋಶಿ

ಈ) ಪ್ರದೀಪ್ ರಾಥೋಡ್

ದಿಲೀಪ್ ರಾಥ್

ದಿಲೀಪ್ ರಾಥ್ ರವರು ರಾಷ್ಟ್ರೀಯ ಡೈರಿ ಅಭಿವೃದ್ಧಿ ಮಂಡಳಿಯ ಅಧ್ಯಕ್ಷರಾಗಿ ನೇಮಿಸಲಾಗಿದೆ. ರಾಥ್ ರವರು ರಾಷ್ಟ್ರೀಯ ಡೈರಿ ಅಭಿವೃದ್ಧಿ ಮಂಡಳಿಯ ಮ್ಯಾನೇಜಿಂಗ್ ಡೈರೆಕ್ಟರ್ ಆಗಿ ಕಾರ್ಯನಿರ್ವಹಿಸುತ್ತಿದ್ದಾರೆ.

16. 2016 ಸಾರ್ಕ್ (SAARC) ರಾಷ್ಟ್ರಗಳ ಗೃಹ ಸಚಿವರುಗಳ ಸಮ್ಮೇಳನದ ಆತಿಥ್ಯವನ್ನು ಯಾವ ನಗರ ವಹಿಸಲಿದೆ?

ಅ) ನವದೆಹಲಿ

ಆ) ಇಸ್ಲಮಾಬಾದ್

ಇ) ಕೊಲೊಂಬೊ

ಈ) ಥಿಂಪು

ಇಸ್ಲಮಾಬಾದ್

2016 ಸಾರ್ಕ್ ದೇಶಗಳ ಗೃಹ ಸಚಿವರುಗಳ ಸಮ್ಮೇಳನವೂ ಪಾಕಿಸ್ತಾನದ ಇಸ್ಲಮಾಬಾದ್ ನಲ್ಲಿ ನಡೆಯಲಿದೆ. ಭಾರತದ ಗೃಹ ಸಚಿವರಾದ ರಾಜನಾಥ್ ಸಿಂಗ್ ರವರು ಭಾರತವನ್ನು ಪ್ರತಿನಿಧಿಸಲಿದ್ದಾರೆ. ಸಮ್ಮೇಳನದಲ್ಲಿ ಭಯೋತ್ಪಾದನೆ, ಮಾದಕ ವಸ್ತುಗಳ ಕಳ್ಳಸಾಗಣೆ ಕುರಿತಂತೆ ಚರ್ಚೆ ನಡೆಯಲಿದೆ.

www.karunaduexams.com

17. ಟೊರೊಂಟೊ ಮಾಸ್ಟರ್ಸ್ ಟೆನ್ನಿಸ್ ಟೂರ್ನಿ-2016 ಪುರುಷರ ಮತ್ತು ಮಹಿಳೆಯರ ಸಿಂಗಲ್ಸ್ ನಲ್ಲಿ ಪ್ರಶಸ್ತಿ ಗೆದ್ದವರಾರು?

ಅ) ನೊವಾಕ್ ಜೊಕೊವಿಕ್, ಸಿಮೊನ ಹಲೆಪ್

ಆ) ರೋಜರ್ ಫೆಡರರ್, ಸಿಮೊನ ಹಲೆಪ್

ಇ) ಆಂಡ್ರ್ಯೂ ಮುರ್ರೆ, ಎಕಟೆರಿನ ಮಕರೋವ

ಈ) ನೊವಾಕ್ ಜೊಕೊವಿಕ್, ಎಕಟೆರಿನ ಮಕರೋವ

ನೊವಾಕ್ ಜೊಕೊವಿಕ್, ಸಿಮೊನ ಹಲೆಪ್

ಸರ್ಬಿಯಾದ ನೊವಾಕ್ ಜೊಕೊವಿಕ್ ರವರು ಟೊರಾಂಟೊ ಮಾಸ್ಟರ್ಸ್ ಟೆನಿಸ್ ಟೂರ್ನಿಯ ಪುರುಷರ ವಿಭಾಗದ ಸಿಂಗಲ್ಸ್ನಲ್ಲಿ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡರು. ವಿಶ್ವದ ನಂ.1 ಆಟಗಾರ ಜೊಕೊವಿಕ್ ರವರು ಫೈನಲ್ ಪಂದ್ಯದಲ್ಲಿ ಆರನೇ ಶ್ರೇಯಾಂಕಿತ ಕೀ ನಿಶಕೋರಿರವರನ್ನು 6-3, 7-5 ಅಂತರದಿಂದ ಮಣಿಸುವ ಮೂಲಕ ವಿಜೇತರಾದರು. ಮಹಿಳೆಯರ ಸಿಂಗಲ್ಸ್ ನಲ್ಲಿ ವಿಶ್ವದ ನಂ.5 ಆಟಗಾರ್ತಿ ಸಿಮೊನ ಹಲೆಪ್ ರವರು ಅಮೆರಿಕಾದ ಮಡಿಸನ್ ಕೀ ರವರನ್ನು ಸೋಲಿಸುವ ಮೂಲಕ ಪ್ರಶಸ್ತಿಯನ್ನು ಗೆದ್ದುಕೊಂಡರು.

18. ಇತ್ತೀಚೆಗೆ ಆಂಧ್ರಪ್ರದೇಶ ಸರ್ಕಾರವು ರಾಜ್ಯದಲ್ಲಿ ಆಹಾರ ಮೌಲ್ಯ ಸರಪಳಿ (Food Value Chain) ಅಭಿವೃದ್ಧಿ ಪಡಿಸುವ ಸಲುವಾಗಿ ಯಾವ ದೇಶದೊಂದಿಗೆ ಒಪ್ಪಂದಕ್ಕೆ ಸಹಿಹಾಕಿದೆ?

ಅ) ಜಪಾನ್

ಆ) ಚೀನಾ

ಇ) ಶ್ರೀಲಂಕಾ

ಈ) ಜರ್ಮನಿ

ಜಪಾನ್

ಆಂಧ್ರಪ್ರದೇಶ ಸರ್ಕಾರವು ರಾಜ್ಯದಲ್ಲಿ ಆಹಾರ ಮೌಲ್ಯ ಸರಪಳಿ (Food Value Chain) ಅಭಿವೃದ್ಧಿ ಪಡಿಸುವ ಸಲುವಾಗಿ ಜಪಾನ್ ದೇಶದೊಂದಿಗೆ ಒಪ್ಪಂದಕ್ಕೆ ಸಹಿಹಾಕಿದೆ. ಒಪ್ಪಂದದ ಅನ್ವಯ ಜಪಾನ್ ನ ಕೃಷಿ, ಅರಣ್ಯ ಮತ್ತು ಮೀನುಗಾರಿಕೆ ಇಲಾಖೆಯು ಆಂಧ್ರಪ್ರದೇಶದ ಕೃಷಿ ಮತ್ತು ಆಹಾರ ಸಂಬಂಧಿತ ಕ್ಷೇತ್ರದಲ್ಲಿ ಬಂಡವಾಳ ಹೂಡುವಂತೆ ಜಪಾನ್ ಕಂಪನಿಗಳನ್ನು ಪ್ರೋತ್ಸಾಹಿಸಲಿದೆ.

19. ಪ್ಯಾರಾಚೂಟ್ ನ ಸಹಾಯವಿಲ್ಲದೇ 25 ಸಾವಿರ ಅಡಿಗಳ ಮೇಲಿಂದ ಧುಮುಕಿ ಹೊಸ ಇತಿಹಾಸ ಬರೆದ ಸ್ಕೈಡೈವರ್ ಯಾರು?

ಅ) ಡೇವಿಡ್ ಕ್ರೆಗ್

ಆ) ಲೂಕ್ ಐಕಿನ್ಸ್

ಇ) ಕ್ರಿಸ್ಟ್ ಬರ್ಗರ್

www.karunaduexams.com

ಈ) ಆಸ್ಕರ್ ಜೇಮ್ಸ್

ಲ್ಯೂಕ್ ಐಕಿನ್ಸ್

ಅಮೆರಿಕಾದ ಖ್ಯಾತ ಸ್ಕೈಡ್ರೈವರ್ ಲೂಕ್ ಐಕಿನ್ಸ್ ರವರು 25 ಸಾವಿರ ಅಡಿಗಳ ಮೇಲಿಂದ ಧುಮುಕಿ ಹೊಸ ಇತಿಹಾಸ ಬರೆದರು. ಆ ಮೂಲಕ ಪ್ಯಾರಾಚೂಟ್ ಸಹಾಯವಿಲ್ಲದೇ ಧುಮುಕುವ ಮೂಲಕ ಸ್ಕೈಡೈವಿಂಗ್ ಕ್ಷೇತ್ರದಲ್ಲಿ ಹೊಸ ಇತಿಹಾಸ ಬರೆದರು. 18 ಸಾವಿರ ಸಾಹಸಗಳನ್ನು ಯಶಸ್ವಿಯಾಗಿ ಪೂರೈಸಿದ್ದ ಅನುಭವಿ ಲ್ಯೂಕ್, 100 ಅಡಿ ಉದ್ದ 100 ಅಡಿ ಅಗಲದ ಬಲೆಯ ಮಧ್ಯಭಾಗಕ್ಕೆ ಹಾರುವ ಮೂಲಕ ಇಡೀ ವಿಶ್ವವೇ ಬೆರಗಾಗುವ ಸಾಧನೆ ಮಾಡಿದರು.

20. ಈ ಕೆಳಗಿನ ಯಾರನ್ನು ಪ್ರತಿಷ್ಠಿತ 2016 ರೇಮನ್ ಮ್ಯಾಗ್ಸೆಸೆ ಪ್ರಶಸ್ತಿಗೆ ಆಯ್ಕೆಮಾಡಲಾಗಿದೆ?

ಅ) ನವೀನ್ ಕೃಷ್ಣ ಮತ್ತು ಬೆಜ್ವಾಡ ವಿಲ್ಸನ್

ಆ) ಇವಾನ್ ಶರ್ಮಿಳಾ ಮತ್ತು ಟಿ.ಎಂ.ಕೃಷ್ಣ

ಇ) ಬೆಜ್ವಾಡ ವಿಲ್ಸನ್ ಮತ್ತು ಟಿ.ಎಂ.ಕೃಷ್ಣ

ಈ) ವಿಜಯೇಂದ್ರ ಸಿಂಗ್ ಮತ್ತು ಚರಣ್ ಚಂದ್ರ

ಬೆಜ್ವಾಡ ವಿಲ್ಸನ್ ಮತ್ತು ಟಿ.ಎಂ.ಕೃಷ್ಣ

ಮಾನವ ಹಕ್ಕು ಹೋರಾಟಗಾರ ಬೇಜ್ವಾಡ ವಿಲ್ಸನ್ ಹಾಗೂ ಪ್ರಸಿದ್ಧ ಕರ್ನಾಟಕ ಶಾಸ್ತ್ರೀಯ ಸಂಗೀತಗಾರ ಟಿ.ಎಂ.ಕೃಷ್ಣ ಪ್ರತಿಷ್ಠಿತ ರೇಮನ್ ಮ್ಯಾಗ್ಸೆಸೆ-2016 ಪ್ರಶಸ್ತಿಗೆ ಆಯ್ಕೆಮಾಡಲಾಗಿದೆ. ಏಷ್ಯಾದ ನೊಬೆಲ್ ಎಂದೇ ಪ್ರಸಿದ್ದಿ ಹೊಂದಿರುವ ರೇಮನ್ ಮ್ಯಾಗ್ಸೆಸೆ ಪ್ರಶಸ್ತಿಗೆ ಈ ಬಾರಿ ಆರು ಜನರನ್ನು ಆಯ್ಕೆಮಾಡಲಾಗಿದ್ದು, ಭಾರತದಿಂದ ಈ ಇಬ್ಬರನ್ನು ಪ್ರಶಸ್ತಿಗೆ ಪರಿಗಣಿಸಲಾಗಿದೆ.

21. 2016-ಗೋವಾ ಚಲನಚಿತ್ರೋತ್ಸವದ ಜೀವಮಾನ ಸಾಧನೆ ಪ್ರಶಸ್ತಿಯನ್ನು ಯಾರಿಗೆ ನೀಡಲಾಗುವುದು?

ಅ) ಮಣಿರತ್ನಂ

ಆ) ರಾಜೇಂದ್ರಸಿಂಗ್ ಬಾಬು

ಇ) ಎನ್. ಚಂದ್ರ

ಈ) ಶಂಕರ್

ಎನ್. ಚಂದ್ರ

ಪ್ರಖ್ಯಾತ ಬಾಲಿವುಡ್ ಚಿತ್ರ ನಿರ್ಮಾಪಕ ಎನ್ ಚಂದ್ರ ರವರನ್ನು 8 ನೇ ಗೋವಾ ಚಲನಚಿತ್ರೋತ್ಸವದ ಜೀವಮಾನ ಸಾಧನೆ ಪ್ರಶಸ್ತಿಗೆ ಆಯ್ಕೆಮಾಡಲಾಗಿದೆ. 2016 ಗೋವಾ ಚಲನಚಿತ್ರೋತ್ಸವವು ಆಗಸ್ಟ್ 5 ರಿಂದ 8 ರವರೆಗೆ

www.karunaduexams.com

ನಡೆಯಲಿದೆ. ಚಂದ್ರ ರವರು ಅಂಕುಶ್, ಪ್ರತಿಘಾಟ್, ತೇಝುಬ್ ಮತ್ತು ನರಸಿಂಹ ಅಂತಹ ಪ್ರಸಿದ್ದ ಚಿತ್ರಗಳನ್ನು ನಿರ್ಮಿಸಿದ್ದಾರೆ.

22. ಈ ಕೆಳಗಿನ ಯಾವ ದೇಶ ಜಗತ್ತಿನ ಮೊದಲ ಇಂಗಾಲ ನೆಗೆಟಿವ್ ರಾಷ್ಟ್ರ ಎನಿಸಿದೆ?

ಅ) ನೇಪಾಳ

ಆ) ಭೂತಾನ್

ಇ) ಥಾಯ್ಲೆಂಡ್

ಈ) ಫ್ರಾನ್ಸ್

ಭೂತಾನ್

ಏಪ್ಯಾದ ಪುಟ್ಟರಾಷ್ಟ್ರ ಭೂತಾನ್ ವಿಶ್ವದ ಮೊದಲ ಇಂಗಾಲ ನೆಗೆಟಿವ್ ರಾಷ್ಟ್ರ ಆಗಿದೆ. ಕಾರ್ಬನ್ ನೆಗೆಟಿವ್ ಎಂದರೆ ಜಾಗತಿಕ ತಾಪಮಾನ ಹೆಚ್ಚಳಕ್ಕೆ ಕಾರಣವಾಗುವ ಇಂಗಾಲವನ್ನು (ಹಸಿರುಮನೆ ಅನಿಲ- ಪ್ರಧಾನವಾಗಿ ಇಂಗಾಲದ ಡೈ ಆಕ್ಸೈಡ್) ಹೊರಸೂಸುವುದಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಅದನ್ನು ಹೀರಿಕೊಳ್ಳುವುದು. 15 ಲಕ್ಷ ಟನ್ ಭೂತಾನ್ ವಾರ್ಷಿಕವಾಗಿ ಹೊರಸೂಸುವ ಇಂಗಾಲದ ಪ್ರಮಾಣ. 60 ಲಕ್ಷ ಟನ್ ಭೂತಾನ್ನ ಕಾಡುಗಳು ಹೀರಿಕೊಳ್ಳುವ ಇಂಗಾಲ ಪ್ರಮಾಣ. ಭೂತಾನಿನ ಶೇ 72 ಭೂಭಾಗ ಅರಣ್ಯದಿಂದ ಕೂಡಿದೆ, ಮರಗಳ ಅಕ್ರಮ ಸಾಗಣೆ ಮೇಲೆ ನಿಷೇಧ ಹೇರಲಾಗಿದೆ ಮತ್ತು ಪರಿಸರಕ್ಕೆ ಮಾರಕವಾಗುವಂತಹ ಪೆಟ್ರೋಲಿಯಂ, ಕಲ್ಲಿದ್ದಲು ಮತ್ತಿತರ ಇಂಧನ ಮೂಲಗಳ ಬದಲಾಗಿ ಜಲವಿದ್ಯುತ್ ಬಳಕೆಗೆ ಹೆಚ್ಚು ಉತ್ತೇಜನ ನೀಡಲಾಗುತ್ತಿದೆ.

23. ರಿಯೋ ಒಲಂಪಿಕ್ಸ್ನ ಅತ್ಯಂತ ಕಿರಿಯ ಕ್ರೀಡಾಪಟು ಎನಿಸಿರುವ ಗೌರಿಕಾ ಸಿಂಗ್ ಯಾವ ದೇಶದವರು?

ಅ) ನೇಪಾಳ

ಆ) ಭೂತಾನ್

ಇ) ಶ್ರೀಲಂಕಾ

ಈ) ಭಾರತ

ನೇಪಾಳ

ನೇಪಾಳದ 13 ವರ್ಷದ ಗೌರಿಕಾ ಸಿಂಗ್ ರವರು 2016 ರಿಯೋ ಒಲಂಪಿಕ್ಸ್ ನಲ್ಲಿ ಭಾಗವಹಿಸಲಿರುವ ಕ್ರೀಡಾಪಟುಗಳ ಪೈಕಿ ಅತ್ಯಂತ ಕಿರಿಯ ಕ್ರೀಡಾಪಟು ಆಗಿದ್ದಾರೆ. ಅಂತಾರಾಷ್ಟ್ರೀಯ ಮಟ್ಟದಲ್ಲಿ ಹೆಸರು ಗಳಿಸಿರುವ ಗೌರಿಕಾ ಅವರು 100 ಮೀಟರ್ ಬ್ಯಾಕ್ ಸ್ಟ್ರೋಕ್ ವಿಭಾಗದ ಸ್ಪರ್ಧೆಯಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. 68.12 ಸೆಕೆಂಡುಗಳ ಸಾಧನೆ ಹೊಂದಿದ್ದಾರೆ.

24. ನೇಪಾಳದ ನೂತನ ಪ್ರಧಾನಿಯಾಗಿ ಆಯ್ಕೆಯಾದವರು ಯಾರು?

ಅ) ಬಾಬುರಾಮ್ ಭಟ್ಟರಾಯ್

www.karunaduexams.com

ಆ) ಕೆ.ಪಿ.ಓಲಿ

ಇ) ಪುಷ್ಪ ಕುಮಾರ್ ದಹಲ್

ಈ) ಒನ್ಸಾರಿ ಘರ್ತಿ ಮಗರ್

ಪುಷ್ಪ ಕುಮಾರ್ ದಹಲ್

ಮಾವೋವಾದಿ ಬಂಡುಕೋರ ಮುಖ್ಯಸ್ಥ ಪುಷ್ಪ ಕಮಲ್ ದಹಲ್ ಅವರು ನೇಪಾಳದ ನೂತನ ಪ್ರಧಾನ ಮಂತ್ರಿಯಾಗಿ ಆಯ್ಕೆಯಾಗಿದ್ದಾರೆ. ದಹಲ್ ರವರು ಪ್ರಚಂಡ ಎಂತಲೂ ಪ್ರಸಿದ್ದರಾಗಿದ್ದಾರೆ. ಪ್ರಧಾನಮಂತ್ರಿ ಆಯ್ಕೆಗಾಗಿ ನಡೆದ ಮತದಾನದಲ್ಲಿ ಶೇ 50ಕ್ಕಿಂತ ಅಧಿಕ ಮತವನ್ನು ಪುಷ್ಪ ಕಮಲ್ ಪಡೆದುಕೊಂಡ್ದರು. 573 ಜನಪ್ರತಿನಿಧಿಗಳ ಪೈಕಿ 363 ಮಂದಿ ದಹಲ್ ಪರ ಮತ ಹಾಕಿದರು. ಪ್ರಧಾನಿ ಪಟ್ಟಕ್ಕೇರಲು ದಹಲ್ ಅವರಿಎಗ್ ಒಟ್ಟಾರೆ 595 ಸಂಸತ್ ಸದಸ್ಯರ ಪೈಕಿ 298 ಮತಗಳು ಅಗತ್ಯವಿತ್ತು.

25. ಇತ್ತೀಚೆಗೆ ನಿಧನರಾದ ನೊಬೆಲ್ ಪುರಸ್ಕೃತ ಅಹ್ಮದ್ ಝೆವೈಲ್ (Ahmed Zawail) ರವರು ಯಾವ ಕ್ಷೇತ್ರದಲ್ಲಿ ನೊಬೆಲ್ ಪ್ರಶಸ್ತಿಯನ್ನು ಪಡೆದಿದ್ದರು?

ಅ) ರಾಸಾಯನಿಕ

ಆ) ಭೌತಶಾಸ್ತ್ರ

ಇ) ಶಾಂತಿ

ಈ) ವೈದ್ಯಕೀಯ

ರಾಸಾಯನಿಕ

ಪ್ರೊಫೆಸರ್ ಅಹ್ಮದ್ ಝೆವೈಲ್ ರವರು ಈಜಿಪ್ಟ್ ನ ಖ್ಯಾತ ರಸಾಯನಶಾಸ್ತ್ರಜ್ಞ. ಇತ್ತೀಚೆಗೆ ಇವರು ಅಮೆರಿಕಾದಲ್ಲಿ ನಿಧನರಾದರು. ಕ್ಯಾಲಿಫೋರ್ನಿಯ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿ ಅಧ್ಯಾಪಕರಾಗಿದ್ದ ಇವರು ಅಮೆರಿಕಾದ ಅಧ್ಯಕ್ಷ ಬರಾಕ್ ಒಬಾಮ ರವರಿಗೆ ತಾಂತ್ರಿಕ ಸಲಹಗಾರರಾಗಿದ್ದರು. 1999 ರಲ್ಲಿ ರಸಾಯನಶಾಸ್ತ್ರದ ಫೆಕ್ಟೊಕೆಮಿಸ್ಟ್ರಿಯಲ್ಲಿ ಅಗಣನೀಯ ಸಾಧನೆ ಮಾಡಿದ ಕಾರಣ ನೊಬೆಲ್ ಪ್ರಶಸ್ತಿಯನ್ನು ನೀಡಲಾಗಿತ್ತು. ನೊಬೆಲ್ ಪ್ರಶಸ್ತಿಯನ್ನು ಪಡೆದ ಮೊದಲ ಅರಬ್ ಪ್ರಜೆ ಇವರು.

26. ಈ ಕೆಳಗಿನ ಯಾರು ಮೈಕ್ರೊಸಾಫ್ಟ್ ಇಂಡಿಯಾದ ಅಧ್ಯಕ್ಷರಾಗಿ ನೇಮಕಗೊಂಡಿದ್ದಾರೆ?

ಅ) ಭಾಸ್ಕರ್ ಪ್ರಮಣಿಕ್

ಆ) ಅನಂತ್ ಮಹೇಶ್ವರಿ

ಇ) ಚಂದ್ರಶೇಖರ ಚೌಧರಿ

ಈ) ರಿಷಿಕ್ ಸಿಂಗ್

ಅನಂತ ಮಹೇಶ್ವರಿ

www.karunaduexams.com

ಸಾಫ್ಟ್ ವೇರ್ ತಂತ್ರಜ್ಞ ಅನಂತ್ ಮಹೇಶ್ವರಿ ರವರು ಮೈಕ್ರೋಸಾಫ್ಟ್ ಇಂಡಿಯಾದ ಅಧ್ಯಕ್ಷರಾಗಿ ನೇಮಕಗೊಂಡಿದ್ದಾರೆ. ಮೈಕ್ರೋಸಾಫ್ಟ್ ಇಂಡಿಯಾ ಅಮೆರಿಕಾದ ಸಾಫ್ಟ್ ವೇರ್ ದೈತ್ಯ ಮೈಕ್ರೋಸಾಫ್ಟ್ನ ಅಂಗಸಂಸ್ಥೆಯಾಗಿದೆ. ಪ್ರಸ್ತುತ ಭಾಸ್ಕರ್ ಪ್ರಮಣಿಕ್ ಇದರ ಅಧ್ಯಕ್ಷರಾಗಿದ್ದು, ಅನಂತ್ ಮಹೇಶ್ವರಿ ರವರು ಮಾರ್ಚ್ 2017 ರಿಂದ ಇವರ ಉತ್ತರಾಧಿಕಾರಿಯಾಗಿ ಕಾರ್ಯನಿರ್ವಹಿಸಲಿದ್ದಾರೆ.

27. ಇತ್ತೀಚೆಗೆ ಚಂಡಮಾರುತ "ನಿಡಾ" ಯಾವ ದೇಶಕ್ಕೆ ಅಪ್ಪಳಿಸುವ ಮೂಲಕ ಅವಾಂತರ ಸೃಷ್ಟಿಸಿತು?

ಅ) ಚೀನಾ

ಆ) ದಕ್ಷಿಣ ಕೊರಿಯಾ

ಇ) ಬಾಂಗ್ಲದೇಶ

ಈ) ಜಪಾನ್

ಚೀನಾ

ದಕ್ಷಿಣ ಚೀನಾದ ಗಾಂಗ್ ಡಾಂಗ್ ಪ್ರಾಂತಕ್ಕೆ ನಿಡಾ ಚಂಡಮಾರುತ ಅಪ್ಪಳಿಸಿದ್ದು, ಸಾವಿರಾರು ಜನ ತೊಂದರೆಗೆ ಸಿಲುಕಿದ್ದಾರೆ. ಫಿಲಿಪೈನ್ಸ್ ನ ಮನಿಲಾದಿಂದ ಸುಮಾರು 1,020 ಕಿಮೀ ಪೂರ್ವ-ಆಗ್ನೇಯದಲ್ಲಿ ದಿಕ್ಕಿನಲ್ಲಿ ವಾಯು ಕುಸಿತದಿಂದ ಚಂಡಮಾರುತ ಉಂಟಾಗಿದ್ದು, ಫಿಲಿಪೈನ್ಸ್ ಗೆ ಅಪ್ಪಳಿಸಿದ ನಂತರ ಚೀನಾದಲ್ಲಿ ಅವಾಂತರ ಸೃಷ್ಟಿಸಿದೆ. ನಿಡಾ ಚಂಡಮಾರುತ ಕಳೆದ 33 ವರ್ಷಗಳಲ್ಲಿ ಚೀನಾಕ್ಕೆ ಅಪ್ಪಳಿಸಿದ ಅತ್ಯಂತ ಬಲಿಷ್ಠ ಚಂಡಮಾರುತ ಎನ್ನಲಾಗಿದೆ.

28. 2016 ಪೆನ್/ಹೆಮ್ ಟ್ರಾನ್ಸ್ಲೇಷನ್ ಫಂಡ್ (Pen/Heim Translation Fund) ಪ್ರಶಸ್ತಿ ಪಡೆದ ಭಾರತೀಯ ಅನುವಾದಕಿ ಯಾರು?

ಅ) ಲಕ್ಷೀ ಗೋಸ್ವಾಮಿ

ಆ) ಅನಿತ ಗೋಪಾಲನ್

ಇ) ಶ್ರೀದೇವಿ ಠಾಗೂರ್

ಈ) ಪರಂಜ್ಯೋತಿ ದೇವಿ

ಅನಿತ ಗೋಪಾಲನ್

ಅನುವಾದಕಿ ಮತ್ತು ಕಲಾವಿದೆ ಅನಿತಾ ಗೋಪಾಲನ್ ರವರನ್ನು 2016 ಪೆನ್/ಹೆಮ್ ಟ್ರಾನ್ಸ್ಲೇಷನ್ ಫಂಡ್ (Pen/Heim Translation Fund) ಪ್ರಶಸ್ತಿಗೆ ಆಯ್ಕೆ ಮಾಡಲಾಗದೆ. ಗೀತ್ ಚತುರ್ವೇದಿ ರವರ ಹಿಂದಿ ಕಾದಂಬರಿ "Simsim" ನ



www.karunaduexams.com

ಇಂಗ್ಲೀಷ್ ಭಾಷಾಂತರಕ್ಕೆ ಈ ಪ್ರಶಸ್ತಿಯನ್ನು ಗೆದ್ದಿದ್ದಾರೆ. ಫೆಬ್ರವರಿ 2017 ರಲ್ಲಿ ನ್ಯೂಯಾರ್ಕ್ ನಲ್ಲಿ ನಡೆಯಲಿರುವ 2017 ಪೆನ್ ಸಾಹಿತ್ಯ ಪ್ರಶಸ್ತಿ ಸಮಾರಂಭದಲ್ಲಿ ಗೋಪಾಲನ್ ಅವರಿಗೆ ಪ್ರಶಸ್ತಿಯನ್ನು ವಿತರಿಸಲಾಗುವುದು.

29. 2016 ರ ಮೊಹುನ್ ಭಾಗನ್ ರತ್ನ ಪ್ರಶಸ್ತಿ ಪಡೆದ ಮಾಜಿ ಪುಟ್ಬಾಲ್ ಆಟಗಾರ ಯಾರು?

ಅ) ಸುನೀಲ್ ಚೆತ್ರಿ

ಆ) ರಾಬಿನ್ ಸಿಂಗ್

ಇ) ಸಯ್ಯದ್ ನಯೀಮುದ್ದೀನ್

ಈ) ಸುಬ್ರತ ಪಾಲ್

ಸಯ್ಯದ್ ನಯೀಮುದ್ದೀನ್

ಭಾರತದ ಶ್ರೇಷ್ಠ ಮಾಜಿ ಪುಟ್ ಬಾಲ್ ಆಟಗಾರ ಸಯ್ಯದ್ ನಯೀಮುದ್ದೀನ್ ರವರಿಗೆ ಮೊಹುನ್ ಬಾಗನ್ ಪುಟ್ ಬಾಲ್ ಕ್ಲಬ್ ನ ಅತ್ಯುನ್ನತ ಪ್ರಶಸ್ತಿಯಾದ ಮೊಹುನ್ ಬಾಗನ್ ರತ್ನ ಪ್ರಶಸ್ತಿಯನ್ನು ನೀಡಲಾಗಿದೆ. ಆ ಮೂಲಕ ಸಯ್ಯದ್ ರವರು ಈ ಪ್ರತಿಷ್ಠಿತ ಪ್ರಶಸ್ತಿಯನ್ನು ಪಡೆದ 16 ನೇ ಆಟಗಾರ ಆಗಿದ್ದಾರೆ.

30. ಅಂತರರಾಷ್ಟ್ರೀಯ ಹುಲಿ ದಿನವನ್ನು ಯಾವ ದಿನಾಂಕದಂದು ಆಚರಿಸಲಾಗುತ್ತದೆ?

ಅ) ಆಗಸ್ಟ್ 1

ಆ) ಜುಲೈ 28

ಇ) ಜುಲೈ 29

ಈ) ಆಗಸ್ಟ್ 3

ಜುಲೈ 29

ಅಂತರರಾಷ್ಟ್ರೀಯ ಹುಲಿ ದಿನವನ್ನು ಪ್ರತಿ ವರ್ಷ ಜುಲೈ 29 ರಂದು ಆಚರಿಸಲಾಗುತ್ತದೆ. ಜಾಗತಿಕ ಮಟ್ಟದಲ್ಲಿ ಹುಲಿ ಮತ್ತು ಅವುಗಳ ಸ್ವಾಭಾವಿಕ ವಾಸಸ್ಥಾನಗಳ ಸಂರಕ್ಷಣೆ ಬಗ್ಗೆ ಅರಿವು ಮೂಡಿಸುವುದು ಈ ದಿನದ ಉದ್ದೇಶ. 2010 ರಲ್ಲಿ ನಡೆದ ಸೆಂಟ್ ಪೀಟರ್ಸಬರ್ಗ್ ಹುಲಿ ಸಮ್ಮೇಳನದಲ್ಲಿ ಜುಲೈ29 ನ್ನು ಹುಲಿದಿನವೆಂದ ಘೋಷಿಸಲಾಯಿತು.

31. ಗುಜರಾತ್ ನ ನೂತನ ಮುಖ್ಯಮಂತ್ರಿಯಾಗಿ ಯಾರು ಆಯ್ಕೆಯಾಗಿದ್ದಾರೆ?

ಅ) ಅಮಿತ್ ಷಾ

ಆ) ವಿಜಯ್ ರೂಪಾನಿ

ಇ) ನಿತಿನ್ ಪಟೇಲ್

ಈ) ವಿಜಯ್ ಕುಲಕುರ್ಣಿ

ವಿಜಯ್ ರೂಪಾನಿ

www.karunaduexams.com

ಗುಜರಾತ್ನ ನೂತನ ಮುಖ್ಯಮಂತ್ರಿಯಾಗಿ ವಿಜಯ್ ರೂಪಾನಿ ಅವರು ಆಯ್ಕೆಯಾಗಿದ್ದಾರೆ. ನಿತಿನ್ ಪಟೇಲ್ ಅವರು ರಾಜ್ಯನ ಉಪ ಮುಖ್ಯಮಂತ್ರಿಯಾಗಲಿದ್ದಾರೆ.ಇತ್ತೀಚೆಗೆ ಗುಜರಾತ್ನ ಮುಖ್ಯಮಂತ್ರಿಯಾಗಿದ್ದ ಆನಂದಿಬೆನ್ ರವರು ರಾಜೀನಾಮೆ ನೀಡಿದ್ದ ಹಿನ್ನಲೆಯಲ್ಲಿ ಮುಖ್ಯಮಂತ್ರಿ ಸ್ಥಾನ ತೆರವಾಗಿತ್ತು. ವಿಜಯ್ ರೂಪಾನಿ ಅವರು ಪಕ್ಷದ ರಾಜ್ಯ ಘಟಕದ ಅಧ್ಯಕ್ಷರಾಗಿದ್ದು, ಆನಂದಿಬೆನ್ ಅವರ ಸಂಪುಟದಲ್ಲಿ ಸಾರಿಗೆ, ನೀರು ಸರಬರಾಜು, ಕಾರ್ಮಿಕ ಮತ್ತು ಉದ್ಯೋಗ ಸಚಿವರಾಗಿದ್ದರು.

32. ಈ ಕೆಳಗಿನ ಯಾವ ಕ್ರೀಡೆ/ಕ್ರೀಡೆಗಳನ್ನು 2020ರ ಟೋಕಿಯೋ ಒಲಂಪಿಕ್ಸ್ ನಲ್ಲಿ ಸೇರ್ಪಡೆಗೊಳಿಸಲು ಅಂತರರಾಷ್ಟ್ರೀಯ ಒಲಂಪಿಕ್ ಸಮಿತಿ ಸಮ್ಮತಿ ಸೂಚಿಸಿದೆ?

I) ಬೇಸ್ ಬಾಲ್

II) ಕರಾಟೆ

III) ಸರ್ಫಿಂಗ್

IV) ಕ್ಲೈಂಬಿಂಗ್

ಈ ಕೆಳಗಿನ ಕೊಟ್ಟಿರುವ ಕೋಡ್ ಗಳಲ್ಲಿ ಸರಿಯಾದ ಉತ್ತರವನ್ನು ಗುರುತಿಸಿ?

ಅ) I & II ಮಾತ್ರ

ಆ) I & III ಮಾತ್ರ

ಇ) II & IV ಮಾತ್ರ

ಈ) ಮೇಲಿನ ಎಲ್ಲವೂ

ಜಪಾನ್ ನ ಟೋಕಿಯೋದಲ್ಲಿ 2020 ರಲ್ಲಿ ನಡೆಯಲಿರುವ ಒಲಂಪಿಕ್ಸ್ ಗೆ 5 ಹೊಸ ಕ್ರೀಡೆಗಳನ್ನು ಸೇರಿಸಲು ಅಂತರರಾಷ್ಟ್ರೀಯ ಒಲಂಪಿಕ್ಸ್ ಸಮಿತಿ ಒಪ್ಪಿಗೆ ಸೂಚಿಸಿದೆ. ಬೇಸ್‌ಬಾಲ್/ಸಾಫ್ಟ್ ಬಾಲ್, ಕರಾಟೆ, ಸ್ಕೇಟ್ಬೋರ್ಡ್ (Skateboard), ಕ್ಲೈಂಬಿಂಗ್ (Climbing) ಹಾಗೂ ಸರ್ಫಿಂಗ್ (Surfing) ಕ್ರೀಡೆಗಳನ್ನು ಸೇರ್ಪಡೆಗೊಳಿಸಲು ಬ್ರೆಜಿಲ್ ನ ರಿಯೋ ಡಿ ಜನೈರೊದಲ್ಲಿ ನಡೆದ ಅಂತರರಾಷ್ಟ್ರೀಯ ಒಲಂಪಿಕ್ ಸಮಿತಿಯ 129ನೇ ಅಧಿವೇಶನದಲ್ಲಿ ನಿರ್ಣಯ ಕೈಗೊಳ್ಳಲಾಗಿದೆ.

33. ದೇಶದ ಮೊದಲ "ಟೈಗರ್ ಸೆಲ್ (Tiger Cell)" ಯಾವ ರಾಜ್ಯದಲ್ಲಿ ಸ್ಥಾಪನೆಯಾಗಲಿದೆ?

ಅ) ಉತ್ತರ ಪ್ರದೇಶ

ಆ) ಉತ್ತರಖಂಡ

ಇ) ಮಧ್ಯ ಪ್ರದೇಶ



www.karunaduexams.com

ಈ) ಗುಜರಾತ್

ಉತ್ತರಖಂಡ

ದೇಶದ ಮೊದಲ ಟೈಗರ್ ಸೆಲ್ ಉತ್ತರಾಖಂಡದ ಡೆಹರಾಡೂನ್‌ನಲ್ಲಿರುವ ಭಾರತೀಯ ವನ್ಯಜೀವಿ ಸಂಸ್ಥೆಯ ಆವರಣದಲ್ಲಿ ಸ್ಥಾಪನೆಯಾಗಲಿದೆ. ಈ ಸಂಬಂಧ ಉತ್ತರಖಂಡ ಸರ್ಕಾರ ಮತ್ತು ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರ (ಎನ್‌ಟಿಸಿಎ) ಒಪ್ಪಂದಕ್ಕೆ ಸಹಿ ಹಾಕಿವೆ. ಟೈಗರ್ ಸೆಲ್ ನಲ್ಲಿ ಹುಲಿ ಸಂತತಿಗೆ ಸಂಬಂಧಿಸಿದ ಎಲ್ಲಾ ರೀತಿಯ ಅಂಕಿ-ಅಂಶಗಳ ದಾಖಲೆಗಳು ಸಿಗುವಂತೆ ವ್ಯವಸ್ಥೆ ಮಾಡಲಾಗುತ್ತಿದೆ. ದೇಶವ್ಯಾಪ್ತಿ ಇರುವ 50 ಹುಲಿಧಾಮಗಳಲ್ಲಿನ ಹುಲಿಗಳ ಡಿಎನ್‌ಎ ಸ್ಯಾಂಪಲ್‌ಗಳು ಇಲ್ಲಿ ಲಭ್ಯವಿರಲಿದೆ. ದೇಶದಲ್ಲಿ ಎಲ್ಲಿಯೇ ಹುಲಿ ಬೇಟೆ ಆದರೂ ಇಲ್ಲಿ ದಾಖಲಾಗಿರುವಂತೆ ಮತ್ತು ಕೃತ್ಯಗಳ ವಿರುದ್ಧ ಕ್ರಮ ತೆಗೆದುಕೊಳ್ಳುವಂತೆ ವ್ಯವಸ್ಥೆ ಮಾಡಲಾಗುತ್ತಿದೆ.

34. ಅಂತಾರಾಷ್ಟ್ರೀಯ ಒಲಂಪಿಕ್ ಸಮಿತಿಗೆ ಸದಸ್ಯೆಯಾಗಿ ಆಯ್ಕೆಯಾದ ಪ್ರಥಮ ಭಾರತೀಯ ಮಹಿಳೆ ಯಾರು?

ಅ) ಸಾವಿತ್ರಿ ಜಿಂದಾಲ್

ಆ) ನೀತಾ ಅಂಬಾನಿ

ಇ) ಸ್ಮೃತಿ ಇರಾನಿ

ಈ) ಪಿ.ಟಿ.ಉಷಾ

ನೀತಾ ಅಂಬಾನಿ

ಅಂತಾರಾಷ್ಟ್ರೀಯ ಒಲಿಂಪಿಕ್ ಸಮಿತಿ ಸದಸ್ಯೆಯಾಗಿ ನೀತಾ ಅಂಬಾನಿ ಆಯ್ಕೆಯಾಗಿದ್ದಾರೆ. ಆ ಮೂಲಕ ಭಾರತದಿಂದ ಆಯ್ಕೆಯಾದ ಪ್ರಥಮ ಮಹಿಳೆ ಎಂಬ ಕೀರ್ತಿಗೆ ನೀತಾ ಅಂಬಾನಿ ಪಾತ್ರರಾಗಿದ್ದಾರೆ. ಬ್ರೆಜಿಲ್ ನ ರಿಯೋದಲ್ಲಿ ನಡೆದ 129 ನೇ ಐಓಸಿ ಸಭೆಯಲ್ಲಿ ನೀತಾ ಆಯ್ಕೆಗೊಂಡಿದ್ದಾರೆ. ತಮ್ಮ 70 ನೇ ವರ್ಷದವರೆಗೂ ಐಓಸಿ ಸದಸ್ಯೆಯಾಗಿ ನೀತಾ ಮುಂದುವರೆಯಲಿದ್ದಾರೆ. ನೀತಾಗೂ ಮುನ್ನ ಸರ್ ದೊರಬ್ಜಿ ಟಾಟಾ ಐಓಸಿ ಪ್ರತಿನಿಧಿಸಿದ್ದ ಪ್ರಥಮ ಭಾರತೀಯನಾಗಿದ್ದರು, ನಂತರ ರಾಜಾ ರಣಧೀರ್ ಸಿಂಗ್ 2000-14 ರವರೆಗೆ ಸದಸ್ಯರಾಗಿ ಇದೀಗ ಗೌರವ ಸದಸ್ಯರಾಗಿ ಸಮಿತಿಯಲ್ಲಿದ್ದಾರೆ.

35. ಈ ಕೆಳಗಿನ ಯಾರನ್ನು 23ನೇ ರಾಜೀವ್ ಗಾಂಧೀ ರಾಷ್ಟ್ರೀಯ ಸದ್ಭಾವನ ಪ್ರಶಸ್ತಿಗೆ ಆಯ್ಕೆಮಾಡಲಾಗಿದೆ?

ಅ) ಅಣ್ಣಾ ಹಜಾರೆ

ಆ) ನಂದಿತಾ ದಾಸ್

ಇ) ಶುಭಾ ಮುದ್ಗಲ್

ಈ) ಅರವಿಂದ್ ಪಗಾರಿಯ

ಶುಭಾ ಮುದ್ಗಲ್

www.karunaduexams.com

ಪ್ರಸಿದ್ಧ ಗಾಯಕಿ ಶುಭಾ ಮುದ್ಗಲ್ ರವರನ್ನು ಪ್ರತಿಷ್ಠಿತ 23ನೇ ರಾಜೀವ್ ಗಾಂಧೀ ರಾಷ್ಟ್ರೀಯ ಸದ್ಭಾವನ ಪ್ರಶಸ್ತಿಗೆ ಆಯ್ಕೆಮಾಡಲಾಗಿದೆ. ಕೋಮು ಸೌಹರ್ದತೆ, ಶಾಂತಿ ಮತ್ತು ಅಭಿಮಾನ ಪ್ರಚಾರಕ್ಕಾಗಿ ಶುಭಾ ರವರು ನೀಡಿದ ಮಹೋನ್ನತ ಕೊಡುಗೆಯನ್ನು ಗುರುತಿಸಿ ಈ ಪ್ರಶಸ್ತಿಗೆ ಆಯ್ಕೆಮಾಡಲಾಗಿದೆ. ರಾಜೀವ್ ಗಾಂಧೀ ರಾಷ್ಟ್ರೀಯ ಸದ್ಭಾವನ ಪ್ರಶಸ್ತಿಯನ್ನು ಪ್ರತಿ ವರ್ಷ ಆಗಸ್ಟ್ 20 ರಂದು ಭಾರತದ ಮಾಜಿ ಪ್ರಧಾನಿಯಾದ ದಿವಂಗತ ರಾಜೀವ್ ಗಾಂಧೀ ರವರ ಹುಟ್ಟುಹಬ್ಬದ ಸ್ಮರಣಾರ್ಥ ನೀಡಲಾಗುತ್ತಿದೆ. ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ನ ಅಲ್ ಇಂಡಿಯಾ ಕಾಂಗ್ರೆಸ್ ಸಮಿತಿ ಈ ಪ್ರಶಸ್ತಿಯನ್ನು 1992 ರಲ್ಲಿ ಸ್ಥಾಪಿಸಿದೆ. ಪ್ರಶಸ್ತಿಯು 10 ಲಕ್ಷ ನಗದು ಮತ್ತು ಫಲಕವನ್ನು ಒಳಗೊಂಡಿದೆ.

36. ಭಾರತದ ಕಬಡ್ಡಿ ರಾಜಧಾನಿ (Kabaddi Capital of India) ಎಂದು ಈ ಕೆಳಗಿನ ಯಾವುದನ್ನು ಕರೆಯಲಾಗುತ್ತಿದೆ?

ಅ) ನಿಜಾಂಪುರ

ಆ) ಖರಗ್ಪುರ

ಇ) ಲೂಧಿಯಾನ

ಈ) ಜಲಂದರ್

ನಿಜಾಂಪುರ

ದೆಹಲಿಯ ನೈರುತ್ಯ ಭಾಗದಲ್ಲಿರುವ ಸಣ್ಣ ಗ್ರಾಮ ನಿಜಾಂಪುರವನ್ನು ಭಾರತದ ಕಬಡ್ಡಿ ರಾಜಧಾನಿ ಎನ್ನಲಾಗುತ್ತದೆ. ಹಲವಾರು ದಶಕಗಳಿಂದ ಕಬಡ್ಡಿ ಆಟ ಈ ಗ್ರಾಮದ ಪ್ರಸಿದ್ದ ಕ್ರೀಡೆಯಾಗಿದ್ದು, ನೂರಕ್ಕೂ ಹೆಚ್ಚು ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದ ಕಬಡ್ಡಿ ಆಟಗಾರರು ಈ ಗ್ರಾಮದವರಾಗಿದ್ದಾರೆ.

37. ಇತ್ತೀಚೆಗೆ ಯಾವ ರಾಜ್ಯ "ಚರಂಡಿ ಮತ್ತು ತ್ಯಾಜ್ಯ ನೀರು ನಿಯಮ (Sewage and waste water policy)"ವನ್ನು ಅನುಮೋದಿಸಿದ ದೇಶದ ಮೊದಲ ರಾಜ್ಯ ಎನಿಸಿದೆ?

ಅ) ಗುಜರಾತ್

ಆ) ತೆಲಂಗಣ

ಇ) ರಾಜಸ್ಥಾನ

ಈ) ಮಹರಾಷ್ಟ್ರ

ರಾಜಸ್ಥಾನ

ರಾಜಸ್ಥಾನ ಸರ್ಕಾರ ಚರಂಡಿ ಮತ್ತು ತ್ಯಾಜ್ಯ ನೀರು ನಿಯಮ (Sewage and waste water policy)"ವನ್ನು ಅನುಮೋದಿಸಿದ್ದು, ಈ ನಿಯಮವನ್ನು ಜಾರಿಗೆ ತಂದ ದೇಶದ ಮೊದಲ ರಾಜ್ಯ ಎನಿಸಿದೆ. ಈ ನಿಯಮವೂ ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳು, ಪಾರಂಪರಿಕ ತಾಣಗಳು ಮತ್ತು ಒಂದು ಲಕ್ಷಕ್ಕೂ ಹೆಚ್ಚು ಜನಸಂಖ್ಯೆ ಹೊಂದಿರುವ

www.karunaduexams.com

ನಗರಗಳಿಗೆ ಅನ್ವಯವಾಗಲಿದೆ. ನಿಯಮದಡಿ ತ್ಯಾಜ್ಯ ನೀರನ್ನು ಕೃಷಿ ಮತ್ತು ನೀರಾವರಿಗೆ ಬಳಕೆ ಮಾಡಲಾಗುವುದು. ನಿಯಮದಡಿ ಬರುವ ನಗರದಲ್ಲಿರುವ ಮನೆಗಳು ಚರಂಡಿ ವ್ಯವಸ್ಥೆಗೆ ಸಂಪರ್ಕ ಕಲ್ಪಿಸುವುದು ಕಡ್ಡಾಯವಾಗಿದೆ.

38. ಪ್ರಧಾನ ಮಂತ್ರಿ ನರೇಂದ್ರ ಮೋದಿ ರವರ ನೂತನ ಕಾರ್ಯದರ್ಶಿಯಾಗಿ ಯಾರು ನೇಮಕಗೊಂಡಿದ್ದಾರೆ?

ಅ) ಕಿರಣ್ ಜೋಶಿ

ಆ) ಭಾಸ್ಕರ್ ಕುಲ್ಬೆ

ಇ) ರವೀಂದ್ರ ತ್ರಿವೇದಿ

ಈ) ಪ್ರಹ್ಲಾದ್ ಠಾಗೋರ್

ಭಾಸ್ಕರ್ ಕುಲ್ಬೆ

ಪ್ರಧಾನ ಮಂತ್ರಿ ಕಚೇರಿಯ ಹೆಚ್ಚುವರಿ ಕಾರ್ಯದರ್ಶಿಯಾಗಿದ್ದ, ಐಎಎಸ್ ಅಧಿಕಾರಿ ಭಾಸ್ಕರ್ ಕುಲ್ಬೆ ರವರನ್ನು ಪ್ರಧಾನ ಮಂತ್ರಿ ನರೇಂದ್ರ ಮೋದಿರವರ ನೂತನ ಕಾರ್ಯದರ್ಶಿಯಾಗಿ ನೇಮಕಮಾಡಲಾಗಿದೆ.

39. 17ನೇ ಏಷ್ಯಯನ್ ಜೂನಿಯರ್ ಜುಡೋ ಚಾಂಪಿಯನ್ ಷಿಪ್ ಯಾವ ನಗರದಲ್ಲಿ ನಡೆಯಲಿದೆ?

ಅ) ಕೊಚ್ಚಿ

ಆ) ಬೆಂಗಳೂರು

ಇ) ಚೆನ್ನೈ

ಈ) ವಿಶಾಖಪಟ್ಟಣ

ಕೊಚ್ಚಿ

10ನೇ ಏಷ್ಯಯನ್ ಕ್ಯಾಡೆಟ್ ಜುಡೋ ಚಾಂಪಿಯನ್ ಷಿಪ್ ಮತ್ತು 17ನೇ ಏಷ್ಯಯನ್ ಜೂನಿಯರ್ ಜುಡೋ ಚಾಂಪಿಯನ್ ಷಿಪ್ ಕೇರಳದ ಕೊಚ್ಚಿಯಲ್ಲಿ ಸೆಪ್ಟೆಂಬರ್ 7-11, 2016 ರಂದು ನಡೆಯಲಿದೆ.

40. ನ್ಯಾ.ಲೋಧಾ ಸಮಿತಿ ಶಿಫಾರಸ್ಸುಗಳನ್ನು ಅಳವಡಿಸಿಕೊಳ್ಳುವ ಬಗ್ಗೆ ಸೂಕ್ತ ಮಾರ್ಗದರ್ಶನ ನೀಡುವ ಸಲುವಾಗಿ ಬಿಸಿಸಿಐ ಯಾರನ್ನು ಸಲಹೆಗಾರರನ್ನಾಗಿ ನೇಮಕಮಾಡಿದೆ?

ಅ) ನ್ಯಾ. ಬ್ರಿಜೇಶ್ ಪಾಟೀಲ್

ಆ) ನ್ಯಾ. ಬಾಲಕೃಷ್ಣ

ಇ) ನ್ಯಾ. ಮಾರ್ಕಂಡೇಯ ಖಟ್ಜು

ಈ) ನ್ಯಾ. ಗೋಪಾಲ್ ದಾಸ್

ಆಡಳಿತ ಸುಧಾರಣೆಗಾಗಿ ನ್ಯಾ.ಲೋಧಾ ಸಮಿತಿ ನೀಡಿರುವ ಶಿಫಾರಸುಗಳನ್ನು ಅಳವಡಿಸಿಕೊಳ್ಳುವ ಬಗ್ಗೆ ಸೂಕ್ತ ಮಾರ್ಗದರ್ಶನದ ಉದ್ದೇಶಕ್ಕಾಗಿ ಸುಪ್ರೀಂಕೋರ್ಟ್‌ನಲ್ಲಿ ನಿವೃತ್ತ ನ್ಯಾಯಮೂರ್ತಿ ಮಾರ್ಕಂಡೇಯ ಕಾಟ್ಜು ಅವರನ್ನು

www.karunaduexams.com

ಬಿಸಿಸಿಐ ತನ್ನ ಸಲಹೆಗಾರರನ್ನಾಗಿ ನೇಮಿಸಿಕೊಳ್ಳಲು ನಿರ್ಧರಿಸಿದೆ. ಶಿಫಾರಸುಗಳ ಸಮರ್ಪಕ ಅನುಷ್ಠಾನ ಕುರಿತಂತೆ ನಡೆದ ಬಿಸಿಸಿಐನ ಮಹಾಧಿವೇಶನದಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ. ಖಟ್ಜು ರವರು ಪ್ರೆಸ್ ಕೌನ್ಸಿಲ್ ಆಫ್ ಇಂಡಿಯಾದ ಅಧ್ಯಕ್ಷರಾಗಿಯೂ ಸೇವೆಸಲ್ಲಿಸಿದ್ದಾರೆ.

41. 15ನೇ "ಪ್ರವಾಸಿ ಭಾರತೀಯ ದಿವಸ್-2017" ಯಾವ ನಗರದಲ್ಲಿ ನಡೆಯಲಿದೆ?

ಅ) ಚೆನ್ನೈ

ಆ) ಬೆಂಗಳೂರು

ಇ) ಹೈದ್ರಾಬಾದ್

ಈ) ಭೂಪಾಲ್

ಬೆಂಗಳೂರು

2017ರ ಜನವರಿ 7ರಿಂದ ಮೂರು ದಿನಗಳ ಕಾಲ 'ಪ್ರವಾಸಿ ಭಾರತೀಯ ದಿವಸ್' ಬೆಂಗಳೂರಿನಲ್ಲಿ ನಡೆಯಲಿದೆ. ನಗರದ ತುಮಕೂರು ರಸ್ತೆಯಲ್ಲಿರುವ ವಸ್ತು ಪ್ರದರ್ಶನ ಕೇಂದ್ರದಲ್ಲಿ ವಿದೇಶಾಂಗ ಇಲಾಖೆ ಹಾಗೂ ರಾಜ್ಯ ಸರಕಾರದ ಸಹಭಾಗಿತ್ವದಲ್ಲಿ ಆಚರಿಸಲಾಗುವುದು. ಹದಿನೈದನೇ ಪ್ರವಾಸಿ ದಿವಸ್ ಇದಾಗಿದ್ದು, ಬೆಂಗಳೂರಿನಲ್ಲಿ ಆಚರಿಸುತ್ತಿರುವುದು ಹೆಮ್ಮೆಯ ಸಂಗತಿ.

42. ಈ ಕೆಳಗಿನ ಯಾವ ಕಾಯಿಲೆ/ಕಾಯಿಲೆಗಳು ಈಡೀಸ್ ಏಜಿಪ್ಟಿ(*Aedes aegypti*) ಸೊಳ್ಳೆಯಿಂದ ಹರಡಬಲ್ಲದಾಗಿವೆ?

i) ಡೆಂಗ್ಯೂ

II) ಚಿಕನ್ ಗುನ್ಯಾ

III) ಹಳದಿ ಜ್ವರ

IV) ಝಿಕಾ ಜ್ವರ

ಈ ಕೆಳಗೆ ನೀಡಿರುವ ಕೋಡ್ ಮೂಲಕ ಸರಿಯಾದ ಉತ್ತರವನ್ನು ಗುರುತಿಸಿ:

ಅ) I & II

ಆ) II & IV

ಇ) II & III

ಈ) I, II, III & IV

I, II, III & IV

ಡೆಂಗ್ಯೂ, ಚಿಕನ್ ಗುನ್ಯಾ, ಹಳದಿ ಜ್ವರ ಮತ್ತು ಝಿಕಾ ಜ್ವರ ಈಡೀಸ್ ಏಜಿಪ್ಟಿ ಸೊಳ್ಳೆ ಕಚ್ಚುವ ಮೂಲಕ ಒಬ್ಬರಿಂದ ಒಬ್ಬರಿಗೆ ಹರಡುವ ಕಾಯಿಲೆಗಳಾಗಿವೆ.

43. ಇತ್ತೀಚೆಗೆ ನಿಧನರಾದ ಮಹೀಮ್ ಬೋರಾ ರವರು ಯಾವ ಭಾಷೆಯ ಪ್ರಸಿದ್ಧ ಸಾಹಿತಿಯಾಗಿದ್ದರು?

ಅ) ಅಸ್ಸಾಮಿ

ಆ) ಗುಜರಾತಿ

ಇ) ಮರಾಠಿ

ಈ) ಬಂಗಾಳಿ

ಅಸ್ಸಾಮಿ

ಮಹೀಮ್ ಬೋರಾ ಖ್ಯಾತ ಅಸ್ಸಾಮಿ ಸಾಹಿತಿ ಮತ್ತು ಶಿಕ್ಷಣ ತಜ್ಞ. ಬೋರಾ ಅವರು ತಮ್ಮ ಸಣ್ಣಕಥೆ ಮತ್ತು ಕವಿತೆಗಳ ಮೂಲಕ ಪ್ರಸಿದ್ದರಾಗಿದ್ದರು. ಇದಾನಿ ಮಹೀರ್ ಹನ್ನಿ ಕೃತಿಗೆ 2001ರಲ್ಲಿ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದಿದ್ದ ಬೋರಾ, ಅಸ್ಸಾಂ ವ್ಯಾಲಿ ಲಿಟರೇಚರ್ ಅವಾರ್ಡ್ ಸೇರಿದಂತೆ ಅನೇಕ ಪ್ರಶಸ್ತಿಗಳನ್ನು ಪಡೆದಿದ್ದರು., 2011ರಲ್ಲಿ ಇವರಿಗೆ ಪ್ರತಿಷ್ಠಿತ ಪದ್ಮಶ್ರೀ ಪ್ರಶಸ್ತಿಯನ್ನು ನೀಡಲಾಗಿತ್ತು.

44. ಯಾವ ದೇಶ "ಟಿಯಾನ್ ಟಾಂಗ್-1 (Tiantong-1)" ಹೆಸರಿನ ಮೊಬೈಲ್ ದೂರಸಂಪರ್ಕ ಉಪಗ್ರಹವನ್ನು ಯಶಸ್ವಿಯಾಗಿ ಉಡಾಯಿಸಿತು?

ಅ) ದಕ್ಷಿಣ ಕೊರಿಯಾ

ಆ) ಚೀನಾ

ಇ) ಜಪಾನ್

ಈ) ಮೆಕ್ಸಿಕೊ

ಚೀನಾ

ಚೀನಾ ದೇಶ ಇತ್ತೀಚೆಗೆ ಟಿಯಾನ್ ಟಾಂಗ್-1 (Tiantong-1)" ಹೆಸರಿನ ಮೊಬೈಲ್ ದೂರಸಂಪರ್ಕ ಉಪಗ್ರಹವನ್ನು ಯಶಸ್ವಿಯಾಗಿ ಉಡಾವಣೆ ಮಾಡಿದೆ. ಚೀನಾದ ಮೊದಲ ಮೊಬೈಲ್ ಉಪಗ್ರಹ ಇದಾಗಿದ್ದು, ಲಾಂಗ್ ಮಾರ್ಚ್-3ಬಿ ರಾಕೆಟ್ ಮೂಲಕ ಉಪಗ್ರಹವನ್ನು ಯಶಸ್ವಿಯಾಗಿ ಉಡಾಯಿಸಿದೆ. ಈ ಉಪಗ್ರಹವು ಭೂಸ್ಥಾಯೀ ಕಕ್ಷೆ (Geosynchronous)ಯಲ್ಲಿ ಕಾರ್ಯನಿರ್ವಹಿಸಲಿದ್ದು, ಚೀನಾ, ಮಧ್ಯಪ್ರಾಚ್ಯ, ಆಫ್ರಿಕಾ ಮತ್ತು ಇತರ ಪ್ರದೇಶಗಳಿಗೆ ಮೊಬೈಲ್ ನೆಟ್ವರ್ಕ್ ಸೇವೆಗಳನ್ನು ಒದಗಿಸಲಿದೆ.

www.karunaduexams.com

45. ಗಂಗಾ ನದಿಯಲ್ಲಿ ಹೂಳು ತೆಗೆಯುವ (desiltation) ಸಲುವಾಗಿ ಮಾರ್ಗಸೂಚಿ ತಯಾರಿಸಲು ಕೇಂದ್ರ ಸರ್ಕಾರ ಯಾರ ನೇತೃತ್ವದಲ್ಲಿ ಸಮಿತಿಯನ್ನು ರಚಿಸಿದೆ?

ಅ) ಮಾಧವ್ ಚಿತಾಲೆ

ಆ) ಶಶಿ ಶೇಖರ್

ಇ) ಅಜಯ್ ನಾರಾಯಣ್ ಝಾ

ಈ) ಮುಖೇಶ್ ಸಿನ್ಹಾ

ಮಾಧವ್ ಚಿತಾಲೆ

ಉತ್ತರಖಂಡದ ಭಿಮ್ಗೌಡ್ ನಿಂದ ಪಶ್ಚಿಮ ಬಂಗಾಳದ ಫರಕ್ಕವರೆಗೆ ಗಂಗಾ ನದಿಯಲ್ಲಿ ಹೂಳು ತೆಗೆಯುವ ಸಲುವಾಗಿ ಮಾರ್ಗಸೂಚಿಗಳನ್ನು ಸಿದ್ದಪಡಿಸುವ ಸಲುವಾಗಿ ಕೇಂದ್ರ ಜಲ ಸಂಪನ್ಮೂಲ, ನದಿ ಅಭಿವೃದ್ದಿ ಮತ್ತು ಗಂಗಾ ಪುನರ್ಜೀವನ ಸಚಿವಾಲಯ ಸಮಿತಿಯನ್ನು ರಚಿಸಿದೆ. ರಾಷ್ಟ್ರೀಯ ಗಂಗಾನದಿ ಜಲಾನಯನ ಪ್ರಾಧಿಕಾರದ ಸದಸ್ಯರಾದ ಮಾಧವ್ ಚಿತಾಲೆ ಈ ಸಮಿತಿಯ ಅಧ್ಯಕ್ಷರಾಗಿದ್ದಾರೆ. ಶಶಿ ಶೇಖರ್, ಅಜಯ್ ನಾರಾಯಣ್ ಝಾ ಮತ್ತು ಮುಖೇಶ್ ಸಿನ್ಹಾ ಸಮಿತಿಯ ಇತರೆ ಸದಸ್ಯರು. ಸಮಿತಿಯು ಮೂರು ತಿಂಗಳೊಳಗೆ ತನ್ನ ವರದಿಯನ್ನು ಸಲ್ಲಿಸಲಿದೆ.

46. ಇತ್ತೀಚೆಗೆ ನಿಧನರಾದ "ವಿಯೆಟ್ನಂ ವೀಡು ಸುಂದರಂ" ಯಾವ ಕ್ಷೇತ್ರದಲ್ಲಿ ಪ್ರಸಿದ್ದಿ ಹೊಂದಿದ್ದರು?

ಅ) ಸಿನಿಮಾ

ಆ) ಪತ್ರಿಕೋದ್ಯಮ

ಇ) ಶಾಸ್ತ್ರೀಯ ಸಂಗೀತ

ಈ) ಸಾಹಿತ್ಯ

ಸಿನಿಮಾ

ವಿಯೆಟ್ನಂ ವೀಡು ಸುಂದರಂ ಪ್ರಸಿದ್ದ ತಮಿಳು ಸಿನಿಮಾ ನಿರ್ದೇಶಕ ಮತ್ತು ಚಿತ್ರಕಥೆಗಾರ. ತಮಿಳಿನ ಖ್ಯಾತ ನಟ ಶಿವಾಜಿ ಗಣೇಶನ್ ಸೇರಿದಂತೆ ಸರಿಸುಮಾರು ಎಲ್ಲಾ ತಮಿಳು ನಾಯಕರ ಚಿತ್ರಗಳಿಗೆ ಇವರು ಚಿತ್ರಕಥೆಯನ್ನು ಬರೆದಿದ್ದರು. ತಮಿಳುನಾಡು ರಾಜ್ಯ ಚಲನಚಿತ್ರ ಪ್ರಶಸ್ತಿ ಸೇರಿದಂತೆ ಅನೇಕ ಪ್ರಶಸ್ತಿಗಳನ್ನು ಇವರು ಪಡೆದುಕೊಂಡಿದ್ದರು.

47. ಭಾರತದ ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳ ಪೈಕಿ ಅತಿ ಹೆಚ್ಚು ಬುಡಕಟ್ಟು ಜನಾಂಗಗಳನ್ನು ಹೊಂದಿರುವ ರಾಜ್ಯ ಯಾವುದು?

ಅ) ಜಾರ್ಖಂಡ್

ಆ) ಒಡಿಶಾ

ಇ) ಪಶ್ಚಿಮ ಬಂಗಾಳ

ಈ) ತೆಲಂಗಣ

www.karunaduexams.com

ಒಡಿಶಾ

ಒಡಿಶಾ ರಾಜ್ಯ ಭಾರತದ ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳ ಪೈಕಿ ಅತಿ ಹೆಚ್ಚು ಬುಡಕಟ್ಟು ಜನಾಂಗಗಳನ್ನು ಹೊಂದಿದೆ. ಒಡಿಶಾದಲ್ಲಿ ಒಟ್ಟು 62 ಬುಡಕಟ್ಟು ಜನಾಂಗಗಳು ಇದ್ದು, 2011 ಜನಗಣತಿಯ ಒಟ್ಟು ಜನಸಂಖ್ಯೆಯ ಶೇ 22.85ರಷ್ಟಿದೆ. 62 ಬುಡಕಟ್ಟು ಜನಾಂಗಗಳ ಪೈಕಿ 13 ಬುಡಕಟ್ಟು ಜನಾಂಗಗಳನ್ನು ವಿಶೇಷವಾಗಿ ದುರ್ಬಲಗೊಂಡಿರುವ ಬುಡಕಟ್ಟು ಜನಾಂಗಗಳು ಎಂದು ಗುರುತಿಸಲಾಗಿದೆ.

48. ಕೇರಳ ಸರ್ಕಾರದ ನಾಲ್ಕನೇ ಆಡಳಿತ ಸುಧಾರಣೆ ಆಯೋಗದ ಅಧ್ಯಕ್ಷರಾಗಿ ಯಾರು ನೇಮಕಗೊಂಡಿದ್ದಾರೆ?

ಅ) ಸಿ.ಪಿ.ನಾಯರ್

ಆ) ವಿ.ಎಸ್.ಅಚುತಾನಂದನ್

ಇ) ನೀಲಾ ಗಂಗಾಧರನ್

ಈ) ಈ.ಕೆ.ನಾರಾಯಣ್

ವಿ.ಎಸ್.ಅಚುತಾನಂದನ್

ಕೇರಳದ ಮಾಜಿ ಮುಖ್ಯಮಂತ್ರಿ ವಿ.ಎಸ್.ಅಚುತಾನಂದನ್ ರವರನ್ನು ಕೇರಳದ ನಾಲ್ಕನೇ ಆಡಳಿತ ಸುಧಾರಣೆ ಆಯೋಗದ ಅಧ್ಯಕ್ಷರಾಗಿ ನೇಮಕ ಮಾಡಲಾಗಿದೆ. ಕೇರಳದ ಮಾಜಿ ಪ್ರಧಾನ ಕಾರ್ಯದರ್ಶಿ ಸಿ.ಪಿ.ನಾಯರ್ ಮತ್ತು ನೀಲಾ ಗಂಗಾಧರನ್ ರವರು ಆಯೋಗದ ಸದಸ್ಯರಾಗಿದ್ದಾರೆ.

49. ಕೇಂದ್ರ ಸರ್ಕಾರ ಇತ್ತೀಚೆಗೆ ಚಾಲನೆ ನೀಡಿದ "ರಾಷ್ಟ್ರವ್ಯಾಪ್ತಿ ಸ್ತನಪಾನ ಕಾರ್ಯಕ್ರಮ"ಕ್ಕೆ ಯಾರನ್ನು ರಾಯಭಾರಿಯನ್ನಾಗಿ ನೇಮಕ ಮಾಡಲಾಗಿದೆ?

ಅ) ವಿದ್ಯಾ ಬಾಲನ್

ಆ) ಸುಮನ್ ರಂಗನಾಥ್

ಇ) ಮಾಧುರಿ ದೀಕ್ಷಿತ್

ಈ) ಕರೀನಾ ಕಪೂರ್

ಮಾಧುರಿ ದೀಕ್ಷಿತ್

ಕೇಂದ್ರ ಸರ್ಕಾರ ರಾಷ್ಟ್ರವ್ಯಾಪ್ತಿ ಸ್ತನಪಾನ ಕಾರ್ಯಕ್ರಮ "ಮಾ" (MAA Mother Absolute Affection)ಗೆ ಚಾಲನೆ ನೀಡಿದೆ. ಬಾಲಿವುಡ್ ನಟಿ ಮಾಧುರಿ ದೀಕ್ಷಿತ್ ಈ ಕಾರ್ಯಕ್ರಮದ ರಾಯಭಾರಿಯಾಗಿದ್ದಾರೆ. ದೇಶದಲ್ಲಿ ಸ್ತನಪಾನದ ಬಗ್ಗೆ ಸೂಕ್ತ ಅರಿವು ಮೂಡಿಸುವ ಗುರಿಯೊಂದಿಗೆ ಈ ಕಾರ್ಯಕ್ರಮವನ್ನು ಆರಂಭಿಸಲಾಗಿದೆ.

www.karunaduexams.com

50. ಇತ್ತೀಚೆಗೆ ವಿಶ್ವ ಆರೋಗ್ಯ ಸಂಸ್ಥೆ ಯಾವ ದೇಶವನ್ನು "ದಡಾರ ಮುಕ್ತ (Measles Free)" ರಾಷ್ಟ್ರವೆಂದು ಘೋಷಿಸಿತು?

ಅ) ಕೆನಡಾ

ಆ) ನಾರ್ವೆ

ಇ) ಬ್ರೆಜಿಲ್

ಈ) ಪೊಲ್ಯಾಂಡ್

ಬ್ರೆಜಿಲ್

ವಿಶ್ವ ಆರೋಗ್ಯ ಸಂಸ್ಥೆ ಬ್ರೆಜಿಲ್ ದೇಶವನ್ನು ದಡಾರ (Measles) ಮುಕ್ತ ರಾಷ್ಟ್ರವೆಂದು ಅಧಿಕೃತವಾಗಿ ಘೋಷಿಸಿದೆ. ಕಳೆದ ವರ್ಷ ಅಂದರೆ 2015 ರಲ್ಲಿ ಬ್ರೆಜಿಲ್ ನಲ್ಲಿ ಯಾವುದೇ ದಡಾರ ಪ್ರಕರಣ ಕಂಡು ಬಂದಿರದ ಕಾರಣ ದಡಾರ ಮುಕ್ತವೆಂದು ಘೋಷಿಸಿದೆ.

51. 2016 ರಿಯೋ ಒಲಂಪಿಕ್ಸ್ನ ಮೊದಲ ಚಿನ್ನದ ಪದಕ ಗೆದ್ದ ವರ್ಜಿನಿಯಾ ಜಿನ್ನಿ ಥ್ರಾಶರ್ ಯಾವ ದೇಶದವರು?

ಅ) ಜಪಾನ್

ಆ) ಅಮೆರಿಕಾ

ಇ) ಚೀನಾ

ಈ) ದಕ್ಷಿಣ ಕೊರಿಯಾ

ಅಮೆರಿಕಾ

ವರ್ಜಿನಿಯಾ ಜಿನ್ನಿ ಥ್ರಾಶರ್ ಅಮೆರಿಕದ ಶೂಟರ್ ಕ್ರೀಡಾಪಟು. 19 ವರ್ಷದ ಜಿನ್ನಿ ಥ್ರಾಷರ್ ಮಹಿಳೆಯರ 10 ಮೀ. ಏರ್ ರೈಫಲ್‌ನಲ್ಲಿ ವಿಜೇತರಾಗುವ ಮೂಲಕ ರಿಯೋ ಒಲಿಂಪಿಕ್ಸ್‌ನ ಮೊದಲ ಚಿನ್ನದ ಪದಕ ಗೆದ್ದ ಕ್ರೀಡಾಪಟು ಎನಿಸಿಕೊಂಡಿದ್ದಾರೆ. ಜಿನ್ನಿ ಥ್ರಾಷರ್ ಚೀನಾದ ಹಾಲಿ ಚಾಂಪಿಯನ್ ಯಿ ಸಿಲಿಂಗ್ ಹಾಗೂ 2004ರ ಅಥೆನ್ಸ್ ಒಲಿಂಪಿಕ್ಸ್ ಚಾಂಪಿಯನ್ ಡು ಲಿಯನ್ನು ಸೋಲಿಸಿ ಪದಕವನ್ನು ತನ್ನದಾಗಿಸಿಕೊಂಡರು. ಈ ವಿಭಾಗದ ಸ್ಪರ್ಧೆಯಲ್ಲಿದ್ದ ಭಾರತದ ಶೂಟರ್‌ಗಳಾದ ಅಪೂರ್ವಿ ಚಾಂಡೆಲಾ ಮತ್ತು ಅಯೋನಿಕಾ ಪೌಲ್ ಕ್ರಮವಾಗಿ 34 ಮತ್ತು 47ನೇ ಸ್ಥಾನದೊಂದಿಗೆ ತೀವ್ರ ನಿರಾಸೆ ಮೂಡಿಸಿದರು.

52. ಭಾರತೀಯ ರೈಲ್ವೇ ಇತ್ತೀಚೆಗೆ ಅನಾವರಣಗೊಳಿಸಿದ ರೈಲು ಗೀತೆ "ಇಂಡಿಯನ್ ರೈಲ್ವೇಸ್, ವಿ ಲವ್ ಇಂಡಿಯನ್ ರೈಲ್ವೇಸ್"ನ ಸಂಗೀತಾ ಸಂಯೋಜಕರು ಯಾರು?

ಅ) ಎ.ಆರ್.ರೆಹಮಾನ್

ಆ) ಶ್ರವಣ್

ಇ) ಎಸ್.ಎಸ್.ಥಮನ್

www.karunaduexams.com

ಈ) ದೇವಾ

ಶ್ರವಣ್

ಭಾರತೀಯ ರೈಲ್ವೇ "ಇಂಡಿಯನ್ ರೈಲ್ವೇಸ್, ವಿ ಲವ್ ಇಂಡಿಯನ್ ರೈಲ್ವೇಸ್" ಎಂಬ ರೈಲು ಗೀತೆಯನ್ನು ಅನಾವರಣಗೊಳಿಸಿದೆ. ಖ್ಯಾತ ಗಾಯಕರಾದ ಉದಿತ್ ನಾರಾಯಣ್ ಮತ್ತು ಕವಿತ ಕೃಷ್ಣಮೂರ್ತಿ ಈ ಗೀತೆಯನ್ನು ಹಾಡಿದ್ದು, ಖ್ಯಾತ ಸಂಗೀತಾ ನಿರ್ದೇಶಕ ಶ್ರವಣ್ ಸಂಗೀತಾ ಸಂಯೋಜನೆ ಮಾಡಿದ್ದಾರೆ. ಮೂರು ನಿಮಿಷಗಳ ಈ ಗೀತೆ ಇನ್ನುಮುಂದೆ ರೈಲ್ವೇ ಇಲಾಖೆ ಎಲ್ಲಾ ಕಾರ್ಯಕ್ರಮಗಳಲ್ಲಿ ಮೊಳಗಲಿದೆ. ಈ ಗೀತೆಯು ಭಾರತೀಯ ರೈಲ್ವೆಯ ಸಾರವನ್ನು ಸಾರಲಿದೆ. ರೈಲ್ವೆ ಉದ್ಯೋಗಿಗಳಿಗೆ ಉತ್ತೇಜನ ನೀಡಲು ಮತ್ತು ರೈಲ್ವೆ ಅಭಿವೃದ್ಧಿಗಾಗಿ ಗೀತೆ ರಚಿಸಲಾಗಿದೆ.

53. ಕೆರಿಬಿಯನ್ ಪ್ರಿಮೀಯರ್ ಲೀಗ್ನಲ್ಲಿ ಕೇವಲ 42 ಬಾಲುಗಳಿಂದ ಶತಕ ಬಾರಿಸಿ ದಾಖಲೆ ನಿರ್ಮಿಸಿದವರು ಯಾರು?

ಅ) ಕ್ರಿಸ್ ಗೇಲ್

ಆ) ಆಂಡ್ರೆ ರಸೆಲ್

ಇ) ಆಶಿಮ್ ಹಮ್ಲ

ಈ) ಜೆಪಿ ಡುಮಿನಿ

ಆಂಡ್ರೆ ರಸೆಲ್

ವೆಸ್ಟ್ಇಂಡೀಸ್‌ನ ಶ್ರೇಷ್ಠ ಆಟಗಾರ ಆಂಡ್ರೆ ರಸೆಲ್ ಕೆರಿಬಿಯನ್ ಪ್ರೀಮಿಯರ್ ಲೀಗ್‌ನಲ್ಲಿ (ಸಿಪಿಎಲ್) 42 ಬಾಲುಗಳಲ್ಲಿ 100 ರನ್ ಗಳಿಸಿ ಹೊಸ ದಾಖಲೆ ಬರೆದಿದ್ದಾರೆ. ಆಲ್‌ರೌಂಡರ್ ಆಟಗಾರ ರಸೆಲ್ ಸಿಪಿಎಲ್‌ನ 20 ಓವರ್‌ಗಳ ಚುಟುಕು ಪಂದ್ಯದಲ್ಲಿ ಈ ಸಾಧನೆ ಮಾಡಿದ್ದಾರೆ. ಜಮೈಕನ್ ತಲ್ಲವಾಹ್ಸ್ ತಂಡದ ಪರ ಆಡುವ ರಸೆಲ್ ಶತಕದಾಟದಲ್ಲಿ 11 ಸಿಕ್ಸರ್, 3 ಬೌಂಡರಿಗಳೊಂದಿಗೆ ಶತಕ ಸಿಡಿಸಿದರು.

54. ಯಾವ ದೇಶ ಇತ್ತೀಚೆಗೆ ವಿಶ್ವದ ಮೊಟ್ಟ ಮೊದಲ "ಟ್ರಾನ್ಸಿಟ್ ಎಲಿವೇಟೆಡ್ ಬಸ್" ನ ಪ್ರಾಯೋಗಿಕ ಪರೀಕ್ಷೆಯನ್ನು ಯಶಸ್ವಿಯಾಗಿ ಪೂರೈಸಿತು?

ಅ) ಅಮೆರಿಕಾ

ಆ) ಜಪಾನ್

ಇ) ಚೀನಾ

ಈ) ಸ್ವಿಟ್ಜರ್ಲ್ಯಾಂಡ್

ಚೀನಾ

ಚೀನಾ ವಿಶ್ವದ ಮೊದಲ ಟ್ರಾನ್ಸಿಟ್ ಎಲಿವೇಟೆಡ್ ಬಸ್ (TEB) ಅಭಿವೃದ್ಧಿಪಡಿಸಿದ್ದು, ಇದರ ಪ್ರಾಯೋಗಿಕ ಪರೀಕ್ಷೆಯನ್ನು ಇತ್ತೀಚೆಗೆ ನಡೆಸಿದೆ. ಈಶಾನ್ಯ ಚೀನಾದ ಹೆಬೇಯಿ ಪ್ರಾಂತ್ಯದ ಕಿನ್ಹುವಾಂಗ್ಡೋ ನಗರದಲ್ಲಿ ಪ್ರಾಯೋಗಿಕವಾಗಿ ಈ

www.karunaduexams.com

ವಿನೂತನ ಬಸ್ ರಸ್ತೆಗಿಳಿದಿದೆ. 300 ಮೀಟರ್ ಉದ್ದದ ನಿಯಂತ್ರಿತ ಹಳಿಯ ಈ ಬಸ್ ಗಂಟೆಗೆ 60 ಕಿ.ಮೀ. ವೇಗದಲ್ಲಿ ಚಲಿಸುವ ಸಾಮರ್ಥ್ಯ ಹೊಂದಿದೆ. ಸಾಮಾನ್ಯ ರಸ್ತೆಯ ಎರಡೂ ಅಂಚುಗಳಲ್ಲಿ ಟ್ರಾಮ್ ಮಾದರಿ ಹಳಿಗಳಿದ್ದು, ಅವುಗಳ ಮೇಲೆ ಟ್ರಾನ್ಸಿಟ್ ಇಲವೇಟೆಡ್ ಬಸ್ಗಳು ಸಂಚರಿಸುತ್ತವೆ. ಬಸ್ 72 ಅಡಿ ಉದ್ದವಿದ್ದು, 25 ಅಡಿ ಅಗಲವಿದೆ. ರಸ್ತೆಯಿಂದ 2 ಮೀಟರ್ ಎತ್ತರದಲ್ಲಿದೆ. ಅರ್ಥಾತ್ ಬೇರೆ ವಾಹನಗಳು ಬಸ್ ಅಡಿಯಲ್ಲಿ ಸಲೀಸಾಗಿ ಸಂಚರಿಸುತ್ತವೆ. ಒಂದು ಬಾರಿಗೆ ಒಮ್ಮೆ 300 ಪ್ರಯಾಣಿಕರು ಇದರಲ್ಲಿ ಪ್ರಯಾಣಿಸಬಹುದಾಗಿದೆ. 1 ಟಿಇಬಿ 40 ಸಾಮಾನ್ಯ ಬಸ್ಗಳಿಗೆ ಸಮವಾಗಿದ್ದು ಸಂಚಾರ ದಟ್ಟಣೆ ಕಡಿತದಲ್ಲಿ ಗಮನಾರ್ಹ ಕೊಡುಗೆಯಾಗಿದೆ.

55. ಈ ಕೆಳಗಿನ ಯಾವ ಬ್ಯಾಂಕ್ ರಕ್ಷಣಾ ಇಲಾಖೆ ಸಿಬ್ಬಂದಿಗಳಿಗೆ "ಶೌರ್ಯ ಹೋಮ್ ಲೋನ್" ಎಂಬ ಗೃಹಸಾಲ ಯೋಜನೆ ಜಾರಿಗೆ ತಂದಿದೆ?

ಅ) ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ

ಆ) ಐಸಿಐಸಿಐ ಬ್ಯಾಂಕ್

ಇ) ಕೆನರಾ ಬ್ಯಾಂಕ್

ಈ) ಸಿಂಡಿಕೇಟ್ ಬ್ಯಾಂಕ್

ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ

ಸಾರ್ವಜನಿಕ ವಲಯದ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ SBI ಪ್ರಿವಿಲೇಜ್ ಹೋಮ್ ಲೋನ್ ಮತ್ತು SBI ಶೌರ್ಯ ಹೋಮ್ ಲೋನ್ ಎಂಬ ಎರಡು ಗೃಹಸಾಲ ಯೋಜನೆ ಬಿಡುಗಡೆಗೊಳಿಸಿದೆ. SBI ಪ್ರಿವಿಲೇಜ್ ಹೋಮ್ ಲೋನ್ ಸರ್ಕಾರಿ ನೌಕರರಿಗೆ ಅನ್ವಯವಾದರೆ, ಶೌರ್ಯ ಹೋಮ್ ಲೋನ್ ರಕ್ಷಣಾ ಸಿಬ್ಬಂದಿಗಳಿಗೆ ಅನ್ವಯಿಸಲಿದೆ. ಈ ಹೊಸ ಯೋಜನೆಯಡಿ ಸಾಲ ಮರು ಪಾವತಿ ಅವಧಿ 75 ವರ್ಷ ತನಕ ಇರಲಿದೆ.

56. ಯೂಸೆಫ್ ಚಾಹೆದ್ (Youssef Chahed) ರವರು ಯಾವ ದೇಶದ ಪ್ರಧಾನಿಯಾಗಿ ಇತ್ತೀಚೆಗೆ ನೇಮಕಗೊಂಡರು?

ಅ) ಚೆಡ್ಡಾ

ಆ) ಟ್ಯುನೀಷಿಯಾ

ಇ) ನೈಜೀರಿಯಾ

ಈ) ಜಿಂಬಾಂಬ್ವೆ

ಟ್ಯುನೀಷಿಯಾ

ಯೂಸೆಫ್ ಚಾಹೆದ್ ರವರನ್ನು ಟ್ಯುನೀಷಿಯಾದ ನೂತನ ಪ್ರಧಾನಿಯಾಗಿ ಟ್ಯುನೀಷಿಯಾದ ಅಧ್ಯಕ್ಷರಾದ ಬೆಜಿ ಕೈದ್ ಎಸ್ಸೆಬಿ ನೇಮಕಮಾಡಿದ್ದಾರೆ. ಟ್ಯುನೀಷಿಯಾದ ಪ್ರಧಾನಿಯಾಗಿದ್ದ ಹಬೀಬ್ ಎಸ್ಸಿದ್ ರವರು ಅವಿಶ್ವಾಸ ಗೊತ್ತುವಳಿ ಹಿನ್ನಲೆಯಲ್ಲಿ ಪ್ರಧಾನಿ ಹುದ್ದೆಗೆ ರಾಜೀನಾಮೆ ನೀಡಿದ್ದರಿಂದ, ಇವರ ಉತ್ತರಾಧಿಕಾರಿಯಾಗಿ ಚಾಹೆದ್

www.karunaduexams.com

ನೇಮಕಗೊಂಡಿದ್ದಾರೆ. ಚಾಹೆದ್ ರವರು ಸಂಸತ್ತಿನ ಬೆಂಬಲ ಪಡೆದುಕೊಂಡರೆ ಟ್ಯುನೀಷಿಯಾದ ಕಿರಿಯ ಪ್ರಧಾನಿ ಎನಿಸಲಿದ್ದಾರೆ.

57. ರಿಯೋ ಒಲಂಪಿಕ್ಸ್ನ ಉದ್ಘಾಟನ ಪೆರೇಡ್ನಲ್ಲಿ ಭಾರತದ ಧ್ವಜ ಸಾರಥ್ಯ ವಹಿಸಿದ್ದವರು ಯಾರು?

ಅ) ಅಭಿನವ್ ಬಿಂದ್ರಾ

ಆ) ನರಸಿಂಗ್ ಯಾದವ್

ಇ) ಲಿಯಾಂಡರ್ ಪೇಸ್

ಈ) ದೀಪಾ ಕಮರ್ಕರ್

ಅಭಿನವ್ ಬಿಂದ್ರಾ

ಭಾರತದ ಶೂಟರ್ ಅಭಿನವ್ ಬಿಂದ್ರಾ ರವರು 2016 ರಿಯೋ ಒಲಂಪಿಕ್ಸ್ನ ಉದ್ಘಾಟನ ಪೆರೇಡ್ನಲ್ಲಿ ಭಾರತದ ಧ್ವಜ ಸಾರಥ್ಯ ವಹಿಸಿದ್ದರು. 2008 ಬೀಜಿಂಗ್ ಒಲಂಪಿಕ್ಸ್ನಲ್ಲಿ ಬಿಂದ್ರಾ ಚಿನ್ನದ ಪದಕ ಗೆದ್ದಿದ್ದರು. ಬಿಂದ್ರಾರವರಿಗೆ ಇದು 5ನೇ ಒಲಂಪಿಕ್ಸ್ ಆಗಿದೆ. 2016 ರಿಯೋ ಒಲಂಪಿಕ್ಸ್ ಬಿಂದ್ರಾ ಭಾರತದ ರಾಯಭಾರಿ ಸಹ ಆಗಿದ್ದಾರೆ.

58. ದೇಶದಲ್ಲೇ ಮೊದಲ ಬಾರಿಗೆ "ಪಡಿತರ ಕೂಪನ್" ವ್ಯವಸ್ಥೆಯನ್ನು ಜಾರಿಗೊಳಿಸಿದ ರಾಜ್ಯ ಯಾವುದು?

ಅ) ರಾಜಸ್ಥಾನ

ಆ) ಕರ್ನಾಟಕ

ಇ) ಗುಜರಾತ್

ಈ) ಮಧ್ಯ ಪ್ರದೇಶ

ಕರ್ನಾಟಕ

ದೇಶದಲ್ಲೇ ಮೊದಲ ಬಾರಿಗೆ ಪಡಿತರ ಕೂಪನ್ ವ್ಯವಸ್ಥೆಯನ್ನು ಕರ್ನಾಟಕದಲ್ಲಿ ಜಾರಿಗೆ ತರಲಾಗುತ್ತಿದೆ. ಬೆಂಗಳೂರು ನಗರ ಪಡಿತರ ಪ್ರದೇಶದಲ್ಲಿರುವ ಎಲ್ಲ ಮತ್ತು ಪ್ರತೀ ಜಿಲ್ಲಾ ಕೇಂದ್ರಗಳಲ್ಲಿ ಆಯ್ದ 10 ನ್ಯಾಯಬೆಲೆ ಅಂಗಡಿಗಳಲ್ಲಿ ಆಗಸ್ಟ್ ತಿಂಗಳಿನಿಂದ ಕೂಪನ್ ವ್ಯವಸ್ಥೆ ಕಡ್ಡಾಯಗೊಳಿಸಲಾಗಿದೆ. ಮುಂದೆ ಇಡೀ ರಾಜ್ಯಕ್ಕೆ ವಿಸ್ತರಿಸಲು ಉದ್ದೇಶಿಸಲಾಗಿದೆ. ಬೆಂಗಳೂರು ನಗರ ಪ್ರದೇಶದಲ್ಲಿ 54 'ಬೆಂಗಳೂರು ಒನ್' ಮತ್ತು ವಿಶೇಷವಾಗಿ ತೆರೆಯಲಾದ 153 ಸೇರಿ ಒಟ್ಟು 207 ಕೇಂದ್ರಗಳಲ್ಲಿ ಕೂಪನ್ ವಿತರಣೆ ನಡೆಯುತ್ತಿದೆ. 'ಪಡಿತರ ವಿತರಣೆ ಪದ್ಧತಿಯಲ್ಲಿ ಸೋರಿಕೆ, ವಂಚನೆ ತಡೆಯುವ ಜೊತೆಗೆ ಆಹಾರ ಭದ್ರತೆ ಒದಗಿಸುವ ಉದ್ದೇಶದಿಂದ ಇಲಾಖೆ ಇಂತಹ ವ್ಯವಸ್ಥೆ ತಂದಿದೆ.

www.karunaduexams.com

59. ಭಾರತದ ಮೊದಲ ಭೂಅಡಿಯ ಮ್ಯೂಸಿಯಂ (Underground Museum) ಯಾವ ನಗರದಲ್ಲಿ ಸ್ಥಾಪನೆಯಾಗಲಿದೆ?

ಅ) ಬೆಂಗಳೂರು

ಆ) ಕೊಲ್ಕತ್ತ

ಇ) ಭೂಪಾಲ್

ಈ) ನವ ದೆಹಲಿ

ನವ ದೆಹಲಿ

ದೇಶದ ಪ್ರಥಮ ಭೂಅಡಿಯ ಮ್ಯೂಸಿಯಂ ನವದೆಹಲಿಯ ರಾಷ್ಟ್ರಪತಿ ಭವನದಲ್ಲಿ ತಲೆ ಎತ್ತಲಿದೆ. ಅಕ್ಟೋಬರ್ 2, 2016 ರಂದು ಈ ಮ್ಯೂಸಿಯಂ ಉದ್ಘಾಟನೆಗೊಳ್ಳಲಿದೆ. ಎರಡು ವರ್ಷ ಅವಧಿಯಲ್ಲಿ ನಿರ್ಮಾಣಗೊಂಡಿರುವ ಈ ಮ್ಯೂಸಿಯಂ ರೂ 80 ಕೋಟಿ ವೆಚ್ಚದಲ್ಲಿ ನಿರ್ಮಾಣಗೊಂಡಿದೆ. ಭಾರತದ ಮಾಜಿ ರಾಷ್ಟ್ರಪತಿಗಳಿಗೆ ಸಂಬಂಧಿಸಿದ ಪ್ರಮುಖ ವಸ್ತುಗಳು ಹಾಗೂ ಭಾರತ ಸ್ವಾತಂತ್ರ ಹೋರಾಟ ಮೇಲೆ ಬೆಳಕು ಚೆಲ್ಲುವ ವಸ್ತುಗಳು ಇಲ್ಲಿ ಪ್ರದರ್ಶನಗೊಳ್ಳಲಿವೆ.

60. ಯಾವ ರಾಜ್ಯದಲ್ಲಿ ವಿಶ್ವದ ಅತಿ ಎತ್ತರದ ಸರಕಟ್ಟು (girder) ರೈಲು ಸೇತುವೆ ನಿರ್ಮಾಣಗೊಳ್ಳಲಿದೆ?

ಅ) ಜಮ್ಮು ಮತ್ತು ಕಾಶ್ಮೀರ

ಆ) ಕರ್ನಾಟಕ

ಇ) ಮಣಿಪುರ

ಈ) ಅಸ್ಸಾಂ

ಮಣಿಪುರ

ದೇಶದ ಅತಿ ದೊಡ್ಡ ರೈಲ್ವೇ ಸುರಂಗ ಹಾಗೂ ವಿಶ್ವದ ಅತಿ ಎತ್ತರದ ಸರಕಟ್ಟು ರೈಲು ಸೇತುವೆ ಮಣಿಪುರದ ಜಿರಿಬಮ್-ಟುಪುಲ್-ಇಂಪಾಲ್ ರೈಲು ಹಳಿ ಮೇಲೆ ನಿರ್ಮಿಸಲು ರೈಲ್ವೇ ಇಲಾಖೆ ನಿರ್ಧರಿಸಿದೆ. ಹೊಸದಾಗಿ ನಿರ್ಮಾಣಗೊಳ್ಳಲಿರುವ ಸುರಂಗವು 11.5 ಕಿ.ಮೀ ಉದ್ದವಿರಲಿದ್ದು, ಪಿರ್ ಪಂಜಲ್ ಸುರಂಗಕ್ಕಿಂತಲೂ ಉದ್ದವಿರಲಿದೆ. ಉದ್ದೇಶಿತ ರೈಲ್ವೇ ಸೇತುವೆ 141 ಮೀ ಎತ್ತರವಿರಲಿದ್ದು, ಪ್ರಸ್ತುತ ಯುರೋಪ್ನಲ್ಲಿರುವ 139 ಮೀ ಎತ್ತರದ ರೈಲು ಸೇತುವೆಯನ್ನು ಮೀರಿಸಲಿದೆ.

61. ರಾಷ್ಟ್ರೀಯ ಕೈಮಗ್ಗ ದಿನವನ್ನು (National Handloom Day) ಯಾವ ದಿನದಂದು ಆಚರಿಸಲಾಗುತ್ತದೆ?

ಅ) ಆಗಸ್ಟ್ 3

ಆ) ಆಗಸ್ಟ್ 5

ಇ) ಆಗಸ್ಟ್ 7

ಈ) ಆಗಸ್ಟ್ 9

ಆಗಸ್ಟ್ 7

ಎರಡನೇ ರಾಷ್ಟ್ರೀಯ ಕೈಮಗ್ಗ ದಿನವನ್ನು ಆಗಸ್ಟ್ 7 ರಂದು ದೇಶದಾದ್ಯಂತ ಆಚರಿಸಲಾಯಿತು. ಪ್ರಧಾನಿ ಮೋದಿ ರವರು ವಾರಣಾಸಿಯಲ್ಲಿ ಆಯೋಜಿಸಲಾಗಿದ್ದ ಕೈಮಗ್ಗ ದಿನಸಮಾರಂಭದಲ್ಲಿ ಪಾಲ್ಗೊಂಡಿದ್ದರು. ಭಾರತ ಸರ್ಕಾರ ಕಳೆದ ವರ್ಷ ಆಗಸ್ಟ್ 7ನ್ನು ರಾಷ್ಟ್ರೀಯ ಕೈಮಗ್ಗ ದಿನವೆಂದು ಘೋಷಿಸಿತ್ತು. ಈ ದಿನದಂದು ಸಂತ ಕಬೀರ ಪ್ರಶಸ್ತಿ ಮತ್ತು ರಾಷ್ಟ್ರೀಯ ಕೈಮಗ್ಗ ಪ್ರಶಸ್ತಿಯನ್ನು ಪ್ರಧಾನ ಮಾಡಲಾಗುವುದು. ದೇಶದ ಸಾಮಾಜಿಕ ಆರ್ಥಿಕ ಅಭಿವೃದ್ದಿಯಲ್ಲಿ ಕೈಮಗ್ಗಗಳ ಕೊಡುಗೆಯ ಬಗ್ಗೆ ಅರಿವು ಮೂಡಿಸುವುದು ಮತ್ತು ಕೈಮಗ್ಗ ಕ್ಷೇತ್ರವನ್ನು ಪ್ರೋತ್ಸಾಹಿಸುವ ಅಂಗವಾಗಿ ಕೈಮಗ್ಗ ದಿನವನ್ನು ಆಚರಿಸಲಾಗುತ್ತದೆ. ಭಾರತ ಸ್ವತಂತ್ರ ಹೋರಾಟದಲ್ಲಿ ಆಗಸ್ಟ್ 7 ರಂದು ಪ್ರಮುಖವಾದ ದಿನವಾಗಿದ್ದು, ಈ ದಿನದಂದು ಸ್ವದೇಶಿ ಚಳುವಳಿ ಆರಂಭಗೊಂಡಿತ್ತು. ಇದರ ಸ್ಮರಣಾರ್ಥ ಆಗಸ್ಟ್ 7ನ್ನು ಕೈಮಗ್ಗ ದಿನವಾಗಿ ಆಯ್ಕೆಮಾಡಲಾಗಿದೆ.

62. ಅಂತಾರಾಷ್ಟ್ರೀಯ ಒಲಂಪಿಕ್ ಸಮಿತಿ (ಐಓಸಿ)ನ ಆಟಗಾರರ ಆಯೋಗ (Athletes Commission)ದ ನೂತನ ಅಧ್ಯಕ್ಷರಾಗಿ ಆಯ್ಕೆಯಾದ ಅಂಜೆಲ ರುಗಿರೋ (Angela Ruggiero) ಯಾವ ಕ್ರೀಡೆಗೆ ಸಂಬಂಧಿಸಿದ್ದಾರೆ?

ಅ) ಐಸ್ ಹಾಕಿ

ಆ) ಸೈಕ್ಲಿಂಗ್

ಇ) ಶೂಟಿಂಗ್

ಈ) ಜಿಮ್ನಾಸ್ಟಿಕ್

ಐಸ್ ಹಾಕಿ

ಮಾಜಿ ಒಲಂಪಿಕ್ ಐಸ್ ಹಾಕಿ ಆಟಗಾರ್ತಿ ಹಾಗೂ ಒಲಂಪಿಕ್ ಚಿನ್ನದ ಪದಕ ವಿಜೇತೆ ಅಮೆರಿಕಾದ ಅಂಜೆಲ ರುಗಿರೋ ಅವರು ಅಂತಾರಾಷ್ಟ್ರೀಯ ಒಲಂಪಿಕ್ ಸಮಿತಿ (ಐಓಸಿ)ನ ಆಟಗಾರರ ಆಯೋಗದ ಮುಖ್ಯಸ್ಥರಾಗಿ ನೇಮಕಗೊಂಡಿದ್ದಾರೆ. ಪ್ರಸ್ತುತ ಆಯೋಗದ ಮುಖ್ಯಸ್ಥರಾಗಿರುವ ಕ್ಲಾಡಿಯಾ ಬೊಕೆಲ್ ರವರ ಅವಧಿ 2016ಕ್ಕೆ ಕೊನೆಗೊಳ್ಳಲಿದ್ದು, ಇವರ ಸ್ಥಾನವನ್ನು ರುಗಿರೋ ತುಂಬಲ್ಲಿದ್ದಾರೆ.

63. 2016 ವಿಶ್ವ ಮಾರ್ಷಿಯಲ್ ಆರ್ಟ್ಸ್ ಚಾಂಪಿಯನ್ ಷಿಪ್ ಪ್ರಶಸ್ತಿಯನ್ನು ಗೆದ್ದವರು ಯಾರು?

ಅ) ವಿವೇಕ್ ತೇಜ

ಆ) ಸುಂದರ್ ಮನೋಹರ್

ಇ) ಪೀಟರ್ ಜೇಮ್ಸ್

ಈ) ರಾಬಿನ್ ಸಿಂಗ್

ವಿವೇಕ್ ತೇಜ

www.karunaduexams.com

ಭಾರತದ ಅಂತಾರಾಷ್ಟ್ರೀಯ ಮಾರ್ಷಿಯಲ್ ಆರ್ಟ್ಸ್ ಪರಿಣಿತ ವಿವೇಕ್ ತೇಜ ಅವರು ಆಸ್ಟ್ರೇಲಿಯಾದ ಸಿಡ್ನಿಯಲ್ಲಿ ವಿಶ್ವ ಮಾರ್ಷಿಯಲ್ ಆರ್ಟ್ಸ್ ಚಾಂಪಿಯನ್ ಷಿಪ್ ಪ್ರಶಸ್ತಿಯನ್ನು ಗೆದ್ದುಕೊಂಡರು. ಆ ಮೂಲಕ ವಿಶ್ವ ಕರಾಟೆ ಚಾಂಪಿಯನ್ ಅಗಿ ಹೊರಹೊಮ್ಮಿದರು. ವಿವೇಕ್ ತೇಜ ಆಸ್ಟ್ರೇಲಿಯಾದ ಮ್ಯಾಥ್ಯೂ ರೋಸ್ ಅವರನ್ನು ಮಣಿಸಿ ಪ್ರಶಸ್ತಿಗೆ ಭಾಜನರಾದರು.

s

64. ಈ ಕೆಳಗಿನ ಯಾವ ಪರ್ವತ ಶ್ರೇಣಿ ಕೇವಲ ಒಂದೇ ಒಂದು ರಾಜ್ಯದಲ್ಲಿ ಹರಡಿಕೊಂಡಿದೆ?

ಅ) ಅರಾವಳಿ

ಆ) ಅಜಂತ

ಇ) ಸತ್ಪುರ

ಈ) ಸಹ್ಯಾದ್ರಿ

ಅಜಂತ

ಅಜಂತ ಪರ್ವತ ಶ್ರೇಣಿ ಚಿಕ್ಕ ಪರ್ವತ ಶ್ರೇಣಿಯಾಗಿದ್ದು, ಕೇವಲ ಮಹರಾಷ್ಟ್ರದಲ್ಲಿ ಮಾತ್ರ ಹರಡಿದೆ. ಅರಾವಳಿ ಪರ್ವತ ಶ್ರೇಣಿ ರಾಜಸ್ಥಾನ, ಹರಿಯಾಣ ಮತ್ತು ದೆಹಲಿ ರಾಜ್ಯದಲ್ಲಿ ಹಂಚಿಕೆಯಾಗಿದೆ. ಸತ್ಪುರ ಪರ್ವತ ಶ್ರೇಣಿ ಗುಜರಾತ್ ಮತ್ತು ಮದ್ಯ ಪ್ರದೇಶ, ಸಹ್ಯಾದ್ರಿ ಪರ್ವತ ಶ್ರೇಣಿ ಗುಜರಾತ್ ನಿಂದ ಕೇರಳದವರೆಗೂ ಹಬ್ಬಿದೆ.

65. ಇವುಗಳಲ್ಲಿ ಯಾವ ರಾಷ್ಟ್ರ ಅಸೋಸಿಯೇಷನ್ ಆಫ್ ಸೌತ್ ಈಸ್ಟ್ ಏಷಿಯನ್ ನೇಷನ್ಸ್ (ASEAN) ಸದಸ್ಯ ರಾಷ್ಟ್ರವಲ್ಲ?

ಅ) ಭಾರತ

ಆ) ವಿಯಟ್ನಾಂ

ಇ) ಇಂಡೋನೇಷಿಯಾ

ಈ) ಫಿಲಿಫೈನ್ಸ್

ಭಾರತ ಅಸೋಸಿಯೇಷನ್ ಆಫ್ ಸೌತ್ ಈಸ್ಟ್ ಏಷಿಯನ್ ನೇಷನ್ಸ್ನ ಸದಸ್ಯ ರಾಷ್ಟ್ರವಲ್ಲ.

66. 2016 ಭಾರತ ಅಂತಾರಾಷ್ಟ್ರೀಯ ಪಾದರಕ್ಷೆ ಮೇಳ ಯಾವ ನಗರದಲ್ಲಿ ಆರಂಭಗೊಂಡಿತು?

ಅ) ಮುಂಬೈ

ಆ) ನವ ದೆಹಲಿ

ಇ) ಪುಣೆ



www.karunaduexams.com

ಈ) ಮೈಸೂರು

ನವ ದೆಹಲಿ

ಎರಡನೇ ಭಾರತ ಅಂತಾರಾಷ್ಟ್ರೀಯ ಪಾದರಕ್ಷೆ ಮೇಳ ನವದೆಹಲಿಯಲ್ಲಿ ಆರಂಭಗೊಂಡಿತು. ಕೇಂದ್ರ ಆರ್ಥಿಕ ಸಚಿವ ಅರುಣ್ ಜೇಟ್ಲಿ ರವರು ಮೇಳಕ್ಕೆ ಚಾಲನೆ ನೀಡಿದರು.

67. ದೇಶದಲ್ಲಿ ಕುಟುಂಬ ಹಣಕಾಸುವಿನ (Household Finance) ವಿವಿಧ ಆಯಾಮಗಳನ್ನು ಪರಿಶೀಲಿಸುವ ಸಲುವಾಗಿ ಭಾರತೀಯ ರಿಸರ್ವ್ ಬ್ಯಾಂಕ್ ಯಾವ ಸಮಿತಿಯನ್ನು ಇತ್ತೀಚೆಗೆ ರಚಿಸಿದೆ?

ಅ) ತರುಣ್ ರಾಮದೊರೈ ಸಮಿತಿ

ಆ) ಕಿಶೋರ್ ಚಂದ್ರ ಸಮಿತಿ

ಇ) ಭಾರ್ಗವ ಸಮಿತಿ

ಈ) ಅವಿನಾಶ್ ಚಂದರ್ ಸಮಿತಿ

ತರುಣ್ ರಾಮದೊರೈ ಸಮಿತಿ

ಭಾರತದಲ್ಲಿ ಕುಟುಂಬ ಹಣಕಾಸುವಿನ ವಿವಿಧ ಆಯಾಮಗಳನ್ನು ಪರಿಶೀಲಿಸುವ ಸಲುವಾಗಿ ಮತ್ತು ಕುಟುಂಬ ಹಣಕಾಸು ಕ್ಷೇತ್ರದಲ್ಲಿ ಭಾರತ ತನ್ನ ಸಮಾನ ರಾಷ್ಟ್ರಗಳೊಂದಿಗೆ ಮತ್ತು ಮುಂದುವರೆದ ದೇಶಗಳೊಂದಿಗೆ ಯಾವ ಸ್ಥಾನದಲ್ಲಿದೆ ಎಂದು ಅಧ್ಯಯನ ನಡೆಸುವ ಸಲುವಾಗಿ ಭಾರತೀಯ ರಿಸರ್ವ್ ಬ್ಯಾಂಕ್ ಡಾ.ತರುಣ್ ರಾಮದೊರೈ ನೇತೃತ್ವದಲ್ಲಿ ಸಮಿತಿಯನ್ನು ರಚಿಸಿದೆ. ತರುಣ್ ರಾಮದೊರೈ ಅವರು ಆಕ್ಸಫರ್ಡ್ ವಿವಿಯಲ್ಲಿ ಫೈನಾನ್ಸಿಯಲ್ ಎಕಾನಮಿಕ್ಸ್ ನ ಪ್ರೋಫೆಸರ್ ಆಗಿದ್ದಾರೆ.

68. ಈ ಕೆಳಗಿನ ರಾಜಕೀಯ ಪಕ್ಷಗಳಲ್ಲಿ ರಾಷ್ಟ್ರೀಯ ಪಕ್ಷ ಸ್ಥಾನಮಾನ ಹೊಂದಿರುವ ಪಕ್ಷಗಳನ್ನು ಗುರುತಿಸಿ:

I) ನ್ಯಾಷನಲ್ ಕಾಂಗ್ರೆಸ್ ಪಕ್ಷ

II) ಬಹುಜನ ಸಮಾಜ ಪಕ್ಷ

III) ಕಮ್ಯೂನಿಸ್ಟ್ ಪಾರ್ಟಿ ಆಫ್ ಇಂಡಿಯಾ

IV) ಆಲ್ ಇಂಡಿಯಾ ತೃಣಮೂಲ ಕಾಂಗ್ರೆಸ್

ಕೆಳಗೆ ಕೊಟ್ಟಿರುವ ಕೋಡ್ ಮೂಲಕ ಸರಿಯಾದ ಉತ್ತರವನ್ನು ಆರಿಸಿ?

ಅ) I & II

ಆ) II & IV

ಇ) I, II & III

ಈ) ಮೇಲಿನ ಎಲ್ಲವೂ

I, II & III

ಪ್ರಸ್ತುತ ದೇಶದಲ್ಲಿ ಆರು ರಾಜಕೀಯ ಪಕ್ಷಗಳು ರಾಷ್ಟ್ರೀಯ ಪಕ್ಷಗಳ ಸ್ಥಾನಮಾನ ಹೊಂದಿವೆ. ಅವುಗಳೆಂದರೆ ನ್ಯಾಷನಲ್ ಕಾಂಗ್ರೆಸ್ ಪಕ್ಷ, ಬಹುಜನ ಸಮಾಜ ಪಕ್ಷ, ಕಮ್ಯೂನಿಸ್ಟ್ ಪಾರ್ಟಿ ಆಫ್ ಇಂಡಿಯಾ, ಕಮ್ಯೂನಿಸ್ಟ್ ಪಾರ್ಟಿ ಆಫ್ ಇಂಡಿಯಾ (ಮಾರ್ಕ್ಸಿಸ್ಟ್), ಭಾರತೀಯ ಜನತಾ ಪಕ್ಷ ಮತ್ತು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್.

69. ಬಾಂಬೆ ಷೇರು ವಿನಿಮಯ ಸಂಸ್ಥೆಯು ಯಾವ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯೊಂದಿಗೆ ಸೈಬರ್ ಭದ್ರತೆ ಒಪ್ಪಂದಕ್ಕೆ ಸಹಿ ಹಾಕಿದೆ?

ಅ) ಐಐಟಿ ಖರಗ್ ಪುರ

ಆ) ಐಐಟಿ ಇಂಧೋರ್

ಇ) ಐಐಟಿ ಮದ್ರಾಸ್

ಈ) ಐಐಟಿ ರಾಂಚಿ

ಐಐಟಿ ಖರಗ್ ಪುರ

ಬಾಂಬೆ ಷೇರು ವಿನಿಮಯ ಸಂಸ್ಥೆಯು ಖರಗ್ ಪುರ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯೊಂದಿಗೆ ಸೈಬರ್ ಭದ್ರತೆ ಸಹಿ ಹಾಕಿದೆ.

70. ಸಿಮ್ಲಿಪಾಲ್ ಹುಲಿ ಸಂರಕ್ಷಣಾ ಧಾಮ ಯಾವ ರಾಜ್ಯದಲ್ಲಿದೆ?

ಅ) ಜಾರ್ಖಂಡ್

ಆ) ಪಶ್ಚಿಮ ಬಂಗಾಳ

ಇ) ಒಡಿಶಾ

ಈ) ಮದ್ಯ ಪ್ರದೇಶ

ಒಡಿಶಾ

71. ಶ್ರೀಲಂಕಾದ ಕೊಲೊಂಬೋದಲ್ಲಿ ನಡೆದ ಕಾಮನ್ ವೆಲ್ತ್ ಚೆಸ್ ಚಾಂಪಿಯನ್ ಷಿಪ್ ಗೆದ್ದ ಭಾರತೀಯ ಚೆಸ್ ಆಟಗಾರ ಯಾರು?

ಅ) ಎಸ್ ಎಲ್ ನಾರಾಯಣ್

ಆ) ದೀಪ್ ಚಕ್ರವರ್ತಿ

ಇ) ಅಭಿಜಿತ್ ಗುಪ್ತಾ

ಈ) ಕಿರಣ್ ಮನಿಷಾ ಮೊಹಂತಿ

www.karunaduexams.com

ಅಭಿಜಿತ್ ಗುಪ್ತಾ

ಗ್ರಾಂಡ್ ಮಾಸ್ಟರ್ ಹಾಗೂ ಮಾಜಿ ವರ್ಲ್ಡ್ ಜೂನಿಯರ್ ಚಾಂಪಿಯನ್ ಅಭಿಜಿತ್ ಗುಪ್ತಾ ಶ್ರೀಲಂಕಾದ ಕೊಲೊಂಬೋದಲ್ಲಿ ನಡೆದ ಕಾಮನ್ ವೆಲ್ತ್ ಚೆಸ್ ಚಾಂಪಿಯನ್ ಷಿಪ್-2016 ಗೆದ್ದುಕೊಂಡರು. ಗ್ರಾಂಡ್ ಮಾಸ್ಟರ್ ಎಸ್ ಎಲ್ ನಾರಾಯಣ್ ಮತ್ತು ದೀಪ್ ಚಕ್ರವರ್ತಿ ಕ್ರಮವಾಗಿ ಬೆಳ್ಳಿ ಮತ್ತು ಕಂಚಿಗೆ ತೃಪ್ತಿಪಟ್ಟುಕೊಂಡರು.

72. ಇತ್ತೀಚೆಗೆ ಕೇಂದ್ರ ಆರೋಗ್ಯ ಸಚಿವಾಲಯ ರಾಷ್ಟ್ರವ್ಯಾಪ್ತಿ ಚಾಲನೆ ನೀಡಿದ "ಮಾ" (MAA Mother's Absolute Affection) ಕಾರ್ಯಕ್ರಮದ ಪ್ರಮುಖ ಉದ್ದೇಶವೇನು?

ಅ) ಸ್ತನಪಾನ ಪ್ರೋತ್ಸಾಹಿಸುವುದು

ಆ) ತಾಯಂದಿರ ಮರಣ ಪ್ರಮಾಣ ಕಡಿಮೆ ಮಾಡುವುದು

ಇ) ತಾಯಿ-ಮಗು ಆರೈಕೆ ಬಗ್ಗೆ ಅರಿವು ಮೂಡಿಸುವುದು

ಈ) ಹೆಣ್ಣು ಮಗುವನ್ನು ಬೆಂಬಲಿಸುವುದು

ಸ್ತನಪಾನ ಪ್ರೋತ್ಸಾಹಿಸುವುದು

ಕೇಂದ್ರ ಸರ್ಕಾರ ರಾಷ್ಟ್ರವ್ಯಾಪ್ತಿ ಸ್ತನಪಾನ ಕಾರ್ಯಕ್ರಮ ಮಾ (MAA Mothers Absolute Affection)ಗೆ ಚಾಲನೆ ನೀಡಿದೆ. ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಚಿವ ಜೆ.ಪಿ.ನಡ್ಡ ಹಾಗೂ ಈ ಕಾರ್ಯಕ್ರಮದ ರಾಯಭಾರಿಯಾಗಿರುವ ಬಾಲಿವುಡ್ ನಟಿ ಮಾಧುರಿ ದೀಕ್ಷಿತ್ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಮಾ ಕೇಂದ್ರ ಆರೋಗ್ಯ ಸಚಿವಾಲಯದ ಮಹತ್ವದ ಕಾರ್ಯಕ್ರಮವಾಗಿದ್ದು, ದೇಶದಲ್ಲಿ ಸ್ತನಪಾನದ ಬಗ್ಗೆ ಸೂಕ್ತ ಅರಿವು ಮೂಡಿಸುವುದಕ್ಕೆ ಆರಂಭಿಸಲಾಗಿದೆ.

73. ಸುರಕ್ಷತೆ ದೃಷ್ಟಿಯಿಂದ "ಪೋಕ್ ಮನ್ ಗೋ" ಸ್ಮಾರ್ಟ್ ಫೋನ್ ಗೇಮ್ ಮೇಲೆ ನಿಷೇಧ ಹೇರಿದ ದೇಶ ಯಾವುದು?

ಅ) ಅಮೆರಿಕಾ

ಆ) ಇರಾನ್

ಇ) ಈಜಿಪ್ಟ್

ಈ) ಫ್ರಾನ್ಸ್

ಇರಾನ್

ಇರಾನ್ ದೇಶ ಇತ್ತೀಚೆಗೆ ಪೋಕ್ ಮನ್ ಗೋ" ಸ್ಮಾರ್ಟ್ ಫೋನ್ ಗೇಮ್ ಮೇಲೆ ನಿಷೇಧ ಹೇರಿದೆ.

74. ಏಷ್ಯಾ ಅಭಿವೃದ್ಧಿ ಬ್ಯಾಂಕ್ (ADB)ನ ಅಧ್ಯಕ್ಷರಾಗಿ ಆಯ್ಕೆಯಾದವರು ಯಾರು?

ಅ) ತಕೆಹಿಕೊ ನಕವೊ

www.karunaduexams.com

ಆ) ಹರುಹಿಕೊ ಕುರೊಡ

ಇ) ವಿಲ್ಸನ್ ಜಮೆಜ

ಈ) ಜಿಮ್ ಯಾಂಗ್ ಕಿಮ್

ತಕೆಹಿಕೊ ನಕವೊ

ತಕೆಹಿಕೊ ನಕವೊ ರವರು ಏಷ್ಯಾ ಅಭಿವೃದ್ಧಿ ಬ್ಯಾಂಕ್ನ ಅಧ್ಯಕ್ಷರಾಗಿ ಎರಡನೇ ಬಾರಿಗೆ ನೇಮಕಗೊಂಡಿದ್ದಾರೆ. ಇವರ ಎರಡನೇ ಅವಧಿ ನವೆಂಬರ್, 2016 ರಿಂದ ಆರಂಭಗೊಳ್ಳಲಿದ್ದು, 2021 ವರೆಗೆ ಅಧಿಕಾರ ಚಲಾಯಿಸಲಿದ್ದಾರೆ.

75. 2016 ಕೆರಿಬಿಯನ್ ಪ್ರೀಮಿಯರ್ ಲೀಗ್ ಪ್ರಶಸ್ತಿ ಗೆದ್ದ ತಂಡ ಯಾವುದು?

ಅ) ಗುಯಾನ ಅಮೆಜಾನ್ ವಾರಿಯರ್ಸ್

ಆ) ಜಮೈಕ ತಲ್ಲವಾಸ್

ಇ) ಬರ್ಬೋದಸ್ ಟ್ರೈಡೆಂಟ್

ಈ) ಸೆಂಟ್ ಲೂಸಿಯ ಝೂಕ್ಸ್

ಜಮೈಕ ತಲ್ಲವಾಸ್

ಜಮೈಕಾ ತಲ್ಲವಾಸ್ ತಂಡ ಕೆರಿಬಿಯನ್ ಪ್ರೀಮಿಯರ್ ಲೀಗ್ ಟ್ರೋಫಿ ಗೆದ್ದುಕೊಂಡಿದೆ. ಗಯಾನ ಅಮಜೋನ್ ವಾರಿಯರ್ಸ್ ಸೋಲಿಸಿದ ಕ್ರಿಸ್ ಗೇಲ್ ಪಡೆ 2ನೇ ಬಾರಿಗೆ ಸಿಪಿಎಲ್ ಚಾಂಪಿಯನ್ ಪಟ್ಟ ಅಲಂಕರಿಸಿದೆ.

76. ಯಾವ ರಾಜ್ಯ ತನ್ನ ರಾಜಧಾನಿಯಲ್ಲಿ ಮೇ, 2017 ಅಂತ್ಯಕ್ಕೆ 1200 ವೈಫೈ ಹಾಟ್ ಸ್ಪಾಟ್ ವ್ಯವಸ್ಥೆಯನ್ನು ಕಲ್ಪಿಸಲಿದೆ?

ಅ) ಕರ್ನಾಟಕ

ಆ) ಮದ್ಯ ಪ್ರದೇಶ

ಇ) ಮಹಾರಾಷ್ಟ್ರ

ಈ) ತೆಲಂಗಣ

ಮಹಾರಾಷ್ಟ್ರ

ಮಹಾರಾಷ್ಟ್ರ ಸರ್ಕಾರ ತನ್ನ ರಾಜಧಾನಿ ಮುಂಬೈನಲ್ಲಿ 1,200 ವೈಫೈ ಹಾಟ್ ಸ್ಪಾಟ್ ವ್ಯವಸ್ಥೆಯನ್ನು ಮೇ, 2017 ಅಂತ್ಯಕ್ಕೆ ಕಲ್ಪಿಸುವ ಮಹತ್ವದ ನಿರ್ಣಯವನ್ನು ಕೈಗೊಂಡಿದೆ. ಮೊದಲ ಹಂತದಲ್ಲಿ 500 ವೈಫೈ ಹಾಟ್ ಸ್ಪಾಟ್ ಗಳನ್ನು ನವೆಂಬರ್ 2016 ಅಂತ್ಯಕ್ಕೆ ವ್ಯವಸ್ಥೆ ಮಾಡಲಾಗುವುದು.

77. ಇತ್ತೀಚೆಗೆ ನಿಧನರಾದ ಸರ್ಫಿಂಗ್ ಚಾಂಪಿಯನ್ ಬರ್ನಾರ್ಡ್ ಫರೆಲ್ಲಿ (Bernard Farrelly) ಯಾವ ದೇಶದವರು?

ಅ) ನ್ಯೂಜಿಲ್ಯಾಂಡ್

ಆ) ಆಸ್ಟ್ರೇಲಿಯಾ

www.karunaduexams.com

ಇ) ಥಾಯ್ಲೆಂಡ್

ಈ) ಸಿಂಗಾಪುರ್

ಆಸ್ಟ್ರೇಲಿಯಾ

ಸರ್ಫಿಂಗ್ನ ಮೊದಲ ವಿಶ್ವ ಚಾಂಪಿಯನ್ ಆಸ್ಟ್ರೇಲಿಯಾದ ಬರ್ನಾರ್ಡ್ ಫರೆಲ್ಲಿ ನಿಧನರಾದರು. ಸರ್ಫಿಂಗ್ ನಲ್ಲಿ ವಿಶ್ವ ವಿಖ್ಯಾತಿಗಳಿಸಿದ್ದ ಅವರು 1964ರಲ್ಲಿ ಸರ್ಫಿಂಗ್ನ ಮೊದಲ ವಿಶ್ವ ಚಾಂಪಿಯನ್ ಆಗಿ ದಾಖಲೆ ನಿರ್ಮಿಸಿದ್ದರು. ಸ್ಪೋರ್ಟ್ಸ್ ಆಸ್ಟ್ರೇಲಿಯಾ ಹಾಲ್ ಫೇಮ್ 1985 ರಲ್ಲಿ ಇವರು ಸೇರ್ಪಡೆಗೊಂಡಿದ್ದರು.

78. ಯಾವ ರಾಜ್ಯ ಇತ್ತೀಚೆಗೆ "ಮಿಷನ್ ಭಗೀರಥ" ಯೋಜನೆಯನ್ನು ಜಾರಿಗೆ ತಂದಿದೆ?

ಅ) ಆಂಧ್ರ ಪ್ರದೇಶ

ಆ) ತೆಲಂಗಣ

ಇ) ಗೋವಾ

ಈ) ಕೇರಳ

ತೆಲಂಗಣ

ತೆಲಂಗಣ ಸರ್ಕಾರ ಮಿಷನ್ ಭಗೀರಥ ಯೋಜನೆಯನ್ನು ಜಾರಿಗೊಳಿಸಿದ್ದು, ಕುಡಿಯುವ ನೀರಿನ ಸಮಸ್ಯೆಗೆ ಸಮರ್ಥನೀಯ ಮತ್ತು ಶಾಶ್ವತ ಪರಿಹಾರ ಕಂಡುಕೊಳ್ಳುವ ಉದ್ದೇಶ ಹೊಂದಿದೆ. ಈ ಯೋಜನೆಯ ಮೊದಲ ಹಂತದ ಕಾಮಗಾರಿ ಪ್ರಧಾನಿ ಮೋದಿ ರವರು ಆಗಸ್ಟ್ 7, 2016 ರಂದು ಚಾಲನೆ ನೀಡಿದರು. ಮಿಷನ್ ಭಗೀರಥ ಯೋಜನೆ ಸುಮಾರು 42000 ಕೋಟಿ ಬೃಹತ್ ಮೊತ್ತದ ಯೋಜನೆಯಾಗಿದ್ದು, ಪ್ರತಿ ಕುಟುಂಗಳಿಗೆ ಕುಡಿಯುವ ನೀರಿನ್ನು ಒದಗಿಸುವುದರ ಜೊತೆಗೆ 45000 ಸಾಂಪ್ರದಾಯಿಕ ನೀರಿನ ಮೂಲಗಳನ್ನು (ಕುಂಟೆ, ಕಲ್ಯಾಣಿ) ಪುನಶ್ಚೇತನಗೊಳಿಸುವ ಗುರಿ ಹೊಂದಿದೆ.

79. 2016 ರಿಯೋ ಒಲಂಪಿಕ್ಸ್ ಕ್ರೀಡಾಕೂಟದ ಧ್ಯೇಯವಾಕ್ಯ (Theme) ______?

ಅ) ವರ್ಲ್ಡ್ ಪೀಸ್ ಅಂಡ್ ಎನ್ವಿರ್ನಮೆಂಟ್

ಆ) ಸ್ಪೋರ್ಟ್ ಫಾರ್ ಸ್ಪಿರಿಟ್

ಇ) ಸ್ಪೋರ್ಟ್ ಫಾರ್ ಫೀಸ್

ಈ) ಒನ್ ವರ್ಲ್ಡ್ ಮೆನಿ ಸ್ಪೋರ್ಟ್ಸ್

ವರ್ಲ್ಡ್ ಪೀಸ್ ಅಂಡ್ ಎನ್ವಿರ್ನಮೆಂಟ್

ವಿಶ್ವ ಶಾಂತಿ ಮತ್ತು ಪರಿಸರ (World Peace and Environment) ಇದು 2016 ರಿಯೋ ಒಲಂಪಿಕ್ಸ್ನ ಧ್ಯೇಯವಾಕ್ಯ. 31 ನೇ ಆವೃತ್ತಿಯ ಒಲಂಪಿಕ್ಸ್ ಕ್ರೀಡಾಕೂಟಕ್ಕೆ ಬ್ರೆಜಿಲ್ನ ರಿಯೋ ಡಿ ಜನ್ಯೆರೋದ ಮರಕಾನ ಸ್ಟೇಡಿಯಂನಲ್ಲಿ ಆಗಸ್ಟ್ 5 ರಂದು ಆರಂಭಗೊಂಡಿದ್ದು, ಆಗಸ್ಟ್ 21 ವರೆಗೆ ನಡೆಯಲಿದೆ.

www.karunaduexams.com

೮೦. ಯಾವ ರಾಜ್ಯ ನೇಕಾರ ಸಮುದಾಯಕ್ಕೆ ಪಿಂಚಣಿ ನೀಡುವ ಸಲುವಾಗಿ “ಬರಿಸ್ಥ ಬುನಾಕರ್ ಸಹಾಯತ ಯೋಜನಾ” ಜಾರಿಗೆ ತಂದಿತು?

ಅ) ಆಂಧ್ರ ಪ್ರದೇಶ

ಆ) ತಮಿಳು ನಾಡು

ಇ) ಪಶ್ಚಿಮ ಬಂಗಾಳ

ಈ) ಒಡಿಶಾ

ಒಡಿಶಾ ಮುಖ್ಯಮಂತ್ರಿ ನವೀನ್ ಪಟ್ನಾಯಕ್ ರವರು ರಾಜ್ಯದ ನೇಕಾರ ಸಮುದಾಯಕ್ಕೆ ಪಿಂಚಣಿ ನೀಡುವ ಬರಿಸ್ಥ ಬುನಾಕರ್ ಸಹಾಯತ ಯೋಜನಗೆ ಚಾಲನೆ ನೀಡಿದರು. ಈ ಯೋಜನೆಯಡಿ ನೇಕಾರರಿಗೆ ರೂ ೫೦೦ ಮಾಸಿಕ ಪಿಂಚಣಿ ದೊರೆಯಲಿದೆ. ರಾಷ್ಟ್ರೀಯ ಕೈಮಗ್ಗ ದಿನದ ಅಂಗವಾಗಿ ಈ ಯೋಜನೆಯನ್ನು ತರಲಾಗಿದೆ. ಈ ಯೋಜನೆಯಡಿ ಫಲಾನುಭವಿಯಾಗಲು ಕನಿಷ್ಠ ೨೦ ವರ್ಷದಿಂದ ನೇಕಾರ ವೃತ್ತಿಯನ್ನು ಮಾಡುತ್ತಿರಬೇಕು ಹಾಗೂ ೬೦ ವರ್ಷ ವಯಸ್ಸಾಗಿರಬೇಕು. ೮೦ ವರ್ಷ ಮೇಲ್ಪಟ್ಟವರಿಗೆ ರೂ ೭೦೦ ಮಾಸಿಕ ವೇತನ ದೊರೆಯಲಿದೆ.

೮೧. ಸಂಸತ್ತಿನಲ್ಲಿ ಇತ್ತೀಚೆಗೆ ಅನುಮೋದನೆಗೊಂಡ ಸರಕು ಮತ್ತು ಸೇವಾ ತೆರಿಗೆ (GST) ಸಂವಿಧಾನ ತಿದ್ದುಪಡಿ ಮಸೂದೆಯ ವ್ಯಾಪ್ತಿಗೆ ಈ ಕೆಳಗಿನ ಯಾವುದು ಬರುವುದಿಲ್ಲ?

ಅ) ಉಕ್ಕು

ಆ) ಅಲ್ಕೋಹಾಲ್

ಇ) ತಂಬಾಕು ಉತ್ಪನ್ನ

ಈ) ರಸಗೊಬ್ಬರ

ಅಲ್ಕೋಹಾಲ್

ಸರಕು ಮತ್ತು ಸೇವಾ ತೆರಿಗೆ (GST) ಸಂವಿಧಾನ ತಿದ್ದುಪಡಿ ಮಸೂದೆಯ ವ್ಯಾಪ್ತಿಗೆ ಮದ್ಯ (ಅಲ್ಕೊಹಾಲ್) ಬರುವುದಿಲ್ಲ. ಮದ್ಯದ ಮೇಲೆ ರಾಜ್ಯ ಸರ್ಕಾರಗಳು ಅಬಕಾರಿ ತೆರಿಗೆ ವಿಧಿಸುತ್ತವೆ. ಮದ್ಯಕ್ಕೆ ತೆರಿಗೆ ವಿಧಿಸುವ ಅವಕಾಶ ರಾಜ್ಯ ಸರ್ಕಾರಗಳ ಬಳಿಯೇ ಇರಲಿದೆ.

82. ಯಾವ ಕ್ರೀಡೆಯಲ್ಲಿ "ಮಜ್ಲಿಂದಾ ಕಲ್ಮಂದಿ" ಅವರು ರಿಯೊ ಒಲಿಂಪಿಕ್ಸ್ನಲ್ಲಿ ಚಿನ್ನದ ಪದಕ ಗೆಲ್ಲುವ ಮೂಲಕ ಕೊಸೊವೊ ಇತಿಹಾಸದಲ್ಲೇ ಒಲಿಂಪಿಕ್ ಪದಕ ಗೆದ್ದ ಮೊಟ್ಟಮೊದಲ ಅಥ್ಲೀಟ್ ಆಗಿ ದಾಖಲೆ ಬರೆದರು?

ಅ) ಜುಡೊ

ಆ) ಈಜು

ಇ) ಜಿಮ್ನಾಸ್ಟಿಕ್

ಈ) ಶೂಟಿಂಗ್

ಜುಡೊ

ಕೊಸೊವೋದ ಮಜ್ಲಿಂದಾ ಕಲ್ಮಂದಿ ರಿಯೊ ಒಲಿಂಪಿಕ್ಸ್ನ ಜುಡೊ ಸ್ಪರ್ಧೆಯಲ್ಲಿ ಚಿನ್ನದ ಪದಕ ಗೆಲ್ಲುವ ಮೂಲಕ ಕೊಸೊವೊ ಇತಿಹಾಸದಲ್ಲೇ ಒಲಿಂಪಿಕ್ ಪದಕ ಗೆದ್ದ ಮೊಟ್ಟಮೊದಲ ಅಥ್ಲೀಟ್ ಎಂಬ ಗೌರವಕ್ಕೆ ಪಾತ್ರರಾದರು. ಕೊಸೊವೊ ದೇಶವನ್ನು 2014ರಲ್ಲಿ ಅಂತಾರಾಷ್ಟ್ರೀಯ ಒಲಿಂಪಿಕ್ಸ್ ಸಂಸ್ಥೆ ಸದಸ್ಯ ದೇಶವಾಗಿ ಸ್ವೀಕರಿಸಿತ್ತು. ಇದಕ್ಕೂ ಮೊದಲು ಕೊಸೊವೋದ ಮಜ್ಲಿಂದಾ ಕಲ್ಮಂದಿ ಸೇರಿದಂತೆ ಅಥ್ಲೀಟ್ಗಳು ಬೇರೆ ದೇಶಗಳನ್ನು ಪ್ರತಿನಿಧಿಸುತ್ತಿದ್ದರು. 52 ಕೆ.ಜಿ. ವಿಭಾಗದಲ್ಲಿ ಎರಡು ಬಾರಿಯ ಈ ವಿಶ್ವ ಚಾಂಪಿಯನ್ ಲಂಡನ್ ಒಲಿಂಪಿಕ್ಸ್ನಲ್ಲಿ ಅಲ್ಬೇನಿಯಾವನ್ನು ಪ್ರತಿನಿಧಿಸಿದ್ದರು. ಆಗ ಆಕೆಗೆ ಪದಕ ದಕ್ಕಿರಲಿಲ್ಲ. ಈ ಬಾರಿ ಕೊಸೊವೊದ ಧ್ವಜಧಾರಿಯಾಗಿದ್ದರು.

83. ಇತ್ತೀಚೆಗೆ ನಿಧನರಾದ ಟಿ.ಕೆ.ವಿ.ದೇಸಿಕಚಾರ್ ರವರು ಪ್ರಸಿದ್ಧ_____?

ಅ) ಕ್ರಿಕೆಟ್ ಆಟಗಾರ

ಆ) ಯೋಗ ಗುರು

ಇ) ಸಂಗೀತಗಾರ

ಈ) ಪತ್ರಕರ್ತ

ಯೋಗ ಗುರು

ಪ್ರಸಿದ್ಧ ಯೋಗ ಗುರು ಟಿ.ಕೆ.ವಿ.ದೇಸಿಕಚಾರ್ ರವರು ಅನಾರೋಗ್ಯದ ಕಾರಣ ನಿಧನರಾದರು. ದೇಸಿಕಚಾರ್ ಆಧುನಿಕ ಯೋಗದ ಪಿತಾಮಹ ಎಂದೇ ಖ್ಯಾತರಾಗಿದ್ದ ಟಿ. ಕೃಷ್ಣಮಚಾರ್ಯ ರವರ ಪುತ್ರ. ವೃತ್ತಿಯಲ್ಲಿ ಎಂಜನಿಯರಿಂಗ್ ಆಗಿದ್ದರೂ, ತಂದೆಯಿಂದ ಪ್ರೇರೇಪಿತರಾಗಿ ಇವರು ಯೋಗದ ಕಡೆ ಆಕರ್ಷಣೆಗೊಂಡಿದ್ದರು. ವಿನಿಯೋಗ ಎಂಬ ತನ್ನದೇ

ಶೈಲಿಯ ಯೋಗವನ್ನು ಇವರು ಕರಗತ ಮಾಡಿಕೊಂಡಿದ್ದರು. ಕೃಷ್ಣಮಚಾರ್ಯ ಯೋಗ ಮಂದಿರಂ ಅನ್ನು ಇವರು ಸ್ಥಾಪಿಸಿದ್ದರು. ಇಂದು ಈ ಯೋಗ ಮಂದಿರಲ್ಲಿ ಸಾವಿರಕ್ಕೂ ಹೆಚ್ಚು ಜನ ಯೋಗಾಭ್ಯಸ ಮಾಡುತ್ತಿದ್ದಾರೆ.

84. ಇತ್ತೀಚೆಗೆ ಈ ಕೆಳಗಿನ ಯಾವ ದೇಶಕ್ಕೆ ಅರ್ಲ್ ಚಂಡಮಾರುತ (Earl) ಅಪ್ಪಳಿಸಿ ಅವಾಂತರ ಸೃಷ್ಟಿಸಿತು?

ಅ) ಮೆಕ್ಸಿಕೊ

ಆ) ಇಟಲಿ

ಇ) ಆಸ್ಟ್ರೇಲಿಯ

ಈ) ಜಪಾನ್

ಮೆಕ್ಸಿಕೊ

ಮೆಕ್ಸಿಕೊದ ಕರಾವಳಿ ಪ್ರದೇಶಕ್ಕೆ ಅರ್ಲ್ ಚಂಡಮಾರುತ ಅಪ್ಪಳಿಸುವ ಮೂಲಕ 40ಕ್ಕೂ ಜನರು ಸಾವನ್ನಪ್ಪಿದ್ದಾರೆ. ಮೆಕ್ಸಿಕೊದ ಪ್ಲೆಬೋ ರಾಜ್ಯ ಸೇರಿದಂತೆ ಅನೇಕ ಭಾಗದಲ್ಲಿ ಚಂಡಮಾರುತದಿಂದ ಭಾರಿ ಮಳೆಯಾಗಿದ್ದು, ಅಪಾರ ನಷ್ಟ ಉಂಟಾಗಿದೆ.

85. ರಾಜ್ಯಸಭೆಯಲ್ಲಿ ಇತ್ತೀಚೆಗೆ ಅನುಮೋದನೆಗೊಂಡ ಮಾನಸಿಕ ಆರೋಗ್ಯ ಮಸೂದೆ-2013ಯಡಿ ಈ ಕೆಳಗಿನ ಯಾವ ಕಾಯಿದೆಗೆ ತಿದ್ದುಪಡಿ ತರಲಾಗುವುದು?

ಅ) ಮಾನಸಿಕ ಆರೋಗ್ಯ ಕಾಯಿದೆ-1987

ಆ) ಮಾನಸಿಕ ಆರೋಗ್ಯ ಕಾಯಿದೆ-1990

ಇ) ಮಾನಸಿಕ ಆರೋಗ್ಯ ಕಾಯಿದೆ-1993

ಈ) ಮಾನಸಿಕ ಆರೋಗ್ಯ ಕಾಯಿದೆ-1996

ಮಾನಸಿಕ ಆರೋಗ್ಯ ಕಾಯಿದೆ-1987

86. ಜಲ ಸಂಪನ್ಮೂಲ ಮಾಹಿತಿ ವ್ಯವಸ್ಥೆ ಜಾರಿಗೆ ತರುವ ಸಲುವಾಗಿ ಯಾವ ರಾಜ್ಯ ಇತ್ತೀಚೆಗೆ ಭಾರತೀಯ ಬಾಹ್ಯಕಾಶ ಸಂಶೋಧನಾ ಸಂಸ್ಥೆ (ಇಸ್ರೋ)ಯೊಂದಿಗೆ ಒಡಂಬಡಿಕೆಗೆ ಸಹಿ ಹಾಕಿದೆ?

ಅ) ಕೇರಳ

ಆ) ತೆಲಂಗಣ

ಇ) ಕರ್ನಾಟಕ

www.karunaduexams.com

ಈ) ಉತ್ತರ ಪ್ರದೇಶ

ತೆಲಂಗಣ

ತೆಲಂಗಣ ರಾಜ್ಯದ ಸಮಗ್ರ ಜಲ ಸಂಪನ್ಮೂಲದ ಮಾಹಿತಿಯನ್ನು ಕಲೆ ಹಾಕುವ ಸಲುವಾಗಿ ಜಲ ಸಂಪನ್ಮೂಲ ಮಾಹಿತಿ ವ್ಯವಸ್ಥೆಯನ್ನು (Water Resource Information System) ಆರಂಭಿಸಿದೆ. ಈ ಸಂಬಂಧ ತೆಲಂಗಣ ನೀರಾವರಿ ಇಲಾಖೆ ಮತ್ತು ಭಾರತೀಯ ಬಾಹ್ಯಕಾಶ ಸಂಶೋಧನಾ ಸಂಸ್ಥೆ (ಇಸ್ರೋ) ಒಡಂಬಡಿಕೆಗೆ ಸಹಿಹಾಕಿವೆ. ಒಡಂಬಡಿಕೆ ಅನ್ವಯ ಇಸ್ರೋದ ರಾಷ್ಟ್ರೀಯ ದೂರಸಂವೇದಿ ಕೇಂದ್ರವೂ ಈ ವ್ಯವಸ್ಥೆಯನ್ನು ಸ್ಥಾಪಿಸಲಿದ್ದು, ಉಪಗ್ರಹದ ಮೂಲಕ ಮಾಹಿತಿ ಹಂಚಲಿದೆ.

87. 2016 ವಿಶ್ವ ಜೂನಿಯರ್ ಚೆಸ್ ಚಾಂಪಿಯನ್ ಪಿಪ್ ಯಾವ ರಾಜ್ಯದಲ್ಲಿ ನಡೆಯಲಿದೆ?

ಅ) ಒಡಿಶಾ

ಆ) ತಮಿಳು ನಾಡು

ಇ) ಮಧ್ಯ ಪ್ರದೇಶ

ಈ) ಗುಜರಾತ್

ಒಡಿಶಾ

2016 ವಿಶ್ವ ಜೂನಿಯರ್ ಚೆಸ್ ಚಾಂಪಿಯನ್ ಪಿಪ್ ಒಡಿಶಾದ ಕೆಐಐಟಿ ವಿಶ್ವವಿದ್ಯಾಲಯದಲ್ಲಿ ಆಗಸ್ಟ್ 7 ರಂದು ಆರಂಭಗೊಂಡಿತ್ತು. ವಿಶ್ವದ 12 ರಾಷ್ಟ್ರಗಳ 137 ಸ್ಪರ್ಧಾಳುಗಳು ಈ ಚಾಂಪಿಯನ್ ಷಿಪ್ ನಲ್ಲಿ ಭಾಗವಹಿಸಲಿದ್ದಾರೆ. ಒಟ್ಟು 13 ಸುತ್ತಿನಲ್ಲಿ ನಡೆಯಲಿದ್ದು, ಆಗಸ್ಟ್ 23 ರಂದು ಕೊನೆಗೊಳ್ಳಲಿದೆ.

88. ಪ್ರಸ್ತುತ ದೇಶದಲ್ಲಿರುವ ಹೈಕೋರ್ಟ್ಗಳ ಸಂಖ್ಯೆ ಎಷ್ಟು?

ಅ) 21

ಆ) 24

ಇ) 27

ಈ) 29

24

ಸದ್ಯ ದೇಶದಲ್ಲಿ 24 ಹೈಕೋರ್ಟ್ಗಳು ಕಾರ್ಯನಿರ್ವಹಿಸುತ್ತಿವೆ.

89. ಭಾರತೀಯ ರಿಸರ್ವ್ ಬ್ಯಾಂಕ್ನ ಮಾಜಿ ಡೆಪ್ಯೂಟಿ ಗರ್ವನರ್ ಆನಂದ್ ಸಿನ್ಹಾ ರವರು ಯಾವ ಬ್ಯಾಂಕ್ನ ಆಡಳಿತ ಮಂಡಳಿಯ ಸ್ವತಂತ್ರ ನಿರ್ದೇಶಕರಾಗಿ ನೇಮಕಗೊಂಡಿದ್ದಾರೆ?

ಅ) HDFC

www.karunaduexams.com

ಆ) IDBI

ಇ) IDFC

ಈ) ICICI

IDFC

ಭಾರತೀಯ ರಿಸರ್ವ್ ಬ್ಯಾಂಕ್ನ ಮಾಜಿ ಡೆಪ್ಯೂಟಿ ಗವರ್ನರ್ ಆನಂದ್ ಸಿನ್ಹಾ ಅವರನ್ನು ಖಾಸಗಿ ವಲಯದ ಬ್ಯಾಂಕ್ IDFC ತನ್ನ ಆಡಳಿತ ಮಂಡಳಿಯ ಸ್ವತಂತ್ರ ನಿರ್ದೇಶಕರನ್ನಾಗಿ ನೇಮಕಮಾಡಿದೆ. ಸಿನ್ಹಾ ರವರು ಭಾರತದ ಮಾಜಿ ಮಹಾಲೇಖಪಾಲ ವಿನೋದ್ ರಾಯ್ ರವರ ಉತ್ತರಾಧಿಕಾರಿಯಾಗಿ ಅಧಿಕಾರ ವಹಿಸಿಕೊಳ್ಳಲಿದ್ದಾರೆ.

೯೦. ಭಾರತದಲ್ಲಿ ಈ ಕೆಳಗಿನ ಯಾವ ಪ್ರದೇಶದಲ್ಲಿ ಹವಳದ ಬಂಡೆಗಳು (Coral Reefs) ಕಾಣ ಸಿಗುವುದಿಲ್ಲ?

ಅ) ಅಂಡಮಾನ್ ಮತ್ತು ನಿಕೋಬರ್

ಆ) ಗಲ್ಫ್ ಆಫ್ ಮನ್ನರ್

ಇ) ಗಲ್ಫ್ ಆಫ್ ಕಚ್

ಈ) ಸುಂದರಬನ್ಸ್

ಸುಂದರಬನ್ಸ್

91. ಇತ್ತೀಚೆಗೆ ಪ್ರಧಾನಿ ಮಂತ್ರಿ ಮೋದಿ ರವರು "ಆಜಾದಿ 70 ಸಾಲ್-ಯಾದ್ ಕರೋ ಕುರ್ಬಾನಿ" ಕಾರ್ಯಕ್ರಮಕ್ಕೆ ಯಾವ ರಾಜ್ಯದಲ್ಲಿ ಚಾಲನೆ ನೀಡಿದರು?

ಅ) ಜಾರ್ಖಂಡ್

ಆ) ಉತ್ತರ ಪ್ರದೇಶ

ಇ) ಮಧ್ಯ ಪ್ರದೇಶ

ಈ) ಮಹಾರಾಷ್ಟ್ರ

ಮಧ್ಯ ಪ್ರದೇಶ

ಪ್ರಧಾನ ಮಂತ್ರಿ ನರೇದ್ರ ಮೋದಿ ಅವರು 70ನೇ ಸ್ವಾತಂತ್ರ್ಯೋತ್ಸವದ ಅಂಗವಾಗಿ ಕೇಂದ್ರ ಸರ್ಕಾರ ಹಮ್ಮಿಕೊಂಡಿರುವ 'ಆಜಾದಿ 70 ಸಾಲ್-ಯಾದ್ ಕರೋ ಕುರ್ಬಾನಿ' ಕಾರ್ಯಕ್ರಮಕ್ಕೆ ಸ್ವಾತಂತ್ರ್ಯ ಹೋರಾಟಗಾರ ಚಂದ್ರಶೇಖರ್ ಆಜಾದ್ ಹುಟ್ಟೂರು ಮಧ್ಯಪ್ರದೇಶದ ಅಲಿರಾಜ್ಪುರ್ ನಲ್ಲಿ ಚಾಲನೆ ನೀಡಿದರು. ಯಾದ್ ಕರೋ ಕುರ್ಬಾನಿ 15 ದಿನಗಳ ಕಾರ್ಯಕ್ರಮವಾಗಿದ್ದು, 70ನೇ ಸ್ವಾತಂತ್ರ್ಯೋತ್ಸವ ಹಾಗೂ ಕ್ವಿಟ್ ಇಂಡಿಯಾ ಚಳವಳಿಗೆ 75 ವರ್ಷ ತುಂಬಿದ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರ ಈ ಕಾರ್ಯಕ್ರಮ ಹಮ್ಮಿಕೊಂಡಿದೆ. ಕೇಂದ್ರದ ಸಚಿವರು, ಬಿಜೆಪಿಯ ಹಿರಿಯ ನಾಯಕರು ಮುಂದಿನ 15 ದಿನಗಳ ಕಾಲ ದೇಶಾದ್ಯಂತ ವಿವಿಧ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಲಿದ್ದಾರೆ.

www.karunaduexams.com

92. ಭಾರತೀಯ ಸ್ಟೇಟ್ ಬ್ಯಾಂಕ್ (SBI) ವ್ಯವಸ್ಥಾಪಕ ನಿರ್ದೇಶಕರಾಗಿ ಯಾರನ್ನು ನೇಮಕ ಮಾಡಲಾಗಿದೆ?

ಅ) ಮುರಳಿ ಭಗತ್

ಆ) ದಿನೇಶ್ ಕುಮಾರ್ ಖಾರ

ಇ) ಹಿಮಾಂಶು ಜೋಷಿ

ಈ) ರಾಜ್ ಕಮಲ್ ವರ್ಮಾ

ದಿನೇಶ್ ಕುಮಾರ್ ಖಾರ

ಭಾರತೀಯ ಸ್ಟೇಟ್ ಬ್ಯಾಂಕ್ನ ವ್ಯವಸ್ಥಾಪಕ ನಿರ್ದೇಶಕರಾಗಿ ದಿನೇಶ್ ಕುಮಾರ್ ಖಾರ ಅವರು ನೇಮಕಗೊಂಡಿದ್ದಾರೆ. ಪ್ರಧಾನ ಮಂತ್ರಿ ಮೋದಿ ನೇತೃತ್ವದ ನೇಮಕಾತಿ ಸಮಿತಿ ಇವರ ನೇಮಕಾತಿಯನ್ನು ಅಂತಿಮಗೊಳಿಸಿದ್ದು, ಖಾರ ಮೂರು ವರ್ಷಗಳ ಕಾಲ ಹುದ್ದೆಯಲ್ಲಿ ಮುಂದುವರೆಯಲಿದ್ದಾರೆ. ಈ ಮುಂಚೆ ಇವರು ಭಾರತೀಯ ಸ್ಟೇಟ್ ಬ್ಯಾಂಕ್ನ ನಿಧಿ ನಿರ್ವಹಣೆಯ ವ್ಯವಸ್ಥಾಪಕ ನಿರ್ದೇಶಕರಾಗಿದ್ದರು.

93. ಇತ್ತೀಚೆಗೆ ಉದ್ಘಾಟಿಸಲಾದ ಕೂಡಂಕುಳಂ ಅಣು ವಿದ್ಯುತ್ ಘಟಕವನ್ನು ಯಾವ ದೇಶದ ಸಹಯೋಗದೊಂದಿಗೆ ನಿರ್ಮಿಸಲಾಗಿದೆ?

ಅ) ಅಮೆರಿಕಾ

ಆ) ಜಪಾನ್

ಇ) ರಷ್ಯಾ

ಈ) ಫ್ರಾನ್ಸ್

ರಷ್ಯಾ

ತಮಿಳುನಾಡಿನಲ್ಲಿ ರಷ್ಯಾದ ಸಹಯೋಗದೊಂದಿಗೆ ಸ್ಥಾಪಿಸಲಾಗಿರುವ ಕೂಡಂಕುಳಂ ಅಣುವಿದ್ಯುತ್ ಸ್ಥಾವರದ ಮೊದಲ ಘಟಕವನ್ನು ಪ್ರಧಾನಿ ನರೇಂದ್ರ ಮೋದಿ ಮತ್ತು ರಷ್ಯಾದ ಅಧ್ಯಕ್ಷ ವ್ಲಾಡಿಮೀರ್ ಪುಟಿನ್ ಹಾಗೂ ತಮಿಳು ನಾಡು ಮುಖ್ಯಮಂತ್ರಿ ಜಯಲಲಿತಾ ಅವರು ಜಂಟಿಯಾಗಿ ವಿಡಿಯೋ ಸಂವಾದದ ಮೂಲಕ ಉದ್ಘಾಟಿಸಿದರು. 1000 ಮೆಗಾ ವ್ಯಾಟ್ ಸಾಮರ್ಥ್ಯದ ಈ ಅಣು ವಿದ್ಯುತ್ ಘಟಕವೂ ಭಾರತ - ರಷ್ಯಾ ನಡುವಿನ ಸಂಬಂಧವನ್ನು ಮತ್ತಷ್ಟು ವೃದ್ಧಿಸಲಿದೆ ಎಂದು ಮೋದಿ ಹೇಳಿದರು.

94. ಭಾರತದ 70ನೇ ಸ್ವಾತಂತ್ರ್ಯೋತ್ಸವ ದಿನದ ಅಂಗವಾಗಿ ವಿಶ್ವಸಂಸ್ಥೆಯ ಸಾಮಾನ್ಯ ಅಧಿವೇಶನದಲ್ಲಿ ಈ ಕೆಳಗಿನ ಯಾರಿಗೆ ವಿಶೇಷ ಗೌರವ ಸಲ್ಲಿಸಲಾಗುವುದು?

ಅ) ಅಮಿತಾಬ್ ಬಚ್ಚನ್

ಆ) ಎಂ.ಎಸ್.ಸುಬ್ಬುಲಕ್ಷ್ಮಿ

ಇ) ಲತಾ ಮಂಗೇಶ್ಕರ್

www.karunaduexams.com

ಈ) ಶಾರೂಖ್ ಖಾನ್

ಎಂ.ಎಸ್.ಸುಬ್ಬುಲಕ್ಷ್ಮಿ

ಕರ್ನಾಟಕ ಶಾಸ್ತ್ರೀಯ ಸಂಗೀತ ಗಾಯಕಿ ಎಂ.ಎಸ್. ಸುಬ್ಬುಲಕ್ಷ್ಮಿ ಅವರಿಗೆ ಭಾರತದ 70ನೇ ಸ್ವಾತಂತ್ರ್ಯೋತ್ಸವ ದಿನವಾದ ಆಗಸ್ಟ್ 15 ರಂದು ವಿಶ್ವಸಂಸ್ಥೆಯ ಮುಖ್ಯ ಕಚೇರಿಯಲ್ಲಿ ನಡೆಯಲಿರುವ ಸಾಮಾನ್ಯ ಅಧಿವೇಶನದಲ್ಲಿ ವಿಶೇಷ ಗೌರವ ಸಲ್ಲಿಸಲಾಗುವುದು. ಅಂದು ಖ್ಯಾತ ಸಂಗೀತ ನಿರ್ದೇಶಕ ಎ.ಆರ್.ರೆಹಮಾನ್ ಅವರು ಸಂಗೀತ ಕಾರ್ಯಕ್ರಮ ನೀಡಲಿದ್ದಾರೆ. 1966ರಲ್ಲಿ ವಿಶ್ವಸಂಸ್ಥೆಯ ಮುಖ್ಯ ಕಚೇರಿಯಲ್ಲಿ ಸುಬ್ಬುಲಕ್ಷ್ಮಿ ಸಂಗೀತ ಕಾರ್ಯಕ್ರಮ ನೀಡಿದ್ದರು. ಇವರ ನಂತರ ಇಲ್ಲಿ ಸಂಗೀತ ಕಾರ್ಯಕ್ರಮ ನೀಡುತ್ತಿರುವ ಎರಡನೇ ಭಾರತೀಯ ಎ.ಆರ್.ರೆಹಮಾನ್.

95. ಇತ್ತೀಚೆಗೆ ನಿಧನರಾದ ಕಲಿಖೊ ಪುಲ್ ಅವರು ಯಾವ ರಾಜ್ಯದ ಮಾಜಿ ಮುಖ್ಯಮಂತ್ರಿ?

ಅ) ಅಸ್ಸಾಂ

ಆ) ಹರಿಯಾಣ

ಇ) ಅರುಣಾಚಲ ಪ್ರದೇಶ

ಈ) ಮಣಿಪುರ

ಅರುಣಾಚಲ ಪ್ರದೇಶ

ಅರುಣಾಚಲ ಪ್ರದೇಶದ ಮಾಜಿ ಮುಖ್ಯಮಂತ್ರಿ ಕಲಿಖೊ ಪುಲ್ ಆತ್ಮಹತ್ಯೆ ಮಾಡಿಕೊಳ್ಳುವ ಮೂಲಕ ಸಾವನ್ನಪ್ಪಿದರು. ಪುಲ್ ಕಾಂಗ್ರೆಸ್ನಿಂದ ಬಂಡೆದ್ದು, ಬಿಜೆಪಿ ಬೆಂಬಲದಿಂದ ಮುಖ್ಯಮಂತ್ರಿಯಾಗಿದ್ದರು. ಪುಲ್ ಸರ್ಕಾರ ವಜಾಗೊಳಿಸಿ, ನಬಾಮ್ ಟುಕಿ ಸರ್ಕಾರ ಪುನಸ್ಥಾಪಿಸಿ ಸುಪ್ರೀಂಕೋರ್ಟ್ ಕಳೆದ ತಿಂಗಳು ತೀರ್ಪು ನೀಡಿತ್ತು. ಕೇವಲ ಆರು ತಿಂಗಳ ಕಾಲ ಅವರು ಮುಖ್ಯಮಂತ್ರಿಯಾಗಿ ಕರ್ತವ್ಯ ನಿರ್ವಹಿಸಿದ್ದರು.

96. ಯಾವ ರಾಜ್ಯ ಕಾಣೆಯಾಗಿರುವ ಮಕ್ಕಳನ್ನು ಪತ್ತೆ ಹಚ್ಚುವ ಸಲುವಾಗಿ "ಆಪರೇಷನ್ ಮುಸ್ಕನ್-2 (Operation Muskan) ಆರಂಭಿಸಿದೆ?

ಅ) ಒಡಿಶಾ

ಆ) ಪಶ್ಚಿಮ ಬಂಗಾಳ

ಇ) ಆಂಧ್ರ ಪ್ರದೇಶ

ಈ) ತಮಿಳು ನಾಡು

ಒಡಿಶಾ

ಒಡಿಶಾ ಸರ್ಕಾರ ರಾಜ್ಯದಲ್ಲಿ ಕಾಣೆಯಾಗಿರುವ ಮಕ್ಕಳನ್ನು ಪತ್ತೆಹಚ್ಚುವ ಸಲುವಾಗಿ ಆಪರೇಷನ್ ಮುಸ್ಕನ್-2 ಅನ್ನು ಇತ್ತೀಚೆಗೆ ಆರಂಭಿಸಿತು. ಒಡಿಶಾ ಕ್ರೈಂ ಬ್ರಾಂಚ್ ಮತ್ತು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

www.karunaduexams.com

ಸಹಯೋಗದೊಂದಿಗೆ ಮೊದಲ ಹಂತದ ಆಪರೇಷನ್ ಮುಸ್ಕನ್-2 ಜುಲೈ 25 ರಂದು ಕಾರ್ಯರಂಭಿಸಿತು. ಈ ಆಪರೇಷನ್ ಅಡಿ ಒಡಿಶಾ ಪೊಲೀಸರು ಮಹಾರಾಷ್ಟ್ರ, ತಮಿಳುನಾಡು, ಆಂಧ್ರಪ್ರದೇಶ ಸೇರಿದಂತೆ 10 ರಾಜ್ಯಗಳಿಗೆ ತೆರಳಿ ಕಾಣೆಯಾಗಿರುವ ಒಡಿಶಾ ಮಕ್ಕಳ ಪತ್ತೆಗಾಗಿ ಕಾರ್ಯಾಚರಣೆ ಮಾಡಲಿದ್ದಾರೆ. ಈ ಆಪರೇಷನ್ ಅಡಿ ಇದುವರೆಗೆ 1531 ಮಕ್ಕಳನ್ನು ಪತ್ತೆಹಚ್ಚಲಾಗಿದೆ.

97. "ಸೆಂಟ್ ಪೀಟರ್ಸಬರ್ಗ್ ಘೋಷಣೆ-2010 (St Petersburg Declaration)" ಯಾವುದಕ್ಕೆ ಸಂಬಂಧಿಸಿದೆ?

ಅ) ತೇವ ಭೂಮಿ ಸಂರಕ್ಷಣೆ

ಆ) ಹುಲಿಗಳ ಸಂರಕ್ಷಣೆ

ಇ) ಜಲ ಸಂಪನ್ಮೂಲ ಸಂರಕ್ಷಣೆ

ಈ) ಪ್ರವಾಸಿ ಹಕ್ಕಿಗಳ ಸಂರಕ್ಷಣೆ

ಹುಲಿಗಳ ಸಂರಕ್ಷಣೆ

ಸೆಂಟ್ ಪೀಟರ್ಸಬರ್ಗ್ ಘೋಷಣೆಯು ಹುಲಿಗಳ ಸಂರಕ್ಷಣೆಗೆ ಸಂಬಂಧಿಸಿದ ಅಂತಾರಾಷ್ಟ್ರೀಯ ಘೋಷಣೆಯಾಗಿದೆ. ನವೆಂಬರ್, 2010 ರಲ್ಲಿ ಸೆಂಟ್ ಪೀಟರ್ಸಬರ್ಗ್ ನಲ್ಲಿ ನಡೆದ ಜಾಗತಿಕ ಹುಲಿ ಸಮ್ಮೇಳನದಲ್ಲಿ ಹುಲಿಗಳನ್ನು ಹೊಂದಿರುವ ಜಗತ್ತಿನ 13 ರಾಷ್ಟ್ರಗಳು ಈ ಘೋಷಣೆಗೆ ಸಹಿ ಹಾಕಿದವು. 2022ರ ಅವಧಿಗೆ ಜಾಗತಿಕ ಮಟ್ಟದಲ್ಲಿ ಈಗಿರುವ ಹುಲಿಗಳ ಸಂಖ್ಯೆಯನ್ನು ದ್ವಿಗುಣಗೊಳಿಸುವ ಮಹತ್ವದ ನಿರ್ಣಯವನ್ನು ಈ ಘೋಷಣೆಯಡಿ ಕೈಗೊಳ್ಳಲಾಗಿದೆ.

98. ಇತ್ತೀಚೆಗೆ ಸುದ್ದಿಯಲ್ಲಿದ್ದ ಕ್ಯಾನ್ಸರ್ ಚಿಕಿತ್ಸೆಗೆ ಅತ್ಯಂತ ಪ್ರಯೋಜನಕಾರಿ ಎನ್ನಲಾದ "ವಾಟ್ಸನ್ ಸೂಪರ್ ಕಂಪ್ಯೂಟರ್" ಅನ್ನು ಅಭಿವೃದ್ಧಿಪಡಿಸಿರುವ ಸಂಸ್ಥೆ ಯಾವುದು?

ಅ) ಐಬಿಎಮ್

ಆ) ಮೈಕ್ರೋಸಾಫ್ಟ್

ಇ) ಡೆಲ್

ಈ) ಹೆಲ್ವಟ್ ಪ್ಯಾಕರ್ಡ್

ಐಬಿಎಮ್

ವಾಟ್ಸನ್ ಸೂಪರ್ ಕಂಪ್ಯೂಟರ್ ಅನ್ನು ಐಬಿಎಮ್ ಸಂಸ್ಥೆ ಅಭಿವೃದ್ಧಿಪಡಿಸಿದ್ದು, ಐಬಿಎಮ್ ನ ಮೊದಲ ಮುಖ್ಯಕಾರ್ಯನಿರ್ವಾಹಣಾಧಿಕಾರಿ ಥಾಮ್ಸನ್ ಜೆ ವಾಟ್ಸನ್ ರವರ ಹೆಸರನ್ನು ಇದಕ್ಕೆ ಇಡಲಾಗಿದೆ. ಅರ್ಟಿಫಿಷಿಯಲ್ ಇಂಟೆಲಿಜೆನ್ಸಿ ಮತ್ತು ಅನಲಿಟಿಕಲ್ ಸಾಫ್ಟವೇರ್ ತಂತ್ರಜ್ಞಾನದಿಂದ ವಾಟ್ಸನ್ ಸೂಪರ್ ಕಂಪ್ಯೂಟರ್ ಅನ್ನು ಪ್ರಶ್ನೆಗೆ ಉತ್ತರಿಸುವ ಮಷಿನ್ನಂತೆ ಅಭಿವೃದ್ಧಿಪಡಿಸಲಾಗಿದೆ. ವೈದ್ಯಕೀಯ ಕ್ಷೇತ್ರಕ್ಕೆ ಸಂಬಂಧಿಸಿದ 15 ಮಿಲಿಯನ್ ಹಾಳೆಗಳಷ್ಟು ಹಾಗೂ 200 ವೈದ್ಯಕೀಯ ಪುಸ್ತಕಗಳ ಮಾಹಿತಿಯನ್ನು ಈ ಸೂಪರ್ ಕಂಪ್ಯೂಟರ್ ಗೆ ಅಳವಡಿಸಲಾಗಿದೆ. ಕ್ಯಾನ್ಸರ್ ಪೀಡಿತ ರೋಗಿಯ ವಿವರವನ್ನು ಇದರಲ್ಲಿ ನಮೂದಿಸಿದರೆ ಸಾಕು ರೋಗದ ತೀವ್ರತೆ, ನೀಡಬೇಕಾಗಿರುವ ಚಿಕಿತ್ಸೆ

www.karunaduexams.com

ಸೇರಿದಂತೆ ಅನೇಕ ಮಾಹಿತಿಯನ್ನು ಕ್ಷಣಾರ್ಧದಲ್ಲಿ ಇದು ಒದಗಿಸುವ ಮೂಲಕ ಕ್ಯಾನ್ಸರ್ ರೋಗಿಗಳಿಗೆ ಸೂಕ್ತ ಚಿಕಿತ್ಸೆ ನೀಡಲು ವೈದ್ಯರಿಗೆ ಸಹಾಯವಾಗಲಿದೆ.

೯೯. ಬ್ರ್ಯಾಂಡ್ ಫೈನಾನ್ಸ್ ನಡೆಸಿದ ಸಮೀಕ್ಷೆಯ ಪ್ರಕಾರ ಅಮೆರಿಕಾದ ಟಾಪ್-100 ಬ್ರ್ಯಾಂಡ್ ಗಳಲ್ಲಿ ಸ್ಥಾನ ಪಡೆದ ಭಾರತದ ಸಂಸ್ಥೆ ಯಾವುದು?

ಅ) ವಿಪ್ರೋ

ಆ) ಇನ್ಫೋಸಿಸ್

ಇ) ಟಾಟಾ ಕನ್ಸಲ್ಟೇನ್ಸಿ ಸರ್ವಿಸ್

ಈ) ಭಾರತೀಯ ಸ್ಟೇಟ್ ಬ್ಯಾಂಕ್

ಟಾಟಾ ಕನ್ಸಲ್ಟೇನ್ಸಿ ಸರ್ವಿಸ್

ಭಾರತದ ಐಟಿ ದಿಗ್ಗಜ ಸಂಸ್ಥೆ ಟಾಟಾ ಕನ್ಸಲ್ಟೇನ್ಸಿ ಸರ್ವಿಸ್ (ಟಿಸಿಎಸ್) ಅಮೆರಿಕಾದ ಟಾಪ್-100 ಬ್ರ್ಯಾಂಡ್ ಗಳಲ್ಲಿ 58 ನೇ ಸ್ಥಾನಗಳಿಸಿದೆ. ಬ್ರ್ಯಾಂಡ್ ಫೈನಾನ್ಸ್ ಎಂಬ ಸಂಸ್ಥೆ ನಡೆಸಿರುವ ಸಮೀಕ್ಷೆಯಲ್ಲಿ ಈ ವಿಷಯ ಬಹಿರಂಗಗೊಂಡಿದ್ದು, ಟಾಪ್-100 ಬ್ರ್ಯಾಂಡ್ ಗಳ ಪಟ್ಟಿಯಲ್ಲಿ ಸ್ಥಾನಪಡೆದುಕೊಂಡಿರುವ ವಿಶ್ವದ ನಾಲ್ಕು ಐಟಿ ಕಂಪನಿಗಳಲ್ಲಿ ಟಿಸಿಎಸ್ ಸಹ ಒಂದಾಗಿದೆ. ಆರ್ಥಿಕ ಮೌಲ್ಯ, ಭೌದ್ಧಿಕ ಆಸ್ತಿ ಮತ್ತು ಟ್ರೇಡ್ ಮಾರ್ಕ್ ಅನ್ನು ಮಾನದಂಡವನ್ನಾಗಿಟ್ಟುಕೊಂಡು ಸಮೀಕ್ಷೆಯನ್ನು ಕೈಗೊಳ್ಳಲಾಗಿದೆ.

100. ವಿವಾದಿತ ಸಶಸ್ತ್ರಪಡೆ ವಿಶೇಷಾಧಿಕಾರ ಕಾಯ್ದೆ (ಅ Armed Forces Special Powers Act) ಜಾರಿಗೆ ಬಂದ ವರ್ಷ?

ಅ) ಸೆಪ್ಟೆಂಬರ್ 11, 1968

ಆ) ಅಕ್ಟೋಬರ್ 10, 1990

ಇ) ಸೆಪ್ಟೆಂಬರ್ 11, 1958

ಈ) ನವೆಂಬರ್ 10, 2000

ಸೆಪ್ಟೆಂಬರ್ 11, 1968

ಸಶಸ್ತ್ರಪಡೆ ವಿಶೇಷಾಧಿಕಾರ ಕಾಯ್ದೆ (Armed Forces Special Powers Act) ಭಾರತ ಸಂವಿಧಾನ ಸೇನಾ ಪಡೆಗಳಿಗೆ ನೀಡಿರುವ ವಿಶೇಷ ಅಧಿಕಾರ. ಈ ಕಾಯ್ದೆ ಸೆಪ್ಟೆಂಬರ್ 11, 1958ರಲ್ಲಿ ಅಸ್ಸಾಂನ ನಾಗ ಹಿಲ್ಸ್ ಪ್ರದೇಶದಲ್ಲಿ ಮಾತ್ರ ಜಾರಿಗೆ ತರಲಾಗಿತ್ತು. ತದನಂತರ ಒಂದರ ನಂತರ ಒಂದರಂತೆ ಈಶಾನ್ಯ ರಾಜ್ಯಗಳಾದ ಅರುಣಾಚಲ ಪ್ರದೇಶ ಅಸ್ಸಾಂ, ಮೇಘಾಲಯ, ಮಣಿಪುರ, ಮೀಝೋರಾಂ, ನಾಗಾಲ್ಯಾಂಡ್ ಮತ್ತು ತ್ರಿಪುರಾದಲ್ಲಿ ಕಾಯ್ದೆಯನ್ನು ಜಾರಿಗೆ ತರಲಾಯಿತು. ಆದರೆ 1983 ರಲ್ಲಿ ಕಾಯಿದೆ ತಿದ್ದುಪಡಿ ತರುವ ಮೂಲಕ ಪಂಜಾಬ್ ಮತ್ತು ಛತ್ತೀಸ್ ಘಡಕ್ಕೆ ವಿಸ್ತರಿಸಲಾಯಿತು. ಆದರೆ 1997 ರಲ್ಲಿ ಇದನ್ನು ಹಿಂಪಡೆಯಲಾಯಿತು. ತದನಂತರ 1990 ರಲ್ಲಿ ಅಂಗೀಕಾರವಾದ

www.karunaduexams.com

ನಿಯಾಮವಳಿಯಂತೆ ಜಮ್ಮು ಮತ್ತು ಕಾಶ್ಮೀರದಲ್ಲಿ ಈ ಕಾಯಿದೆ ಜಾರಿಗೆ ಬಂದಿತು, ಸದ್ಯ ಕಾಶ್ಮೀರದಲ್ಲಿ ಇಂದಿಗೂ ಜಾರಿಯಲ್ಲಿದೆ.

101. ಸರಕು ಮತ್ತು ಸೇವಾ ತೆರಿಗೆ (GST)ಯನ್ನು ಅನುಮೋದನೆ ಮಾಡಿದ ಮೊದಲ ರಾಜ್ಯ ಯಾವುದು?

ಅ) ಅಸ್ಸಾಂ

ಆ) ಜಾರ್ಖಂಡ್

ಇ) ತಮಿಳು ನಾಡು

ಈ) ಪಂಜಾಬ್

ಅಸ್ಸಾಂ

ಅಸ್ಸಾಂ ರಾಜ್ಯ ಸರಕು ಮತ್ತು ಸೇವಾ ತೆರಿಗೆಯನ್ನು ಅನುಮೋದನೆ ಮಾಡಿದ ಮೊದಲ ರಾಜ್ಯ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಅಸ್ಸಾಂ ವಿಧಾನಸಭೆಯಲ್ಲಿ ಅವಿರೋಧವಾಗಿ ಜಿಎಸ್‌ಟಿಯನ್ನು ಅನುಮೋದನೆ ಮಾಡಲಾಗಿದೆ. ಸರಕು ಮತ್ತು ಸೇವಾ ತೆರಿಗೆಯನ್ನು ಈಗಾಗಲೇ ಸಂಸತ್ತಿನಲ್ಲಿ ಅನುಮೋದಿಸಲಾಗಿದೆ. ಆದರೆ ಅದಕ್ಕೂ ಮೊದಲು 29 ರಾಜ್ಯಗಳ ಪೈಕಿ ಕನಿಷ್ಠ 15 ರಾಜ್ಯಗಳು (ಶೇ 50ರಷ್ಟು) ಮಸೂದೆಗೆ ಅನುಮೋದನೆ ನೀಡಬೇಕಿದೆ. ಅನಂತರ ರಾಷ್ಟ್ರಪತಿ ರವರು ಈ ಮಸೂದೆಗೆ ಅಂಕಿತ ಹಾಕಿದ ಮೇಲೆ ಕಾಯಿದೆಯಾಗಿ ಜಾರಿಗೆ ಬರಲಿದೆ.

102. ಇತ್ತೀಚೆಗೆ ಆರಂಭಗೊಂಡ ಕೃಷ್ಣ-ಪುಷ್ಕರ ಮೇಳಕ್ಕೆ ಸಂಬಂಧಿಸಿದಂತೆ ಈ ಕೆಳಗಿನ ಹೇಳಿಕೆಗಳನ್ನು ಗಮನಿಸಿ:

I) ಗುರುಗ್ರಹವು ಕನ್ಯಾರಾಶಿಯನ್ನು ಪ್ರವೇಶಿಸುವ ನಿಮಿತ್ತ ಪುಷ್ಕರ ಮೇಳವನ್ನು ಆಯೋಜಿಸಲಾಗುತ್ತದೆ

II) ಈ ದಿನದಂದು ಗೋದಾವರಿಯು ಕೃಷ್ಣೆಗೆ ಆಗಮಿಸುತ್ತಾಳೆ ಎನ್ನಲಾಗಿದ್ದು ಇದಕ್ಕೆ ಕನ್ಯಾಗತ ಎನ್ನುತ್ತಾರೆ

III) ಪ್ರತಿ ಆರು ವರ್ಷಕ್ಕೊಮ್ಮೆ ಈ ಕುಂಭಮೇಳವನ್ನು ಆಯೋಜಿಸಲಾಗುತ್ತದೆ.

ಈ ಮೇಲಿನ ಹೇಳಿಕೆಗಳಲ್ಲಿ ಸರಿಯಾದ ಹೇಳಿಕೆ/ಹೇಳಿಕೆಗಳನ್ನು ಆರಿಸಿ:

ಅ) ಹೇಳಿಕೆ I ಮಾತ್ರ

ಆ) ಹೇಳಿಕೆ I & II ಮಾತ್ರ

ಇ) ಹೇಳಿಕೆ II & III ಮಾತ್ರ

ಈ) ಮೇಲಿನ ಎಲ್ಲವೂ ಸರಿಯಾಗಿವೆ

ಹೇಳಿಕೆ I ಮಾತ್ರ

ಕೃಷ್ಣಾ ಪುಷ್ಕರ (ಕೃಷ್ಣಾ ಕುಂಭಮೇಳ) ಪ್ರತಿ 12 ವರ್ಷಕ್ಕೊಮ್ಮೆ ನಡೆಯುವ ಮೇಳವಾಗಿದ್ದು, ಆಗಸ್ಟ್ 12ರಿಂದ ಆರಂಭಗೊಳ್ಳುತ್ತಿದೆ. ಕೃಷ್ಣಾ ನದಿ ಸಾಗುವ ಮಹಾರಾಷ್ಟ್ರ, ಕರ್ನಾಟಕ, ತೆಲಂಗಾಣ ಮತ್ತು ಆಂಧ್ರಪ್ರದೇಶದಲ್ಲಿ ಈ

www.karunaduexams.com

ಪುಣ್ಯಸ್ನಾನಕ್ಕೆ ಸಿದ್ಧತೆಗಳು ನಡೆದಿದ್ದು, ಕೋಟ್ಯಂತರ ಜನರು ನದಿಯಲ್ಲಿ ಮಿಂದೇಳಲು ಸಿದ್ಧವಾಗಿದ್ದಾರೆ. ಗುರುಗ್ರಹವು ಕನ್ಯಾರಾಶಿಯನ್ನು ಈ 11 ದಿನಗಳ ಅವಧಿಯಲ್ಲಿ ಪ್ರವೇಶಿಸುತ್ತಿದ್ದು, ಈ ನಿಮಿತ್ತ ಪುಷ್ಕರ ಮೇಳವು ನಡೆಯುತ್ತಿದೆ. ಈ ಸಂದರ್ಭದಲ್ಲಿ ಗಂಗೆಯು ಕೃಷ್ಣೆಗೆ ಆಗಮಿಸುತ್ತಾಳೆ ಎಂಬ ಪ್ರತೀತಿ ಇದ್ದು, ಇದಕ್ಕೆ ಕನ್ಯಾಗತ ಎನ್ನಲಾಗುತ್ತದೆ.

103. ಇದೇ ಮೊದಲ ಬಾರಿ ನಡೆಯುತ್ತಿರುವ "ರಾಷ್ಟ್ರೀಯ ಶಿಕ್ಷಕರ ಕಾಂಗ್ರೆಸ್ (National Teacher's Congress)" ಯಾವ ನಗರದಲ್ಲಿ ನಡೆಯಲಿದೆ?

ಅ) ಬೆಂಗಳೂರು

ಆ) ಹೈದ್ರಾಬಾದ್

ಇ) ಪುಣೆ

ಈ) ಕೊಲ್ಕತ್ತ

ಪುಣೆ

ಪ್ರಥಮ ರಾಷ್ಟ್ರೀಯ ಶಿಕ್ಷಕರ ಕಾಂಗ್ರೆಸ್ ಪುಣೆಯಲ್ಲಿ ಸೆಪ್ಟೆಂಬರ್ 23 ರಿಂದ 25 ವರೆಗೆ ಮೂರು ದಿನಗಳ ಕಾಲ ನಡೆಯಲಿದೆ. ಪುಣೆಯ ರಾಷ್ಟ್ರೀಯ ಶಿಕ್ಷಕರ ಫೌಂಡೇಷನ್ ಈ ಕಾಂಗ್ರೆಸ್ ಅನ್ನು ಆಯೋಜಿಸುತ್ತಿದೆ. ದೇಶದ ವಿವಿಧ ಭಾಗಗಳಿಂದ ಸುಮಾರು 8000ಕ್ಕೂ ಹೆಚ್ಚು ಶಿಕ್ಷಕರು ಇದರಲ್ಲಿ ಭಾಗವಹಿಸಲಿದ್ದಾರೆ.

104. ಕರ್ನಾಟಕ ಶಾಸ್ತ್ರೀಯ ಸಂಗೀತ ಗಾಯಕಿ ಎಂ.ಎಸ್.ಸುಬ್ಬುಲಕ್ಷ್ಮಿ ಅವರ ಜನ್ಮ ಶತಮಾನೋತ್ಸವದ ಗೌರವಾರ್ಥ ಈ ಕೆಳಗಿನ ಯಾವುದು ವಿಶೇಷ ಅಂಚೆ ಚೀಟಿ ಹೊರ ತರಲು ನಿರ್ಧರಿಸಿದೆ?

ಅ) ಭಾರತೀಯ ಅಂಚೆ

ಆ) ವಿಶ್ವ ಸಂಸ್ಥೆ

ಇ) ಅಮೆರಿಕಾ ಸಂಸತ್ತು

ಈ) ಯುರೋಪಿಯನ್ ಒಕ್ಕೂಟ

ವಿಶ್ವ ಸಂಸ್ಥೆ

ಕರ್ನಾಟಕ ಶಾಸ್ತ್ರೀಯ ಸಂಗೀತ ಗಾಯಕಿ ಎಂ.ಎಸ್.ಸುಬ್ಬುಲಕ್ಷ್ಮಿ ಅವರ ಜನ್ಮ ಶತಮಾನೋತ್ಸವದ ಗೌರವಾರ್ಥ ವಿಶ್ವಸಂಸ್ಥೆಯು ವಿಶೇಷ ಅಂಚೆ ಚೀಟಿ ಹೊರ ತರಲು ಮುಂದಾಗಿದೆ. ವಿಶ್ವಸಂಸ್ಥೆಯ ಭಾರತದ ಪ್ರತಿನಿಧಿ ಕಚೇರಿ ಈ ವಿಷಯವನ್ನು ಖಚಿತ ಪಡಿಸಿದೆ. ಭಾರತದ 70ನೇ ಸ್ವಾತಂತ್ರ್ಯೋತ್ಸವ ದಿನವಾದ ಆಗಸ್ಟ್ 15ರಂದು ವಿಶ್ವಸಂಸ್ಥೆಯ ಪ್ರಧಾನ ಕಚೇರಿಯಲ್ಲಿ ನಡೆಯುವ ಸಾಮಾನ್ಯ ಅಧಿವೇಶನದಲ್ಲಿ ಅಂಚೆ ಚೀಟಿ ಬಿಡುಗಡೆ ಮಾಡಲಾಗುವುದು. ಸುಬ್ಬುಲಕ್ಷ್ಮಿ ಅವರು 1966ರಲ್ಲಿ ವಿಶ್ವಸಂಸ್ಥೆಯ ಮುಖ್ಯಕಚೇರಿಯಲ್ಲಿ ಸಂಗೀತ ಕಾರ್ಯಕ್ರಮ ನೀಡಿದ್ದರು. ಈ ವರ್ಷ ಅದಕ್ಕೆ 50 ವರ್ಷ ತುಂಬುತ್ತದೆ. ಹೀಗಾಗಿ ಸುಬ್ಬುಲಕ್ಷ್ಮಿ ಅವರ ಜೀವನ ಮತ್ತು ಸಾಧನೆಯನ್ನು ಬಿಂಬಿಸುವ ಅವರ ಛಾಯಾಚಿತ್ರಗಳ ಪ್ರದರ್ಶನ ನಡೆಯಲಿದೆ.

www.karunaduexams.com

105. ಅಮೆರಿಕಾದ ಈಜುಗಾರ ಮೈಕಲ್ ಫೆಲ್ಪ್ಸ್ ಸತತ ಎಷ್ಟು ಒಲಂಪಿಕ್ಸ್ ಕ್ರೀಡಾಕೂಟಗಳಲ್ಲಿ ಚಿನ್ನದ ಪದಕ ಗೆಲ್ಲುವ ಮೂಲಕ ಹೊಸ ದಾಖಲೆ ನಿರ್ಮಿಸಿದರು?

ಅ) ಎರಡು

ಆ) ನಾಲ್ಕು

ಇ) ಐದು

ಈ) ಆರು

ನಾಲ್ಕು

ಅಮೆರಿಕದ ಈಜುಗಾರ ಮೈಕಲ್ ಫೆಲ್ಪ್ಸ್ ಒಲಿಂಪಿಕ್ಸ್‌ನಲ್ಲಿ 22ನೆ ಚಿನ್ನದ ಪದಕವನ್ನು ಗೆದ್ದುಕೊಂಡರು. ಚಿನ್ನದ ಮೀನು ಎಂದೇ ಖ್ಯಾತರಾದ ಅಮೆರಿಕದ ಈಜುಪಟು ಮೈಕೆಲ್ ಫೆಲ್ಪ್ಸ್ 200 ಮೀಟರ್ ವೈಯಕ್ತಿಕ ಮಿಡ್ಲೆ ವಿಭಾಗದಲ್ಲಿ 1 ನಿಮಿಷ 54.66 ಸೆಕೆಂಡ್ ಗಳಲ್ಲಿ ಗುರಿ ತಲುಪಿ ಐತಿಹಾಸಿಕ ಸಾಧನೆ ಮಾಡಿದರು. ನಾಲ್ಕನೆ ಚಿನ್ನದೊಂದಿಗೆ ಸತತ ನಾಲ್ಕು ಒಲಿಂಪಿಕ್ಸ್ ಕೂಟಗಳಲ್ಲಿ ಚಿನ್ನ ಜಯಿಸಿದ ದಾಖಲೆ ನಿರ್ಮಿಸಿದರು. ರಿಯೋ ಒಲಂಪಿಕ್ಸ್ ನಲ್ಲಿ 200 ಮೀಟರ್ ಬಟರ್ ಫ್ಲೈ ವೈಯಕ್ತಿಕ ವಿಭಾಗದಲ್ಲಿ ಚಿನ್ನ ಮತ್ತು 4x200 ಮೀ ಫ್ರೀಸ್ಟೈಲ್ ರಿಲೇಯಲ್ಲಿ ಚಿನ್ನ ಗೆಲ್ಲುವುದರೊಂದಿಗೆ ಒಲಿಂಪಿಕ್ಸ್‌ನಲ್ಲಿ ದಾಖಲೆ ಬರೆದರು. 31ರ ಹರೆಯದ ಅವರು ಈವರೆಗೆ ಒಲಿಂಪಿಕ್ಸ್ ನಲ್ಲಿ 26 ಪದಕಗಳನ್ನು ಜಯಿಸಿದ್ದಾರೆ. ಇದೊಂದು ಸಾರ್ವಕಾಲಿಕ ಒಲಿಂಪಿಕ್ಸ್ ದಾಖಲೆಯಾಗಿದೆ. ಇದರಲ್ಲಿ ಚಿನ್ನ22, ಬೆಳ್ಳಿ 2 ಮತ್ತು ಕಂಚು 2 ಸೇರಿವೆ.

106. ಗೀತಂ ವಿಶ್ವವಿದ್ಯಾಲಯ ನೀಡುವ 'ಗೀತಂ ಸಂಸ್ಥಾಪನಾ ಪ್ರಶಸ್ತಿ'ಗೆ ಯಾರನ್ನು ಆಯ್ಕೆಮಾಡಲಾಗಿದೆ?

ಅ) ಮಾಧವನ್ ನಾಯರ್

ಆ) ಕಸ್ತೂರಿ ರಂಗನ್

ಇ) ಸಿ.ಎನ್.ಆರ್.ರಾವ್

ಈ) ಸೂರ್ಯ ನಾರಾಯಣ್

ಸಿ.ಎನ್.ಆರ್.ರಾವ್

ಗೀತಂ ವಿಶ್ವವಿದ್ಯಾಲಯ ನೀಡುವ 'ಗೀತಂ ಸಂಸ್ಥಾಪನಾ ಪ್ರಶಸ್ತಿ'ಗೆ ಹಿರಿಯ ವಿಜ್ಞಾನಿ ಡಾ.ಸಿ.ಎನ್.ಆರ್. ರಾವ್ ಆಯ್ಕೆಯಾಗಿದ್ದಾರೆ. ವಿಶ್ವವಿದ್ಯಾಲಯದ ಪ್ರಾಂಗಣದಲ್ಲಿ ನಡೆಯಲಿರುವ 36ನೇ ಸಂಸ್ಥಾಪನಾ ದಿನಾಚರಣೆಯಲ್ಲಿ ಪ್ರಶಸ್ತಿ ಪ್ರದಾನ ನಡೆಯಲಿದೆ. ಪ್ರಶಸ್ತಿಯು 10 ಲಕ್ಷ ನಗದು ಹಾಗೂ ಫಲಕವನ್ನು ಒಳಗೊಂಡಿದೆ.

www.karunaduexams.com

107. ಇತ್ತೀಚೆಗೆ ನಿಧನರಾದ ಪಾಕಿಸ್ತಾನದ ಮಾಜಿ ಕ್ರಿಕೆಟಿಗ ಹನೀಫ್ ಮುಹಮ್ಮದ್ ಯಾವ ಬಿರುದಿನಿಂದ ಖ್ಯಾತರಾಗಿದ್ದರು?

ಅ) ಲಿಟ್ಲ್ ಮಾಸ್ಟರ್

ಆ) ಶೂರ್ ಶಾಟರ್

ಇ) ಶಾರ್ಪ್ ಹಿಟ್ಟರ್

ಈ) ಪಾಕ್ ಎಕ್ಸಪ್ರೆಸ್

ಲಿಟ್ಲ್ ಮಾಸ್ಟರ್

ಪಾಕಿಸ್ತಾನ ಮಾಜಿ ಕ್ರಿಕೆಟ್ ಆಟಗಾರ, 'ಲಿಟ್ಲ್ ಮಾಸ್ಟರ್' ಎಂದೇ ಖ್ಯಾತರಾಗಿದ್ದ ಹನೀಫ್ ಮುಹಮ್ಮದ್(81) ನಿಧನರಾದರು. ಹನೀಫ್ ಮುಹಮ್ಮದ್ 1954-55ರಲ್ಲಿ ಭಾರತಕ್ಕೆ ಮೊದಲ ಬಾರಿ ಪ್ರವಾಸ ಕೈಗೊಂಡ ಪಾಕಿಸ್ತಾನ ಕ್ರಿಕೆಟ್ ತಂಡದ ಸದಸ್ಯರಾಗಿದ್ದರು. 1952-53 ರಿಂದ 1969-70ರ ನಡುವಿನ ಸುದೀರ್ಘ ವೃತ್ತಿ ಜೀವನದಲ್ಲಿ 55 ಟೆಸ್ಟ್ ಗಳನ್ನು ಆಡಿದ್ದಾರೆ. 1957-58ರಲ್ಲಿ ವೆಸ್ಟ್ಇಂಡೀಸ್ ವಿರುದ್ಧದ ಟೆಸ್ಟ್ನಲ್ಲಿ 337ರನ್ ದಾಖಲಿಸಿದ್ದರು. ಈ ಟೆಸ್ಟ್ನಲ್ಲಿ ಅವರು 970 ನಿಮಿಷಗಳ ಕಾಲ ಬ್ಯಾಟಿಂಗ್ ನಡೆಸಿದ್ದರು. ಇದು ಟೆಸ್ಟ್ ಹಾಗೂ ಪ್ರಥಮ ದರ್ಜೆ ಕ್ರಿಕೆಟ್ನಲ್ಲಿ ಅತ್ಯಂತ ಹೆಚ್ಚು ಹೊತ್ತು ಕ್ರೀಸ್ನಲ್ಲಿ ನಿಂತು ಬ್ಯಾಟಿಂಗ್ ನಡೆಸಿದ ಅಪೂರ್ವ ದಾಖಲೆಯಾಗಿದೆ. ಹನೀಫ್ ಮುಹಮ್ಮದ್ 55 ಟೆಸ್ಟ್ ಗಳಲ್ಲಿ ಅವರು 12 ಶತಕ ಮತ್ತು 15 ಅರ್ಧಶತಕಗಳನ್ನು ಒಳಗೊಂಡ 3915 ರನ್ ದಾಖಲಿಸಿ 1 ವಿಕೆಟ್ ಪಡೆದಿದ್ದರು. 238 ಪ್ರಥಮ ದರ್ಜೆ ಕ್ರಿಕೆಟ್ ಪಂದ್ಯಗಳಲ್ಲಿ 55 ಶತಕ ಮತ್ತು 66 ಅರ್ಧಶತಕಗಳನ್ನು ಒಳಗೊಂಡ 17,059 ರನ್ ಮತ್ತು 53 ವಿಕೆಟ್ ಸಂಪಾದಿಸಿದ್ದರು.

108. ಕೇಂದ್ರ ಪ್ರವಾಸೋದ್ಯಮ ಸಚಿವಾಲಯ ಸ್ವಾತಂತ್ರ್ಯೋತ್ಸವದ ಭಾಗವಾಗಿ ಆಚರಿಸುತ್ತಿರುವ “ಭಾರತ ಪರ್ವ”ದಲ್ಲಿ ಯಾವ ರಾಜ್ಯ ಹಬ್ಬದ ಮುಖ್ಯ ವಿಷಯವಾಗಿದೆ?

ಅ) ಕೇರಳ

ಆ) ಕರ್ನಾಟಕ

ಇ) ಹಿಮಾಚಲ ಪ್ರದೇಶ

ಈ) ಮಣಿಪುರ

ಕರ್ನಾಟಕಕೇಂದ್ರ ಪ್ರವಾಸೋದ್ಯಮ ಇಲಾಖೆಯು ಸ್ವಾತಂತ್ರ್ಯೋತ್ಸವದ ಭಾಗವಾಗಿ ಭಾರತ ಪರ್ವ ಹಬ್ಬವನ್ನು ಆಗಸ್ಟ್ 8 ರಿಂದ ಆಗಸ್ಟ್ 18 ವರೆಗೆ ಆಯೋಜಿಸಿದೆ. ಇದೇ ಮೊದಲ ಬಾರಿ ಇಂತಹ ಹಬ್ಬವನ್ನು ಆಯೋಜಿಸಲಾಗಿದ್ದು, ಕರ್ನಾಟಕ ಈ ಬಾರಿಯ ಹಬ್ಬದ ಮುಖ್ಯ ವಿಷಯವಾಗಿದೆ. ಏಳು ದಿನಗಳ ಈ ಹಬ್ಬದ ಸಂದರ್ಭದಲ್ಲಿ ಕರ್ನಾಟಕದ ವಿವಿಧ ಕಲೆ, ಸಂಸ್ಕೃತಿ, ಪರಂಪರೆ, ಕರಕೌಶಲ ಮತ್ತು ಕೈಮಗ್ಗದ ಪ್ರದರ್ಶನ ನಡೆಯಲಿದೆ. ಬಿದರಿ ಮತ್ತು ಚನ್ನಪಟ್ಟಣ ಬೊಂಬೆಗಳ ಪ್ರದರ್ಶನ, ತಯಾರಿಸುವ ಪ್ರಾತ್ಯಕ್ಷಿಕೆಯನ್ನೂ ನೀಡಲಾಗುವುದು. ಮೈಸೂರು ರೇಷ್ಮೆ ಸೀರೆ ಪ್ರದರ್ಶನ ಮತ್ತು ಮಾರಾಟ



www.karunaduexams.com

ಹಬ್ಬದ ಮತ್ತೊಂದು ಆಕರ್ಷಣೆಯಾಗಿದೆ. ವೀರಗಾಸೆ, ಜೋಗತಿ ಕುಣಿತ, ಹಗಲು ವೇಷ, ಪೂಜಾ ಕುಣಿತವನ್ನು ಹಮ್ಮಿಕೊಳ್ಳಲಾಗಿದೆ.

109. ವಿಶ್ವ ಆನೆ ದಿನ (World Elephant Day)_______?

ಅ) ಆಗಸ್ಟ್ 12

ಆ) ಜೂನ್ 10

ಇ) ಸೆಪ್ಟೆಂಬರ್ 11

ಈ) ಅಕ್ಟೋಬರ್ 15

ಆಗಸ್ಟ್ 12

ಪ್ರತಿ ವರ್ಷ ಆಗಸ್ಟ್ 12 ರಂದು ವಿಶ್ವ ಆನೆ ದಿನವನ್ನು ಆಚರಿಸಲಾಗುತ್ತದೆ. ಆನೆಗಳ ಸಂರಕ್ಷಣೆ ಮತ್ತು ಅವುಗಳ ಸಂತತಿಯನ್ನು ಹೆಚ್ಚಿಸುವ ಸಲುವಾಗಿ ಈ ದಿನವನ್ನು ಆಚರಿಸಲಾಗುತ್ತದೆ. ಭಾರತದಲ್ಲಿ ಆನೆಗಳ ಸಂರಕ್ಷಣೆಗಾಗಿ ಪ್ರಾಜೆಕ್ಟ್ ಎಲಿಪಾಂಟ್ ಅನ್ನು 1992 ರಂದು ಜಾರಿಗೆ ತರಲಾಗಿದೆ. ಅತಿ ಹೆಚ್ಚು ಆನೆಗಳನ್ನು ಹೊಂದಿರುವ ರಾಜ್ಯಗಳಲ್ಲಿ ಕರ್ನಾಟಕ ಎರಡನೇ ಸ್ಥಾನದಲ್ಲಿದೆ.

110. ಇತ್ತೀಚೆಗೆ ಸುದ್ದಿಯಲ್ಲಿದ್ದ "ಮಿಹಿರ್ ಷಾ (Mihir Shah) ಸಮಿತಿ" ಈ ಕೆಳಗಿನ ಯಾವುದಕ್ಕೆ ಸಂಬಂಧಿಸಿದೆ?

ಅ) ಕೇಂದ್ರ ಜಲ ಆಯೋಗ ಮತ್ತು ಕೇಂದ್ರ ಜಲ ಮಂಡಳಿ ಪುನರ್ರಚನೆ

ಆ) ಕೃಷಿ ಉತ್ಪನ್ನಗಳಿಗೆ ಕನಿಷ್ಠ ಬೆಂಬಲ ಬೆಲೆ ನಿಗಧಿ

ಇ) ಹಿಂದುಳಿದ ವರ್ಗಗಳಿಗೆ ಮೀಸಲಾತಿ ಕಲ್ಪಿಸುವುದು

ಈ) ಈಶಾನ್ಯ ರಾಜ್ಯಗಳ ಸರ್ವಾಂಗೀಣ ಅಭಿವೃದ್ದಿ

ಕೇಂದ್ರ ಜಲ ಆಯೋಗ ಮತ್ತು ಕೇಂದ್ರ ಜಲ ಮಂಡಳಿ ಪುನರ್ರಚನೆ

ಕೇಂದ್ರ ಜಲ ಸಂಪನ್ಮೂಲ, ನದಿ ಅಭಿವೃದ್ದಿ ಮತ್ತು ಗಂಗಾ ಪುನಶ್ಚೇತನ ಸಚಿವಾಲಯವೂ ಮಿಹಿರ್ ಷಾ ಸಮಿತಿಯನ್ನು ಕೇಂದ್ರ ಜಲ ಆಯೋಗ ಮತ್ತು ಕೇಂದ್ರ ಜಲ ಮಂಡಳಿ ಪುನರ್ರಚನೆ ಸಲುವಾಗಿ ಶಿಫಾರಸ್ಸು ಮಾಡಲು ರಚಿಸಿತ್ತು. ಸಮಿತಿಯು ತನ್ನ ವರದಿಯನ್ನು ಇತ್ತೀಚೆಗೆ ಸಲ್ಲಿಸಿದ್ದು, ಈ ಸಂಸ್ಥೆಗಳನ್ನು ಪುನರ್ರಚಿಸುವುದು ಅಗತ್ಯವಿಲ್ಲವೆಂದು ಹೇಳಿದೆ. ಅಲ್ಲದೇ, ರಾಷ್ಟ್ರೀಯ ಜಲ ಆಯೋಗವನ್ನು ಸ್ಥಾಪಿಸಲು ಸಮಿತಿ ಶಿಫಾರಸ್ಸು ಮಾಡಿದೆ.

www.karunaduexams.com

111. ಗ್ರಾಹಕರಿಗೆ ಉತ್ಕೃಷ್ಟ ಸೇವೆಯನ್ನು ಒದಗಿಸುವ ಸಲುವಾಗಿ ಯಾವ ಬ್ಯಾಂಕ್ ಇತ್ತೀಚೆಗೆ "ಅನನ್ಯ ಯೋಜನೆ (Project Ananya)"ಆರಂಭಿಸಿದೆ?

ಅ) ಕೆನರಾ ಬ್ಯಾಂಕ್

ಆ) ವಿಜಯಾ ಬ್ಯಾಂಕ್

ಇ) ಸಿಂಡಿಕೇಟ್ ಬ್ಯಾಂಕ್

ಈ) ಸ್ಟೇಟ್ ಬ್ಯಾಂಕ್ ಆಫ್ ಮೈಸೂರು

ಸಿಂಡಿಕೇಟ್ ಬ್ಯಾಂಕ್

ಗ್ರಾಹಕರಿಗೆ ಉತ್ಕೃಷ್ಟ ಸೇವೆಯನ್ನು ಒದಗಿಸುವ ಸಲುವಾಗಿ ಮತ್ತು ಡಿಜಿಟಲ್ ಬ್ಯಾಂಕಿಂಗ್ ಸೇವೆಯನ್ನು ಉತ್ತಮಪಡಿಸುವ ಸಲುವಾಗಿ ಸಿಂಡಿಕೇಟ್ ಬ್ಯಾಂಕ್ ಅನನ್ಯ ಯೋಜನೆಯನ್ನು ಜಾರಿಗೊಳಿಸಿದೆ. ಬೆಂಗಳೂರಿನ ಇಂದಿರನಗರ ಶಾಖೆಯಲ್ಲಿ ಈ ಯೋಜನೆಗೆ ಚಾಲನೆ ನೀಡಲಾಯಿತು. ಮುಂದಿನ ಆರು ತಿಂಗಳಲ್ಲಿ ಶೇ 10 ರಷ್ಟು ಶಾಖೆಗಳನ್ನು ಈ ಯೋಜನೆಯಡಿ ತರಲು ಬ್ಯಾಂಕ್ ನಿರ್ಧರಿಸಿದೆ. ಇದೇ ವೇಳೆ ಇಂಟರ್ನೆಟ್ ಸಂಪರ್ಕವಿಲ್ಲದ ಮೊಬೈಲ್ನಿಂದ NUUP ಸಹಾಯದ ಮೂಲಕ ಹಣ ವರ್ಗಾವಣೆ ಪದ್ಧತಿಯನ್ನು ಪರಿಚಯಿಸಿದೆ. ಈ ಸೇವೆಯನ್ನು ಪರಿಚಯಿಸಿದ ಸಾರ್ವಜನಿಕ ವಲಯದ ಪ್ರಥಮ ಬ್ಯಾಂಕ್ ಸಿಂಡಿಕೇಟ್ ಬ್ಯಾಂಕ್ ಆಗಿದೆ.

112. ಕನ್ನಡತಿ ಮಂಜುಳಾ ಚೆಲ್ಲೂರು ರವರು ಯಾವ ಹೈಕೋರ್ಟನ ಮುಖ್ಯನ್ಯಾಯಾಧೀಶೆ ಆಗಿ ನೇಮಕಗೊಂಡಿದ್ದಾರೆ?

ಅ) ಮುಂಬೈ ಹೈಕೋರ್ಟ್

ಆ) ದೆಹಲಿ ಹೈಕೋರ್ಟ್

ಇ) ಮದ್ರಾಸ್ ಹೈಕೋರ್ಟ್

ಈ) ಮಧ್ಯಪ್ರದೇಶ ಹೈಕೋರ್ಟ್

ಮುಂಬೈ ಹೈಕೋರ್ಟ್

ಕನ್ನಡತಿ ನ್ಯಾಯಮೂರ್ತಿ ಮಂಜುಳಾ ಚೆಲ್ಲೂರು ಅವರನ್ನು ಮುಂಬೈ ಹೈಕೋರ್ಟ್ನ ಮುಖ್ಯ ನ್ಯಾಯಾಧೀಶೆಯಾಗಿ ನೇಮಕ ಮಾಡಲಾಗಿದ್ದು, ಮಂಜುಳಾ ಅವರು ಆಗಸ್ಟ್ 24ರಂದು ಅಧಿಕಾರ ಸ್ವೀಕರಿಸಲ್ಲಿದ್ದಾರೆ. ಸದ್ಯ ಮಂಜುಳಾ ಕೊಲ್ಕತ್ತಾ ಹೈಕೋರ್ಟ್ ಮುಖ್ಯ ನ್ಯಾಯಾಧೀಶೆಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಹಾಲಿ ಮುಂಬೈ ಹೈಕೋರ್ಟ್ ಸಿಜೆ ಆಗಿದ್ದ ಹಿರಾಲಾಲ್ ವಘೇಲಾ ಅವರು ಆ.10ರಂದು ನಿವೃತ್ತರಾಗಿರುವ ಹಿನ್ನೆಲೆಯಲ್ಲಿ ಚೆಲ್ಲೂರು ಅವರನ್ನು ಈ ಹುದ್ದೆಗೆ ನೇಮಕ ಮಾಡಲಾಗಿದೆ. ಮುಂಬೈ ಹೈಕೋರ್ಟ್ ಇತಿಹಾಸದಲ್ಲೇ ಎರಡನೇ ಮಹಿಳಾ ಮುಖ್ಯ ನ್ಯಾಯಮೂರ್ತಿ ಎಂಬ ಕೀರ್ತಿಗೆ ಮಂಜುಳಾ ಪಾತ್ರರಾಗಲಿದ್ದಾರೆ.

www.karunaduexams.com

113. ಅಂತರಾಷ್ಟ್ರೀಯ ಯುವ ದಿನ (International Youth Day)ವನ್ನು ಯಾವ ದಿನದಂದು ಆಚರಿಸಲಾಗುತ್ತದೆ?

ಅ) ಆಗಸ್ಟ್ 10

ಆ) ಆಗಸ್ಟ್ 12

ಇ) ಆಗಸ್ಟ್ 13

ಈ) ಆಗಸ್ಟ್ 14

ಆಗಸ್ಟ್ 12

ಅಂತರಾಷ್ಟ್ರೀಯ ಯುವ ದಿನ (International Youth Day)ವನ್ನು ಪ್ರತಿ ವರ್ಷ ಆಗಸ್ಟ್ 12 ರಂದು ಆಚರಿಸಲಾಗುತ್ತದೆ. The Road to 2030: Eradicating Poverty and Achieving Sustainable Consumption and Production ಇದು ಈ ವರ್ಷದ ಅಂತಾರಾಷ್ಟ್ರೀಯ ಯುವ ದಿನದ ಧ್ಯೇಯವಾಕ್ಯ.

114. ಅಂತಾರಾಷ್ಟ್ರೀಯ ಒಲಂಪಿಕ್ ಸಮಿತಿಯ ಈಗಿನ ಅಧ್ಯಕ್ಷರು ಯಾರು?

ಅ) ಥಾಮಸ್ ಬಾಚ್

ಆ) ಡೇವಿಡ್ ಮಿಲ್ಲರ್

ಇ) ಜೆಸ್ಸಿ ಥಾಮ್ಸನ್

ಈ) ಸಿಸೊಡಿಯಾ ಸಿಂಗ್

ಥಾಮಸ್ ಬಾಚ್

ಥಾಮಸ್ ಬಾಷ್ ಅವರು ಒಲಂಪಿಕ್ ಸಮಿತಿಯ ಈಗಿನ ಅಧ್ಯಕ್ಷರಾಗಿದ್ದಾರೆ. ಅಂತಾರಾಷ್ಟ್ರೀಯ ಒಲಂಪಿಕ್ ಸಮಿತಿಯ ಕೇಂದ್ರ ಕಚೇರಿಯು ಲುಸನ್ನೆ, ಸ್ವಿಟ್ಜರ್ಲ್ಯಾಂಡ್ ನಲ್ಲಿದೆ.

115. UNESCO ಪ್ರಾಯೋಜಿತ 'ಕಳಿಂಗಾ' ಪ್ರಶಸ್ತಿಯನ್ನು ಯಾವ ಕ್ಷೇತ್ರದಲ್ಲಿ ಸಾಧನೆ ಮಾಡಿದವರಿಗೆ ನೀಡಲಾಗುತ್ತದೆ?

ಅ) ಕ್ರೀಡೆ

ಆ) ಶಿಕ್ಷಣ

ಇ) ವಿಜ್ಞಾನ ಮತ್ತು ತಂತ್ರಜ್ಞಾನ

ಈ) ಪತ್ರಿಕೋದ್ಯಮ

ವಿಜ್ಞಾನ ಮತ್ತು ತಂತ್ರಜ್ಞಾನ

ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ಅಭೂತಪೂರ್ವ ಸಾಧನೆ ಮಾಡುವ ವ್ಯಕ್ತಿಗಳಿಗೆ ಕಳಿಂಗಾ ಪ್ರಶಸ್ತಿಯನ್ನು ನೀಡಲಾಗುತ್ತದೆ. ಈ ಪ್ರಶಸ್ತಿಯನ್ನು ಭಾರತ ಸರ್ಕಾರದ ವಿಜ್ಞಾನ-ತಂತ್ರಜ್ಞಾನ ಸಚಿವಾಲಯ, ಒಡಿಸ್ಸಾ ರಾಜ್ಯ ಸರ್ಕಾರ

www.karunaduexams.com

ಮತ್ತು ಕಳಿಂಗಾ ಫೌಂಡೇಷನ್ ಜಂಟಿಯಾಗಿ ಆರ್ಥಿಕ ಸಹಾಯ ನೀಡುತ್ತಿವೆ, ಇತ್ತೀಚೆಗೆ ಪ್ರಶಸ್ತಿ ಮೊತ್ತವನ್ನು 20000 ಅಮೆರಿಕನ್ ಡಾಲರ್ ಗಳಿಂದ 40000 ಅಮೆರಿಕನ್ ಡಾಲರ್ ಗಳಿಗೆ ಹೆಚ್ಚಿಸಲಾಯಿತು.

116. ರಾಷ್ಟ್ರೀಯ ಈ-ವಿಧಾನ ಅಕಾಡಮಿ ಎಂಬ ಸಂಸ್ಥೆಯನ್ನು ಭಾರತದ ಯಾವ ರಾಜ್ಯದಲ್ಲಿ ಸ್ಥಾಪಿಸಲಾಗಿದೆ?

ಅ) ದೆಹಲಿ

ಆ) ಸಿಕ್ಕಿಂ

ಇ) ಕೇರಳ

ಈ) ಹಿಮಾಚಲ ಪ್ರದೇಶ

ರಾಷ್ಟ್ರೀಯ ಈ-ವಿಧಾನ ಅಕಾಡಮಿ ಎಂಬ ಸಂಸ್ಥೆಯನ್ನು ಹಿಮಾಚಲ ಪ್ರದೇಶದ ತಪೋವನ ಎಂಬಲ್ಲಿ ಸ್ಥಾಪಿಸಲಾಗಿದೆ. ಹಿಮಾಚಲ ಪ್ರದೇಶದ ವಿಧಾನಸಭೆ ಕೂಡ ಇದೇ ಧರ್ಮಶಾಲಾದಲ್ಲಿ ಸ್ಥಾಪಿತಗೊಂಡಿದೆ. ಈ ಅಕಾಡಮಿಯಲ್ಲಿ ಭಾರತದ ವಿವಿಧ ರಾಜ್ಯಗಳ ವಿಧಾನಸಭಾ ಸದಸ್ಯರಿಗೆ ಮತ್ತು ಲೋಕಸಭಾ ಸದಸ್ಯರಿಗೆ ತರಬೇತಿಯನ್ನು ನೀಡಲಾಗುತ್ತದೆ.

117. ವಿದ್ಯಾರ್ಥಿಗಳು ಸ್ಟಾರ್ಟಪ್ ಪ್ರಾರಂಭಿಸಲು ಅನುಕೂಲ ಮಾಡಿಕೊಡಲು ಜಗತ್ತಿನ ಪ್ರಥಮ ಡಿಜಿಟಲ್ ಇನ್ಕ್ಯೂಬೇಟರ್ (Digital Incubator) "SV.CO" ನ್ನು ಯಾವ ರಾಜ್ಯದಲ್ಲಿ ಪ್ರಾರಂಭಿಸಲಾಯಿತು?

ಅ) ಕರ್ನಾಟಕ

ಆ) ಕೇರಳ

ಇ) ಮಹಾರಾಷ್ಟ್ರ

ಈ) ಹರಿಯಾಣ

ಕೇರಳ

ವಿಶ್ವದ ಪ್ರಥಮ ಡಿಜಿಟಲ್ ಇನ್ಕ್ಯೂಬೇಟರ್ (Digital Incubator) "SV.CO" ನ್ನು ಕೇರಳ ರಾಜ್ಯದ ತಿರುವನಾಂತಪುರದಲ್ಲಿ ಉದ್ಘಾಟಿಸಲಾಯಿತು. ವಿದ್ಯಾರ್ಥಿಗಳು ತಂಡಗಳನ್ನು ಮಾಡಿಕೊಂಡು ಇನ್ಕ್ಯೂಬೇಟರ್ ನಲ್ಲಿ ಪ್ರವೇಶಾವಕಾಶವನ್ನು ಪಡೆಯಬಹುದಾಗಿದೆ. ಆಯ್ಕೆಯಾದ ವಿದ್ಯಾರ್ಥಿಗಳಿಗೆ ಸ್ಟಾರ್ಟಪ್ ಪ್ರಾರಂಭಿಸಲು ಮಾರ್ಗದರ್ಶನದೊಂದಿಗೆ ನಂತರದ 6 ತಿಂಗಳು ಎಲ್ಲಾ ರೀತಿಯ ಸಲಹೆಗಳನ್ನು ನೀಡಲಿದೆ.

118. ಇತ್ತೀಚಿನ ಸಂಶೋಧನೆಯೊಂದರ ಪ್ರಕಾರ ಭೂಮಿ ಮೇಲೆ ಅತಿ ಹೆಚ್ಚು ವರ್ಷಗಳ ಕಾಲ ಬದುಕುವ ಕಶೇರುಕ (Vertebrate) ಯಾವುದು?

ಅ) ನೀಲಿ ತಿಮಿಂಗಲ



www.karunaduexams.com

ಆ) ಗ್ರೀನ್ ಲ್ಯಾಂಡ್ ಶಾರ್ಕ್

ಇ) ಹಿಮ ನರಿ

ಈ) ಆಫ್ರಿಕನ್ ಆನೆ

ಗ್ರೀನ್ ಲ್ಯಾಂಡ್ ಶಾರ್ಕ್

ಗ್ರೀನ್‌ಲ್ಯಾಂಡ್‌ನ ಶಾರ್ಕ್‌ಗಳು ಸರಾಸರಿ 400 ವರ್ಷ ಆಯುಷ್ಯ ಹೊಂದಿರುತ್ತವೆ ಎಂದು ವಿಜ್ಞಾನಿಗಳ ತಂಡವೊಂದು ಪತ್ತೆಹಚ್ಚಿದೆ. ಉತ್ತರ ಅಂಟ್ಲಾಟಿಕ್‌ನಲ್ಲಿ ಸಂಶೋಧಕರಿಗೆ ಸಿಕ್ಕಿರುವ ಮೇ ಫ್ಲವರ್ ಹೆಸರಿನ ಶಾರ್ಕ್ ಮೀನು 1624ರಲ್ಲಿ ಜನ್ಮತಾಳಿದೆ ಎನ್ನಲಾಗಿದೆ. ಉತ್ತರ ಅಮೆರಿಕದಿಂದ ತಂದೆ ಜತೆಗೆ ಇಲ್ಲಿಗೆ ವಲಸೆ ಬಂದಿದೆ ಎಂಬುದು ವಿಜ್ಞಾನಿಗಳ ಅಭಿಪ್ರಾಯ. ನೀರಿನಲ್ಲಿದ್ದುಕೊಂಡೇ ಎರಡು ಜಾಗತಿಕ ಯುದ್ಧಗಳಿಗೂ ಇದು ಸಾಕ್ಷಿಯಾಗಿದೆ. 21 ಅಡಿ ಉದ್ದವಿರುವ ಇದು ಭೂಮಿಯಲ್ಲಿ ಬದುಕಿರುವ ಕಶೇರುಕಗಳಲ್ಲಿಯೇ ಅತೀ ಹಿರಿಯ ಜೀವಿ ಎಂದು ಪರಿಗಣಿಸಲಾಗಿದೆ. ನೀರಿನಲ್ಲಿ ನಿಧಾನವಾಗಿ ಈಜಾಡುವ ಈ ಶಾರ್ಕ್‌ಗಳು ಸಣ್ಣ ಮೀನು ಹಾಗೂ ಚಿಕ್ಕದಾದ ಶಾರ್ಕ್‌ಗಳನ್ನು ತಿಂದು ಜೀವಿಸುತ್ತವೆ.

119. ಏಸ್ ಎಗನೆಸ್ಟ್ ಆಡ್ಸ್" (Ace against Odds) ಎಂಬ ಪುಸ್ತಕ ಯಾವ ಭಾರತೀಯ ಕ್ರೀಡಾಪಟುವಿನ ಆತ್ಮ ಚರಿತ್ರೆಯಾಗಿದೆ?

ಅ) ಲಿಯಾಂಡರ್ ಪೇಸ್

ಆ) ಸೈನಾ ನೆಹ್ವಾಲ್

ಇ) ಸಾನಿಯಾ ಮಿರ್ಜಾ

ಈ) ಜ್ವಾಲಾ ಗುಟ್ಟಾ

ಸಾನಿಯಾ ಮಿರ್ಜಾ

ಏಸ್ ಎಗನೆಸ್ಟ್ ಆಡ್ಸ್" ಇದು ಟೆನ್ನಿಸ್ ತಾರೆ ಸಾನಿಯಾ ಮಿರ್ಜಾ ಅವರು ಆತ್ಮ ಚರಿತ್ರೆ.

120. ಈ ಕೆಳಗಿನ ಯಾವ ಸಮಿತಿಯ ಶಿಫಾರಸ್ಸಿನ ಮೇರೆಗೆ ಭಾರತದಲ್ಲಿ ರೈಲ್ವೆ ಬಜೆಟ್ ಅನ್ನು ಕೇಂದ್ರ ಬಜೆಟ್ ನಿಂದ ಬೇರ್ಪಡಸಿ ಪ್ರತ್ಯೇಕವಾಗಿ ಮಂಡಿಸಲಾಗುತ್ತಿದೆ?

ಅ) ಅಕ್-ವರ್ಥ್ ಸಮಿತಿ

ಆ) ಥಾಮಸ್ ರೋ ಸಮಿತಿ

ಇ) ದಾದಬಾಯಿ ನರೋಜಿ ಸಮಿತಿ

ಈ) ಸರ್ ಹೆನ್ರಿ ಸಮಿತಿ

ಅಕ್-ವರ್ಥ್ ಸಮಿತಿ

ಭಾರತದಲ್ಲಿ ರೈಲ್ವೆ ಬಜೆಟ್ ಅನ್ನು 1924 ರಿಂದ ಕೇಂದ್ರ ಬಜೆಟ್ ನಿಂದ ಬೇರ್ಪಡಿಸಿ ಪ್ರತ್ಯೇಕವಾಗಿ ಮಂಡಿಸಲಾಗುತ್ತಿದೆ. ಬ್ರಿಟಿಷ್ ರೈಲ್ವೆ ಎಕನಾಮಿಷ್ಟ್ ಅಕ್-ವರ್ಥ್ ನೇತೃತ್ವದ 10 ಜನ ಸದಸ್ಯರನ್ನೊಳಗೊಂಡ ಸಮಿತಿ ರೈಲ್ವೆ ಬಜೆಟ್ ಅನ್ನು

www.karunaduexams.com

ಪ್ರತ್ಯೇಕ ಮಂಡಿಸುವಂತೆ ಬ್ರಿಟಿಷ್ ಸರ್ಕಾರಕ್ಕೆ ಶಿಫಾರಸ್ಸು ಮಾಡಿತ್ತು. ಅಂದಿನಿಂದ ಇಲ್ಲಿವರೆಗೂ ರೈಲ್ವೆ ಬಜೆಟ್ ಅನ್ನು ಪ್ರತ್ಯೇಕವಾಗಿ ಮಂಡಿಸಲಾಗುತ್ತಿದೆ. ಆದರೆ 92 ವರ್ಷಗಳ ಇತಿಹಾಸವಿರುವ ಭಾರತದ ರೈಲ್ವೇ ಬಜೆಟ್‌ಗೆ 2017ರಿಂದ ತೆರೆಬೀಳಲಿದೆ. ಹೌದು,ಮುಂದಿನ ಆರ್ಥಿಕ ವರ್ಷದಿಂದ ರೈಲ್ವೆ ಮುಂಗಡಪತ್ರವನ್ನು ಪ್ರತ್ಯೇಕವಾಗಿ ಮಂಡಿಸದೆ ಕೇಂದ್ರ ಬಜೆಟ್‌ನೊಂದಿಗೆ ಮಂಡನೆ ಮಾಡಲು ಆರ್ಥಿಕ ಸಚಿವಾಲಯ ಈಗಾಗಲೇ ಒಪ್ಪಿಗೆ ಸೂಚಿಸಿದೆ. ಇದಕ್ಕಾಗಿ ಸಚಿವಾಲಯ ಐದು ಸದಸ್ಯರನ್ನೊಳಗೊಂಡ ಸಮಿತಿಯನ್ನೂ ರಚಿಸಿದೆ. ರೈಲ್ವೆಮುಂಗಡಪತ್ರವನ್ನು ಸಾಮಾನ್ಯ ಮುಂಗಡಪತ್ರದೊಂದಿಗೆ ಸೇರಿಸುವಂತೆ ಕೇಂದ್ರ ರೈಲ್ವೆ ಸಚಿವ ಸುರೇಶ್ ಪ್ರಭು ಕಳೆದ ಜುಲೈ ತಿಂಗಳಲ್ಲೇ ವಿತ್ತ ಸಚಿವ ಅರುಣ್ ಜೇಟ್ಲಿ ಅವರಿಗೆ ಪತ್ರ ಬರೆದಿದ್ದರು.

121. ದೇಶದ ಮೊದಲ ನಿಕ್ಕಲ್ (Nickel) ಉತ್ಪಾದನ ಸೌಲಭ್ಯವನ್ನು ಯಾವ ರಾಜ್ಯದಲ್ಲಿ ಇತ್ತೀಚೆಗೆ ಸ್ಥಾಪಿಸಲಾಗಿದೆ?

ಅ) ಚತ್ತೀಸ್ ಘರ್

ಆ) ಜಾರ್ಖಂಡ್

ಇ) ಓಡಿಶಾ

ಈ) ಪಶ್ಚಿಮ ಬಂಗಾಳ

ಜಾರ್ಖಂಡ್

ದೇಶದ ಮೊದಲ ನಿಕ್ಕಲ್ ಉತ್ಪಾದನ ಸೌಲಭ್ಯವನ್ನು ಚತ್ತೀಸ್ ಘರ್ ನಲ್ಲಿ ಆರಂಭಿಸಲಾಯಿತು. ಹಿಂದೂಸ್ತಾನ್ ಕಾಪರ್ ಲಿಮಿಟೆಡ್ ಈ ಸೌಲಭ್ಯವನ್ನು ಚತ್ತೀಸ್ ಘರ್ದ ಘಾಟ್ ಶಿಲ ಬಳಿ ಇರುವ ತನ್ನ ಇಂಡಿಯನ್ ಕಾಪರ್ ಕಾಂಪ್ಲೆಕ್ಸ್‌ನಲ್ಲಿ ಆರಂಭಿಸಿದೆ. ಭಾರತದ ಪ್ರಥಮ "ನಿಕ್ಕಲ್, ಕಾಪರ್ ಮತ್ತು ಆಸಿಡ್" ಉತ್ಪಾದನ ಘಟಕ ಇದಾಗಿದ್ದು ಲಂಡನ್ ಮೆಟಲ್ ಎಕ್ಸಚೆಂಜ್ ಗುಣಮಟ್ಟದ ನಿಕ್ಕಲ್ ಅನ್ನು ತಯಾರಿಸಲಾಗುವುದು. ಪ್ರಥಮ ಹಂತದಲ್ಲಿ ಈ ಘಟಕವು ವಾರ್ಷಿಕ 50 ಟನ್ ನಿಕ್ಕಲ್ ಉತ್ಪಾದಿಸುವ ಸಾಮರ್ಥ ಹೊಂದಿದ್ದು, ಮುಂದಿನ ದಿನಗಳಲ್ಲಿ ಎಂಟು ಪಟ್ಟು ಹೆಚ್ಚು ಉತ್ಪಾದಿಸಲಿದೆ.

122. ಈ ಕೆಳಗಿನ ಯಾವ ರಾಜ್ಯ "ಸ್ಟೂಡೆಂಟ್ ಕ್ರೆಡಿಟ್ ಕಾರ್ಡ್" ಯೋಜನೆ ಜಾರಿಗೆ ತರಲು ನಿರ್ಧರಿಸಿದೆ?

ಅ) ಮಣಿಪುರ

ಆ) ಓಡಿಶಾ

ಇ) ಬಿಹಾರ

ಈ) ಪಶ್ಚಿಮ ಬಂಗಾಳ

ಬಿಹಾರ್

ಉನ್ನತ ಶಿಕ್ಷಣಕ್ಕಾಗಿ ವಿದ್ಯಾರ್ಥಿಗಳಿಗೆ ಆರ್ಥಿಕ ಸಹಾಯ ನೀಡಲು ಬಿಹಾರ ಸರ್ಕಾರ "ಸ್ಟೂಡೆಂಟ್ ಕ್ರೆಡಿಟ್ ಕಾರ್ಡ್" ಯೋಜನೆಯನ್ನು ಜಾರಿಗೆ ತರಲಿದೆ. ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ 70ನೇ ಸ್ವಾತಂತ್ರ ದಿನಾಚರಣೆ ದಿನ ಈ

www.karunaduexams.com

ಯೋಜನೆಯನ್ನು ಘೋಷಸಿದ್ದಾರೆ. ಯೋಜನೆಯು ಅಕ್ಟೋಬರ್ 2 ರಿಂದ ಜಾರಿಗೆ ಬರಲಿದೆ. ಯೋಜನೆಯಡಿ ಉನ್ನತ ವಿದ್ಯಾಭ್ಯಾಸಕ್ಕಾಗಿ ವಿದ್ಯಾರ್ಥಿಗಳಿಗೆ ರೂ ನಾಲ್ಕು ಲಕ್ಷಗಳ ವರೆಗೆ ಬಡ್ಡಿ ರಹಿತ ಆರ್ಥಿಕ ಸಹಾಯ ನೀಡಲಾಗುವುದು.

123. ಒಲಂಪಿಕ್ಸ್ ಗೆ ವಿದಾಯ ಹೇಳಿದ ಮೈಕಲ್ ಪೆಲ್ಪ್ಸ್ ಒಲಂಪಿಕ್ಸ್ ಕ್ರೀಡಾಕೂಟದಲ್ಲಿ ಒಟ್ಟು ಎಷ್ಟು ಪದಕಗಳನ್ನು ಗೆದ್ದಿದ್ದಾರೆ?

ಅ) 24

ಆ) 26

ಇ) 28

ಈ) 29

28

ವಿಶ್ವವಿಖ್ಯಾತ ಈಜುಗಾರ ಅಮೆರಿಕದ ಮೈಕೆಲ್ ಫೆಲ್ಪ್ಸ್ ಒಲಿಂಪಿಕ್ಸ್ ಗೆ ವಿದಾಯ ಹೇಳಿದರು. ಒಲಂಪಿಕ್ಸ್ ನಲ್ಲಿ ಅತಿ ಹೆಚ್ಚು ಅಂದರೆ 23ನೇ ಚಿನ್ನದ ಪದಕ ಗೆಲ್ಲುವ ಮೂಲಕ ಒಲಿಂಪಿಕ್ಸ್ ಗೆ ವಿದ್ಯುಕ್ತ ವಿದಾಯ ಹೇಳಿದ್ದಾರೆ. ಪೆಲ್ಪ್ಸ್ ತಮ್ಮ ಯಶಸ್ವಿ ಒಲಂಪಿಕ್ಸ್ನಲ್ಲಿ 23 ಚಿನ್ನದ ಪದಕ, 3 ಬೆಳ್ಳಿ ಮತ್ತು ಎರಡು ಕಂಚಿನ ಪದಕ ಸಹಿತ ಒಟ್ಟು 28 ಪದಕಗಳನ್ನು ಗೆದ್ದಿದ್ದಾರೆ. ಒಲಂಪಿಕ್ಸ್ ಕ್ರೀಡಾಕೂಟದಲ್ಲಿ ಅತಿ ಹೆಚ್ಚು ಚಿನ್ನದ ಪದಕಗಳನ್ನು ಪಡೆದ ದಾಖಲೆ ಇವರದು. ರಿಯೋ ಒಲಂಪಿಕ್ಸ್ ಪೆಲ್ಪ್ಸ್ ಗೆ ಐದನೇ ಒಲಂಪಿಕ್ಸ್.

124. ಉದ್ದೇಶಿತ “ಕಾಳೇಶ್ವರಂ ನೀರಾವರಿ” ಯೋಜನೆಯು ಯಾವ ರಾಜ್ಯಕ್ಕೆ ಸಂಬಂಧಿಸಿದೆ?

ಅ) ಆಂಧ್ರ ಪ್ರದೇಶ

ಆ) ಮಹಾರಾಷ್ಟ್ರ

ಇ) ತೆಲಂಗಣ

ಈ) ತಮಿಳು ನಾಡು

ಕಾಳೇಶ್ವರಂ ನೀರಾವರಿ ಯೋಜನೆಯು ತೆಲಂಗಣ ರಾಜ್ಯದ ಉದ್ದೇಶಿತ ನೀರಾವರಿ ಯೋಜನೆಯಾಗಿದೆ. ಈ ಯೋಜನೆಯನ್ನು ಗೋದಾವರಿ ನದಿಯ ಮೇಲೆ ನಿರ್ಮಿಸಲಾಗುತ್ತಿದೆ. ಯೋಜನೆಯು ತೆಲಂಗಣದ ಜನರಿಗೆ ವರದಾನವಾಗಲಿದೆ ಎಂದು ಹೇಳಲಾಗಿದೆ. ಸುಮಾರು 11.2 ಲಕ್ಷ ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೇರಿದಂತೆ ಹೈದ್ರಾಬಾದ್ ಗೆ 30 ಟಿಎಂಸಿ ನೀರನ್ನು ಕುಡಿಯಲು ಸರಬರಾಜು ಮಾಡಲಾಗುವುದು. ಜೊತೆಗೆ ಈ ಯೋಜನೆಯ ಅಸುಪಾಸಿನ ಹಳ್ಳಿಗಳಿಗೂ 10 ಟಿಎಂಸಿ ನೀರು ಹಾಗೂ ಕೈಗಾರಿಕೆಗೆ 16 ಟಿಎಂಸಿ ನೀರನ್ನು ಸರಬರಾಜು ಮಾಡುವ ಉದ್ದೇಶವನ್ನು ಈ ಯೋಜನೆ ಹೊಂದಿದೆ.

125. ದೇಶದ ಮೊದಲ ಬಯೋ-ಕಂಪ್ರೆಸ್ಡ್ ನ್ಯಾಚುರಲ್ ಗ್ಯಾಸ್ (Bio-CNG) ಉತ್ಪಾದನ ಘಟಕಕ್ಕೆ ಎಲ್ಲಿ ಚಾಲನೆ ನೀಡಲಾಯಿತು?

www.karunaduexams.com

ಅ) ಪುಣೆ

ಆ) ಭೂಪಾಲ್

ಇ) ಚೆನ್ನೈ

ಈ) ಕೊಚ್ಚಿ

ಪುಣೆ

ಕೃಷಿ ತ್ಯಾಜ್ಯ ಬಳಸಿ ಬಯೋ-ಕಂಪ್ರೆಸ್ಡ್ ನ್ಯಾಚುರಲ್ ಗ್ಯಾಸ್ ಉತ್ಪಾದಿಸುವ ಘಟಕವನ್ನು ಪುಣೆಯಲ್ಲಿ ಪ್ರಾರಂಭಿಸಲಾಗಿದೆ. ದೇಶದಲ್ಲೇ ಮೊದಲೆನಿಸಿರುವ ಈ ಘಟಕವನ್ನು ಕೇಂದ್ರ ಸಚಿವ ನಿತಿನ್ ಗಡ್ಕರಿ ಮತ್ತು ಕೇಂದ್ರ ರಕ್ಷಣಾ ಸಚಿವ ಮನೋಹರ್ ಪಣಿಕ್ಕರ್ ರವರು ಜಂಟಿಯಾಗಿ ಲೋಕಾರ್ಪಣೆ ಮಾಡಿದರು. ಪುಣೆ ಮೂಲದ ಪ್ರೈಮೊವ್ ಎಂಜನಿಯರಿಂಗ್ ಪ್ರೈವೆಟ್ ಲಿಮಿಟೆಡ್ ಸಂಸ್ಥೆ ಈ ಘಟಕವನ್ನು ನಿರ್ಮಿಸಿದೆ. ಕೃಷಿ ತ್ಯಾಜ್ಯವನ್ನು ಬ್ಯಾಕ್ಟೀರಿಯಾದಿಂದ ಕೊಳಸುವ ಮೂಲಕ ಅನಿಲವನ್ನು ಉತ್ಪಾದಿಸಿ, ಅನಂತರ ಅನಿಲವನ್ನು ಶುದ್ದೀಕರಿಸಿ, ಕಂಪ್ರೆಸ್ ಮಾಡುವ ಮೂಲಕ ವಾಹನಗಳಲ್ಲಿ ಬಳಸಲಾಗುವುದು.

126. ಇತ್ತೀಚೆಗೆ ನಿಧನರಾದ ನ.ಮುತ್ತುಕುಮಾರ್ ಯಾವ ಸಿನಿಮಾ ಕ್ಷೇತ್ರದಲ್ಲಿ ಪ್ರಸಿದ್ದ ಸಾಹಿತಿಯಾಗಿದ್ದರು?

ಅ) ಮಲಯಾಳಂ

ಆ) ತಮಿಳು

ಇ) ತೆಲುಗು

ಈ) ಮರಾಠಿ

ತಮಿಳು

ತಮಿಳು ಚಿತ್ರರಂಗದ ಖ್ಯಾತ ಸಾಹಿತಿ, ಎರಡು ಬಾರಿ ರಾಷ್ಟ್ರ ಪ್ರಶಸ್ತಿ ಪಡೆದಿದ್ದ ನ. ಮುತ್ತುಕುಮಾರ್ ಅವರು ನಿಧನರಾದರು. ನಿರ್ದೇಶನಾಗುವ ಆಸೆಯೊಂದಿಗೆ ತಮಿಳು ಸಿನಿಮಾರಂಗಕ್ಕೆ ಪಾದಾರ್ಪಣೆ ಮಾಡಿದ್ದ ಮುತ್ತುಕುಮಾರ್ ಅವರು, ಬಾಲು ಮಹೇಂದರ್ ಅವರೊಂದಿಗೆ ನಾಲ್ಕು ವರ್ಷಗಳ ಕಾಲ ಕೆಲಸ ಮಾಡಿದರು. ತದ ನಂತರ ಕೆಲ ಚಿತ್ರಗಳಿಗೆ ಸಂಭಾಷಣೆಕಾರರಾಗಿ ಕೆಲಸ ಮಾಡಿ, ವೀರ ನಡೈ ಚಿತ್ರಕ್ಕೆ ಸಾಹಿತ್ಯ ಬರೆಯುವ ಮೂಲಕ ಸಾಹಿತಿಯಾದರು. ಇವರ ತಂಗ ಮೀಂಗಲ್ ಸಿನಿಮಾದ ಆನಂದ ಯಾಜೈ ಮತ್ತು ಸೈವಂ ಚಿತ್ರದ ಅಜಾಗೆ ಅಜಾಗು ಹಾಡಿನ ಉತ್ತಮ ಸಾಹಿತ್ಯಕ್ಕೆ ರಾಷ್ಟ್ರ ಪ್ರಶಸ್ತಿಯನ್ನು ಪಡೆದಿದ್ದಾರೆ. ಮುತ್ತುಕುಮಾರ್ ಅವರು ಈವರೆಗೂ 1000ಕ್ಕೂ ಹೆಚ್ಚು ಚಿತ್ರಗಳ ಹಾಡಿಗೆ ಸಾಹಿತಿ ಬರೆದಿದ್ದಾರೆ.

127. ಪಿಎಸ್ಎ ಆಸ್ಟ್ರೇಲಿಯಾ ಸ್ಕ್ವಾಷ್ ಓಪನ್-2016 ಪ್ರಶಸ್ತಿ ಗೆದ್ದವರು ಯಾರು?

ಅ) ದೀಪಿಕಾ ಪಳ್ಳಿಕಲ್

ಆ) ಮಯರ್ ಹನಿ

www.karunaduexams.com

ಇ) ಜೋಶ್ನ ಚಿನ್ನಪ್ಪ

ಈ) ಸೌರವ್ ಘೋಷಲ್

ದೀಪಿಕಾ ಪಳ್ಳಿಕಲ್

ಭಾರತದ ಅಗ್ರ ಶೇಯಾಂಕಿತ ಆಟಗಾರ್ತಿ ದೀಪಿಕಾ ಪಳ್ಳಿಕಲ್ ಅವರು ಆಸ್ಟ್ರೇಲಿಯಾದ ಮೆಲ್ಬೋರ್ನ್ ನಲ್ಲಿ ನಡೆದ ಪಿಎಸ್ಎ ಆಸ್ಟ್ರೇಲಿಯಾ ಒಪನ್ ಟೈಟಲ್ ನಲ್ಲಿ ಪ್ರಶಸ್ತಿಯನ್ನು ಗೆದ್ದುಕೊಂಡರು. ಫೈನಲ್ ಪಂದ್ಯದಲ್ಲಿ ದೀಪಿಕಾ ಈಜಿಪ್ಟ್ ನ ಮಯರ್ ಹನಿ ಅವರನ್ನು 10-12, 11-5, 11-6, 11-4 ರಲ್ಲಿ ಸೋಲಿಸಿ ಪ್ರಶಸ್ತಿಯನ್ನು ತಮ್ಮದಾಗಿಸಿಕೊಂಡರು.

128. ಈ ಕೆಳಗಿನ ಯಾವ ನದಿ ಗೋದಾವರಿ ನದಿಯ ಉಪನದಿ ಆಗಿಲ್ಲ?

ಅ) ಪ್ರಣಹಿತ

ಆ) ಇಂದ್ರಾವತಿ

ಇ) ತಪತಿ

ಈ) ಪೆನ್ ಗಂಗಾ

ತಪತಿ

ಗೋದಾವರಿ ನದಿ ಮಹಾರಾಷ್ಟ್ರ ರಾಜ್ಯದ ನಾಸಿಕ್ ಜಿಲ್ಲೆಯ ತ್ರ್ಯಂಬಕೇಶ್ವರ ಬಳಿ ಹುಟ್ಟಿ ಆಂಧ್ರ ಪ್ರದೇಶ ರಾಜ್ಯದ ಮೂಲಕ ಹರಿದು ಬಂಗಾಳ ತಲುಪುತ್ತದೆ. 1465 ಕಿಮೀ ಉದ್ದದ, ಇದು ಗಂಗಾನದಿಯ ನಂತರದ ಅತೀದೊಡ್ಡ ನದಿಯಾಗಿದ್ದು ಭಾರತದ ಎರಡನೇ ದೊಡ್ಡನದಿಯೂ ಮತ್ತು ದಕ್ಷಿಣ ಭಾರತದ ಅತ್ಯಂತ ದೊಡ್ಡ ನದಿಯೂ ಆಗಿದೆ. ಇದನ್ನು ದಕ್ಷಿಣದ ಗಂಗೆ (ದಕ್ಷಿಣಗಂಗಾ) ಎಂದು ಕರೆಯುತ್ತಾರೆ. ಇದು ಆದಿಲಾಬಾದ್ ಜಿಲ್ಲೆಯ ಬಸರಾದಲ್ಲಿ ಆಂಧ್ರ ಪ್ರದೇಶವನ್ನು ಪ್ರವೇಶಿಸುತ್ತದೆ. ಪ್ರಣಹಿತ, ಇಂದ್ರಾವತಿ, ಪೆನ್ ಗಂಗಾ, ವೆನ್ ಗಂಗಾ, ವಾರ್ದ, ಮಂಜಿರಾ, ತಲಿಪೆರು ಈ ನದಿಯ ಪ್ರಮುಖ ಉಪನದಿಗಳು.

129. ರಿಯೋ ಒಲಂಪಿಕ್ಸ್ 3000 ಮೀಟರ್ ಸ್ಟೀಪಲ್ ಚೇಸ್ ನಲ್ಲಿ 32 ವರ್ಷಗಳ ನಂತರ ಫೈನಲ್ ತಲುಪಿದ ಭಾರತದ ಮಹಿಳಾ ಕ್ರೀಡಾಪಟು ಯಾರು?

ಅ) ಅಂಕಿತಾ ಶರ್ಮ

ಆ) ಲಲಿತಾ ಬಾಬರ್

ಇ) ದೀಪಾ ಕಮರ್ಕರ್

ಈ) ಮಮತಾ ಕುಮಾರಿ

ಲಲಿತಾ ಬಾಬರ್

ಮಹಾರಾಷ್ಟ್ರದ ಲಲಿತಾ ಬಾಬರ್ ರಿಯೋ ಒಲಂಪಿಕ್ಸ್ 3000 ಮೀಟರ್ ಸ್ಟೀಪಲ್ ಚೇಸ್ ಕ್ವಾಲಿಫೈಯಿಂಗ್ ಸುತ್ತಿನಲ್ಲಿ 4ನೇಯವರಾಗಿ ಗುರಿ ಮುಟ್ಟಿ 32 ವರ್ಷಗಳ ನಂತರ ಸ್ಟೀಪಲ್ ಚೇಸ್ನ್ ಫೈನಲ್ಸ್‌ಗೆ ಲಗ್ಗೆ ಇಟ್ಟ ಭಾರತದ ಪ್ರಥಮ ಮಹಿಳೆ

ಎಂಬ ಕೀರ್ತಿಗೆ ಪಾತ್ರರಾಗಿದ್ದಾರೆ. 1984 ರ ಒಲಿಂಪಿಕ್ಸ್‌ನಲ್ಲಿ ಪಿ ಟಿ ಉಷಾ ಓಟದ ಸ್ಪರ್ಧೆಯಲ್ಲಿ ಫೈನಲ್ ತಲುಪಿ ಸಾಧನೆ ಮಾಡಿದ್ದರು. ಲಲಿತಾ ಬಾಬರ್ ದಕ್ಷಿಣ ಕೊರಿಯಾದಲ್ಲಿ ಎರಡು ವರ್ಷದ ಹಿಂದೆ ನಡೆದ ಏಷಿಯನ್ ಗೇಮ್ಸ್‌ನಲ್ಲಿ ಕಂಚಿನ ಪದಕದ ಸಾಧನೆ ಮಾಡಿದ್ದರು.

130. 70ನೇ ಸ್ವಾತಂತ್ರ ದಿನದ ಅಂಗವಾಗಿ ಅಶೋಕ ಚಕ್ರ ಗೌರವವನ್ನು ಮರೋಣತ್ತರವಾಗಿ ಯಾರಿಗೆ ನೀಡಲಾಯಿತು?

ಅ) ಲೇ. ಕರ್ನಲ್ ನಿರಂಜನ್

ಆ) ಹವಾಲ್ದಾರ್ ಹಂಗ್ಪನ್ ದಾದಾ

ಇ) ಪುರುಷೋತ್ತಮ್ ಸಿಂಗ್

ಈ) ಹನುಮಂತಪ್ಪ ಕೊಪ್ಪದ್

ಹವಾಲ್ದಾರ್ ಹಂಗ್ಪನ್ ದಾದಾ

ವೀರ ಯೋಧ ಹುತ್ಮಾತ ಹವಾಲ್ದಾರ್ ಹಂಗ್ಪನ್ ದಾದಾ ರವರಿಗೆ ದೇಶದ ಅತ್ಯುನ್ನತ ಸೇನಾ ಗೌರವವಾದ ಅಶೋಕಚಕ್ರವನ್ನು ಮರಣೋತ್ತರವಾಗಿ ನೀಡಿ ಗೌರವಿಸಲಾಗಿದೆ. ಮೇ 27 ರಂದು ಉತ್ತರ ಕಾಶ್ಮೀರದಲ್ಲಿ 13,000 ಅಡಿ ಎತ್ತರದ ಕ್ಲಿಷ್ಟಕರ ವಾತಾವರಣದಲ್ಲಿ ಕಾರ್ಯನಿರತರಾಗಿದ್ದ ದಾದಾ ಗಡಿ ನಿಯಂತ್ರಣ ರೇಖೆಯ ಬಳಿ ಭಯೋತ್ಪಾದಕರು ಒಳನುಸುಳುವದನ್ನು ತಡೆಯಲು ನಡೆಸಿದ ಗುಂಡಿನ ಕಾಳಗದಲ್ಲಿ ದಾದಾ ಹುತಾತ್ಮರಾಗಿದ್ದರು. ಸತತವಾಗಿ 24 ಗಂಟೆಗಳ ಕಾಲ ನಡೆದ ಕಾರ್ಯಚರಣೆಯಲ್ಲಿ ದಾದಾ ಮರಣ ಹೊಂದುವ ಮುನ್ನ ನಾಲ್ವರು ಭಯೋತ್ಪಾದಕರನ್ನು ಕೊಂದಿದ್ದರು. ಇವರ ಶೌರ್ಯವನ್ನು ಗುರುತಿಸಿದ ಸೇನಾ ಪಡೆ ಅಶೋಕ ಚಕ್ರ ನೀಡಲು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಿತ್ತು.

131. ಮೊದಲ ಕ್ವಾಂಟಮ್ ಸಂವಹನ ಉಪಗ್ರಹ(Quantum Communication Satellite)ವನ್ನು ಯಾವ ದೇಶ ಅಭಿವೃದ್ಧಿಪಡಿಸಿದೆ?

ಅ) ಚೀನಾ

ಆ) ಅಮೆರಿಕಾ

ಇ) ಜಪಾನ್

ಈ) ರಷ್ಯಾ

ಚೀನಾ

ಜಗತ್ತಿನ ಮೊದಲ ಕ್ವಾಂಟಮ್ ಸಂವಹನ ಉಪಗ್ರಹವನ್ನು ಚೀನಾ ಅಭಿವೃದ್ಧಿಪಡಿಸಿದ್ದು, ಯಶಸ್ವಿಯಾಗಿ ಕಕ್ಷೆಗೆ ಸೇರಿಸಿರುವುದಾಗಿ ಹೇಳಿದೆ. ಉಪಗ್ರಹವನ್ನು ಚೀನಾದ ಗನ್ಸು ವಾಯವ್ಯ ಪ್ರಾಂತ್ಯದ ಜಿಯೊಕ್ವಾನ್ ಉಪಗ್ರಹ ಉಡಾವಣಾ ಕೇಂದ್ರದಿಂದ ಕಕ್ಷೆಗೆ ಸೇರಿಸಲಾಯಿತು. ಕ್ರಿ.ಪೂ. 5ನೇ ಶತಮಾನದಲ್ಲಿದ್ದ ಚೀನಾದ ವಿಜ್ಞಾನಿ 'ಮಿಸಿಯಸ್'

www.karunaduexams.com

ಅವರ ಹೆಸರನ್ನು ಈ ಉಪಗ್ರಹಕ್ಕೆ ಇಡಲಾಗಿದೆ ಎಂದು ಚೀನಾದ ವಿಜ್ಞಾನ ಅಕಾಡೆಮಿ (ಸಿಎಎಸ್) ತಿಳಿಸಿದೆ. ಈ ಉಪಗ್ರಹವು ಬೆಳಕು ಹಾಗೂ ಅದರ ತರಂಗಾತರಗಳ ರೂಪದಲ್ಲಿ ಮಾಹಿತಿಯನ್ನು ಪರಿವರ್ತಿಸಿ ಭೂಮಿಯಲ್ಲಿರುವ ನಿಯಂತ್ರಣ ಕೇಂದ್ರಕ್ಕೆ ಅತ್ಯಂತ ವೇಗವಾಗಿ ರವಾನಿಸುತ್ತದೆ. ರವಾನೆಯಾಗುವ ಮಾರ್ಗದಲ್ಲಿ ಮಾಹಿತಿಯು ಕಳ್ಳತನವಾಗದಂತೆ ತಡೆಯುವುದೇ ಈ ಉಪಗ್ರಹದ ವಿಶೇಷತೆ.

132. ದೃಷ್ಟಿ ಹೀನರಿಗಾಗಿ ಭಾರತದ ಮೊದಲ ಸ್ಪರ್ಶಸಿ ಗ್ರಹಿಸುವ (Touch and Feel) ಉದ್ಯಾನವನ್ನು ಯಾವ ರಾಜ್ಯದಲ್ಲಿ ತೆರೆಯಲಾಯಿತು?

ಅ) ಕರ್ನಾಟಕ

ಆ) ಕೇರಳ

ಇ) ಗೋವಾ

ಈ) ಅಸ್ಸಾಂ

ಕೇರಳದಲ್ಲಿ

ದೃಷ್ಟಿ ಹೀನರಿಗಾಗಿ ದೇಶದ ಮೊಲದ ಸ್ಪರ್ಶಿಸಿ ಗ್ರಹಿಸುವ ಉದ್ಯಾನವನ್ನು ಕೇರಳದ ತೆಂಜಿಪಲಂನಲ್ಲಿ ಕ್ಯಾಲಿಕಟ್ ವಿಶ್ವವಿದ್ಯಾಲಯದಲ್ಲಿ ಕೇರಳ ವಿಧಾನ ಸಭಾ ಸ್ಪೀಕರ್ ಶ್ರೀರಾಮಕೃಷ್ಣನ್ ಅವರು ಲೋಕಾರ್ಪಣೆ ಮಾಡಿದರು. ಈ ಉದ್ಯಾನದಲ್ಲಿ ಸುಮಾರು 6 ಡಜನ್ಗೂ ಹೆಚ್ಚು ಸುಗಂಧದ್ರವ್ಯ ಸಸ್ಯಗಳಿದ್ದು, ದೃಷ್ಟಿ ಹೀನರಿಗೆ ಕಲಿಯುವ ಅವಕಾಶವನ್ನು ಕಲ್ಪಿಸಲಿದೆ. ದೃಷ್ಟಿ ಹೀನರು ಸಸ್ಯಗಳನ್ನು ಮುಟ್ಟುವ ಮೂಲಕ, ಪರಿಮಳ ಮೂಸುವ ಮೂಲಕ, ಭಾವಿಸುವ ಮೂಲಕ ಮತ್ತು ಅವುಗಳನ್ನ ರುಚಿಸುವ ಮೂಲಕ ಅವುಗಳ ಬಗ್ಗೆ ತಿಳಿಯಬಹುದಾಗಿದೆ. ಅಲ್ಲದೇ ಸಸ್ಯಗಳ ಬಗ್ಗೆ ಮಾಹಿತಿಯನ್ನು ಆಡಿಯೋ ವ್ಯವಸ್ಥೆಯನ್ನು ಅಳವಡಿಸಿದ್ದು ಸಂಪೂರ್ಣ ಮಾಹಿತಿಯನ್ನು ಕಲೆಹಾಕಬಹುದಾಗಿದೆ.

133. ವಿಶ್ವಸಂಸ್ಥೆ ಸಾಮಾನ್ಯ ಸಭೆಯ 71 ನೇ ಅಧಿವೇಶನದ ಅಧ್ಯಕ್ಷರಾಗಿ ಯಾರು ಆಯ್ಕೆಯಾಗಿದ್ದಾರೆ?

ಅ) ಪೀಟರ್ ಥಾಮಸ್

ಆ) ಮೊಗೆನ್ಸ್ ಲೈಕ್ಕೆಟೊಪ್ಟ್

ಇ) ಸ್ಟುವರ್ಟ್ ಲೆಮ್ನೆ

ಈ) ಡೇವಿಡ್ ಮಿಷಲೊಕ್

ಪೀಟರ್ ಥಾಮಸ್

ಫಿಜಿ ದೇಶದ ರಾಜತಂತ್ರ್ಞ ಹಾಗೂ ಫಿಜಿಯ ವಿಶ್ವಸಂಸ್ಥೆಯ ಖಾಯಂ ಪ್ರತಿನಿಧಿ ಪೀಟರ್ ಥಾಮಸ್ ವಿಶ್ವಸಂಸ್ಥೆಯ ಸಾಮಾನ್ಯ ಸಭೆಯ 71ನೇ ಅಧಿವೇಶನದ ಅಧ್ಯಕ್ಷರಾಗಿ ನೇಮಕಗೊಂಡಿದ್ದಾರೆ. ಥಾಮಸ್ ಫೆಸಿಫಿಕ್ ದ್ವೀಪ ರಾಜ್ಯದಿಂದ 71 ವರ್ಷಗಳ ಇತಿಹಾಸದಲ್ಲೆ ಈ ಹುದ್ದೆಗೆ ಆಯ್ಕೆಯಾದ ಮೊದಲಿಗರು. ಸೆಪ್ಟೆಂಬರ್ 2016 ರಿಂದ ಆರಂಭಗೊಳ್ಳಲಿರುವ

www.karunaduexams.com

ಅಧಿವೇಶನದಿಂದ ಇವರು ಹುದ್ದೆಯನ್ನು ಅಲಂಕರಿಸಲಿದ್ದಾರೆ. ವಿಜಯ ಲಕ್ಷ್ಮಿ ಪಂಡಿತ್ ವಿಶ್ವಸಂಸ್ಥೆ ಸಾಮಾನ್ಯ ಸಭೆಯ ಅಧಿವೇಶನದ ಅಧ್ಯಕ್ಷರಾಗಿ ಆಯ್ಕೆಯಾದ ಏಕೈಕ ಭಾರತೀಯ ವ್ಯಕ್ತಿ. 1953 ರಲ್ಲಿ ಈ ಹುದ್ದೆಗೆ ನೇಮಕಗೊಂಡಿದ್ದರು.

134. "ದಿ ಗಾಸ್ಪೆಲ್ ಆಫ್ ಯುದಸ್ (The Gospel of Yudas)" ಪುಸ್ತಕದ ಲೇಖಕರು ಯಾರು?

ಅ) ಅರುಂದತಿ ರಾಯ್

ಆ) ಕೆ.ಆರ್.ಮೀರಾ

ಇ) ಸುಮನ್ ಅಗರವಾಲ್

ಈ) ರವೀಂದ್ರ ಸಿಂಗ್

ಕೆ.ಆರ್.ಮೀರಾ

135. ತನಿಖಾ ದಳಗಳ ಮೊದಲ ರಾಷ್ಟ್ರೀಯ ಸಮ್ಮೇಳನವನ್ನು(National Conference of Investing Agencies) ಯಾವ ನಗರದಲ್ಲಿ ಆಯೋಜಿಸಲಾಗಿತ್ತು?

ಅ) ನವದೆಹಲಿ

ಆ) ಮುಂಬೈ

ಇ) ಬೆಂಗಳೂರು

ಈ) ಚೆನ್ನೈ

ನವದೆಹಲಿ

ತನಿಖಾ ದಳಗಳ ಮೊದಲ ರಾಷ್ಟ್ರೀಯ ಸಮ್ಮೇಳನವು ಆಗಸ್ಟ್ 12 ರಿಂದ 13 ರವರೆಗೆ ನವದೆಹಲಿಯ ವಿಜ್ಞಾನ ಭವನದಲ್ಲಿ ನಡೆಯಿತು. ಎರಡು ದಿನದ ಈ ಸಮ್ಮೇಳನವನ್ನು ಕೇಂದ್ರ ಗೃಹ ಸಚಿವ ರಾಜನಾಥ್ ಸಿಂಗ್ ಅವರು ಉದ್ಘಾಟಿಸಿದರು. ಕೇಂದ್ರ,ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳ ಪೊಲೀಸ್ ಸಂಸ್ಥೆಗಳಿಂದ ಸುಮಾರು 100 ಕ್ಕೂ ಹೆಚ್ಚು ಪ್ರತಿನಿಧಿಗಳು ಸಮ್ಮೇಳನದಲ್ಲಿ ಭಾಗವಹಿಸಿದ್ದರು. ಬ್ಯುರೋ ಆಫ್ ಪೊಲೀಸ್ ರಿಸರ್ಚ್ ಅಂಡ್ ಡೆವಲಪ್ಮೆಂಟ್ ಈ ಸಮ್ಮೇಳನವನ್ನು ರಾಷ್ಟ್ರೀಯ ತನಿಖಾ ದಳದ ಸಹಕಾರದೊಂದಿಗೆ ಆಯೋಜಿಸಿತ್ತು.

136. ಪ್ರಾದೇಶಿಕ ಸಮಗ್ರ ಆರ್ಥಿಕ ಒಪ್ಪಂದ (Regional Comprehensive Economic Agreement) ಈ ಕೆಳಗಿನ ಯಾವ ಒಕ್ಕೂಟಕ್ಕೆ ಸಂಬಂಧಿಸಿದೆ?

ಅ) ASEAN

ಆ) SAARC

ಇ) BRICS

ಈ) ASEM

www.karunaduexams.com

ASEAN

ಪ್ರಾದೇಶಿಕ ಸಮಗ್ರ ಆರ್ಥಿಕ ಒಪ್ಪಂದವು ASEAN (ಆಗ್ನೇಯ ಏಷ್ಯಾ ರಾಷ್ಟ್ರಗಳ ಒಕ್ಕೂಟ)ನ 10 ರಾಷ್ಟ್ರಗಳು ಅಂದರೆ ಬ್ರೂನಿ, ಮಯಾನ್ಮರ್, ಕಾಂಬೋಡಿಯ, ಇಂಡೋನೇಷಿಯಾ, ಲಾವೊಸ್, ಮಲೇಷಿಯಾ, ಫಿಲಿಫೈನ್ಸ್, ಸಿಂಗಾಪುರ, ಥಾಯ್ ಲ್ಯಾಂಡ್ ಮತ್ತು ನ್ಯೂಜಿಲ್ಯಾಂಡ್ ಹಾಗೂ ASEAN ರಾಷ್ಟ್ರಗಳು ಈಗಾಗಲೇ ಮುಕ್ತ ವ್ಯಾಪಾರ ಒಪ್ಪಂದ ಹೊಂದಿರುವ ಆರು ರಾಷ್ಟ್ರಗಳಾದ ಆಸ್ಟ್ರೇಲಿಯಾ, ಭಾರತ, ಚೀನಾ ಜಪಾನ್. ದಕ್ಷಿಣ ಕೊರಿಯಾ ಮತ್ತು ನ್ಯೂಜಿಲ್ಯಾಂಡ್ ನಡುವಿನ ಉದ್ದೇಶಿತ ಮುಕ್ತ ವ್ಯಾಪಾರ ಒಪ್ಪಂದವಾಗಿದೆ. 2012 ರಲ್ಲಿ ಕಾಂಬೋಡಿಯಾದಲ್ಲಿ ನಡೆದ ASEAN ಶೃಂಗಸಭೆಯಲ್ಲಿ ಪ್ರಾದೇಶಿಕ ಸಮಗ್ರ ಆರ್ಥಿಕ ಒಪ್ಪಂದ ಮೊದಲು ಪ್ರಸ್ತಾಪಿಸಲಾಗಿತ್ತು.

137. ಇತ್ತೀಚೆಗೆ ಕೇಂದ್ರ ಸರ್ಕಾರ ರಚಿಸಿದ ವ್ಯಾಪಾರ ಸೌಲಭ್ಯ ರಾಷ್ಟ್ರೀಯ ಸಮಿತಿ (National Committee on Trade Facilitation)ಯ ಅಧ್ಯಕ್ಷರು ಯಾರು?

ಅ) ಕೇಂದ್ರ ಸಂಪುಟ ಕಾರ್ಯದರ್ಶಿ

ಆ) ಕೇಂದ್ರ ಹಣಕಾಸು ಕಾರ್ಯದರ್ಶಿ

ಇ) ವಿದೇಶಾಂಗ ಕಾರ್ಯದರ್ಶಿ

ಈ) ಕೇಂದ್ರ ವಾಣಿಜ್ಯ ಕಾರ್ಯದರ್ಶಿ

ದೇಶದಲ್ಲಿ ವ್ಯಾಪಾರ ಸೌಲಭ್ಯ ಮಾರ್ಗಸೂಚಿಯನ್ನು ಅಭಿವೃದ್ದಿ ಪಡಿಸುವ ಸಲುವಾಗಿ ಕೇಂದ್ರ ಸರ್ಕಾರ ವ್ಯಾಪಾರ ಸೌಲಭ್ಯ ರಾಷ್ಟ್ರೀಯ ಸಮಿತಿಯನ್ನು ಇತ್ತೀಚೆಗೆ ರಚಿಸಿದೆ. ವಿಶ್ವ ವಾಣಿಜ್ಯ ಸಂಸ್ಥೆಯ (WTO) ವ್ಯಾಪಾರ ಸೌಲಭ್ಯ ಒಪ್ಪಂದದ ಅನುಗುಣವಾಗಿ ಈ ಸಮಿತಿಯನ್ನು ರಚಿಸಲಾಗಿದೆ. ಡಬ್ಲೂಟಿಓ ನ ವ್ಯಾಪಾರ ಸೌಲಭ್ಯ ಒಪ್ಪಂದವನ್ನು ಈಗಾಗಲೇ ಭಾರತ ಅನುಮೋದಿಸಿದೆ. ಕೇಂದ್ರ ಸಂಪುಟ ಕಾರ್ಯದರ್ಶಿ ಈ ಸಮಿತಿಯ ಅಧ್ಯಕ್ಷತೆಯನ್ನು ವಹಿಸಲಿದ್ದಾರೆ. ಪ್ರಸ್ತುತ ಕೇಂದ್ರ ಸಂಪುಟ ಕಾರ್ಯದರ್ಶಿ ಪ್ರದೀಪ್ ಕುಮಾರ್ ಸಿನ್ಹಾ ಈ ಸಮಿತಿಯ ಅಧ್ಯಕ್ಷರಾಗಿದ್ದಾರೆ. ಈ ಸಮಿತಿಯು ರಾಷ್ಟ್ರಮಟ್ಟದಲ್ಲಿ ಕಾರ್ಯನಿರ್ವಹಿಸಲಿದ್ದು ದೇಶಿಯ ಸಮನ್ವಯತೆ ಮತ್ತು ವ್ಯಾಪಾರ ಸೌಲಭ್ಯ ಒಪ್ಪಂದದ ನಿಬಂಧನೆಗಳನ್ನು ಅನುಷ್ಠಾನಗೊಳಿಸಲು ಸಹಕರಿಸಲಿದೆ.

138. ಇತ್ತೀಚೆಗೆ ಯಾವ ಬ್ಯಾಂಕ್ ಬ್ಯಾಂಕಿಂಗ್ ಸೇವೆಗಳನ್ನು ಒದಗಿಸುವ ಸಲುವಾಗಿ "Unstructured Supplementary Service Data (USSD)" ಆಧಾರಿತ *99# ಮೊಬೈಲ್ ಅಪ್ಲೀಕೇಷನ್ ಅನ್ನು ಜಾರಿಗೆ ತಂದಿದೆ?

ಅ) ಭಾರತೀಯ ಸ್ಟೇಟ್ ಬ್ಯಾಂಕ್

ಆ) ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ

ಇ) ಬ್ಯಾಂಕ್ ಆಫ್ ಬರೋಡ

ಈ) ಸಿಂಡಿಕೇಟ್ ಬ್ಯಾಂಕ್

ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ

www.karunaduexams.com

ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ ಇತ್ತೀಚೆಗೆ Unstructured Supplementary Service Data (USSD)" ಆಧಾರಿತ *99# ಮೊಬೈಲ್ ಅಪ್ಲೀಕೇಷನ್ ಅನ್ನು ನ್ಯಾಷನಲ್ ಪೇಮೆಂಟ್ ಕಾರ್ಪೋರೇಷನ್ ಆಫ್ ಇಂಡಿಯಾ (NPCI)ದ ಜೊತೆಗೂಡಿ ಆರಂಭಿಸಿದೆ. ಇದೊಂದು ಜಿಎಸ್‌ಎಮ್ ಆಧಾರಿತ ತಂತ್ರಜ್ಞಾನವಾಗಿದ್ದು ಮೊಬೈಲ್ ಮತ್ತು ಅಪ್ಲಿಕೇಷನ್ ಪ್ರೋಗ್ರಾಂ ನಡುವೆ ಎಸ್‌ಎಂಎಸ್ ಕಳುಹಿಸಬಹುದಾಗಿದೆ. * 99 # ಮೊಬೈಲ್ ಅಪ್ಲಿಕೇಶನ್ ನಿಂದ ಖಾತೆಯಲ್ಲಿ ಹಣ ನೋಡುವುದು, ಬೇರೆ ಖಾತೆಗಳಿಗೆ ಹಣ ವರ್ಗಾವಣೆ ಮಾಡುವುದು, ಮೊಬೈಲ್ ಪಿನ್ (MPIN), ಆಧಾರ್ ತಪಾಸಣೆ ಸೇರಿದಂತೆ ಮೂಲಭೂತ ಬ್ಯಾಂಕಿಂಗ್ ಸೌಲಭ್ಯಗಳನ್ನು ಒದಗಿಸಲಿದೆ. ಇದು 10 ಭಾಷೆಗಳಲ್ಲಿ ಲಭ್ಯವಿದೆ.

139. ಇತ್ತೀಚೆಗೆ ಸುದ್ದಿಯಲ್ಲಿರುವ ಅಮ್ನೆಸ್ಟಿ ಇಂಟರ್ ನ್ಯಾಷನಲ್ (Amnesty International) ಒಂದು _______?

ಅ) ಮಾನವ ಹಕ್ಕು ಹೋರಾಟ ಸಂಸ್ಥೆ

ಆ) ವನ್ಯಜೀವಿ ಸಂರಕ್ಷಣೆ ಸಂಸ್ಥೆ

ಇ) ಭಯೋತ್ಪಾದನ ನಿಗ್ರಹ ಸಂಸ್ಥೆ

ಈ) ಪರಿಸರ ಸಂರಕ್ಷಣ ಸಂಸ್ಥೆ

ಮಾನವ ಹಕ್ಕು ಹೋರಾಟ ಸಂಸ್ಥೆ

ಅಮ್ನೆಸ್ಟಿ ಇಂಟರ್ ನ್ಯಾಷನಲ್ ಒಂದು ಸರ್ಕಾರೇತರ ಸಂಸ್ಥೆಯಾಗಿದ್ದು, ಮಾನವ ಹಕ್ಕು ಸಂರಕ್ಷಿಸುವ ಉದ್ದೇಶವನ್ನು ಹೊಂದಿದೆ. ಸುಮಾರು 7 ಮಿಲಿಯನ್ ಸದಸ್ಯರನ್ನು ಹೊಂದಿರುವ ಇದು ಪ್ರಪಂಚದಾದ್ಯಂತ ಕಾರ್ಯನಿರ್ವಹಿಸುತ್ತಿದೆ. ಇದನ್ನು 1961 ರಲ್ಲಿ ಸ್ಥಾಪಿಸಲಾಗಿದ್ದು, ಕೇಂದ್ರ ಕಚೇರಿ ಲಂಡನ್ ನಲಿದೆ.

140. 2016 ರಿಯೋ ಒಲಂಪಿಕ್ಸ್ನ ಟೆನ್ನಿಸ್ ಪುರುಷರ ಸಿಂಗಲ್ಸ್ ವಿಭಾಗದಲ್ಲಿ ಪ್ರಶಸ್ತಿ ಗೆದ್ದವರು ಯಾರು?

ಅ) ನೊವಾಕ್ ಜೊಕೊವಿಕ್

ಆ) ರಾಫೆಲ್ ನಡಾಲ್

ಇ) ಆಂಡಿ ಮರ್ರೆ

ಈ) ಮಿಲೋಸ್ ರಾವೋನಿಕ್

ಆಂಡಿ ಮರ್ರೆ

ಹಾಲಿ ವಿಂಬಲ್ಡನ್ ಚಾಂಪಿಯನ್ ಆಂಡಿ ಮರ್ರೆ ಒಲಿಂಪಿಕ್ಸ್ ಪುರುಷರ ಟೆನಿಸ್ ಸಿಂಗಲ್ಸ್‌ನಲ್ಲಿ ಎರಡು ಸ್ವರ್ಣ ಪದಕ ಗೆದ್ದ ವಿಶ್ವದ ಮೊದಲ ಆಟಗಾರ ಎಂಬ ಐತಿಹಾಸಿಕ ಸಾಧನೆ ಮಾಡಿದ್ದಾರೆ. ಪುರುಷರ ಸಿಂಗಲ್ಸ್ ಫೈನಲ್‌ನಲ್ಲಿ ಬ್ರಿಟನ್ ತಾರೆ ಮರ್ರೆ 7-5, 4-6, 6-2, 7-5 ಸೆಟ್‌ಗಳಿಂದ ಲಂಡನ್ ಒಲಿಂಪಿಕ್ಸ್ ಕಂಚಿನ ಪದಕ ವಿಜೇತ ಅರ್ಜೆಂಟೀನಾದ ಜುವಾನ್ ಮಾರ್ಟಿನ್ ಡೆಲ್ ಪೊಟ್ರೊರನ್ನು ಮಣಿಸಿ ಇತಿಹಾಸ ನಿರ್ಮಿಸಿದರು.

www.karunaduexams.com

141. ಇತ್ತೀಚೆಗೆ ಬಿಡುಗಡೆಗೊಂಡ ಗ್ಲೋಬಲ್ ಇನೊವೇಶನ್ ಸೂಚ್ಯಂಕದಲ್ಲಿ (Global Innovation Index) ಭಾರತ ಎಷ್ಟನೇ ಸ್ಥಾನ ಪಡೆದುಕೊಂಡಿದೆ?

ಅ) 61

ಆ) 63

ಇ) 66

ಈ) 78

66

ಇತ್ತೀಚೆಗೆ ಬಿಡುಗಡೆಗೊಳಿಸಲಾದ ಗ್ಲೋಬಲ್ ಇನೋವೇಷನ್ ಸೂಚ್ಯಂಕ(ಜಿಐಐ)ದಲ್ಲಿ ಭಾರತ 66ನೇ ಸ್ಥಾನವನ್ನು ಗಳಿಸಿದೆ. 2015ರ ಸೂಚ್ಯಂಕಕ್ಕೆ ಹೋಲಿಸಿದಾಗ ಭಾರತ ಉತ್ತಮ ಸಾಧನೆ ಮಾಡಿದ್ದು, 14 ಸ್ಥಾನಗಳ ಏರಿಕೆ ಕಂಡು 66ನೇ ಸ್ಥಾನಕ್ಕೇರಿದೆ. ಕಳೆದ ವರ್ಷ ಭಾರತ 81ನೇ ಸ್ಥಾನದಲ್ಲಿತ್ತು. ಉನ್ನತ ಶಿಕ್ಷಣ, ಮಾಹಿತಿ, ಸಂವಹನ ತಂತ್ರಜ್ಞಾನ ರಫ್ತಿನಲ್ಲಿ ಉತ್ತಮ ಸಾಧನೆ ಮಾಡಿರುವ ಕಾರಣ ಸೂಚ್ಯಂಕದಲ್ಲಿ ಭಾರತ ಮೇಲೆರಿದೆ. ವಿಶ್ವ ಬೌದ್ಧಿಕ ಆಸ್ತಿ ಸಂಸ್ಥೆ (ಡಬ್ಲ್ಯು‌ಐಪಿಒ), ಕಾರ್ನೆಲ್ ವಿಶ್ವವಿದ್ಯಾಲಯ ಮತ್ತು ಇನ್ಸಿಯಾಡ್(ಅಂತಾರಾಷ್ಟ್ರೀಯ ಬ್ಯುಸಿನೆಸ್ ಸ್ಕೂಲ್) ಸೂಚ್ಯಂಕವನ್ನು ತಯಾರಿಸಿದ್ದು, ಸ್ವಿಟ್ಜ್ ಲ್ಯಾಂಡ್ ಮೊದಲ ಸ್ಥಾನದಲ್ಲಿದೆ. ನಂತರದ ಸ್ಥಾನದಲ್ಲಿ ಸ್ವೀಡನ್, ಯು.ಕೆ. ಯುಎಸ್‌ಎ ಇವೆ. ಬ್ರಿಕ್ಸ್ ದೇಶಗಳ ಪೈಕಿ ಚೀನಾ (25), ರಷ್ಯಾ (43), ದಕ್ಷಿಣ ಆಫ್ರಿಕಾ (54), ಬ್ರೆಜಿಲ್ (69) ಇವೆ.

142. ಇತ್ತೀಚೆಗೆ ವಿರೇಂದ್ರ ಸೆಹ್ವಾಗ್ ಅವರು ಮೆಲ್ಬೋರ್ನ್ ಕ್ರಿಕೆಟ್ ಕ್ಲಬ್ (ಎಂಸಿಸಿ)ನ ಗೌರವ ಸದಸ್ಯತ್ವ ಪಡೆದಿದ್ದಾರೆ. ಸೆಹ್ವಾಗ್ ಈ ಸದಸ್ಯತ್ವವನ್ನು ಪಡೆದ ಭಾರತದ ಎಷ್ಟನೇ ಕ್ರಿಕೆಟ್ ಆಟಗಾರ?

ಅ) ನಾಲ್ಕನೇಯವರು

ಆ) ಐದನೇಯವರು

ಇ) ಮೂರನೇಯವರು

ಈ) ಆರನೇಯವರು

ಐದನೇಯವರು

ಭಾರತ ಕ್ರಿಕೆಟ್ ತಂಡದ ಮಾಜಿ ಆಟಗಾರ ವಿರೇಂದ್ರ ಸೆಹ್ವಾಗ್, ಎಂಸಿಸಿಯ ಗೌರವ ಸದಸ್ಯತ್ವ ಪಡೆದಿದ್ದಾರೆ. ಆ ಮೂಲಕ ಭಾರತದ ಸ್ಟಾರ್ ಆಟಗಾರರಾದ ಸಚಿನ್ ತೆಂಡೂಲ್ಕರ್, ಸೌರವ್ ಗಂಗೂಲಿ, ರಾಹುಲ್ ದ್ರಾವಿಡ್ ಮತ್ತು ಅನಿಲ್ ಕುಂಬ್ಳೆ ನಂತರ ಈ ಗೌರವ ಸದಸ್ಯತ್ವವನ್ನು ಪಡೆದ ಭಾರತದ ಐದನೇ ಆಟಗಾರ. 37 ವರ್ಷ ವಯಸ್ಸಿನ

ಸೆಹ್ವಾಗ್ ವೃತ್ತಿ ಜೀವನದಲ್ಲಿ ಭಾರತದ ಪರ 104 ಟೆಸ್ಟ್, 251 ಏಕದಿನ ಮತ್ತು 19 ಟಿ20 ಪಂದ್ಯಗಳನ್ನಾಡಿದ್ದಾರೆ. ಸ್ಫೋಟಕ ಬ್ಯಾಟ್ಸ್ಮನ್ ಎಂದೇ ಹೆಸರಾಗಿದ್ದ ಸೆಹ್ವಾಗ್ ಟೆಸ್ಟ್ನಲ್ಲಿ 49.34ರ ಸರಾಸರಿಯಲ್ಲಿ 8,586 ರನ್ ಗಳಿಸಿದ್ದರೆ, ಏಕದಿನ ಕ್ರಿಕೆಟ್ನಲ್ಲಿ 35.05ರ ಸರಾಸರಿಯಲ್ಲಿ 8273 ರನ್ ಕಲೆಹಾಕಿದ್ದಾರೆ.

143. ಆರ್ಟ್ ಆಫ್ ಲಿವಿಂಗ್ ಸಂಸ್ಥೆಯ ವಿಶ್ವ ಸಾಂಸ್ಕೃತಿಕ ಉತ್ಸವದಿಂದ ಯಮುನ ನದಿ ತೀರ ಹಾಗೂ ಪರಿಸರಕ್ಕೆ ಹಾನಿಯಾಗಿರುವುದನ್ನು ಪರಿಶೀಲಿಸಲು ರಾಷ್ಟ್ರೀಯ ಹಸಿರು ಮಂಡಳಿ ನೇಮಿಸಿದ್ದ ತಜ್ಞರ ಸಮಿತಿಯ ಅಧ್ಯಕ್ಷರು ಯಾರು?

ಅ) ನರಸಿಂಹ ಮೂರ್ತಿ

ಆ) ಶಶಿ ಶೇಖರ್

ಇ) ಗಿರೀಶ್ ಮನೋಹರ್

ಈ) ಶಶಿಧರ್ ಕಾಂತ್

ಶಶಿ ಶೇಖರ್

ರವಿಶಂಕರ್ ಗುರೂಜಿ ಅವರ ಆರ್ಟ್ ಆಫ್ ಲಿವಿಂಗ್ ಸಂಸ್ಥೆಯು ಯಮುನಾ ನದಿ ತೀರದಲ್ಲಿ ಆಯೋಜಿಸಿದ್ದ ಬೃಹತ್ ವಿಶ್ವ ಸಾಂಸ್ಕೃತಿಕ ಉತ್ಸವದಿಂದ ನದಿ ತೀರ ಹಾಗೂ ಪರಿಸರಕ್ಕೆ ಹಾನಿಯಾಗಿರುವುದರ ಬಗ್ಗೆ ಪರಿಶೀಲಿಸಿ ವರದಿ ಸಲ್ಲಿಸಲು ರಾಷ್ಟ್ರೀಯ ಹಸಿರು ಮಂಡಳಿ (NGT) ಏಳು ಮಂದಿ ತಜ್ಞರ ಸಮಿತಿಯನ್ನು ರಚಿಸಿತ್ತು. ಕೇಂದ್ರ ಜಲ ಸಂಪನ್ಮೂಲ ಸಚಿವಾಲಯದ ಕಾರ್ಯದರ್ಶಿ ಶಶಿ ಶೇಖರ್ ಸಮಿತಿಯ ಅಧ್ಯಕ್ಷರಾಗಿದ್ದರು. ಸಮಿತಿಯು ಇಂದು ತನ್ನ ವರದಿಯನ್ನು ಸಲ್ಲಿಸಿದ್ದು, ನದಿ ತಟವು ಈಗ ಸಂಪೂರ್ಣವಾಗಿ ಸಮತಟ್ಟಾಗಿದೆ ಹಾಗೂ ಗಟ್ಟಿಯಾಗಿದೆ ಹಾಗೂ ಅಲ್ಲಿ ಯಾವುದೇ ಗಿಡ ಮರಗಳಿಲ್ಲ ಎಂದು ತಂಡ ತನ್ನ 47 ಪುಟಗಳ ವರದಿಯಲ್ಲಿ ತಿಳಿಸಿದೆ. ಈ ಮೂರು ದಿನಗಳ ಕಾರ್ಯಕ್ರಮದಿಂದ ಪರಿಸರ ವೈವಿಧ್ಯತೆಗೆ ಆದ ಹಾನಿ ಅಪಾರ ಎಂದು ಹೇಳಿರುವ ತಜ್ಞರ ತಂಡ ಈ ಹಾನಿಯನ್ನು ಸರಿಪಡಿಸುವುದು ಅಸಾಧ್ಯ ಎಂದಿದೆ.

144. 17 ನೇ ಆಲಿಪ್ತ ಚಳುವಳಿ ಶೃಂಗಸಭೆ (Non-Aligned Movement Summit) ಯಾವ ದೇಶದಲ್ಲಿ ನಡೆಯಲಿದೆ?

ಅ) ಈಜಿಪ್ಟ್

ಆ) ಭಾರತ

ಇ) ವಿಯೆಟ್ನಾಂ

ಈ) ವೆನೆಜುವೆಲಾ

ವೆನೆಜುವೆಲಾ

17 ನೇ ಆಲಿಪ್ತ ಚಳುವಳಿ ಶೃಂಗಸಭೆಯು ಸೆಪ್ಟೆಂಬರ್ 17-18 ರಂದು ವೆನೆಜುವೆಲಾದಲ್ಲಿ ನಡೆಯಲಿದೆ. ಪ್ರಧಾನಿ ಮೋದಿ ಅವರು ಈ ಶೃಂಗಸಭೆಯಲ್ಲಿ ಭಾಗವಹಿಸುವುದು ಅನುಮಾನವೆಂದು ಹೇಳಲಾಗಿದೆ. ಅಲಿಪ್ತ ಚಳವಳಿಯ ಜನಕ ಎಂದೇ ಪರಿಚಿತರಾದ ಜವಾಹರ ಲಾಲ್ ನೆಹರೂ ಅವರ ಕಾಲದಿಂದ ಆರಂಭವಾದ ಅಲಿಪ್ತ ಚಳವಳಿ ಶೃಂಗದಲ್ಲಿ ಭಾರತದ

www.karunaduexams.com

ಪ್ರಧಾನಿ ಪಾಲ್ಗೊಳ್ಳದೇ ಇದ್ದುದು 1979ರಲ್ಲಿ ಮಾತ್ರ. ಆಗ ಚರಣ್ ಸಿಂಗ್ ಅವರು ಹಂಗಾಮೀ ಪ್ರಧಾನಿಯಾಗಿದ್ದರು. ಅಲಿಪ್ತ ಚಳವಳಿ 1961ರಲ್ಲಿ ಬೆಲ್ಗ್ರೇಡ್‌ನಲ್ಲಿ ಆರಂಭವಾಗಿತ್ತು. ವಿಶ್ವದ ಪ್ರಮುಖ ಶಕ್ತಿಗಳಾಗಿದ್ದ ಅಮೆರಿಕ ಮತ್ತು ಹಿಂದಿನ ಯುಎಸ್‌ಎಸ್‌ಆರ್ ಜೊತೆ ಸೇರದ ಇತರ ರಾಷ್ಟ್ರಗಳು ಅಲಿಪ್ತ ಚಳವಳಿ ಹೆಸರಿನಲ್ಲಿ ಒಂದಾಗಿದ್ದವು. ಯುಎಸ್‌ಎಸ್‌ಆರ್ ವಿಭಜನೆಯ ಬಳಿಕ ಚಳವಳಿ ತನ್ನ ಮಹತ್ವ ಕಳೆದುಕೊಂಡಿತ್ತು.

145. ಉನ್ನತ ಶಿಕ್ಷಣದಲ್ಲಿ ಶ್ಲಾಘನೀಯ ಸೇವೆ ನೀಡಿದಕ್ಕಾಗಿ ಕೊಡಲಾಗುವ ಎ.ಪಿ.ಜೆ.ಕಲಾಂ ಪ್ರಶಸ್ತಿಯನ್ನು ಈಚೆಗೆ ಯಾರಿಗೆ ನೀಡಲಾಗಿದೆ?

ಅ) ಪಿ ಷಣ್ಮುಗಂ

ಆ) ರಾಜಶೇಖರ್ ಸಿಂಗ್

ಇ) ಎನ್ ಸುಬ್ಬಯನ್

ಈ) ಹಂಸರಾಜ್ ವರ್ಮಾ

ಪಿ ಷಣ್ಮುಗಂ

ಕೇಂದ್ರ ಚರ್ಮ ಸಂಶೋಧನಾ ಸಂಸ್ಥೆ (Central Leather Research Institute)ಯ ವಿಜ್ಞಾನಿ ಪಿ. ಷಣ್ಮುಗಂ ಅವರಿಗೆ ಉನ್ನತ ಶಿಕ್ಷಣದಲ್ಲಿ ಶ್ಲಾಘನೀಯ ಸೇವೆ ನೀಡಿದಕ್ಕಾಗಿ ಕೊಡಲಾಗುವ ಎ.ಪಿ.ಜೆ ಕಲಾಂ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗಿದೆ. 70 ನೇ ಸ್ವಾತಂತ್ರ ದಿನಾಚರಣೆ ಸಂಭ್ರಮದಲ್ಲಿ ಮುಖ್ಯಮಂತ್ರಿ ಜಯಲಲಿತಾ ಅವರು ಪ್ರಶಸ್ತಿಯನ್ನು ನೀಡಿದರು. ಪ್ರಶಸ್ತಿಯು 5 ಲಕ್ಷ ನಗದು, ಸರ್ಟಿಫಿಕೇಟ್ ಮತ್ತು 8 ಗ್ರಾಂ ತೂಕದ ಚಿನ್ನದ ಪದಕವನ್ನು ಹೊಂದಿದೆ.

146. ಕೇಂದ್ರ ಸರ್ಕಾರ ಇತ್ತೀಚೆಗೆ ಜಾರಿಗೊಳಿಸಿದ ಮೊದಲ ಹಂತದ 10 ಸ್ಮಾರ್ಟ್ ಗಂಗಾ ನಗರ ಯೋಜನೆಯಲ್ಲಿ ಕೆಳಗಿನ ಯಾವ ನಗರ ಆಯ್ಕೆಯಾಗಿಲ್ಲ?

ಅ) ಮಥುರಾ

ಆ) ಕೊಲ್ಕತ್ತ

ಇ) ರಿಷಿಕೇಶ್

ಈ) ಹರಿದ್ವಾರ್

ಕೊಲ್ಕತ್ತ

ಮೊದಲ ಹಂತದ ಸ್ಮಾರ್ಟ್ ಗಂಗಾ ನಗರ ಯೋಜನೆಯನ್ನು ಗಂಗಾ ನದಿಯ ದಡದ ಮೇಲಿರುವ 10 ನಗರಗಳಾದ ಹರಿದ್ವಾರ, ರಿಷಿಕೇಶ್, ಮಥುರಾ, ವಾರಾಣಾಸಿ, ಕಾನ್ಪುರ, ಅಲಹಬಾದ್, ಲಕ್ನೋ, ಪಾಟ್ನಾ, ಸಾಹೀಬ್ ಗಂಜ್ ಮತ್ತು ಬಾರಕ್ ಪುರನಲ್ಲಿ ಕೇಂದ್ರ ಸರ್ಕಾರ ಚಾಲನೆ ನೀಡಿದೆ. ಕೇಂದ್ರ ನಗರಾಭಿವೃದ್ಧಿ ಸಚಿವ ವೆಂಕಯ್ಯನಾಯ್ಡು ಮತ್ತು ಕೇಂದ್ರ ಜಲ ಸಂಪನ್ಮೂಲ ಸಚಿವೆ ಉಮಾ ಭಾರತಿ ಮೊದಲ ಹಂತದ ಕಾರ್ಯಕ್ರಮವನ್ನು ಜಂಟಿಯಾಗಿ ಉದ್ಘಾಟಿಸಿದರು.

www.karunaduexams.com

147. ಕೇಂದ್ರ ಮಾಜಿ ಸಚಿವೆ ನಜ್ಮಾ ಹೆಪ್ತುಲ್ಲಾ ಅವರು ಯಾವ ರಾಜ್ಯದ ರಾಜ್ಯಪಾಲರಾಗಿ ನೇಮಕಗೊಂಡಿದ್ದಾರೆ?

ಅ) ಮಣಿಪುರ

ಆ) ಸಿಕ್ಕಿಂ

ಇ) ಅಸ್ಸಾಂ

ಈ) ತ್ರಿಪುರ

ಕೇಂದ್ರ ಮಾಜಿ ಸಚಿವೆ ನಮ್ಜಾ ಹೆಪ್ತುಲ್ಲಾ ಅವರನ್ನು ಮಣಿಪುರ ರಾಜ್ಯಪಾಲರಾಗಿ ನೇಮಕ ಮಾಡಲಾಗಿದೆ. ಅಸ್ಸಾಂ ರಾಜ್ಯಪಾಲರಾಗಿ ಬನ್ವರಿಲಾಲ್ ಪುರೋಹಿತ್, ಪಂಜಾಬ್ ರಾಜ್ಯಪಾಲರಾಗಿ ವಿ.ಪಿ.ಸಿಂಗ್ ಹಾಗೂ ಅಂಡಮಾನ್ ಮತ್ತು ನಿಕೋಬರ್ ಲೆಫ್ಟಿನೆಂಟ್ ಗವರ್ನರ್ ಆಗಿ ಜಗದಿಶ್ ಮುಖಿ ಅವರನ್ನು ನೇಮಕ ಮಾಡಲಾಗಿದೆ.

148. ಪ್ರಸ್ತುತ ಸುಪ್ರೀಂ ಕೋರ್ಟ್ ಮತ್ತು ಹೈಕೋರ್ಟ್ ನ್ಯಾಯಾಧೀಶರ ನಿವೃತ್ತಿ ವಯಸ್ಸು ಕ್ರಮವಾಗಿ ಎಷ್ಟು?

ಅ) 65, 62

ಆ) 62, 60

ಇ) 65, 63

ಈ) 63, 60

65, 62

ಪ್ರಸ್ತುತ ಸುಪ್ರೀಂ ಕೋರ್ಟ್ ಮತ್ತು ಹೈಕೋರ್ಟ್ ನ್ಯಾಯಾಧೀಶರ ನಿವೃತ್ತಿ ವಯಸ್ಸು ಕ್ರಮವಾಗಿ 65 ಮತ್ತು 62.

149. ಇತ್ತೀಚೆಗೆ ನಿಧನರಾದ ಫಿಫಾ (FIFA)ದ ಮಾಜಿ ಅಧ್ಯಕ್ಷ ಯಾರು?

ಅ) ಸೆಫ್ ಬ್ಲಾಟರ್

ಆ) ಜಾವೊ ಹ್ಯಾವಲೆಂಜ್

ಇ) ಇಸಾ ಹಯಾಟೊ

ಈ) ರಾಬರ್ಟ್ ಗುಯಾರಿನ್

ಜಾವೊ ಹ್ಯಾವಲೆಂಜ್

ಅನಾರೋಗ್ಯದಿಂದ ಬಳಲುತ್ತಿದ್ದ ಫಿಫಾ ಮಾಜಿ ಅಧ್ಯಕ್ಷ ಜಾವೊ ಹ್ಯಾವಲೆಂಜ್ ನಿಧನರಾಗಿದ್ದಾರೆ. ಹ್ಯಾವಲೆಂಜ್ ಅವರು 1974ರಿಂದ 1998ರವರೆಗೆ ಫಿಫಾ ಅಧ್ಯಕ್ಷರಾಗಿದ್ದರು. ಅವರ ಅವಧಿಯಲ್ಲಿ ಒಟ್ಟು ಆರು ವಿಶ್ವಕಪ್ ಟೂರ್ನಿಗಳು ಆಯೋಜನೆಯಾಗಿದ್ದವು. ಹ್ಯಾವಲೆಂಜ್ ಅವರು ತಮ್ಮ ಆಡಳಿತಾವಧಿಯಲ್ಲಿ ಹಲವು ಮಹತ್ವದ ನಿರ್ಣಯಗಳನ್ನು ತೆಗೆದುಕೊಂಡಿದ್ದರು. ಮಹಿಳಾ ವಿಶ್ವಕಪ್ ಆರಂಭ ಮತ್ತು ಪುರುಷರ ವಿಭಾಗದ ವಿಶ್ವಕಪ್‌ನಲ್ಲಿ



www.karunaduexams.com

ಪಾಲ್ಗೊಳ್ಳುವ ತಂಡಗಳ ಸಂಖ್ಯೆಯನ್ನು 16ರಿಂದ 32ಕ್ಕೆ ಹೆಚ್ಚಿಸಿದ್ದು ಅವುಗಳಲ್ಲಿಬಹುಮುಖ್ಯವಾದುವು. 1963ರಲ್ಲಿ ಅಂತರರಾಷ್ಟ್ರೀಯ ಒಲಿಂಪಿಕ್ ಸಮಿತಿಯ ಸದಸ್ಯತ್ವ ಪಡೆದಿದ್ದ ಅವರು 2011ರ ಡಿಸೆಂಬರ್ ನಲ್ಲಿ ಈ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. 1974ರಲ್ಲಿ ಹ್ಯಾವಲೆಂಜ್ ಅವರು ಫಿಫಾ ಅಧ್ಯಕ್ಷರಾಗಿ ಆಯ್ಕೆಯಾಗಿದ್ದರು. ವಿಶ್ವದ ವಿವಿಧ ಫುಟ್‌ಬಾಲ್ ಫೆಡರೇಷನ್‌ಗಳ ಜೊತೆ ನಿಕಟ ಸಂಬಂಧ ಹೊಂದಿದ್ದ ಅವರು ಸತತ ಆರು ಬಾರಿ ಅಧ್ಯಕ್ಷರಾಗಿ ಪುನರಾಯ್ಕೆಯಾಗಿದ್ದರು. ಹ್ಯಾವಲೆಂಜ್ ಅವರು ಸುಮಾರು 20 ವರ್ಷಗಳ ಕಾಲ ಬ್ರೆಜಿಲ್ ಕಾನ್ಫೆಡರೇಷನ್‌ನ ಅಧ್ಯಕ್ಷರಾಗಿಯೂ ಕೆಲಸ ಮಾಡಿದ್ದರು. ಇವರ ಅವಧಿಯಲ್ಲಿ ಬ್ರೆಜಿಲ್ ತಂಡ ಮೂರು ಬಾರಿ (1958, 1962 ಮತ್ತು 1970) ವಿಶ್ವಕಪ್‌ನಲ್ಲಿ ಚಾಂಪಿಯನ್ ಆಗಿತ್ತು.

150. ನ್ಯಾಷನಲ್ ಅಕಾಡೆಮಿ ಆಫ್ ಇಂಡಿಯನ್ ರೈಲ್ವೇಸ್ ಎಲ್ಲಿದೆ?

ಅ) ವಡೋದರ

ಆ) ಅಹಮದಬಾದ್

ಇ) ಪುಣೆ

ಈ) ಕೊಲ್ಕತ್ತ

ವಡೋದರ

ನ್ಯಾಷನಲ್ ಅಕಾಡೆಮಿ ಆಫ್ ಇಂಡಿಯನ್ ರೈಲ್ವೇಸ್ ಗುಜರಾತ್, ವಡೋದರದಲ್ಲಿದೆ. 1930 ರಲ್ಲಿ ಮೊದಲಿಗೆ ಡೆಹ್ರಾಡೂನ್ ನಲ್ಲಿ ಇದನ್ನು ಸ್ಥಾಪಿಸಲಾಗಿತ್ತು, ಆದರೆ 1952 ರಲ್ಲಿ ವಡೋದರಕ್ಕೆ ಸ್ಥಳಾಂತರ ಮಾಡಲಾಯಿತು. ರೈಲ್ವೆ ಇಲಾಖೆಯ ಪ್ರೊಬೇಷನರ್ಸ್ ನಿಂದ ಮ್ಯಾನೇಜರ್ ವೃಂದದ ಸಿಬ್ಬಂದಿಗೆ ಇಲ್ಲಿ ತರಭೇತಿ ನೀಡಲಾಗುತ್ತದೆ.

151. ಉತ್ತರ ಪ್ರದೇಶ ಸರ್ಕಾರ ನೀಡುವ ರಾಣಿ ಲಕ್ಷ್ಮಿ ಬಾಯಿ ಪ್ರಶಸ್ತಿಗೆ ಈ ಕೆಳಗಿನ ಯಾರನ್ನು ಆಯ್ಕೆಮಾಡಲಾಗಿದೆ?

ಅ) ದೀಪಾ ಕರ್ಮಕರ್

ಆ) ಸುಷ್ಮ ಸ್ವರಾಜ್

ಇ) ಸಾಕ್ಷಿ ಮಲ್ಲಿಕ್

ಈ) ಸೈನಾ ನೆಹ್ವಾಲ್

ಸಾಕ್ಷಿ ಮಲ್ಲಿಕ್

ರಿಯೋ ಒಲಿಂಪಿಕ್ಸ್‌ನ ಮಹಿಳೆಯರ ಕುಸ್ತಿ 58 ಕೆ.ಜಿ ಫ್ರೀ ಸ್ಟೈಲ್ ವಿಭಾಗದಲ್ಲಿ ಭಾರತಕ್ಕೆ ಮೊದಲ ಪದಕ ತಂದು ಕೊಟ್ಟ ಸಾಕ್ಷಿ ಮಲ್ಲಿಕ್ ಅವರಿಗೆ ರಾಣಿ ಲಕ್ಷ್ಮಿ ಬಾಯಿ ಪ್ರಶಸ್ತಿಗೆ ನೀಡುವುದಾಗಿ ಉತ್ತರ ಪ್ರದೇಶದ ಮುಖ್ಯ ಮಂತ್ರಿ ಅಖಿಲೇಶ್ ಯಾದವ್ ಘೋಷಿಸಿದ್ದಾರೆ.  ಪ್ರಶಸ್ತಿಯು ರಾಣಿ ಲಕ್ಷ್ಮಿ ಬಾಯಿ ಕಂಚಿನ ಪ್ರತಿಮೆ, ರೂ 3.11 ಲಕ್ಷ ನಗದನ್ನು ಒಳಗೊಂಡಿದೆ.

www.karunaduexams.com

152. ಇತ್ತೀಚೆಗೆ ಮುಕ್ತಾಯಗೊಂಡ "ಇಂಡಿಯನ್ ಫಿಲ್ಮ್ ಫೆಸ್ಟಿವಲ್ ಆಫ್ ಮೆಲ್ಬೋರ್ನ್ (Indian Film Festival of Melbourne)"ನಲ್ಲಿ ಅತ್ಯುತ್ತಮ ನಟ ಮತ್ತು ನಟಿ ಪ್ರಶಸ್ತಿಯನ್ನು ಯಾರಿಗೆ ನೀಡಲಾಯಿತು?

ಅ) ನವಾಜುದ್ದೀನ್ ಸಿದ್ದಿಕಿ, ಸೋನಮ್ ಕಪೂರ್

ಆ) ರಣಬೀರ್ ಕಪೂರ್, ಪ್ರಿಯಾಂಕ ಚೋಪ್ರಾ

ಇ) ನವಾಜುದ್ದೀನ್ ಸಿದ್ದಿಕಿ, ಪ್ರಿಯಾಂಕ ಚೋಪ್ರಾ

ಈ) ಸಲ್ಮಾನ್ ಖಾನ್, ಕತ್ತಿನಾ ಕೈಫ್

ನವಾಜುದ್ದೀನ್ ಸಿದ್ದಿಕಿ, ಸೋನಮ್ ಕಪೂರ್

ಆಸ್ಟ್ರೇಲಿಯಾದ ಮೆಲ್ಬೋರ್ನ್ ನಲ್ಲಿ ನಡೆದ ಇಂಡಿಯನ್ ಫಿಲ್ಮ್ ಫೆಸ್ಟಿವಲ್ ಆಫ್ ಮೆಲ್ಬೋರ್ನ್ ನಲ್ಲಿ ಅತ್ಯುತ್ತಮ ನಟ ಪ್ರಶಸ್ತಿಯನ್ನು ರಾಮನ್ ರಾಘವ್ 2.0 ಚಿತ್ರದಲ್ಲಿನ ಅಭಿನಯಕ್ಕಾಗಿ ನವಾಜುದ್ದೀನ್ ಸಿದ್ದಿಕಿ ಅವರಿಗೆ ನೀಡಲಾಗಿದೆ. ನಿರ್ಜಾ ಚಿತ್ರದಲ್ಲಿನ ಅಭಿನಯಕ್ಕಾಗಿ ಸೋನಮ್ ಕಪೂರ್ ಅವರಿಗೆ ಅತ್ಯುತ್ತಮ ನಟಿ ಪ್ರಶಸ್ತಿಯನ್ನು ನೀಡಲಾಗಿದೆ. ಮಹಿಳಾ ಸಬಲೀಕರಣ ಇದು ಇಂಡಿಯನ್ ಫಿಲ್ಮ್ ಫೆಸ್ಟಿವಲ್ ಆಫ್ ಮೆಲ್ಬೋರ್ನ್-2016ನ ಧ್ಯೇಯವಾಕ್ಯ.

153. ರಿಯೋ ಒಲಿಂಪಿಕ್ಸ್‌ನಲ್ಲಿ ಭಾರತದ ಸಾಕ್ಷಿ ಮಲ್ಲಿಕ್ ಅವರು ಯಾರನ್ನು ಮಣಿಸುವ ಮೂಲಕ ಮಹಿಳೆಯರ ಕುಸ್ತಿ 58 ಕೆ.ಜಿ ಫ್ರೀ ಸ್ಟೈಲ್ ವಿಭಾಗದಲ್ಲಿ ಪದಕ ಗೆದ್ದರು?

ಅ) ರಟ್ಕೆವಿಚ್ ಯುಲಿಯ

ಆ) ಹೆರ್ಹಲ್ ಒಸನ

ಇ) ಐಸಿಲೂ ಟೈನೀಬೆಕೋವಾ

ಈ) ಕರ್ಯೊಕ ಅರೆನಾ

ಐಸಿಲೂ ಟೈನೀಬೆಕೋವಾ

ರಿಯೋ ಒಲಂಪಿಕ್ಸ್ ಮಹಿಳೆಯರ 58 ಕೆಜಿ ಫ್ರೀ ಸ್ಟೈಲ್ ಕುಸ್ತಿ ಸ್ಪರ್ಧೆಯಲ್ಲಿ ಸಾಕ್ಷಿ ಮಲಿಕ್ ಅವರು ಕಿರ್ಗಿಸ್ತಾನದ ಐಸಿಲೂ ಟೈನೀಬೆಕೋವಾ ಅವರನ್ನು 8-5 ಅಂತರದಿಂದ ಮಣಿಸಿ ಕಂಚಿನ ಪದಕ ಬಾಚಿಕೊಂಡರು. ಸಾಕ್ಷಿ ಮಲಿಕ್ ಒಲಿಂಪಿಕ್ಸ್ ಪದಕ ಜಯಿಸಿದ ಬಾರತದ ಮೊದಲ ಮಹಿಳಾ ಕುಸ್ತಿಪಟು ಹಾಗೂ ದೇಶದ ನಾಲ್ಕನೇ ಮಹಿಳಾ ಕ್ರೀಡಾಪಟು ಇದರೊಂದಿಗೆ ಒಲಿಂಪಿಕ್ಸ್ ನಲ್ಲಿ ಭಾರತ ಜಯಿಸಿದ ಪದಕದ ಸಂಖ್ಯೆ 25 ಕ್ಕೆ ಏರಿದೆ.

154. ವಿಶ್ವದ ಅತಿದೊಡ್ಡ ವಿಮಾನ "ಏರ್ ಲ್ಯಾಂಡರ್-10" ನ ಮೊದಲ ಪರೀಕ್ಷಾರ್ಥ ಹಾರಾಟವನ್ನು ಯಾವ ದೇಶದಲ್ಲಿ ನಡೆಸಲಾಯಿತು?

ಅ) ಚೀನಾ

ಆ) ರಷ್ಯಾ

www.karunaduexams.com

ಇ) ಇಂಗ್ಲೆಂಡ್

ಈ) ಅಮೆರಿಕಾ

ಇಂಗ್ಲೆಂಡ್

ವಿಶ್ವದ ಅತಿದೊಡ್ಡ ವಿಮಾನ "ಏರ್ ಲ್ಯಾಂಡರ್-10 (Airlander-10)"ನ ಮೊದಲ ಪರೀಕ್ಷಾರ್ಥ ಹಾರಾಟವನ್ನು ಕೇಂದ್ರ ಇಂಗ್ಲೆಂಡ್‌ನ ಕಾರ್ಡಿಂಗ್ಟನ್ ವಾಯುನೆಲೆಯಲ್ಲಿ ಯಶಸ್ವಿಯಾಗಿ ನಡೆಸಲಾಯಿತು. ಸರಕು ಸಾಗಣೆ ಸೇರಿದಂತೆ ವಾಣಿಜ್ಯವಲಯದಲ್ಲೂ ಬಳಸಬಹುದಾದ ಈ ವಿಮಾನವನ್ನು ಯುನೈಟೆಡ್ ಕಿಂಗ್ಡಮ್ ನ ಹೈಬ್ರೀಡ್ ಏರ್ ವೆಹಿಕಲ್ಸ್ ಅಭಿವೃದ್ದಿಪಡಿಸಿದೆ. ಏರ್ ಲ್ಯಾಂಡರ್-10 ಭಾಗಶಃ ವಿಮಾನ ಮತ್ತು ಭಾಗಶಃ ವಾಯುನೌಕೆಯಾಗಿದ್ದು, ಹೀಲಿಯಂ ಅನಿಲ ತುಂಬಲಾಗಿದೆ. ಏರ್‌ಲ್ಯಾಂಡರ್ 10 ವಿಮಾನ 92 ಮೀಟರ್ ಉದ್ದ ಮತ್ತು 43.5 ಮೀ ಅಗಲವಿದೆ. ಏರ್‌ಲ್ಯಾಂಡರ್ 4880 ಮೀಟರ್ ಎತ್ತರದವರೆಗೂ ಹಾರಬಲ್ಲದು ಮತ್ತು 148 ಕಿಲೋಮೀಟರ್ ವೇಗದಲ್ಲಿ ಚಲಿಸುವ ಸಾಮರ್ಥ್ಯ ಹೊಂದಿದೆ ಮತ್ತು 10 ಟನ್ ಭಾರವನ್ನು ಹೊತ್ತೊಯ್ಯುವ ಸಾಮರ್ಥ್ಯವನ್ನು ಹೊಂದಿದೆ.

155. ಇತ್ತೀಚೆಗೆ "ಎಡ್ಗರ್ ಲುಂಗು (Edgar Lungu)" ಅವರು ಯಾವ ದೇಶದ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ?

ಅ) ಇಥೋಪಿಯಾ

ಆ) ಜಾಂಬಿಯ

ಇ) ಕೀನ್ಯಾ

ಈ) ಜಿಂಬಾಂಬ್ವೆ

ಜಾಂಬಿಯ

ಎಡ್ಗರ್ ಲುಂಗು ಅವರು ಜಾಂಬಿಯಾದ ಅಧ್ಯಕ್ಷರಾಗಿ ಎರಡನೇ ಅವಧಿಗೆ ಆಯ್ಕೆಯಾಗಿದ್ದಾರೆ. ಲುಂಗು ಪ್ಯಾಟ್ರಿಯಾಟಿಕ್ ಫಂಟ್ ಪಕ್ಷದ ನಾಯಕರು. ಅಧ್ಯಕ್ಷ ಹುದ್ದೆಗೆ ನಡೆದ ಚುನಾವಣೆಯಲ್ಲಿ ಲುಂಗು ಶೇ 50.5% ಮತಗಳನ್ನು ಪಡೆಯುವ ಮೂಲಕ ಚುನಾವಣೆಯಲ್ಲಿ ವಿಜೇತರಾದರು.

156. "ದಿ ಫ್ಯೂಚರ್ ಆಫ್ ಇಂಟರ್ನೆಟ್ ಇನ್ ಇಂಡಿಯಾ (The Future of Internet in India)" ವರದಿಯನ್ನು ಯಾವ ಸಂಸ್ಥೆ ಬಿಡುಗಡೆಗೊಳಿಸಿದೆ?

ಅ) Nasscom

ಆ) Assocham

ಇ) RBI

ಈ) Nabard

Nasscom

www.karunaduexams.com

ದಿ ಫ್ಯೂಚರ್ ಇಂಟರ್ನೆಟ್ ಇನ್ ಇಂಡಿಯಾ ವರದಿಯನ್ನು ಇತ್ತೀಚೆಗೆ ನಾಸ್ಕಂ ಬಿಡುಗಡೆಗೊಳಿಸಿದೆ. ವರದಿ ಪ್ರಕಾರ ಗ್ರಾಮೀಣ ಭಾರತದಲ್ಲಿ ಇಂಟರ್ ನೆಟ್ ಬಳಸುವವರ ಸಂಖ್ಯೆ ಗಣನೀಯವಾಗಿ ಹೆಚ್ಚುತ್ತಿದ್ದು, 2020 ರ ವೇಳೆಗೆ ವೆಬ್ ಬಳಕೆದಾರರ ಸಂಖ್ಯೆ 730 ಮಿಲಿಯನ್ ದಾಟುವ ಸಾಧ್ಯತೆ ಇದೆ ಎಂದು ತಿಳಿದು ಬಂದಿದೆ. 2015 ರ ಅಂತ್ಯದ ವೇಳೆಗೆ ಭಾರತದಲ್ಲಿ ಇಂಟರ್ ನೆಟ್ ಬಳಕೆದಾರರ ಸಂಖ್ಯೆ 350 ಮಿಲಿಯನ್ ನಷ್ಟಾಗಿದೆ. ಇಂಟರ್ ನೆಟ್ ಬಳಕೆದಾರರ ವಿಷಯದಲ್ಲಿ ಚೀನಾ ನಂತರದ ಸ್ಥಾನದಲ್ಲಿರುವ ಭಾರತ, ಅತಿ ವೇಗವಾಗಿ ಬೆಳವಣಿಗೆಯಾಗುತ್ತಿರುವ ಮಾರುಕಟ್ಟೆಯಾಗಿದ್ದು ಹೊಸ ಬಳಕೆದಾರರ ಪೈಕಿ ಶೇ.75 ರಷ್ಟು ಮಂದಿ ಗ್ರಾಮೀಣ ಪ್ರದೇಶದವರಾಗಿದ್ದಾರೆ ಎಂದು ನಾಸ್ಕಾಮ್ ವರದಿ ತಿಳಿಸಿದೆ. ಹೆಚ್ಚುತ್ತಿರುವ ಇಂಟರ್ ನೆಟ್ ಬಳಕೆದಾರರ ಸಂಖ್ಯೆ ಇ-ಕಾಮರ್ಸ್, ಆನ್ ಲೈನ್ ಶಾಪಿಂಗ್ ಬೆಳವಣಿಗೆಗೂ ಕಾರಣವಾಗಲಿದ್ದು 2015 ರಲ್ಲಿ 17 ಬಿಲಿಯನ್ ಡಾಲರ್ ನಷ್ಟು ಮೌಲ್ಯವಿದ್ದ ಇ-ಕಾಮರ್ಸ್ ಮಾರುಕಟ್ಟೆ 2020 ವೇಳೆಗೆ 34 ಬಿಲಿಯನ್ ಗೆ ಏರಿಕೆಯಾಗಲಿದೆ ಎಂದು ನಿರೀಕ್ಷಿಸಲಾಗಿದೆ. ಇನ್ನು 2020 ರ ವೇಳೆಗೆ ಶೇ.70 ರಷ್ಟು ಜನತೆ ಆನ್ ಲೈನ್ ಮೂಲಕ ಶಾಪಿಂಗ್ ಮಾಡಿದರೆ ಶೇ.50 ರಷ್ಟು ಜನತೆ ಆನ್ ಲೈನ್ ಮೂಲಕ ಪ್ರಯಾಣ ಟಿಕೆಟ್ ಗಳನ್ನು ಕಾಯ್ದಿರಿಸುತ್ತಾರೆ ಎಂದು ನಾಸ್ಕಾಮ್ ಹೇಳಿದೆ

157. ಒಲಂಪಿಕ್ಸ್ ಫುಟ್ಬಾಲ್ ಇತಿಹಾಸದಲ್ಲಿ ಅತಿ ವೇಗದ ಗೋಲ್ ಗಳಿಸಿ ದಾಖಲೆ ನಿರ್ಮಿಸಿದ ಫುಟ್ಬಾಲ್ ಆಟಗಾರ____?

ಅ) ವುಕ್ ಬೆಕಿಕ್

ಆ) ನವಾಫ್ ಅಲ್ ಅಬೆದ್

ಇ) ನೇಮರ್

ಈ) ಜನಿನ್ ಮೆಕಿ

ನೇಮರ್

ಬ್ರೆಜಿಲ್‌ನ ಫುಟ್ಬಾಲ್ ಆಟಗಾರ ನೇಮರ್ ಹೊಂಡುರಾಸ್ ಜತೆ ನಡೆದ ರಿಯೋ ಒಲಿಂಪಿಕ್ಸ್ ಸೆಮಿಫೈನಲ್ ಪಂದ್ಯದಲ್ಲಿ ಆಟ ಪ್ರಾರಂಭವಾದ ಕೇವಲ 15 ಸೆಕೆಂಡುಗಳಲ್ಲಿ ಮೊದಲ ಗೋಲು ಬಾರಿಸಿ ಫುಟ್ಬಾಲ್ ಜಗತ್ತಿನ ವೇಗದ ಗೋಲು ಎಂಬ ವಿಶ್ವದಾಖಲೆ ಬರೆದರು. ಈ ಮೊದಲು ಕೆನಡಾದ ಜನಿನ್ ಬೆಕಿ ಆಸ್ಟ್ರೇಲಿಯ ವಿರುದ್ಧ 19 ಸೆಕೆಂಡುಗಳಲ್ಲಿ ಗಳಿಸಿದ್ದ ಗೋಲಿನ ದಾಖಲೆ ಅಳಿಸಿ ಹಾಕಿದ ನೇಮರ್ ಬ್ರೆಜಿಲ್ ತಂಡ ರಿಯೋ ಕಪ್ ಫೈನಲ್‌ಗೆ ಲಗ್ಗೆ ಇಡುವ ಮುನ್ನಡಿ ಬರೆದರು. ಈ ಪಂದ್ಯದಲ್ಲಿ ಬ್ರೆಜಿಲ್ ಹೊಂಡುರಾಸ್ ತಂಡವನ್ನು 6-0 ಗೋಲುಗಳಿಂದ ಬಗ್ಗುಬಡಿದು ಫೈನಲ್ ಪ್ರವೇಶಿಸಿತು.

158. ವಿವಾದಿತ “ಮ್ಯಿಟ್ಸೊನೆ ಅಣೆಕಟ್ಟು (Myitsone) ಯಾವ ದೇಶಕ್ಕೆ ಸಂಬಂಧಿಸಿದೆ?

ಅ) ಚೀನಾ

ಆ) ಮಯನ್ಮಾರ್

ಇ) ರಷ್ಯಾ

ಈ) ಜಪಾನ್



www.karunaduexams.com

ಮ್ಯಿಟ್ಸೊನೆ ಅಣೆಕಟ್ಟು

ಮ್ಯಿಟ್ಸೊನೆ ಅಣೆಕಟ್ಟು ಮಯನ್ಮಾರ್ ನ ದೊಡ್ಡ ಅಣೆಕಟ್ಟುಗಳಲ್ಲಿ ಒಂದಾಗಿದ್ದು, 2017ಕ್ಕೆ ಪೂರ್ಣಗೊಳ್ಳಲಿದೆ ಎಂದು ಹೇಳಲಾಗಿದೆ. ಚೀನಾದ ಸಹಯೋಗದೊಂದಿಗೆ ಈ ಅಣೆಕಟ್ಟನ್ನು ನಿರ್ಮಿಸಲಾಗುತ್ತಿದ್ದು, ವಿದ್ಯುತ್ ಉತ್ಪಾದಿಸುವುದು ಅಣೆಕಟ್ಟಿನ ಪ್ರಮುಖ ಉದ್ದೇಶ. ಅಪಾರ ಭೂಮಿ ಮುಳುಗಡೆಯಿಂದ ಮತ್ತು ಪರಿಸರ ಮೇಲಾಗುವ ಪರಿಣಾಮದಿಂದ ಈ ಅಣೆಕಟ್ಟಿಗೆ ವಿರೋಧ ವ್ಯಕ್ತವಾಗಿದೆ. ಅಲ್ಲದೇ ಚೀನಾ ಈ ಅಣೆಕಟ್ಟಿನಿಂದ ಹೆಚ್ಚು ವಿದ್ಯುತ್ ಪಡೆಯಲಿದೆ ಎಂಬ ಧೋರಣೆ ಈ ಯೋಜನೆಯನ್ನು ವಿವಾದಕ್ಕೆ ಎಡೆಮಾಡಿಕೊಟ್ಟಿದೆ.

159. ಯಾವ ದೇಶ ವಿಶ್ವದ ಅತಿ ಎತ್ತರದ ಮತ್ತು ಉದ್ದದ ಗಾಜಿನ ಸೇತುವೆಯನ್ನು ನಿರ್ಮಿಸಿದೆ?

ಅ) ಅಮೆರಿಕಾ

ಆ) ಚೀನಾ

ಇ) ಇರಾನ್

ಈ) ಸ್ವೀಡನ್

ಚೀನಾ

ಚೀನಾದ ಹುನಾನ್ ಪ್ರಾಂತದಲ್ಲಿರುವ ಜಾಂಗ್‌ಜಿಯಾಜಿ ನ್ಯಾಷನಲ್ ಫಾರೆಸ್ಟ್ ನಲ್ಲಿ ವಿಶ್ವದ ಅತಿ ಎತ್ತರದ ಹಾಗೂ ಉದ್ದದ ಗಾಜಿನ ಸೇತುವೆ ನಿರ್ಮಿಸಲಾಗಿದೆ. 430 ಮೀ. ಉದ್ದ ಹಾಗೂ 300 ಮೀ. ಎತ್ತರವಿರುವ ಈ ಸೇತುವೆ ಆರು ಮೀ. ಅಗಲವಿದೆ. ಮೂರು ಸ್ತರಗಳಲ್ಲಿ 99 ಪಾರದರ್ಶಕ ಗಾಜಿನ ಫಲಕಗಳನ್ನೊಳಗೊಂಡಿದೆ. ವಿನ್ಯಾಸ, ನಿರ್ಮಾಣ ಮತ್ತಿತರ ವಿಷಯಗಳಿಗೆ ಸಂಬಂಧಿಸಿ ಈ ಸೇತುವೆ 10 ವಿಶ್ವದಾಖಲೆಗಳನ್ನು ನಿರ್ಮಿಸಿದೆ ಎಂದು ಮೂಲಗಳು ತಿಳಿಸಿವೆ. ಪ್ರತಿ ದಿನ ಗರಿಷ್ಠ 8,000 ಪ್ರವಾಸಿಗರಿಗೆ ಸೇತುವೆ ದಾಟಲು ಅವಕಾಶ ಕಲ್ಪಿಸಲಾಗುವುದು.

160. ವಿಶ್ವ ಪತ್ರಿಕಾ ಸ್ವಾತಂತ್ರ್ಯ ಪ್ರಶಸ್ತಿ (World Press Freedom Award)ಯನ್ನು ಯಾವ ಸಂಸ್ಥೆ ನೀಡುತ್ತದೆ?

ಅ) ವಿಶ್ವಸಂಸ್ಥೆ

ಆ) ಯುನೆಸ್ಕೊ

ಇ) ಯುರೋಪಿಯನ್ ಒಕ್ಕೂಟ

ಈ) ವಿಶ್ವ ಪತ್ರಕರ್ತರ ಒಕ್ಕೂಟ

ಯುನೆಸ್ಕೊ

ವಿಶ್ವ ಪತ್ರಿಕಾ ಸ್ವಾತಂತ್ರ ದಿನದ (ಮೇ 3) ಅಂಗವಾಗಿ ಯುನೆಸ್ಕೊ ವಿಶ್ವ ಪತ್ರಿಕಾ ಸ್ವಾತಂತ್ರ್ಯ ಪ್ರಶಸ್ತಿಯನ್ನು 1997 ರಿಂದ ಪ್ರತಿ ವರ್ಷ ನೀಡುತ್ತಿದೆ. Guillermo Cano World Press Freedom Prize ಎಂತಲೂ ಕರೆಯಲಾಗುವ ಈ ಪ್ರಶಸ್ತಿಯನ್ನು ಪತ್ರಿಕಾ ಸ್ವಾತಂತ್ರ್ಯಕ್ಕೆ ಅಪಾರ ಸೇವೆ ನೀಡಿದ ವ್ಯಕ್ತಿ/ಸಂಸ್ಥೆಗಳಿಗೆ ನೀಡಲಾಗುತ್ತದೆ. ಇದುವರೆಗೂ ಭಾರತದ ಯಾವೊಬ್ಬ ಪತ್ರಕರ್ತರಿಗೂ ಪ್ರಶಸ್ತಿ ಲಭಿಸಿಲ್ಲ.

www.karunaduexams.com

161. ಭಾರತದ ಮೊದಲ "ವೈದ್ಯಕೀಯ ಉಪಕರಣಗಳ ಉತ್ಪಾದನಾ ಪಾರ್ಕ್ (medical devices manufacturing park)" ಯಾವ ರಾಜ್ಯದಲ್ಲಿ ತಲೆಯತ್ತಲಿದೆ?

ಅ) ಕೇರಳ

ಆ) ಹಿಮಾಚಲ ಪ್ರದೇಶ್

ಇ) ಆಂಧ್ರ ಪ್ರದೇಶ

ಈ) ಜಾರ್ಖಂಡ್

ಆಂಧ್ರ ಪ್ರದೇಶ

ದೇಶದ ಮೊದಲ ವೈದ್ಯಕೀಯ ಉಪಕರಣಗಳಿಗೆಂದೆ ಮೀಸಲಿಟ್ಟ "ವೈದ್ಯಕೀಯ ಉಪಕರಣಗಳ ಉತ್ಪಾದನಾ ಪಾರ್ಕ್" (AP Medical Technology Park)ಗೆ ಆಂಧ್ರಪ್ರದೇಶದಲ್ಲಿ ಶಂಕುಸ್ಥಾಪನೆ ಮಾಡಲಾಯಿತು. ಆಂಧ್ರ ಪ್ರದೇಶದ ಪೆಡ ಗಂಟ್ಯದ ಮಂಡಲ್ ನ ನುಡುಪುರುದಲ್ಲಿ 222 ಎಕರೆ ಪ್ರದೇಶದಲ್ಲಿ ಈ ಪಾರ್ಕ್ ಸ್ಥಾಪನೆಯಾಗಲಿದೆ. ದಕ್ಷಿಣ ಏಷ್ಯಾದಲ್ಲೇ ವೈದ್ಯಕೀಯ ಉಪಕರಣ ತಯಾರಿಕೆಗೆ ಮೀಸಲಿಟ್ಟಿರುವ ಮೊದಲ ಪಾರ್ಕ್ ಇದಾಗಿದ್ದು, ಇದರಿಂದ 25,000 ಉದ್ಯೋಗ ಸೃಷ್ಟಿಯಾಗಲಿದೆ ಎಂದು ಹೇಳಲಾಗಿದೆ.

162. ಈ ಕೆಳಗಿನ ಯಾರು "ಹಣಕಾಸು ಸ್ಥಿರತೆ ಮತ್ತು ಅಭಿವೃದ್ಧಿ ಕೌನ್ಸಿಲ್ (Financial Stability and Development Council)" ನ ಅಧ್ಯಕ್ಷರಾಗಿರುತ್ತಾರೆ?

ಅ) RBIನ ಗವರ್ನರ್

ಆ) ಕೇಂದ್ರ ಹಣಕಾಸು ಸಚಿವರು

ಇ) ಆರ್ಥಿಕ ಕಾರ್ಯದರ್ಶಿ

ಈ) SEBIಯ ಮುಖ್ಯಸ್ಥರು

ಕೇಂದ್ರ ಹಣಕಾಸು ಸಚಿವರು

ಕೇಂದ್ರ ಹಣಕಾಸು ಸಚಿವರು ಹಣಕಾಸು ಸ್ಥಿರತೆ ಮತ್ತು ಅಭಿವೃದ್ಧಿ ಕೌನ್ಸಿಲ್ ನ ಅಧ್ಯಕ್ಷರಾಗಿರುತ್ತಾರೆ. ಇದೊಂದು ಉನ್ನತ ಮಟ್ಟದ ಮಂಡಳಿಯಾಗಿದ್ದು, ದೇಶದಲ್ಲಿ ಆರ್ಥಿಕ ಸ್ಥಿರತೆಯನ್ನು ಕಾಪಾಡುವ ಜವಾಬ್ದಾರಿಯೊಂದಿಗೆ ಭಾರತ ಸರ್ಕಾರ ಸ್ಥಾಪಿಸಿದೆ. 2008 ರಘುರಾಮ್ ರಾಜನ್ ನೇತೃತ್ವದ ಸಮಿತಿ ಈ ಕೌನ್ಸಿಲ್ ಸ್ಥಾಪಿಸುವ ಬಗ್ಗೆ ಸರ್ಕಾರಕ್ಕೆ ಶಿಫಾರಸ್ಸು ಮಾಡಿತ್ತು. ಅದರಂತೆ 2010 ರಲ್ಲಿ ಅಂದಿನ ಹಣಕಾಸು ಸಚಿವರಾಗಿದ್ದ ಪ್ರಣಬ್ ಮುಖರ್ಜಿರವರು ಹಣಕಾಸು ಸ್ಥಿರತೆ ಮತ್ತು ಅಭಿವೃದ್ಧಿ ಕೌನ್ಸಿಲ್ ಕಾರ್ಯರೂಪಕ್ಕೆ ತಂದಿದ್ದರು. ದೇಶದಲ್ಲಿ ಆರ್ಥಿಕ ಸ್ಥಿರತೆ ಕಾಪಾಡುವುದು, ಆರ್ಥಿಕ ವಲಯ ಅಭಿವೃದ್ಧಿ ಸೇರಿದಂತೆ ಹಣಕಾಸು ನಿಯಮಗಳನ್ನು ರೂಪಿಸುವ ಕಾರ್ಯವನ್ನು ಈ ಕೌನ್ಸಿಲ್ ಮಾಡುತ್ತಿದೆ. ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾದ ಗವರ್ನರ್ ಸೇರಿದಂತೆ, ಮುಖ್ಯ ಆರ್ಥಿಕ ಸಲಹೆಗಾರರು, ಸೆಬಿ ಅಧ್ಯಕ್ಷರು, IRDA

www.karunaduexams.com

ಅಧ್ಯಕ್ಷರು, PFRDA ಅಧ್ಯಕ್ಷರು ಮತ್ತು ಪಾರ್ವಡ್ ಮಾರ್ಕೆಟಿಂಗ್ ಕಮೀಷನ್ ಅಧ್ಯಕ್ಷರುಗಳು ಈ ಕೌನ್ಸಿಲ್ ನ ಸದಸ್ಯರಾಗಿರುತ್ತಾರೆ.

163. ಇತ್ತೀಚೆಗೆ ಬಿಡುಗಡೆಗೊಂಡ "2016 ಫಾರ್ಚೂನ್ "ಚೇಂಜ್ ದಿ ವರ್ಲ್ಡ್" ಧನಾತ್ಮಕ ಸಾಮಾಜಿಕ ಪರಿಣಾಮ ಬೀರುವ ಸಂಸ್ಥೆಗಳ ಪಟ್ಟಿಯಲ್ಲಿ ಸ್ಥಾನ ಪಡೆದ ಭಾರತದ ಸಂಸ್ಥೆಗಳು ಯಾವುವು?

ಅ) ಗೋದ್ರೆಜ್ ಮತ್ತು ಸಿಪ್ಲಾ

ಆ) ಗೋದ್ರೆಜ್ ಮತ್ತು ಎಲ್&ಟಿ

ಇ) ಎಲ್&ಟಿ ಮತ್ತು ರೆಡ್ಡೀಸ್ ಲ್ಯಾಬೋರೆಟರಿ

ಈ) ರಿಲಾಯನ್ಸ್ ಸಮೂಹ ಮತ್ತು ಭಾರತಿ ಏರ್ಟೆಲ್

ಗೋದ್ರೆಜ್ ಮತ್ತು ಸಿಪ್ಲಾ

ಉತ್ತಮ ಸಮಾಜಕ್ಕಾಗಿ ತಮ್ಮ ಚಟುವಟಿಕೆಗಳ ಮೂಲಕ ಧನಾತ್ಮಕ ಸಾಮಾಜಿಕ ಪರಿಣಾಮ ಬೀರುವ ಜಾಗತಿಕ ಸಂಸ್ಥೆಗಳ ಪಟ್ಟಿಯನ್ನು ಫಾರ್ಚೂನ್ ನಿಯತಕಾಲಿಕೆ ಹೊರತಂದಿದ್ದು, ಭಾರತದ ಔಷಧೀಯ ದೈತ್ಯ ಸಿಪ್ಲಾ ಮತ್ತು ಗ್ರಾಹಕ ವಸ್ತುಗಳ ಕಂಪನಿ ಗೋದ್ರೆಜ್ ಪಟ್ಟಿಯಲ್ಲಿ ಸ್ಥಾನಪಡೆದುಕೊಂಡಿವೆ. 2016 ಫಾರ್ಚೂನ್ "ಚೇಂಜ್ ದಿ ವರ್ಲ್ಡ್" 50 ಜಾಗತಿಕ ಸಂಸ್ಥೆಗಳ ಪಟ್ಟಿಯಲ್ಲಿ ಸಿಪ್ಲಾ 46ನೇ ಸ್ಥಾನದಲ್ಲಿದ್ದರೆ, ಗೋದ್ರೆಜ್ 48ನೇ ಸ್ಥಾನದಲ್ಲಿದೆ. ಬ್ರಿಟನ್ ನ ಔಷಧೀಯ ದಿಗ್ಗಜ ಗ್ಲಾಕ್ಸೊಸ್ಮಿತ್ ಕ್ಲೈನ್ ಪಟ್ಟಿಯಲ್ಲಿ ಅಗ್ರಸ್ಥಾನವನ್ನು ಗಳಿಸಿದೆ.

164. ಇತ್ತೀಚೆಗೆ ನಿಧನರಾದ "ಗೋಬಿಂದ್ ತೇಜ್" ಯಾವ ಭಾಷೆಯ ಸಿನಿಮಾ ಕ್ಷೇತ್ರದಲ್ಲಿ ಪ್ರಸಿದ್ಧರಾಗಿದ್ದರು?

ಅ) ಪಂಜಾಬಿ

ಆ) ಮರಾಠಿ

ಇ) ಓಡಿಯಾ

ಈ) ತಮಿಳು

ಓಡಿಯಾ

ಖ್ಯಾತ ಓಡಿಯಾ ನಟ ಮತ್ತು ನಿರ್ದೇಶಕ ಗೋಬಿಂದ್ ತೇಜ್ ನಿಧನರಾದರು (88). ತಮ್ಮ 50 ವರ್ಷದ ವೃತ್ತಿ ಜೀವನದಲ್ಲಿ ನಟನಾಗಿ, ನಿರ್ದೇಶಕರಾಗಿ ಮತ್ತು ನಿರ್ಮಾಪಕರಾಗಿ ಓಡಿಯಾ ಸಿನಿಮಾ ಕ್ಷೇತ್ರಕ್ಕೆ ಅಪಾರ ಕೊಡುಗೆಯನ್ನು ನೀಡಿದ್ದರು. 1954 ರಲ್ಲಿ ಕೇದರ್ ಗೌರಿ ಚಿತ್ರದ ಮೂಲಕ ನಟನಾಗಿ ಪಾದರ್ಪಣೆ ಮಾಡಿ, 1979 ರಲ್ಲಿ ರಾಮಾಯಣ ಚಿತ್ರದ ಮೂಲಕ ನಿರ್ದೇಶಕರಾದರು. ಕೃಷ್ಣ ಸುಧಾಮ ಬಂಧನ್, ಸ್ಕೂಲ್ ಮಾಸ್ಟರ್ ಚಿತ್ರಗಳು ಅವರ ನಿರ್ದೇಶನದ ಸಾಮರ್ಥವನ್ನು ಬಿಂಬಿಸಿದ್ದ ಚಿತ್ರಗಳಲ್ಲಿ ಕೆಲವು. ಗೋಬಿಂದ್ ಓಡಿಶಾ ರಾಜ್ಯ ಸಿನಿಮಾ ಪ್ರಶಸ್ತಿ ಸೇರಿದಂತೆ ಅನೇಕ ಪ್ರಶಸ್ತಿಗಳಿಗೆ ಭಾಜನರಾಗಿದ್ದರು.

www.karunaduexams.com

165. ಯಾವ ರಾಜ್ಯದ ದೇಶದ ಮೊದಲ ಸಮಗ್ರ "ಕ್ರೈಂ ಅಪರಾಧ ಪತ್ತೆ ಜಾಲ ವ್ಯವಸ್ಥೆ"ಯನ್ನು ಇತ್ತೀಚೆಗೆ ಆರಂಭಿಸಿತು?

ಅ) ಗುಜರಾತ್

ಆ) ಹರಿಯಾಣ್

ಇ) ಮಹಾರಾಷ್ಟ್ರ

ಈ) ಕರ್ನಾಟಕ

ಮಹಾರಾಷ್ಟ್ರ

ದೇಶದ ಮೊದಲ ಸಮಗ್ರ "ಕ್ರೈಂ ಅಪರಾಧ ಪತ್ತೆ ಜಾಲ ವ್ಯವಸ್ಥೆ (Crime Criminal Tracking Network System)" ಮಹಾರಾಷ್ಟ್ರದಲ್ಲಿ ಆರಂಭಿಸಲಾಗಿದೆ. ಈ ವ್ಯವಸ್ಥೆಯಡಿ ರಾಜ್ಯದ ಎಲ್ಲಾ ಪೊಲೀಸ್ ಸ್ಟೇಷನ್ ಗಳನ್ನು ಒಂದಕ್ಕೊಂದು ಲಿಂಕ್ ಮಾಡುವ ಮೂಲಕ ಅವುಗಳ ವ್ಯಾಪ್ತಿಯಲ್ಲಾಗುವ ಅಪರಾಧಗಳ ಮಾಹಿತಿಯನ್ನು ತ್ವರಿತವಾಗಿ ರವಾನಿಸಿ ಅಪರಾಧ ಪ್ರಕರಣವನ್ನು ಸುಲಭವಾಗಿ ಪತ್ತೆಹಚ್ಚಬಹುದಾಗಿದೆ.

166. ಇತ್ತೀಚೆಗೆ ನಿಧನರಾದ "ಗುರ್ಡಿಯಲ್ ಸಿಂಗ್ (Gurdial Singh)" ಯಾವ ಭಾಷೆಯ ಖ್ಯಾತ ಸಾಹಿತಿ?

ಅ) ಗುಜರಾತಿ

ಆ) ಹಿಂದಿ

ಇ) ಪಂಜಾಬಿ

ಈ) ತೆಲುಗು

ಪಂಜಾಬಿ

ವಿಶ್ವ ಖ್ಯಾತಿ ಪಡೆದಿದ್ದ ಪಂಜಾಬಿ ಸಾಹಿತಿ ಗುರ್ಡಿಯಲ್ ಸಿಂಗ್ ನಿಧನರಾದರು. ಸಿಂಗ್ ಅವರು ಬರಹಗಾರರಾಗಿ, ಕಾದಂಬರಿಕಾರರಾಗಿ ಮತ್ತು ಸಣ್ಣಕಥೆಗಳ ಮೂಲಕ ಪಂಜಾಬಿ ಸಾಹಿತ್ಯ ಲೋಕಕ್ಕೆ ಶ್ಲಾಘನೀಯ ಕೊಡುಗೆ ನೀಡದ್ದರು. ಸಾಹಿತ್ಯ ಕ್ಷೇತ್ರಕ್ಕೆ ನೀಡುವ ಅತ್ಯುನ್ನತ ಪ್ರಶಸ್ತಿಯಾದ ಜ್ಞಾನಪೀಠ ಪ್ರಶಸ್ತಿಯನ್ನು ಪಡೆದುಕೊಂಡಿದ್ದರು.

167. ಕೇಂದ್ರ ಸರ್ಕಾರ ಇತ್ತೀಚೆಗೆ ಬಿಡುಗಡೆಗೊಳಿಸಿದ "TARANG" ಮೊಬೈಲ್ ತಂತಾಂಶ್ರ ಯಾವುದಕ್ಕೆ ಸಂಬಂಧಿಸಿದೆ?

ಅ) ಉಪಗ್ರಹ ತರಂಗ ಹಂಚಿಕೆ

ಆ) ವಿದ್ಯುತ್ ಪ್ರಸರಣ ಯೋಜನೆ

ಇ) ನದಿ ನೀರಿನ ಮಾಲಿನ್ಯ ಅಳೆಯಲು

ಈ) ಕೇಂದ್ರ ಸರ್ಕಾರ ಯೋಜನೆಗಳ ನಿರ್ವಹಣೆ

ವಿದ್ಯುತ್ ಪ್ರಸರಣ ಯೋಜನೆ



www.karunaduexams.com

ವಿದ್ಯುತ್, ಕಲ್ಲಿದ್ದಲು, ನವೀನ ಮತ್ತು ನವೀಕರಸಬಹುದಾದ ಸಚಿವಾಲಯದ ರಾಜ್ಯ ಸಚಿವ ಪಿಯೂಷ್ ಗೋಯಲ್ ಅವರು TARANG (Transmission App for Real Time Monitoring and Growth) ಮೊಬೈಲ್ ಅಪ್ಲೀಕೇಷನ್ ಬಿಡುಗಡೆಗೊಳಿಸಿದರು. ಇದರ ಅಡಿಯಲ್ಲಿ ನಿರ್ಮಾಣ ಹಂತದಲ್ಲಿರುವ ವಿದ್ಯುತ್ ಪ್ರಸರಣ ಯೋಜನೆಗಳ ಮಾಹಿತಿ ಕಲೆಹಾಕಿ ನಿರ್ವಹಣೆ ಮಾಡಲಾಗುತ್ತದೆ. ಅಂತರ ರಾಜ್ಯ ಹಾಗೂ ಆಂತರಿಕ-ರಾಜ್ಯ ವಿದ್ಯುತ್ ಪ್ರಸರಣ ವ್ಯವಸ್ಥೆಗಳ ಪ್ರಗತಿಯನ್ನು ಇದರಡಿ ನೋಡಬಹುದಾಗಿದೆ.

168. 2016 ಸಂಗೀತ್ ಮಾರ್ತಂಡ್ ಉಸ್ತದ್ ಚಾಂದ್ ಖಾನ್ ಜೀವಮಾನ ಸಾಧನೆ ಪ್ರಶಸ್ತಿಗೆ ಯಾರಿಗೆ ನೀಡಲಾಗುವುದು?

ಅ) ಪಂಡಿತ್ ಶಿವಕುಮಾರ್ ಶರ್ಮಾ

ಆ) ಪಂಡಿತ್ ರವಿಶಂಕರ್ ಗುರೂಜಿ

ಇ) ವ್ಯಾಸಮೂರ್ತಿ

ಈ) ತರುಣ್ ಭಟ್ಟಚಾರ್ಯ

ಪಂಡಿತ್ ಶಿವಕುಮಾರ್ ಶರ್ಮಾ

ಸಂತೂರ್ ಮಾಂತ್ರಿಕ ಪಂಡಿತ್ ಶಿವಕುಮಾರ್ ಶರ್ಮಾ ಅವರನ್ನು 2016 ಸಂಗೀತ್ ಮಾರ್ತಂಡ್ ಉಸ್ತದ್ ಚಾಂದ್ ಖಾನ್ ಜೀವಮಾನ ಸಾಧನೆ ಪ್ರಶಸ್ತಿಗೆ ಆಯ್ಕೆಮಾಡಲಾಗಿದೆ. ಪದ್ಮವಿಭೂಷಣ ಪಂಡಿತ್ ಶಿವಕುಮಾರ್ ಶರ್ಮಾ 1938 ರಲ್ಲಿ ಜಮ್ಮು ಜನಿಸಿದರು. ಜಮ್ಮು ಮತ್ತು ಕಾಶ್ಮೀರ ರಾಜ್ಯದ ಜಾನಪದ ವಾದ್ಯವಾದ ಸಂತೂರ್ ಮೂಲಕ ಭಾರತೀಯ ಶಾಸ್ತ್ರೀಯ ಸಂಗೀತ ನುಡಿಸಿದ ಮೊದಲ ಭಾರತೀಯ ಎಂದೇ ಇವರು ಪ್ರಸಿದ್ದರಾಗಿದ್ದಾರೆ. ದೆಹಲಿಯ ಸೂರ್ಸಾಗರ್ ಸೊಸೈಟಿ ಈ ಪ್ರಶಸ್ತಿಯನ್ನು ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತಾ ಮತ್ತು ನೃತ್ಯದಲ್ಲಿ ಸೇವೆ ಸಲ್ಲಿಸಿದವರಿಗೆ 1986 ರಿಂದ ಪ್ರತಿವರ್ಷ ನೀಡುತ್ತಿದೆ.

169. ರಿಯೋ ಒಲಂಪಿಕ್ಸ್ನ ಮಹಿಳಾ ಬ್ಯಾಡ್ಮಿಂಟನ್ ಸಿಂಗಲ್ಸ್ ಪಂದ್ಯದಲ್ಲಿ ಪ್ರಶಸ್ತಿ ಗೆದ್ದ ಕರೋಲಿನಾ ಮರಿಯಾ ಯಾವ ದೇಶದವರು?

ಅ) ರಷ್ಯಾ

ಆ) ಸರ್ಬಿಯಾ

ಇ) ಸ್ಪೇನ್

ಈ) ಜರ್ಮನಿ

ಸ್ಪೇನ್

ವಿಶ್ವದ ನಂ.1 ಬ್ಯಾಡ್ಮಿಂಟನ್ ಆಟಗಾರ್ತಿ ಸ್ಪೇನ್ನ ಕರೋಲಿನಾ ಮರಿಯಾ ರಿಯೋ ಒಲಂಪಿಕ್ಸ್ನ ಮಹಿಳಾ ಬ್ಯಾಡ್ಮಿಂಟನ್ ಸಿಂಗಲ್ಸ್ ಪಂದ್ಯದಲ್ಲಿ ಚಿನ್ನದ ಪದಕವನ್ನು ತಮ್ಮದಾಗಿಸಿಕೊಂಡರು. ಸಾಕಷ್ಟು ಕುತೂಹಲ ಕೆರಳಿಸಿದ್ದ ಪಂದ್ಯದಲ್ಲಿ

www.karunaduexams.com

ಭಾರತದ ಪಿ.ವಿ ಸಿಂಧು ಅವರನ್ನು ಮಣಿಸಿ ಪ್ರಶಸ್ತಿಯನ್ನು ಗೆದ್ದುಕೊಂಡರು. ಈ ಪಂದ್ಯದಲ್ಲಿ ಬೆಳ್ಳಿ ಪದಕ ಗೆಲ್ಲುವ ಮೂಲಕ ಈ ಸಾಧನೆ ಮಾಡಿದ ಭಾರತದ ಮೊದಲ ಕ್ರೀಡಾಪಟು ಎಂಬ ಹೆಗ್ಗಳಿಕೆಗೆ ಸಿಂಧು ಪಾತ್ರರಾಗಿದ್ದಾರೆ.

170. 2016 ತಮಿಳು ರತ್ನ ಪ್ರಶಸ್ತಿಯನ್ನು ಯಾರಿಗೆ ನೀಡಿ ಗೌರವಿಸಲಾಯಿತು?

ಅ) ಎಂ.ಎಸ್.ಸುಬ್ಬುಲಕ್ಷ್ಮಿ

ಆ) ರಜನಿಕಾಂತ್

ಇ) ಎ.ಆರ್.ರೆಹಮಾನ್

ಈ) ಕಮಲ್ ಹಾಸನ್

ಎ.ಆರ್.ರೆಹಮಾನ್

ವಿಶ್ವ ಪ್ರಸಿದ್ಧ ಸಂಗೀತ ನಿರ್ದೇಶಕ ಎ.ಆರ್.ರೆಹಮಾನ್ ಅವರಿಗೆ ತಮಿಳು ರತ್ನ ಪ್ರಶಸ್ತಿಯನ್ನು ನೀಡಿ ಗೌರವಸಿಲಾಗಿದೆ. ನ್ಯೂಯಾರ್ಕ್ ಮೂಲದ ತಮಿಳು ಸಂಗಮ್ ಈ ಪ್ರಶಸ್ತಿಯನ್ನು ನೀಡುತ್ತಿದೆ. ವಿಶ್ವ ಸಂಸ್ಥೆಯ ಸಾಮಾನ್ಯ ಸಭೆಯಲ್ಲಿ ಕರ್ನಾಟಕ ಶಾಸ್ತ್ರೀಯ ಸಂಗೀತ ಖ್ಯಾತಿಯ ಎಂ.ಎಸ್.ಸುಬ್ಬುಲಕ್ಷ್ಮಿ ರವರ ಜನ್ಮಶತಾಬ್ದಿ ಅನ್ವಯ ಏರ್ಪಡಿಸದ್ದ ಸಂಗೀತ ಕಾರ್ಯಕ್ರಮ ನಡೆಸಿಕೊಟ್ಟ ಬಳಿಕ ರೆಹಮಾನ್ ಅವರಿಗೆ ಪ್ರಶಸ್ತಿಯನ್ನು ನೀಡಲಾಯಿತು.

171. ಭಾರತೀಯ ರಿಸರ್ವ್ ಬ್ಯಾಂಕ್ (RBI)ನ ನೂತನ ಗವರ್ನರ್ ಆಗಿ ಯಾರು ನೇಮಕಗೊಂಡಿದ್ದಾರೆ?

ಅ) ಯು.ಆರ್.ಗಾಂಧಿ

ಆ) ಅರುಂಧತಿ ಭಟ್ಟಚಾರ್ಯ

ಇ) ಉರ್ಜಿತ್ ಪಟೇಲ್

ಈ) ಹೆಚ್.ಆರ್. ಖಾನ್

ಉರ್ಜಿತ್ ಪಟೇಲ್

ಭಾರತೀಯ ರಿಸರ್ವ್ ಬ್ಯಾಂಕ್ ಡೆಪ್ಯೂಟಿ ಗವರ್ನರ್ ಉರ್ಜಿತ್ ಪಟೇಲ್ RBIನ ನೂತನ ಗರ್ವನರ್ ಆಗಿ ನೇಮಕಗೊಂಡಿದ್ದಾರೆ. ಸಂಪುಟ ಕಾರ್ಯದರ್ಶಿ ನೇತೃತ್ವದ ಹಣಕಾಸು ಕ್ಷೇತ್ರದ ನಿಯಂತ್ರಣ ನೇಮಕಾತಿಗಳ ಹುಡುಕು ಸಮಿತಿ (Financial Sector Regulatory Appointments Search Committee (FSRASC)) ಶಿಫಾರಸ್ಸಿನ ಮೇರೆಗೆ ಇವರ ನೇಮಕಾತಿಯನ್ನು ಅಂತಿಮಗೊಳಿಸಲಾಗಿದೆ. ಪಟೇಲ್ RBIನ ಡೆಪ್ಯೂಟಿ ಗರ್ವನರ್ ಆಗಿ ಮೂರು ವರ್ಷಗಳಿಂದ ಕಾರ್ಯನಿರ್ವಹಿಸುತ್ತಿದ್ದಾರೆ. ಪ್ರಸ್ತುತ ಗವರ್ನರ್ ಆಗಿರುವ ರಘುರಾಮ್ ರಾಜನ್ ಅವಧಿ ಸೆಪ್ಟೆಂಬರ್ 4 ರಂದು ಮುಕ್ತಾಯಗೊಳ್ಳುವುದರಿಂದ ಅವರ ಸ್ಥಾನವನ್ನು ಪಟೇಲ್ ತುಂಬಲಿದ್ದಾರೆ. ಲಂಡನ್ ವಿಶ್ವವಿದ್ಯಾಲಯ ಮತ್ತು ಆಕ್ಸಪರ್ಡ್ ವಿವಿಯಿಂದ ಪದವಿ ಪಡೆದಿರುವ ಪಟೇಲ್ ಅವರು ಪ್ರತಿಷ್ಠಿತ ಯಾಲೇ ವಿಶ್ವವಿದ್ಯಾಲಯದಲ್ಲಿ ಅರ್ಥಶಾಸ್ತ್ರದಲ್ಲಿ ಪಿಎಚ್ ಡಿ ಪದವಿ ಪಡೆದಿದ್ದಾರೆ. ಪಟೇಲ್ ಭಾರತೀಯ ರಿಸರ್ವ್ ಬ್ಯಾಂಕ್ ನ 24ನೇ ಗವರ್ನರ್.

www.karunaduexams.com

172. 'ಟೆಕ್ಸಾಸ್ ವಿಮೆನ್ಸ್ ಹಾಲ್ ಆಫ್ ಫೇಮ್' ಸೇರ್ಪಡೆಗೊಳ್ಳಲಿರು ಭಾರತ ಮೂಲದ ಅಮೆರಿಕಾ ಮಹಿಳೆ ಯಾರು?

ಅ) ನೀರಾ ಟಂಡನ್

ಆ) ರೇಣು ಖತೋರ್

ಇ) ಸುಷ್ಮಾ ಸಿಂಗ್

ಈ) ಚಂದ್ರಕಲಾ ಯಾದವ್

ರೇಣು ಖತೋರ್

ಪ್ರತಿಷ್ಠಿತ ಹ್ಯೂಸ್ಟನ್ ವಿಶ್ವವಿದ್ಯಾಲಯದ (ಯುಎಚ್) ಚಾನ್ಸೆಲರ್ ಹಾಗೂ ಅಧ್ಯಕ್ಷರಾಗಿರುವ ಭಾರತ ಮೂಲದ ರೇಣು ಖತೋರ್ (61) ಅವರು 'ಟೆಕ್ಸಾಸ್ ವಿಮೆನ್ಸ್ ಹಾಲ್ ಆಫ್ ಫೇಮ್'ಗೆ ಸೇರ್ಪಡೆಗೊಳ್ಳಲಿದ್ದಾರೆ. ಅಮೆರಿಕದ ಎರಡನೇ ಅತಿ ದೊಡ್ಡ ರಾಜ್ಯಕ್ಕೆ ನೀಡಿದ ವಿಶಿಷ್ಟ ಕೊಡುಗೆಗಾಗಿ ಗುರುತಿಸಿ ಅವರನ್ನು 'ಟೆಕ್ಸಾಸ್ ವಿಮೆನ್ಸ್ ಹಾಲ್ ಆಫ್ ಫೇಮ್'ಗೆ ಆಯ್ಕೆಮಾಡಲಾಗಿದೆ. ಖತೋರ್ ಅಮೆರಿಕಾದ ಸಂಶೋಧನಾ ವಿವಿಗಳ ಸಾಲಿನಲ್ಲಿ ಮುಂಚೂಣಿಯಲ್ಲಿರುವ ಹ್ಯೂಸ್ಟನ್ ವಿಶ್ವವಿದ್ಯಾಲಯದ ಚಾನ್ಸೆಲರ್ ಆಗಿ ಆಯ್ಕೆಯಾದ ಮೊದಲ ಭಾರತ ಮೂಲದ ಸಂಜಾತೆ. ಉತ್ತರಪ್ರದೇಶದ ಫಾರೂಕಾಬಾದ್ ಜಿಲ್ಲೆಯಲ್ಲಿ ಜನಿಸಿದ ಖತೋರ್ ಅವರು 1973ರಲ್ಲಿ ಕಾನ್ಪುರ ವಿಶ್ವವಿದ್ಯಾಲಯದಲ್ಲಿ ಪದವಿ ಶಿಕ್ಷಣ ಪಡೆದವರು. ಇವರು ಹ್ಯೂಸ್ಟನ್ ವಿಶ್ವವಿದ್ಯಾಲಯದ 13ನೇ ಅಧ್ಯಕ್ಷರು ಮತ್ತು 8ನೇ ಚಾನ್ಸೆಲರ್.

173. "ಬ್ರಿಕ್ಸ್ ಮಹಿಳಾ ಸಂಸದರ ವೇದಿಕೆ (BRICS Women Parliamentarians Forum)" ಸಭೆಯನ್ನು ಯಾವ ನಗರದಲ್ಲಿ ಆಯೋಜಿಸಲಾಗಿತ್ತು?

ಅ) ಜೈಪುರ

ಆ) ಹೈದ್ರಾಬಾದ್

ಇ) ಪುಣೆ

ಈ) ಬೆಂಗಳೂರು

ಜೈಪುರ

ಬ್ರಿಕ್ಸ್ ಮಹಿಳಾ ಸಂಸದರ ವೇದಿಕೆಯ ಎರಡು ದಿನಗಳ ಸಭೆಗೆ ಲೋಕಸಭೆ ಸ್ಪೀಕರ್ ಸುಮಿತ್ರಾ ಮಹಜನ್ ಅವರು ರಾಜಸ್ತಾನದ ಜೈಪುರದಲ್ಲಿ ಉದ್ಘಾಟಿಸಿದರು. ಆಗಸ್ಟ್20 ಮತ್ತು 21 ರಂದು ನಡೆಯಲಿರುವ ಈ ಸಭೆಯಲ್ಲಿ ಬ್ರಿಕ್ಸ್ ರಾಷ್ಟ್ರಗಳ 42 ಪ್ರತಿನಿಧಿಗಳು ಭಾಗವಹಿಸಲಿದ್ದಾರೆ. ಬ್ರಿಕ್ಸ್ ರಾಷ್ಟ್ರಗಳೆಂದರೆ ಬ್ರೆಜಿಲ್, ರಷ್ಯಾ, ಭಾರತ, ಚೀನಾ ಮತ್ತು ದಕ್ಷಿಣ ಆಫ್ರಿಕಾ. ಈ ಸಭೆಗೆ ಬ್ರೆಜಿಲ್ ನ 5 ಮಹಿಳಾ ಸಂಸದರೆಯರು, ರಷ್ಯಾದ 3 ಸಂಸದರೆಯರು, ಭಾರತದಿಂದ 28, ಚೀನಾದಿಂದ 2 ಮತ್ತು ದಕ್ಷಿಣ ಆಫ್ರಿಕಾದಿಂದ 4 ಮಹಿಳಾ ಸಂಸದರೆಯರು ಭಾಗವಹಿಸಲಿದ್ದಾರೆ.

www.karunaduexams.com

174. ಇತ್ತೀಚೆಗೆ ಯಾವ ಸಮಿತಿ ಭಾರತದಲ್ಲಿ ಕಾರ್ಪೋರೇಟ್ ಬಾಂಡ್ ಮಾರುಕಟ್ಟೆ ಅಭಿವೃದ್ಧಿ (Development of Corporate Bond Market in India) ಕುರಿತು ತನ್ನ ವರದಿಯನ್ನು ಸಲ್ಲಿಸಿತು?

ಅ) ಯು.ಕೆ.ಸಿನ್ಹಾ ಸಮಿತಿ

ಆ) ಹೆಚ್.ಆರ್.ಖಾನ್ ಸಮಿತಿ

ಇ) ಉರ್ಜಿತ್ ಪಟೇಲ್ ಸಮಿತಿ

ಈ) ಯು.ಆರ್.ಗಾಂಧಿ ಸಮಿತಿ

ಹೆಚ್.ಆರ್.ಖಾನ್ ಸಮಿತಿ

ಭಾರತದಲ್ಲಿ ಕಾರ್ಪೋರೇಟ್ ಬಾಂಡ್ ಮಾರುಕಟ್ಟೆ ಅಭಿವೃದ್ಧಿ ಪರಾಮರ್ಶೆ ಮಾಡುವ ಸಲುವಾಗಿ ರಚಿಸಲಾಗಿದ್ದ ಹೆಚ್.ಆರ್.ಖಾನ್ ಸಮಿತಿ ತನ್ನ ವರದಿಯನ್ನು ಭಾರತೀಯ ರಿಸರ್ವ್ ಬ್ಯಾಂಕ್ ಗವರ್ನರ್ ರಘುರಾಮ್ ರಾಜನ್ ಅವರಿಗೆ ಸಲ್ಲಿಸಿತ್ತು. ದೇಶದಲ್ಲಿ ಕಾರ್ಪೋರೇಟ್ ಬಾಂಡ್ ಮಾರುಕಟ್ಟೆ ಅಭಿವೃದ್ಧಿ ಪಡಿಸುವ ಸಲುವಾಗಿ ಅಧ್ಯಯನ ನಡೆಸಿ ವರದಿ ಸಲ್ಲಿಸುವಂತೆ ಈ ಸಮಿತಿಯನ್ನು ಸೆಪ್ಟೆಂಬರ್ 2015ರಲ್ಲಿ ರಚಿಸಲಾಗಿತ್ತು. ವಿದೇಶ ಬಂಡವಾಳ ಹೂಡಿಕೆ ನಿಯಮ ಸಡಿಲಗೊಳಿಸುವುದು ಸೇರಿದಂತೆ ಸೆನ್ಸೆಕ್ಸ್ ನಿಫ್ಟಿ ಮಾದರಿಯಲ್ಲಿ ಕಾರ್ಪೋರೇಟ್ ಬಾಂಡ್ ಸೂಚ್ಯಂಕವನ್ನು ಅಳವಡಿಸಿಕೊಳ್ಳುವಂತೆ ಸಮಿತಿ ತನ್ನ ವರದಿಯಲ್ಲಿ ಶಿಫಾರಸ್ಸು ಮಾಡಿದೆ. ಅಲ್ಲದೇ FEMA ಕಾಯಿದೆಗು ತಿದ್ದುಪಡಿ ತರಲು ಸೂಚಿಸಿದೆ.

175. ಬಿಡುಗಡೆ ಸಿದ್ದಗೊಂಡಿರುವ "ಒನ್ ಇಂಡಿಯನ್ ಗರ್ಲ್" ಪುಸ್ತಕದ ಲೇಖಕರು ಯಾರು?

ಅ) ಚೇತನ್ ಭಗತ್

ಆ) ಸುಮನ್ ಅಗರವಾಲ್

ಇ) ವಿಕ್ರಂ ಸೇಠ್

ಈ) ಅರವಿಂದ್ ಅಡಿಗ

ಚೇತನ್ ಭಗತ್

ಒನ್ ಇಂಡಿಯನ್ ಗರ್ಲ್ ಖ್ಯಾತ ಇಂಗ್ಲಿಷ್ ಲೇಖಕ ಚೇತನ್ ಭಗತ್ ರ ಹೊಸ ಪುಸ್ತಕ. 'ಒನ್ ಇಂಡಿಯನ್ ಗರ್ಲ್' ಅಕ್ಟೋಬರ್ ಒಂದರಂದು ಮಾರುಕಟ್ಟೆಗೆ ಬರಲಿದೆ. 'ಫೈವ್ ಪಾಯಿಂಟ್ ಸಮ್‌ಒನ್', 'ಒನ್ ನೈಟ್ ಅಟ್ ದಿ ಕಾಲ್ ಸೆಂಟರ್', 'ದಿ ಥ್ರೀ ಮಿಸ್ಟೇಕ್ಸ್ ಆಫ್ ಮೈ ಲೈಫ್', 'ಟು ಸ್ಟೇಟ್ಸ್', 'ಹಾಫ್ ಗರ್ಲ್‌ಫ್ರೆಂಡ್' ಚೇತನ್ ಭಗತ್ ಅವರ ಜನಪ್ರಿಯ ಕಾದಂಬರಿಗಳು.

www.karunaduexams.com

176. ಯಾವ ದೇಶ ರಿಯೋ ಒಲಂಪಿಕ್ಸ್‌ನಲ್ಲಿ ಪುರುಷರ ಹಾಕಿಯಲ್ಲಿ ಚಿನ್ನ ಗೆಲ್ಲುವ ಮೂಲಕ ಒಲಂಪಿಕ್ಸ್ ಇತಿಹಾಸದಲ್ಲಿ ಮೊದಲ ಬಾರಿಗ ಹಾಕಿಯಲ್ಲಿ ಚಾಂಪಿಯನ್ ಆಗಿ ಹೊರಹೊಮ್ಮಿತು?

ಅ) ಬೆಲ್ಜಿಯಂ

ಆ) ಅರ್ಜೇಂಟೆನಾ

ಇ) ಸ್ಪೇನ್

ಈ) ಆಸ್ಟ್ರೇಲಿಯಾ

ಅರ್ಜೇಂಟೆನಾ

ಅರ್ಜೆಂಟೀನಾ ಪುರುಷರ ಹಾಕಿ ತಂಡದವರು ಒಲಿಂಪಿಕ್ಸ್‌ನಲ್ಲಿ ಚೊಚ್ಚಲ ಚಿನ್ನ ಗೆದ್ದು ಚಾರಿತ್ರಿಕ ಸಾಧನೆ ಮಾಡಿದ್ದಾರೆ. ಒಲಿಂಪಿಕ್ ಹಾಕಿ ಕ್ರೀಡಾಂಗಣದಲ್ಲಿ ನಡೆದ ಫೈನಲ್‌ನಲ್ಲಿ ಅರ್ಜೆಂಟೀನಾ ತಂಡ 4-2 ಗೋಲುಗಳಿಂದ ಬೆಲ್ಜಿಯಂ ವಿರುದ್ಧ ಗೆದ್ದಿತು. ಉಭಯ ತಂಡಗಳು ಇದೇ ಮೊದಲ ಬಾರಿಗೆ ಫೈನಲ್ ಪ್ರವೇಶಿಸಿದ್ದವು.

177. ಈ ಕೆಳಗಿನ ಯಾವ ಶೈಕ್ಷಣಿಕ ಸಂಸ್ಥೆ ನಮಾಮಿ ಗಂಗೆ ಯೋಜನೆಯಡಿ ಉತ್ತರ ಪ್ರದೇಶ ಐದು ಹಳ್ಳಿಗಳನ್ನು ದತ್ತು ಪಡೆಯುವ ಮೂಲಕ ಗಂಗಾ ಶುದ್ದೀಕರಣಕ್ಕೆ ಕೈಜೋಡಿಸಿತು?

ಅ) ಐಐಟಿ ಖರಗಪುರ್

ಆ) ಐಐಟಿ ಖಾನ್ಪುರ್

ಇ) ಐಐಎಸ್ಸಿ, ಬೆಂಗಳೂರು

ಈ) ಐಐಟಿ ರೂರ್ಕಿ

ಐಐಟಿ ಖಾನ್ಪುರ್

ಖಾನ್ಪುರ್ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (ಐಐಟಿ) ನಮಾಮಿ ಗಂಗೆ ಯೋಜನೆಯಡಿ ಉತ್ತರ ಪ್ರದೇಶದ ಐದು ಹಳ್ಳಿಗಳನ್ನು ದತ್ತುಪಡೆದುಕೊಂಡಿದೆ. ಉತ್ತರ ಪ್ರದೇಶದ ರಮೆಲ್ ನಗರ್, ಪ್ರತಪುರ್, ಹರಿ ಹಿಂದ್ಪುರ್, ಕೊರ ಕತಾರಿಯ ಮತ್ತು ಕತ್ರಿ ಲದ್ವ ಖೇರ ಗ್ರಾಮಗಳನ್ನು ದತ್ತು ಪಡೆಯಲಾಗಿದೆ. ಈ ಕಾರ್ಯಕ್ರಮದಡಿ ಐಐಟಿ ಖಾನ್ಪುರ್ ತನ್ನ ತಂತ್ರಜ್ಞಾನ ಬಳಸಿ ಗಂಗಾನದಿಗೆ ಚರಂಡಿ ನೀರು ಸೇರ್ಪಡೆಯಾಗುವುದನ್ನು ತಡೆಯಲಿದೆ. ಈ ಕಾರ್ಯವನ್ನು ಐಐಟಿ ಖಾನ್ಪುರ್ದ ಸಿವಿಲ್ ಎಂಜನಿಯರಿಂಗ್ ವಿಭಾಗವು ಕೈಗೊಳ್ಳಲಿದೆ. ನದಿ ನೀರಿಗೆ ಚರಂಡಿ ನೀರು ಸೇರ್ಪಡೆಗೊಳ್ಳದಂತೆ ಹಾಗೂ ನೀರಿನ ಗುಣಮಟ್ಟ ಮತ್ತು ಸ್ವಚ್ಚತೆಗೆ ಒತ್ತು ನೀಡಲಾಗುವುದು.

www.karunaduexams.com

178. ಭಾರತವನ್ನು ಹೊರತುಪಡಿಸಿ, ತಮಿಳು ಈ ಕೆಳಗಿನ ಯಾವ ದೇಶಗಳ ಅಧಿಕೃತ ಭಾಷೆಯಾಗಿದೆ?

ಅ) ಶ್ರೀಲಂಕಾ ಮತ್ತು ಸಿಂಗಾಪುರ

ಆ) ಶ್ರೀಲಂಕಾ ಮತ್ತು ಥಾಯ್ಲೆಂಡ್

ಇ) ಥಾಯ್ಲೆಂಡ್ ಮತ್ತು ಮಾರಿಷಸ್

ಈ) ಮಾರಿಷಸ್ ಮತ್ತು ಮಲೇಷಿಯಾ

ಶ್ರೀಲಂಕಾ ಮತ್ತು ಸಿಂಗಾಪುರ

ಭಾರತವನ್ನು ಹೊರತುಪಡಿಸಿ, ಶ್ರೀಲಂಕಾ ಮತ್ತು ಸಿಂಗಾಪುರದಲ್ಲಿ ತಮಿಳು ಅಧಿಕೃತ ಭಾಷೆಯಾಗಿದೆ. ಮಲೇಷಿಯಾ ಮತ್ತು ಮಾರಿಷಸ್ ನಲ್ಲಿ ತಮಿಳು ಅಲ್ಪಸಂಖ್ಯಾತ ಭಾಷೆಯಾಗಿದೆ.

179. ವಿಶ್ವ ಮಾನವತೆ ದಿನ (World Humanitarian DAy) ಯಾವ ದಿನದಂದು ಆಚರಿಸಲಾಗುತ್ತದೆ?

ಅ) ಆಗಸ್ಟ್ 16

ಆ) ಆಗಸ್ಟ್ 18

ಇ) ಆಗಸ್ಟ್ 19

ಈ) ಆಗಸ್ಟ್ 21

ಆಗಸ್ಟ್ 19

ವಿಶ್ವ ಮಾನವತೆ ದಿನವನ್ನು ಪ್ರತಿ ವರ್ಷ ಆಗಸ್ಟ್ 19 ರಂದು ಆಚರಿಸಲಾಗುತ್ತದೆ. 2003, ಆಗಸ್ಟ್ 19ರಲ್ಲಿ ಇರಾನ್ ನ ಬಾಗ್ದಾದ್ ನಲ್ಲಿರುವ ವಿಶ್ವಸಂಸ್ಥೆಯ ಕಚೇರಿ ಮೇಲೆ ಬಾಂಬ್ ದಾಳಿ ನಡೆಸಿದ ದಿನವನ್ನು ವಿಶ್ವ ಮಾನವತೆ ದಿನವೆಂದು ಆಚರಿಸಲಾಗುತ್ತಿದೆ. ಒಂದೇ ಮಾನವೀಯತೆ (One Humanity) ಎನ್ನುವುದು ಈ ವರ್ಷದ ವಿಶ್ವ ಮಾನವತೆ ದಿನದ ಧ್ಯೇಯವಾಕ್ಯ.

180. ಭಾರತದ ಅದಿತಿ ಅಶೋಕ ಅವರು ಯಾವ ಕ್ರೀಡೆಗೆ ಸಂಬಂಧಿಸಿದ್ದಾರೆ?

ಅ) ಈಜು

ಆ) ಅರ್ಚರಿ

ಇ) ಗಾಲ್ಫ್

ಈ) ಸೈಕ್ಲಿಂಗ್

ಅದಿತಿ ಅಶೋಕ್ ಭಾರತದ ವೃತ್ತಿಪರ ಗಾಲ್ಫ್ ಆಟಗಾರ್ತಿ. ಅದಿತಿ ರಿಯೋ ಒಲಂಪಿಕ್ಸ್ ನಲ್ಲಿ ಗಾಲ್ಫ್ನಲ್ಲಿ ಭಾಗವಹಿಸಿದ್ದ ಏಕೈಕ ಭಾರತೀಯ ಕ್ರೀಡಾಪಟು.  18ರ ಹರೆಯದ ಅದಿತಿ ಈ ಬಾರಿಯ ಒಲಿಂಪಿಕ್ಸ್‌ನಲ್ಲಿ ಪಾಲ್ಗೊಂಡಿರುವ ಭಾರತದ ಕ್ರೀಡಾಪಟುಗಳಲ್ಲಿ ಅತ್ಯಂತ ಕಿರಿಯ ಸ್ಪರ್ಧಿ ಎನಿಸಿದ್ದರು.

www.karunaduexams.com

181. ಕೆನಡ ಹೌಸ್ ಆಫ್ ಕಾಮನ್ಸ್ ನಲ್ಲಿ ಸರ್ಕಾರದ ನೂತನ ನಾಯಕಿಯಾಗಿ ನೇಮಕಗೊಂಡು, ಈ ಹುದ್ದೆಯನ್ನು ಅಲಂಕರಿಸಿದೆ ಮೊದಲ ಮಹಿಳೆ ಎನಿಸಿದ ಭಾರತ ಮೂಲದ ಸಿಖ್ ಮಹಿಳೆ ಯಾರು?

ಅ) ಬರ್ದಿಶ್ ಚಗ್ಗರ್

ಆ) ಅಮೃತ ಸಿಂಗ್

ಇ) ರೂಪಾಲಿ ಕೌರ್

ಈ) ಸೋನಾಲಿ ಕೊಚ್ಚರ್

ಬರ್ದಿಶ್ ಚಗ್ಗರ್

ಭಾರತ ಮೂಲದ ಸಿಖ್ ಮಹಿಳೆ ಕೆನಡ ಸಂಸತ್ ಸದಸ್ಯೆ ಬರ್ದಿಶ್ ಚಗ್ಗರ್ ಅವರು ಕೆನಡದ ಹೌಸ್ ಆಫ್ ಕಾಮನ್ಸ್‌ನಲ್ಲಿ ಸರ್ಕಾರದ ನೂತನ ನಾಯಕಿಯಾಗಿ ನೇಮಕಗೊಂಡಿದ್ದಾರೆ. ಆ ಮೂಲಕ ಕೆನಡಾದ ಇತಿಹಾಸದಲ್ಲೇ ಈ ಹುದ್ದೆಗೆ ನೇಮಕಗೊಂಡಿರುವ ಪ್ರಥಮ ಮಹಿಳೆ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಬರ್ದಿಶ್ ಚಗ್ಗರ್ ವಾಟರ್ಲೂ ಕ್ಷೇತ್ರದ ಸಂಸತ್ ಸದಸ್ಯೆ ಹಾಗೂ ಸಣ್ಣ ವ್ಯವಹಾರ ಮತ್ತು ಪ್ರವಾಸೋದ್ಯಮ ಸಚಿವೆಯಾಗಿದ್ದಾರೆ. ಕಳೆದ ವರ್ಷ ನಡೆದ ಚುನಾವಣೆಯಲ್ಲಿ ಜಯಗಳಿಸಿದ 19 ಮಂದಿ ಭಾರತೀಯ ಮೂಲದ ಅಭ್ಯರ್ಥಿಗಳ ಪೈಕಿ ಒಬ್ಬರಾಗಿದ್ದಾರೆ.

182. 2016 "ಯುವ ಮತದಾರರ ಹಬ್ಬ (Youth Voters Festival)" ಯಾವ ರಾಜ್ಯದಲ್ಲಿದೆ ನಡೆಯಲಿದೆ?

ಅ) ಅರುಣಾಚಲ ಪ್ರದೇಶ

ಆ) ಸಿಕ್ಕಿಂ

ಇ) ನಾಗಾಲ್ಯಾಂಡ್

ಈ) ಜಾರ್ಖಂಡ್

ನಾಗಾಲ್ಯಾಂಡ್

2016 ಯುವ ಮತದಾರರ ಹಬ್ಬ ನಾಗಾಲ್ಯಾಂಡ್ ನಲ್ಲಿ ಸೆಪ್ಟೆಂಬರ್ 5 ರಿಂದ 9 ರವರೆಗೆ ನಡೆಯಲಿದೆ. ಭಾರತ ಚುನಾವಣಾ ಆಯೋಗ ಪ್ರೇರಣೆಯಡಿ ಯುವ ಮತದಾರರ ಹಬ್ಬವನ್ನು ಆಯೋಜಿಸಲಾಗುತ್ತಿದೆ. ಮತದಾರರನ್ನು ನೋಂದಾಯಿಸಿಕೊಳ್ಳುವ ಮೂಲಕ ಚುನಾವಣೆಯಲ್ಲಿ ಗುಣಾತ್ಮಕವಾಗಿ ಭಾಗವಹಿಸಲು ಉತ್ತೇಜಿಸುವುದು ಹಾಗೂ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಮತದಾನದ ಪ್ರಾಮುಖ್ಯತೆಯನ್ನು ಸಾರ್ವಜನಿಕರಿಗೆ ತಿಳಿಸುವ ಉದ್ದೇಶದಿಂದ ಈ ಹಬ್ಬವನ್ನು ಹಮ್ಮಿಕೊಳ್ಳಲಾಗುತ್ತಿದೆ.

www.karunaduexams.com

183. ಯಾವ ನಗರದಲ್ಲಿ "2016 ಮೌಂಟೇನ್ ಎಕೋಸ್ ಸಾಹಿತ್ಯ ಉತ್ಸವ (Mountain Echoes Literary Festival)" ನಡೆಯಲಿದೆ?

ಅ) ಥಿಂಪು

ಆ) ಢಾಕಾ

ಇ) ಗುವಾಹಟಿ

ಈ) ಲಾಸಾ

ಥಿಂಪು

ಮೌಂಟೇನ್ ಎಕೋಸ್ ಸಾಹಿತ್ಯ ಉತ್ಸವದ 7ನೇ ಆವೃತ್ತಿ ಭೂತಾನ್ ಥಿಂಪುವಿನಲ್ಲಿ ಆಗಸ್ಟ್ 26 ರಿಂದ 28 ವರೆಗೆ ನಡೆಯಲಿದೆ. ಹವಾಮಾನ ಬದಲಾವಣೆ, ಮಹಿಳೆಪರ ಧ್ವನಿ ಮತ್ತು ಪ್ರವಾಸ ಬರವಣಿಗೆ ಮೇಲೆ ಈ ವರ್ಷದ ಉತ್ಸವದ ತಿರುಳಾಗಿದೆ. ಈ ಸಾಹಿತ್ಯ ಉತ್ಸವನ್ನು ಭಾರತ-ಭೂತಾನ್ ಫೌಂಡೇಷನ್ ಮತ್ತು ಸಿಯಾಹಿ ಸಾಹಿತ್ಯ ಸಂಸ್ಥೆ ಆಶ್ರಯದಲ್ಲಿ ಆಯೋಜಿಸಲಾಗುತ್ತಿದೆ.

184. ಪೆಟ್ರೋಲಿಯಂ ಸರಕುಗಳನ್ನು ಸಾಗಿಸುವ ಸಲುವಾಗಿ ಯಾವ ದೇಶದೊಂದಿಗೆ ಭಾರತ ಅಲ್ಪಾವಧಿಯ ಮಾರ್ಗ ಒಪ್ಪಂದಕ್ಕೆ ಇತ್ತೀಚೆಗೆ ಸಹಿ ಹಾಕಿತು?

ಅ) ನೇಪಾಳ

ಆ) ಭೂತಾನ್

ಇ) ಬಾಂಗ್ಲದೇಶ್

ಈ) ಮಯನ್ಮಾರ್

ಬಾಂಗ್ಲದೇಶ್

ಪೆಟ್ರೋಲಿಯಂ ಸರಕುಗಳನ್ನು ಸಾಗಿಸುವ ಸಲುವಾಗಿ ಅಲ್ಪಾವಧಿಯ ಮಾರ್ಗ ಒಪ್ಪಂದಕ್ಕೆ ಭಾರತ-ಬಾಂಗ್ಲದೇಶ ಇತ್ತೀಚೆಗೆ ಸಹಿಹಾಕಿದವು. ಒಪ್ಪಂದದ ಅನ್ವಯ ಅಸ್ಸಾಂನಿಂದ ತ್ರಿಪುರಗೆ ಪೆಟ್ರೋಲಿಯಂ ಸರಕುಗಳನ್ನು ಬಾಂಗ್ಲದೇಶದ ಗಡಿ ಮೂಲಕ ಸಾಗಿಸಲಾಗುವುದು. ಇತ್ತೀಚೆಗೆ ಬಿದ್ದ ಭಾರಿ ಮಳೆಯಿಂದ ತೀವ್ರ ಪ್ರವಾಹ ಉಂಟಾದ ಕಾರಣ NH44 ರಸ್ತೆ ಸಂಪೂರ್ಣ ಹಾಳಾಗಿದ್ದ ಕಾರಣ ಸಂಚಾರಕ್ಕೆ ತೀವ್ರ ಅಡ್ಡಿಯಾಗಿತ್ತು. ಒಪ್ಪಂದದಡಿ ಅಸ್ಸಾಂನಿಂದ ಬಾಂಗ್ಲದೇಶ ಗಡಿ ಮೂಲಕ ತ್ರಿಪುರಗೆ ಪೆಟ್ರೋಲಿಯಂ ಸರಕುಗಳನ್ನು ಸಾಗಿಸಲಾಗುವುದು.

www.karunaduexams.com

185. ರಿಯೋ ಒಲಂಪಿಕ್ಸ್ ನಲ್ಲಿ ಬ್ರೆಜಿಲ್ ತಂಡ ಯಾವ ದೇಶವನ್ನು ಮಣಿಸಿ ಪುಟ್ಬಾಲ್ ನಲ್ಲಿ ಚಿನ್ನದ ಪದಕ ಗೆದ್ದುಕೊಂಡಿತು?

ಅ) ಅಮೆರಿಕಾ

ಆ) ಅಂರ್ಜೇಟಿನಾ

ಇ) ಜರ್ಮನಿ

ಈ) ಫ್ರಾನ್ಸ್

ಜರ್ಮನಿ

ರಿಯೋ ಒಲಂಪಿಕ್ಸ್ ಫುಟ್‌ಬಾಲ್ ಪಂದ್ಯದಲ್ಲಿ ಆತಿಥೇಯ ಬ್ರೆಜಿಲ್ ತಂಡ ಜರ್ಮನಿ ತಂಡವನ್ನು ಮಣಿಸಿ ಪ್ರಸಕ್ತ ಸಾಲಿನ ಚಾಂಪಿಯನ್ ಪಟ್ಟದ ಜತೆಗೆ ಸ್ವರ್ಣ ಪದಕವನ್ನು ಗೆದ್ದುಕೊಂಡಿದೆ. ಒಲಿಂಪಿಕ್ಸ್ ಕ್ರೀಡಾಕೂಟದಲ್ಲಿ ಇದೇ ಮೊದಲ ಬಾರಿಗೆ ಬ್ರೆಜಿಲ್ ಸ್ವರ್ಣ ಪದಕ ಗೆದ್ದು ಸಂಭ್ರಮಿಸಿದೆ.

186. ಇತ್ತೀಚಿನ ವರದಿ ಪ್ರಕಾರ ತಂತ್ರಜ್ಞಾನ ಆಧಾರಿತ ಸ್ಟಾರ್ಟ್ ಆಪ್ ಉದ್ಯಮದಲ್ಲಿ ವಿಶ್ವದಲ್ಲಿ ಭಾರತ ಎಷ್ಟನೇ ಸ್ಥಾನವನ್ನು ಗಳಿಸಿದೆ?

ಅ) ಮೊದಲ ಸ್ಥಾನ

ಆ) ಎರಡನೇ ಸ್ಥಾನ

ಇ) ಮೂರನೇ ಸ್ಥಾನ

ಈ) ನಾಲ್ಕನೇ ಸ್ಥಾನ

ಮೂರನೇ ಸ್ಥಾನ

ಅಸ್ಸೋಚಾಮ್ ಅಸೋಷಿಯೇಶನ್ ಅರ್ಬಿಟ್ರೇಜ್ ಸಂಶೋಧನಾ ಸಂಸ್ಥೆ ಜಂಟಿಯಾಗಿ ನಡೆಸಿದ ಸಮೀಕ್ಷೆಯಲ್ಲಿ ತಂತ್ರಜ್ಞಾನ ಆಧಾರಿತ ಸ್ಟಾರ್ಟ್ ಅಪ್ ಉದ್ಯಮದ ಹುಟ್ಟಿನಲ್ಲಿ ಭಾರತ ಮೂರನೇ ಸ್ಥಾನವನ್ನು ಪಡೆದುಕೊಂಡಿದೆ. ಸಮೀಕ್ಷೆಯಲ್ಲಿ ಅಮೆರಿಕಾ ಪ್ರಥಮ ಮತ್ತು ಬ್ರಿಟನ್ ದ್ವಿತೀಯ ಸ್ಥಾನವನ್ನು ಪಡೆದುಕೊಂಡಿವೆ. ದೇಶದ ಶೇ 26% ಸ್ಟಾರ್ಟ್ ಆಪ್ ಗಳು ಬೆಂಗಳೂರಿನಲ್ಲಿದ್ದು ದೇಶದ ಅತಿಹೆಚ್ಚು ತಂತ್ರಜ್ಞಾನ ಆಧಾರಿತ ಸ್ಟಾರ್ಟ್ ಅಪ್ ಹೊಂದಿರುವ ನಗರವಾಗಿ ಹೊರಹೊಮ್ಮಿದೆ. ನಂತರದ ಸ್ಥಾನದಲ್ಲಿ ದೆಹಲಿ, ಮುಂಬೈ ಹಾಗೂ ಹೈದರಾಬಾದ್ ಕಾಣಿಸಿಕೊಂಡಿವೆ. ಅಮೆರಿಕದಲ್ಲಿ 47 ಸಾವಿರ ಸ್ಟಾರ್ಟ್ ಅಪ್‌ಗಳಿದ್ದರೆ, ಬ್ರಿಟನ್‌ನಲ್ಲಿ 4,500 ಸ್ಟಾರ್ಟ್ ಅಪ್‌ಗಳಿವೆ. ತೀವ್ರ ಪೈಪೋಟಿ ನೀಡುತ್ತಿರುವ ಭಾರತದಲ್ಲಿ 4200 ತಾಂತ್ರಿಕ ಉದ್ಯಮದ ಸ್ಟಾರ್ಟ್ ಅಪ್ ಕಂಪನಿಗಳು ಉದಯಿಸಿವೆ.

www.karunaduexams.com

187. ಇತ್ತೀಚೆಗೆ 8ನೇ ಭಾರತ-ಚೀನಾ ಹಣಕಾಸು ಮತ್ತು ಆರ್ಥಿಕ ಮಾತುಕತೆ (Financial and Economic Dialogue) ಎಲ್ಲಿ ನಡೆಯಿತು?

ಅ) ಬೀಜಿಂಗ್

ಆ) ನವದೆಹಲಿ

ಇ) ಶಾಂಘೈ

ಈ) ಮುಂಬೈ

ಬೀಜಿಂಗ್

ಚೀನಾದ ಬೀಜಿಂಗ್ ನಲ್ಲಿ 8ನೇ ಭಾರತ-ಚೀನಾ ಹಣಕಾಸು ಮತ್ತು ಆರ್ಥಿಕ ಮಾತುಕತೆ ಆಯೋಜಿಸಲಾಗಿತ್ತು. ಉಭಯ ದೇಶಗಳ ನಡುವೆ ಪರಸ್ಪರ ವ್ಯಾಪಾರ ಮತ್ತು ಆರ್ಥಿಕ ಸಹಕಾರ ವೃದ್ದಿಸುವ ಸಲುವಾಗಿ ಮಾತುಕತೆಯಲ್ಲಿ ಹೆಚ್ಚು ಒತ್ತುನೀಡಲಾಯಿತು. ಭಾರತದ ಆರ್ಥಿಕ ವ್ಯವಹಾರಗಳ ಕಾರ್ಯದರ್ಶಿ ಶಕ್ತಿಕಾಂತ್ ದಾಸ್ ಮತ್ತು RBI ಹಾಗೂ ಹಣಕಾಸು ಸಚಿವಾಲಯದ ಪ್ರತಿನಿಧಿಗಳ ತಂಡ ಈ ಮಾತುಕತೆಯಲ್ಲಿ ಭಾಗವಹಿಸಿದ್ದರು.

188. ಈ ಕೆಳಗಿನ ಯಾವುದು ವಿಶ್ವದ ಅತಿ ದೊಡ್ಡ ತೇವಭೂಮಿ (Largest Wetland) ಆಗಿದೆ?

ಅ) ಪಂಟಾನಲ್

ಆ) ಚಿಲ್ಕಾ

ಇ) ಎವರ್ ಗ್ಲೇಡ್ಸ್

ಈ) ಒಕವಾಂಗೊ

ದಕ್ಷಿಣ ಅಮೆರಿಕಾದಲ್ಲಿರುವ ಪಂಟಾನಲ್ ವಿಶ್ವದ ಅತಿದೊಡ್ಡ ತೇವಭೂಮಿ. ಸುಮಾರು 2,00,000 ಚದರ ಕಿ.ಮೀ ವಿಸ್ತೀರ್ಣ ಹೊಂದಿರುವ ಇದು ಬ್ರೆಜಿಲ್, ಪೆರುಗ್ವೆ ಮತ್ತು ಬೊಲಿವಿಯಾ ರಾಷ್ಟ್ರಗಳಲ್ಲಿ ಹರಡಿಕೊಂಡಿದೆ. ಶೇ 80% ರಷ್ಟು ವಿಸ್ತೀರ್ಣ ಬ್ರೆಜಿಲ್ ನಲ್ಲಿದೆ.

189. ಭಾರತದಲ್ಲಿ ಪರಿಸರ (ರಕ್ಷಣೆ) ಕಾಯಿದೆಯನ್ನು ಜಾರಿಗೆ ತಂದ ವರ್ಷ_____?

ಅ) 1982

ಆ) 1976

ಇ) 1986

ಈ) 1990

1986

ಪರಿಸರದ ರಕ್ಷಣೆ ಮತ್ತು ಅಭಿವೃದ್ದಿ ಪಡಿಸುವ ಉದ್ದೇಶದಿಂದ ಪರಿಸರ (ರಕ್ಷಣೆ) ಕಾಯಿದೆಯನ್ನು 1986 ರಲ್ಲಿ ಜಾರಿಗೆ ತರಲಾಗಿದೆ. ಈ ಕಾಯಿದೆಯನ್ನು ಭಾರತ ಸಂವಿಧಾನದ 253ನೇ ಅನುಚ್ಚೇದ ಅನ್ವಯ ಅಳವಡಿಸಿಕೊಳ್ಳಲಾಗಿದೆ.

www.karunaduexams.com

190. ಇತ್ತೀಚೆಗೆ "ಪಸಿಘಾಟ್ ಸುಧಾರಿತ ವಿಮಾನ ಇಳಿದಾಣ (Pasighat Advanced Landing Ground)" ಅನ್ನು ಯಾವ ರಾಜ್ಯದಲ್ಲಿ ಉದ್ಘಾಟಿಸಲಾಯಿತು?

ಅ) ಅರುಣಾಚಲ ಪ್ರದೇಶ

ಆ) ಅಸ್ಸಾಂ

ಇ) ತ್ರಿಪುರ

ಈ) ಮಣಿಪುರ

ಅರುಣಾಚಲ ಪ್ರದೇಶ

ಕೇಂದ್ರ ಸರ್ಕಾರ ಇತ್ತೀಚೆಗೆ ಅರುಣಾಚಲ ಪ್ರದೇಶದ ಪಸಿಘಾಟ್‌ನಲ್ಲಿ ಅಡ್ವಾನ್ಸಡ್ ಲ್ಯಾಂಡಿಂಗ್ ಗ್ರೌಂಡ್‌ನ್ನು (ಎಎಲ್‌ಜಿ) ಉದ್ಘಾಟಿಸಿದೆ. ಸುಖೋಯ್-30 ಯುದ್ಧ ವಿಮಾನವನ್ನು ಯಶಸ್ವಿ ಯಾಗಿ ಇಳಿಸಿದೆ. 1962ರ ಚೀನಾ-ಭಾರತದ ಯುದ್ಧದ ಬಳಿಕ ಪಸಿಘಾಟ್‌ನಲ್ಲಿ ಭಾರತ ಯುದ್ಧ ವಿಮಾನ ಲ್ಯಾಂಡಿಂಗ್ ಆಗಿರುವುದು ಇದೇ ಮೊದಲು. ಪಸಿಘಾಟ್ ಎಎಲ್‌ಜಿ, ಗಡಿ ಪ್ರದೇಶದಿಂದ 100 ಕಿ.ಮೀ. ದೂರದಲ್ಲಿದೆ. ಗಡಿಯಲ್ಲಿ ಚೀನಾ ನಡೆಸುವ ಚಟುವಟಿಕೆಗಳ ಮೇಲೆ ಸುಖೋಯ್ ಯುದ್ಧ ವಿಮಾನದ ಮೂಲಕ ಕಣ್ಣಿಡಬಹುದಾಗಿದೆ.

191. 2016 ರಾಜೀವ್ ಗಾಂಧಿ ಖೇಲ್ ರತ್ನ ಪ್ರಶಸ್ತಿಗೆ ಈ ಕೆಳಗಿನ ಯಾರು ಆಯ್ಕೆಯಾಗಿಲ್ಲ?

ಅ) ಪಿ.ವಿ.ಸಿಂಧು

ಆ) ದೀಪಾ ಕಮರ್ಕರ್

ಇ) ಜಿತು ರಾಯ್

ಈ) ಲಲಿತಾ ಬಾಬರ್

ಲಲಿತಾ ಬಾಬರ್

ರಿಯೊ ಒಲಿಂಪಿಕ್ಸ್ ನಲ್ಲಿ ಪದಕ ಗೆದ್ದ ಭಾರತೀಯ ಕ್ರೀಡಾಪಟುಗಳಾದ ಪಿವಿ ಸಿಂಧು, ಸಾಕ್ಷಿ ಮಲಿಕ್ ಮತ್ತು ಅತ್ಯುತ್ತಮ ಪ್ರದರ್ಶನ ನೀಡಿ ದೇಶದ ಜನರ ಮನ ಗೆದ್ದ ದೀಪಾ ಕರ್ಮಾಕರ್ ಹಾಗೂ ಜಿತು ರಾಯ್ 2016ರ ಖೇಲ್ ರತ್ನ ಪ್ರಶಸ್ತಿಗೆ ಆಯ್ಕೆಮಾಡಲಾಗಿದೆ. ಒಲಿಂಪಿಕ್ಸ್ ನಲ್ಲಿ ಮೊದಲ ಬಾರಿ ಬೆಳ್ಳಿ ಪದಕ ಗೆದ್ದ ಬ್ಯಾಡ್ಮಿಂಟನ್ ಆಟಗಾರ್ತಿ ಎಂಬ ಖ್ಯಾತಿಗೆ ಪಿವಿ ಸಿಂಧು ಪಾತ್ರರಾಗಿದ್ದರೆ, ಮಹಿಳೆಯರ ಕುಸ್ತಿಯಲ್ಲಿ ಮೊದಲ ಬಾರಿ ಕಂಚು ಗೆದ್ದು ಸಾಕ್ಷಿ ಮಲಿಕ್ ದಾಖಲೆ ಬರೆದಿದ್ದಾರೆ. ದೀಪಾ ಕರ್ಮಾಕರ್ ಜಿಮ್ನಾಸ್ಟಿಕ್ಸ್ ಆಟದಲ್ಲಿ ಫೈನಲ್ ಪ್ರವೇಶಿಸಿದ್ದರು ಮತ್ತು ಜಿತು ರಾಯ್ ಶೂಟಿಂಗ್‌ನಲ್ಲಿ ಪದಕ ಗೆಲ್ಲದಿದ್ದರೂ ಉತ್ತಮ ಪ್ರದರ್ಶನ ನೀಡಿದ್ದರು.



www.karunaduexams.com

192. ಯಾವ ರಾಜ್ಯ ತನ್ನ ರಾಜ್ಯ ಮೀನಿನ ಸಂರಕ್ಷಣೆಗೆ ಅಟ್ಲಾಸ್ ಸಿದ್ಧಪಡಿಸುವ ವಿನೂತನ ಪ್ರಯತ್ನ ಆರಂಭಿಸಿದ ದೇಶದ ಮೊದಲ ರಾಜ್ಯವೆನಿಸಿದೆ?

ಅ) ಕೇರಳ

ಆ) ಕರ್ನಾಟಕ

ಇ) ಮಧ್ಯ ಪ್ರದೇಶ

ಈ) ಗೋವಾ

ಮಧ್ಯ ಪ್ರದೇಶ

ಮಧ್ಯಪ್ರದೇಶ ಸರ್ಕಾರ ತನ್ನ "ರಾಜ್ಯ ಮೀನು" ನರ್ಮದಾ ಮಹ್ಸೀರ್ (ತೋರ್ ತೋರ್) ಸಂರಕ್ಷಣೆಗೆ ಅಟ್ಲಾಸ್ ಸಿದ್ಧಪಡಿಸುವ ವಿನೂತನ ಮಾರ್ಗ ಜಾರಿಗೆ ತಂದಿದೆ. ಅಪಾಯದ ಅಂಚಿನಲ್ಲಿರುವ ಈ ಮೀನು ತಳಿಯನ್ನು ಸಂರಕ್ಷಿಸಲು ಇಂಥ ಪ್ರಯೋಗ ಆರಂಭಿಸಿದ ದೇಶದ ಮೊದಲ ರಾಜ್ಯ. ಈ ಯೋಜನೆಯಡಿ ಅರಣ್ಯ ಇಲಾಖೆ ಈಗಾಗಲೇ ನರ್ಮದಾ ಮಹ್ಸೀರ್ ತಳಿಯ ಮೀನುಗಳಿರುವ ಪ್ರದೇಶಗಳನ್ನು ಗುರುತಿಸುವ ಕಾರ್ಯ ಆರಂಭಿಸಿದೆ. ಸಂರಕ್ಷಿತ ಪ್ರದೇಶಗಳಲ್ಲಿ ಗ್ಲೋಬಲ್ ಇನ್ಫಾರ್ಮೇಷನ್ ಸಿಸ್ಟಂ (ಜಿಐಎಸ್) ಮೂಲಕ ಮ್ಯಾಪಿಂಗ್ ಮಾಡಲು ನಿರ್ಧರಿಸಲಾಗಿದೆ.

193. ಪ್ರಧಾನಿ ಮೋದಿ ಮತ್ತು ಆಫ್ಘಾನ್ ಅಧ್ಯಕ್ಷ ಆಶ್ರಫ್ ಘಾನಿ ಜಂಟಿಯಾಗಿ ಸ್ಟೋರ್ ಪ್ಯಾಲೆಸ್ (Stor Palace)ಅನ್ನು ಯಾವ ನಗರದಲ್ಲಿ ಉದ್ಘಾಟಿಸಿದರು?

ಅ) ಮಝರ್-ಇ-ಷರೀಫ್

ಆ) ಕಾಬುಲ್

ಇ) ಹೆರತ್

ಈ) ಕಂದಹಾರ್

ಕಾಬುಲ್

ಆಫ್ಘಾನಿಸ್ತಾನದ ಕಾಬುಲ್ ನಗರದಲ್ಲಿ ನವೀಕರಿಸಲಾದ ಸ್ಟೋರ್ ಪ್ಯಾಲೆಸ್ ಅನ್ನು ನರೇಂದ್ರ ಮೋದಿ ಮತ್ತು ಆಫ್ಘಾನ್ ಅಧ್ಯಕ್ಷ ಆಶ್ರಫ್ ಘಾನಿ ಜಂಟಿಯಾಗಿ ವಿಡಿಯೋ ಸಂವಾದ ಮೂಲಕ ಲೋಕಾರ್ಪಣೆ ಮಾಡಿದರು. ಸ್ಟೋರ್ ಪ್ಯಾಲೆಸ್ ಅನ್ನು ಆಫ್ಘಾನಿಸ್ತಾನದ ದೊರೆ ಅಮನುಲ್ಲಾ ಖಾನ್ 1920 ರಲ್ಲಿ ನಿರ್ಮಿಸಿದ್ದರು. ಆದರೆ ೯೦ರ ದಶಕದಲ್ಲಿ ನಡೆದ ಯುದ್ದದಲ್ಲಿ ಈ ಪ್ಯಾಲೆಸ್ ಭಾಗಶಃ ಹಾಳಾಗಿತ್ತು.

www.karunaduexams.com

194. ರಿಯೋ ಒಲಂಪಿಕ್ಸ್ ನ ಪದಕ ಪಟ್ಟಿಯಲ್ಲಿ ಮೊದಲ ಮೂರು ಸ್ಥಾನ ಪಡೆದ ರಾಷ್ಟ್ರಗಳನ್ನು ಗುರುತಿಸಿ?

ಅ) ಅಮೆರಿಕಾ, ಚೀನಾ, ಬ್ರಿಟನ್

ಆ) ಅಮೆರಿಕಾ, ಬ್ರಿಟನ್, ಚೀನಾ

ಇ) ಅಮೆರಿಕಾ, ಚೀನಾ, ಜಪಾನ್

ಈ) ಅಮೆರಿಕಾ, ಬ್ರಿಟನ್, ಜಪಾನ್

ಅಮೆರಿಕಾ, ಬ್ರಿಟನ್, ಚೀನಾ

ರಿಯೋ ಒಲಂಪಿಕ್ಸ್ ಪದಕ ಪಟ್ಟಿಯಲ್ಲಿ ಅಮೆರಿಕ 121 ಪದಕಗಳನ್ನು ಗೆಲ್ಲುವ ಮೂಲಕ ಅಗ್ರಸ್ಥಾನ ಪಡೆದಿದೆ. ಇದರಲ್ಲಿ 46 ಚಿನ್ನ, 37 ಬೆಳ್ಳಿ ಮತ್ತು 38 ಕಂಚಿನ ಪದಕಗಳು ಒಳಗೊಂಡಿವೆ. ಬ್ರಿಟನ್ 27 ಚಿನ್ನದ ಪದಕದೊಂದಿಗೆ ಒಟ್ಟು 70 (ಬೆಳ್ಳಿ 23, ಕಂಚು 17) ಪದಕಗಳು ಪಡೆದರೆ ಚೀನಾ 26 ಬಂಗಾರದ ಪದಕ ಸಹಿತ, ಒಟ್ಟು 67 (ಬೆಳ್ಳಿ 18, ಕಂಚು 26) ಪದಕಗಳೊಂದಿಗೆ ಕ್ರಮವಾಗಿ ದ್ವಿತೀಯ ಮತ್ತು ತೃತೀಯ ಸ್ಥಾನವನ್ನು ಪಡೆದಿವೆ. ರಷ್ಯಾ (56 ಪದಕ) ಮತ್ತು ಜರ್ಮನಿ (42 ಪದಕ) ಟಾಪ್ ಐದರಲ್ಲಿರುವ ಇತರೆ ರಾಷ್ಟ್ರಗಳು. ಭಾರತ ಒಂದು ಬೆಳ್ಳಿ ಮತ್ತು ಒಂದು ಕಂಚಿನ ಪದಕ ಗೆಲ್ಲುವ ಮೂಲಕ 67ನೇ ಸ್ಥಾನವನ್ನು ಪಡೆದುಕೊಂಡಿದೆ.

195. ಫ್ರಾನ್ಸ್ ಸರ್ಕಾರ ನೀಡುವ ಪ್ರತಿಷ್ಠಿತ ಷೆವಾಲಿಯಾರ್ (Chevalier de l'Ordre des Arts et Lettres) ಪ್ರಶಸ್ತಿಗೆ ಆಯ್ಕೆಯಾದ ನಟ ಯಾರು?

ಅ) ಅಮಿತಾಬ್ ಬಚ್ಚನ್

ಆ) ಕಮಲ್ ಹಾಸನ್

ಇ) ರಜನೀಕಾಂತ್

ಈ) ಅಂಬರೀಷ್

ಕಮಲ್ ಹಾಸನ್

ಖ್ಯಾತ ತಮಿಳು ನಟ ಕಮಲ್ ಹಾಸನ್ ಅವರನ್ನು ಫ್ರಾನ್ಸ್ ನ ಅತ್ಯುನ್ನತ ಪ್ರಶಸ್ತಿಗಳಲ್ಲಿ ಒಂದಾದ ಷೆವಾಲಿಯಾರ್ (Chevalier de l'Ordre des Arts et Lettres) (Knight in the National Order Arts and Letters) ಪ್ರಶಸ್ತಿಗೆ ಆಯ್ಕೆಮಾಡಲಾಗಿದೆ. ಪ್ರಾನ್ಸ್‌ನ ಸಂಸ್ಕೃತಿ ಮತ್ತು ಸಂವಹನ ಇಲಾಖೆ ಈ ಪ್ರಶಸ್ತಿಯನ್ನು ನೀಡುತ್ತಿದೆ. ಕಮಲ್ ಹಾಸನ್ ಈ ಪ್ರಶಸ್ತಿಯನ್ನು ಪಡೆಯಲಿರುವ ಎರಡನೇ ತಮಿಳು ಚಿತ್ರ ನಟರಾಗಿದ್ದಾರೆ. ಈ ಹಿಂದೆ 1995ರಲ್ಲಿ ತಮಿಳು ಚಿತ್ರ ನಟ ಶಿವಾಜಿ ಗಣೇಶನ್ ಈ ಪ್ರಶಸ್ತಿಗೆ ಆಯ್ಕೆಯಾಗಿದ್ದರು.

www.karunaduexams.com

196. ಕೇಂದ್ರ ವಿದ್ಯುತ್ ಪ್ರಾಧಿಕಾರ ಇತ್ತೀಚೆಗೆ ಅನುಮೋದನೆ ನೀಡಿದ “1000 ಮೆ.ವ್ಯಾ ಟರ್ಗ ಜಲವಿದ್ಯುತ್ ಯೋಜನೆ” ಯಾವ ರಾಜ್ಯಕ್ಕೆ ಸಂಬಂಧಿಸಿದೆ?

ಅ) ಪಶ್ಚಿಮ ಬಂಗಾಳ

ಆ) ಆಂಧ್ರ ಪ್ರದೇಶ

ಇ) ತೆಲಂಗಣ

ಈ) ಅಸ್ಸಾಂ

ಪಶ್ಚಿಮ ಬಂಗಾಳ

ಪಶ್ಚಿಮ ಬಂಗಾಳದ ಪುರುಲಿಯ ಜಿಲ್ಲೆಯಲ್ಲಿ 1000 ಮೆ.ವ್ಯಾಟ್ ಸಾಮರ್ಥ್ಯದ ಟರ್ಗ ಜಲವಿದ್ಯುತ್ ಯೋಜನೆ (Turga Hydel Power Project) ಅನುಷ್ಟಾನಗೊಳ್ಳಲಿದೆ. ರೂ 4,500 ಕೋಟಿಯ ಈ ಯೋಜನೆಗೆ ಕೇಂದ್ರ ವಿದ್ಯುತ್ ಪ್ರಾಧಿಕಾರ ಅನುಮೋದನೆ ನೀಡಿದ್ದು, ಪರಿಸರ ಇಲಾಖೆ ಅನುಮೋದನೆ ನೀಡಿದ ಮೇಲೆ ಕಾಮಗಾರಿ ಆರಂಭಿಗೊಳ್ಳಲಿದೆ.

197. ಇತ್ತೀಚೆಗೆ ಸುದ್ದಿಯಲ್ಲಿದ್ದ ಬವರ್-373 (Bavar-373) ದೂರಗಾಮಿ ಕ್ಷಿಪಣಿ ರಕ್ಷಣಾ ವ್ಯವಸ್ಥೆಯನ್ನು ಯಾವ ದೇಶ ಅಭಿವೃದ್ದಿಪಡಿಸಿದೆ?

ಅ) ರಷ್ಯಾ

ಆ) ಇರಾನ್

ಇ) ಉತ್ತರ ಕೊರಿಯಾ

ಈ) ಚೀನಾ

ಇರಾನ್

ಇರಾನ್ ಹೊಸ ಬವರ್-373 ದೂರಗಾಮಿ ಕ್ಷಿಪಣಿ ರಕ್ಷಣಾ ವ್ಯವಸ್ಥೆಯನ್ನು ಅಭಿವೃದ್ದಿಪಡಿಸಿದ್ದು, ಇತ್ತೀಚೆಗೆ ಇದರ ಚಿತ್ರಗಳನ್ನು ಬಿಡುಗಡೆಗೊಳಿಸಿದೆ. ಇರಾನ್ ಮೇಲೆ ಅಂತಾರಾಷ್ಟ್ರೀಯ ನಿರ್ಬಂಧ ಹೇರಿದ್ದ ವೇಳೆಯಲ್ಲಿ ಇದನ್ನು ಅಭಿವೃದ್ದಿಪಡಿಸಲಾಗಿತ್ತು ಎನ್ನಲಾಗಿದೆ. ರಷ್ಯಾದ ಎಸ್-300 ಕ್ಷಿಪಣೆ ವ್ಯವಸ್ಥೆಯ ಪರ್ಯಾಯವಾಗಿ ಇರಾನ್ ಇದನ್ನು ಅಭಿವೃದ್ದಿಪಡಿಸಿದೆ. ಅಂತಾರಾಷ್ಟ್ರೀಯ ನಿರ್ಬಂಧ ಹೇರಿದ್ದ ಹಿನ್ನಲೆಯಲ್ಲಿ ರಷ್ಯಾ ಎಸ್-300 ಕ್ಷಿಪಣೆ ವ್ಯವಸ್ಥೆಯನ್ನು 2010 ರಿಂದ ಇರಾನ್ ಗೆ ಸರಬರಾಜು ಮಾಡುವುದನ್ನು ನಿಲ್ಲಿಸಿತ್ತು.

198. ಯಾವ ದೇಶದ ಮಹಿಳಾ ತಂಡ ಒಲಂಪಿಕ್ಸ್ ಬ್ಯಾಸ್ಕೆಟ್ ಬಾಲ್ ನಲ್ಲಿ ಸತತವಾಗಿ ಆರು ಬಾರಿ ಚಿನ್ನ ಗೆಲ್ಲುವ ಮೂಲಕ ದಾಖಲೆ ನಿರ್ಮಿಸಿದೆ?

ಅ) ಸ್ಪೇನ್

ಆ) ಅಮೆರಿಕಾ

ಇ) ಬ್ರೆಜಿಲ್

www.karunaduexams.com

ಈ) ಚೀನಾ

ಅಮೆರಿಕಾ

ಅಮೆರಿಕದ ಮಹಿಳಾ ತಂಡ ರಿಯೊ ಒಲಿಂಪಿಕ್ಸ್ನ ಬ್ಯಾಸ್ಕೆಟ್ಬಾಲ್ನಲ್ಲಿ ಚಿನ್ನ ಗೆದ್ದು ಐತಿಹಾಸಿಕ ಸಾಧನೆ ಮಾಡಿದೆ. ಒಲಂಪಿಕ್ಸ್ ಫೈನಲ್ನಲ್ಲಿ ಅಮೆರಿಕ 101-72 ರಲ್ಲಿ ಸ್ಪೇನ್ ತಂಡವನ್ನು ಮಣಿಸಿತು. ಅಮೆರಿಕ ಮಹಿಳೆಯರು ಒಲಿಂಪಿಕ್ಸ್ನಲ್ಲಿ ಗೆದ್ದ ಸತತ ಆರನೇ ಚಿನ್ನ ಇದು. ಅಮೆರಿಕ ತಂಡ 1992ರ ಒಲಿಂಪಿಕ್ ಕೂಟದ ಸೆಮಿಫೈನಲ್ನಲ್ಲಿ ಕೊನೆಯದಾಗಿ ಸೋಲು ಅನುಭವಿಸಿತ್ತು. ಬಳಿಕ ನಡೆದ ಆರು ಒಲಿಂಪಿಕ್ಸ್ಗಳಲ್ಲಿ ಒಮ್ಮೆಯೂ ಸೋಲು ಅನುಭವಿಸಿಲ್ಲ.

199. ಯಾವ ರಾಜ್ಯದಲ್ಲಿ ಈಚೆಗೆ ಚೀನಾದ "ಚೀನಾ ರೈಲ್ವೆ ರೋಲಿಂಗ್ ಸ್ಟಾಕ್ ಕಾರ್ಪೊರೇಷನ್ನ (ಸಿಆರ್ಆರ್ಸಿ)" ಲೋಕೋಮೋಟಿವ್ ಎಂಜಿನ್ ನಿರ್ಮಾಣ ಮತ್ತು ದುರಸ್ತಿ ಮಾಡುವ ಘಟಕವನ್ನು ಆರಂಭಿಸಿದೆ?

ಅ) ಮಹಾರಾಷ್ಟ್ರ

ಆ) ಗುಜರಾತ್

ಇ) ಹರಿಯಾಣ

ಈ) ಪಂಜಾಬ್

ಹರಿಯಾಣ

ಹರಿಯಾಣದಲ್ಲಿ ರೈಲ್ವೆ ಲೋಕೋಮೋಟಿವ್ ಎಂಜಿನ್ ನಿರ್ಮಾಣ ಮತ್ತು ದುರಸ್ತಿ ಮಾಡುವ ಜಂಟಿ ಸಹಭಾಗಿತ್ವದ ಸಂಸ್ಥೆಯನ್ನು ಚೀನಾದ ಅತ್ಯಂತ ವೇಗದ ರೈಲು ಓಡಿಸುವ ಕಂಪೆನಿ ಚೀನಾ ರೈಲ್ವೆ ರೋಲಿಂಗ್ ಸ್ಟಾಕ್ ಕಾರ್ಪೊರೇಷನ್ನ (ಸಿಆರ್ಆರ್ಸಿ) ಹರಿಯಾಣದಲ್ಲಿ ಆರಂಭಿಸಿದೆ. ಮೇಕ್ ಇನ್ ಇಂಡಿಯಾದಡಿ ರೈಲು ಸಾರಿಗೆ ಬಿಡಿಭಾಗಗಳ ತಯಾರಿಕೆಗೆ ಬಂಡವಾಳ ಹೂಡಿದ ಮೊದಲ ವಿದೇಶಿ ಕಂಪೆನಿ ಇದಾಗಿದೆ. ರೂ 425.65 ಕೋಟಿ ಬಂಡವಾಳವನ್ನು ಹೂಡಿದ್ದು, ಶೇ 51 ಷೇರನ್ನು ಚೀನಾ ಹೊಂದಿದೆ.

200. ಪ್ರತಿಷ್ಠಿತ ವ್ಯಾಸ ಸಮ್ಮಾನ್ ಪ್ರಶಸ್ತಿ-2015, ಯಾರಿಗೆ ನೀಡಿ ಗೌರವಿಸಲಾಯಿತು?

ಅ) ವಿ.ಕೆ.ದುಗ್ಗಾಲ್

ಆ) ಸುನೀತಾ ಜೈನ್

ಇ) ಕೆ.ಎನ್.ತ್ರಿಪಾಠಿ

ಈ) ಮೃಣಲ್ ಪಾಂಡೆ

ಸುನೀತಾ ಜೈನ್

ಖ್ಯಾತ ಹಿಂದಿ ಲೇಖಕಿ, ಸಂಶೋಧಕಿ ಸುನೀತಾ ಜೈನ್ ಅವರಿಗೆ ಪ್ರತಿಷ್ಠಿತ ವ್ಯಾಸ ಸಮ್ಮಾನ್ ಪ್ರಶಸ್ತಿಯನ್ನು ಪ್ರಧಾನ ಮಾಡಲಾಯಿತು. ಸುನೀತಾ ಜೈನ್ ಅವರ 'ಕ್ಷಮಾ' ಕವನ ಸಂಕಲನ 2015ರ ಪ್ರತಿಷ್ಠಿತ 'ವ್ಯಾಸ ಸಮ್ಮಾನ' ಪ್ರಶಸ್ತಿಗೆ

www.karunaduexams.com

ಆಯ್ಕೆಮಾಡಲಾಗಿತ್ತು. ಪ್ರಶಸ್ತಿಯನ್ನು ಕೆ.ಕೆ. ಬಿರ್ಲಾ ಫೌಂಡೇಷನ್ ಸ್ಥಾಪಿಸಿದ್ದು, ಹಿಂದಿ ಸಾಹಿತ್ಯಕ್ಕೆ ಅಸಾಧಾರಣ ಕೊಡುಗೆ ನೀಡಿದವರಿಗೆ ಈ ಪ್ರಶಸ್ತಿ ನೀಡಲಾಗುತ್ತದೆ. ಈ ಪ್ರಶಸ್ತಿ ₹2.50 ಲಕ್ಷ ಮೊತ್ತವನ್ನೊಳಗೊಂಡಿದೆ. ಖ್ಯಾತ ಸಾಹಿತಿ ವಿಶ್ವನಾಥ್ ಪ್ರಸಾದ್ ತಿವಾರಿ ಅವರನ್ನೊಳಗೊಂಡ ಸಮಿತಿ ಈ ಕೃತಿಯನ್ನು ಆಯ್ಕೆ ಮಾಡಿತ್ತು.

201. ಜಗತ್ತಿನಲ್ಲೇ ಪ್ರಪ್ರಥಮ ಬಾರಿಗೆ ಯಾವ ರಾಷ್ಟ್ರ ಕುಷ್ಠರೋಗ ಪ್ರತಿರೋಧಕ ಲಸಿಕೆಯನ್ನು ಅಭಿವೃದ್ಧಿಪಡಿಸಿದೆ?

ಅ) ಭಾರತ

ಆ) ಚೀನಾ

ಇ) ಥಾಯ್ಲೆಂಡ್

ಈ) ರಷ್ಯಾ

ಭಾರತ

ಜಗತ್ತಿನಲ್ಲೇ ಪ್ರಥಮಬಾರಿಗೆ ಭಾರತ ಕುಷ್ಠರೋಗ ಪ್ರತಿರೋಧಕ ಲಸಿಕೆಯನ್ನು ಅಭಿವೃದ್ಧಿ ಪಡಿಸಿದೆ. ಮೈಕೋಬ್ಯಾಕ್ಟೀಯಿಂ ಇಂಡಿಕಸ್ ಪ್ರಣಿ (Mycobacterium indicus pranii (MIP)) ಹೆಸರಲಿನ ಲಸಿಕೆಯನ್ನು ದೆಹಲಿಯ ನ್ಯಾಶನಲ್ ಇನ್ಸ್ಟಿಟ್ಯೂಟ್ ಆಫ್ ಇಮ್ಯೂನಾಲಜಿ ಅಭಿವೃದ್ದಿಪಡಿಸಿದೆ. ಡ್ರಗ್ ಕಂಟ್ರೋಲರ್ ಜನರಲ್ ಆಫ್ ಇಂಡಿಯಾ ಮತ್ತು ಅಮೆರಿಕಾದ FDA ಈ ಲಸಿಕೆಯನ್ನು ಅನುಮೋದಿಸಿದ್ದು, ಹೊಸ ಲಸಿಕೆಯ ಮೊದಲ ಹಂತದ ಪ್ರಯೋಗವನ್ನು ಬಿಹಾರ, ಗುಜರಾತ್ಗಳ ಐದು ಜಿಲ್ಲೆಗಳಲ್ಲಿ ಆರಂಭಿಸಲಾಗುವುದು. ನಂತರ ಫಲಿತಾಂಶವನ್ನು ಆಧಾರಿಸಿ ಇತರೆ ಭಾಗಗಳಲ್ಲೂ ಬಳಸಲಾಗುವುದು. ಭಾರತದಲ್ಲಿ ಪ್ರತಿ ವರ್ಷ 1.25 ಲಕ್ಷ ಜನರು ಈ ರೋಗಕ್ಕೆ ತುತ್ತಾಗುತ್ತಿದ್ದಾರೆ. ವಿಶ್ವದ ಶೇ 60% ಕುಷ್ಟರೋಗ ಪ್ರಕರಣಗಳು ಭಾರತದಲ್ಲಿ ಕಂಡುಬರುತ್ತಿವೆ.

202. 2016 ಬ್ರಿಕ್ಸ್ ವಿಪತ್ತು ನಿರ್ವಹಣಾ (Disaster Management) ಕಾನ್ಫೆರನ್ಸ್ ಯಾವ ನಗರದಲ್ಲಿ ಆರಂಭಗೊಂಡಿತು?

ಅ) ಭೂಪಾಲ್

ಆ) ಪುಣೆ

ಇ) ಉದಯ್ ಪುರ

ಈ) ಜೈಪುರ

ಉದಯ್ ಪುರ

ಎರಡನೇ ಬ್ರಿಕ್ಸ್ ವಿಪತ್ತು ನಿರ್ವಹಣಾ ಕಾನ್ಫೆರನ್ಸ್ ರಾಜಸ್ತಾನದ ಉದಯ್ ಪುರದಲ್ಲಿ ಆಗಸ್ಟ್ 22 ರಂದು ಆರಂಭಗೊಂಡಿತು. ಪ್ರವಾಹ ಭೀತಿ ನಿರ್ವಹಣೆ ಮತ್ತು ಹವಾಮಾನ ಬದಲಾವಣೆಯಿಂದ ವಾತಾವರಣದಲ್ಲಾಗುವ ವೈಪರೀತ್ಯಗಳ ಮುನ್ಸೂಚನೆ ವಿಷಯಗಳ ಬಗ್ಗೆ ಪ್ರಮುಖವಾಗಿ ಚರ್ಚಿಸಲಾಗುವುದು. ಪ್ರವಾಹ ಭೀತಿ ನಿರ್ವಹಣೆ ಮತ್ತು

www.karunaduexams.com

ಹವಾಮಾನ ಬದಲಾವಣೆಯಿಂದ ವಾತಾವರಣದಲ್ಲಾಗುವ ವೈಪರೀತ್ಯಗಳ ಮುನ್ಸೂಚನೆ ಬಗ್ಗೆ ಬ್ರಿಕ್ಸ್ ರಾಷ್ಟ್ರಗಳ ನಡುವೆ ತಂತ್ರಜ್ಞಾನ ವಿನಿಮಯ ಮಾಡಿಕೊಳ್ಳಲು ಈ ಕಾರ್ಯಕ್ರಮ ವೇದಿಕೆಯಾಗಲಿದೆ.

203. ಇತ್ತೀಚೆಗೆ ನಿಧನರಾದ ಸುಬ್ರತ ಬ್ಯಾನರ್ಜಿ ಯಾವ ಕ್ರೀಡೆಯಲ್ಲಿ ಪ್ರಸಿದ್ದರಾಗಿದ್ದರು?

ಅ) ಕ್ರಿಕೆಟ್

ಆ) ಪುಟ್ಬಾಲ್

ಇ) ಹಾಕಿ

ಈ) ಟೆನ್ನಿಸ್

ಕ್ರಿಕೆಟ್

ಮಾಜಿ ಅಂತಾರಾಷ್ಟ್ರೀಯ ಕ್ರಿಕೆಟ್ ಅಂಪೈರ್ ಸುಬ್ರತ ಬ್ಯಾನರ್ಜಿ ಕೊಲ್ಕತ್ತದಲ್ಲಿ ನಿಧನರಾದರು. ಬ್ಯಾನರ್ಜಿ ಸುಮಾರು 15 ವರ್ಷಗಳ ಕಾಲ ಅಂತಾರಾಷ್ಟ್ರೀಯ ಅಂಪೈರ್ ಆಗಿ ಕಾರ್ಯನಿರ್ವಹಿಸಿದ್ದರು. 1998 ರಲ್ಲಿ ಗ್ವಾಲಿಯರ್ ನಲ್ಲಿ ಭಾರತ-ಕೀನ್ಯಾ ನಡುವೆ ನಡೆದ ಪಂದ್ಯ ಅವರು ಅಂಪೈರ್ ಆಗಿ ಕಾರ್ಯನಿರ್ವಹಿಸಿದ ಕೊನೆಯ ಪಂದ್ಯವಾಗಿತ್ತು. ಬಿಸಿಸಿಐ ನ ಅಂಪೈರ್ ಕೋಚ್ ಆಗಿಯೂ ಅವರು ಸೇವೆ ಸಲ್ಲಿಸಿದ್ದರು.

204. ಈ ಕೆಳಗಿನ ಯಾರಿಗೆ ಒಲಂಪಿಕ್ ಆರ್ಡರ್ (Olympic Order) ಪ್ರಶಸ್ತಿಯನ್ನು ನೀಡಲಾಯಿತು?

ಅ) ಎನ್.ರಾಮಚಂದ್ರನ್

ಆ) ಥಾಮಸ್ ಬಾಚ್

ಇ) ಬ್ರಿಜೇಶ್ ಸಿಂಗ್

ಈ) ರಜನೀಶ್ ಗೋಯಲ್

ಭಾರತೀಯ ಒಲಂಪಿಕ್ ಅಸೋಸಿಯೇಷನ್ ಅಧ್ಯಕ್ಷ ಎನ್.ರಾಮಚಂದ್ರನ್ ಅವರಿಗೆ ಒಲಂಪಿಕ್ ಆರ್ಡರ್ ಪ್ರಶಸ್ತಿಯನ್ನು ನೀಡಲಾಯಿತು. ಒಲಂಪಿಕ್ ಕ್ರೀಡಕೂಟ ಆಯೋಜನೆಗೆ ನೀಡಿರುವ ಸೇವೆಯನ್ನು ಗುರುತಿಸಿ ಈ ಪ್ರಶಸ್ತಿಗೆ ರಾಮಚಂದ್ರನ್ ಅವರನ್ನು ಆಯ್ಕೆಮಾಡಲಾಗಿದೆ. ಅಂತಾರಾಷ್ಟ್ರೀಯ ಒಲಂಪಿಕ್ ಸಮಿತಿ ಅಧ್ಯಕ್ಷ ಥಾಮಸ್ ಬಾಚ್ ಅವರು ಪ್ರಶಸ್ತಿಯನ್ನು ಪ್ರಧಾನ ಮಾಡಿದರು.

205. ವಿಶ್ವ ಸೊಳ್ಳೆ ದಿನ (World Mosquito Day) ಯಾವ ದಿನದಿಂದ ಆಚರಿಸಲಾಗುತ್ತದೆ?

ಅ) ಆಗಸ್ಟ್ 19

ಆ) ಆಗಸ್ಟ್ 20

ಇ) ಆಗಸ್ಟ್ 21

ಈ) ಆಗಸ್ಟ್ 22

www.karunaduexams.com

ಆಗಸ್ಟ್ 20

ಪ್ರತಿ ವರ್ಷ ಆಗಸ್ಟ್ 20 ಅನ್ನು ವಿಶ್ವ ಸೊಳ್ಳೆ ದಿನವೆಂದು ಆಚರಿಸಲಾಗುತ್ತದೆ. ಮಲೇರಿಯಾ ರೋಗ ಹೆಣ್ಣು ಅನಾಫಿಲಿಸ್ ಸೊಳ್ಳೆಯಿಂದ ಹಬ್ಬುತ್ತದೆ ಎಂದು ರೊನಾಲ್ಡ್ ರಾಸ್ 1897ರಲ್ಲಿ ಕಂಡು ಹಿಡಿದ ದಿನವನ್ನು ಕಳೆದ 114 ವರ್ಷಗಳಿಂದ ವಿಶ್ವದಾದ್ಯಂತ 'ವಿಶ್ವ ಸೊಳ್ಳೆ ದಿನ' ಎಂದು ಆಚರಿಸಿಕೊಂಡು ಬರಲಾಗುತ್ತಿದೆ. ಈ ಶೋಧಕ್ಕಾಗಿ ರೊನಾಲ್ಡ್ ರಾಸ್ ಅವರಿಗೆ ನೋಬೆಲ್ ಪ್ರಶಸ್ತಿ ಪಡೆದಿದ್ದರು. ಸೊಳ್ಳೆಯಿಂದ ಹರಡುವ ಮಲೇರಿಯಾ ರೋಗ ಮತ್ತು ಅದರ ನಿಯಂತ್ರಣದ ಬಗ್ಗೆ ಜನರಲ್ಲಿ ಅರಿವು ಮೂಡಿಸುವ ಕಾರ್ಯವನ್ನು ಈ ದಿನದಂದು ಮಾಡಲಾಗುವುದು.

206. ಯಾವ ರಾಜ್ಯದ ಪೊಲೀಸ್ ಇಲಾಖೆಯು ಅಪರಾಧ ಪಕ್ರರಣಗಳನ್ನು ನಿಯಂತ್ರಿಸುವ ಸಲುವಾಗಿ ದೇಶದಲ್ಲೇ ಮೊದಲೆನಿಸಿದ ಡಿಎನ್ಎ ಇಂಡೆಕ್ಸ್ ವ್ಯವಸ್ಥೆಯನ್ನು (DNA Index System) ಇತ್ತೀಚೆಗೆ ಜಾರಿಗೆ ತಂದಿದೆ?

ಅ) ಕೇರಳ

ಆ) ಹರಿಯಾಣ

ಇ) ಆಂಧ್ರ ಪ್ರದೇಶ

ಈ) ಉತ್ತರ ಪ್ರದೇಶ

ಆಂಧ್ರ ಪ್ರದೇಶ

ಅಪರಾಧ ಪ್ರಕರಣ ನಿಯಂತ್ರಿಸುವ ಸಲುವಾಗಿ ಆಂಧ್ರ ಪ್ರದೇಶ ಪೊಲೀಸ್ ಇಲಾಖೆ ದೇಶದಲ್ಲೇ ಮೊದಲ ಬಾರಿಗೆ ಡಿಎನ್ಎ ಇಂಡೆಕ್ಸ್ ವ್ಯವಸ್ಥೆಯನ್ನು ಜಾರಿಗೆ ತಂದಿದೆ. ಈ ನೂತನ ವ್ಯವಸ್ಥೆಯಡಿ ಅಪರಾಧಿಗಳ ಮತ್ತು ಶಂಕಿತರ ಲಾಲಾರಸ ಮತ್ತು ರಕ್ತದ ಕಲೆಗಳಿಂದ ಡಿಎನ್ಎ ಪ್ರೋಫೈಲ್ ಅನ್ನು ಕೇವಲ 90 ರಿಂದ 120 ನಿಮಿಷದಲ್ಲಿ ರಚಿಸಬಹುದಾಗಿದ್ದು, ಅಪರಾಧಿಗಳನ್ನು ಸುಲಭವಾಗಿ ಪತ್ತೆಹಚ್ಚಬಹುದಾಗಿದೆ. ಅಲ್ಲದೇ ಶಂಕಿತರನ್ನು ಅಪರಾಧಿಗಳೇ ಅಥವಾ ನಿರಾಪಧಿಗಳ ಎಂಬುದನ್ನು ಸಾಬೀತುಪಡಿಸಲು ಸಾಧ್ಯವಾಗಲಿದೆ. ಇದಕ್ಕಾಗಿ ಅಮೆರಿಕಾ ಅಭಿವೃದ್ಧಿಪಡಿಸಿರುವ RapidHit ಡಿಎನ್ಎ ವ್ಯವಸ್ಥೆಯನ್ನು ಅಳವಡಿಸಿಕೊಳ್ಳಲಾಗುತ್ತಿದೆ.

207. 2016 ವಿಶ್ವ ಕಬಡ್ಡಿ ಕಪ್ ಟೂರ್ನಮೆಂಟ್ ನಡೆಯಲಿರುವ ನಗರ ______?

ಅ) ಬೆಂಗಳೂರು

ಆ) ಚೆನ್ನೈ

ಇ) ಅಹಮದಬಾದ್

ಈ) ಮುಂಬೈ

ಅಹಮದಬಾದ್

ಗುಜರಾತ್ನ ಅಹಮದಬಾದ್ ನಲ್ಲಿ 2016 ವಿಶ್ವ ಕಬಡ್ಡಿ ಕಪ್ ಆಯೋಜಿಸಲು ಅಂತಾರಾಷ್ಟ್ರೀಯ ಕಬಡ್ಡಿ ಫೆಡರೇಷನ್ ಸಮ್ಮತಿಸಿದೆ. ಅಕ್ಟೋಬರ್ 7ರಂದು ಆರಂಭಗೊಳ್ಳಿರುವ ಟೂರ್ನಮೆಂಟ್ ಅಕ್ಟೋಬರ್ 22, 2016 ರಂದು

ಮುಕ್ತಾಯಗೊಳ್ಳಲಿದೆ. ಭಾರತ ಸೇರಿದಂತೆ ಒಟ್ಟು 12 ದೇಶಗಳು ಟೂರ್ನಿಯಲ್ಲಿ ಭಾಗವಹಿಸಲಿದೆ. 2014ರಲ್ಲಿ ಕೊನೆಯದಾಗಿ ನಡೆದ ಕಬಡ್ಡಿ ವಿಶ್ವಕಪ್ ನಲ್ಲಿ ಭಾರತ ನ್ಯೂಜಿಲ್ಯಾಂಡ್ ಅನ್ನು ಮಣಿಸಿ ಚಾಂಪಿಯನ್ ಆಗಿತ್ತು.

208. ಈ ಕೆಳಗಿನ ಯಾರು ಹೋಮಿ ಬಾಬಾ ನ್ಯಾಷನಲ್ ಇನ್ಸ್ಟಿಟ್ಯೂಟ್ನ ನೂತನ ವೈಸ್ ಚಾನ್ಸೆಲರ್ ಆಗಿ ನೇಮಕಗೊಂಡಿದ್ದಾರೆ?

ಅ) ಪಿ.ಡಿ.ಗುಪ್ತಾ

ಆ) ನವೀನ್ ಕಿರಣ್

ಇ) ಜಗದೀಶ್ ನಾಯಕ್

ಈ) ರವೀಂದ್ರ ಪಟ್ನಾಯಕ್

ಪಿ.ಡಿ.ಗುಪ್ತಾ

ಖ್ಯಾತ ವಿಜ್ಞಾನಿ ಪಿ.ಡಿ.ಗುಪ್ತಾ ಅವರು ಮುಂಬೈ ಮೂಲದ ಹೋಮಿ ಬಾಬಾ ನ್ಯಾಷನಲ್ ಇನ್ಸ್ಟಿಟ್ಯೂಟ್ನ (HBNI)ನ ವೈಸ್ ಚಾನ್ಸಲರ್ ಆಗಿ ನೇಮಕಗೊಂಡಿದ್ದಾರೆ. ಗುಪ್ತಾ ಐದು ವರ್ಷಗಳ ಕಾಲ ಹುದ್ದೆಯಲ್ಲಿ ಕಾರ್ಯನಿರ್ವಹಿಸಲಿದ್ದಾರೆ. ಪರಮಾಣು ಶಕ್ತಿ ಇಲಾಖೆಯಡಿ ಕಾರ್ಯನಿರ್ವಹಿಸುವ ಹೋಮಿ ಬಾಬಾ ನ್ಯಾಷನಲ್ ಇನ್ಸ್ಟಿಟ್ಯೂಟ್ ಯುಜಿಸಿ ಕಾಯಿದೆಯಡಿ ವಿಶ್ವವಿದ್ಯಾಲಯದ ಮಾನ್ಯತೆಯನ್ನು ಪಡೆದಿದೆ.

209. ಇತ್ತೀಚೆಗೆ ನಿಧನರಾದ ಎಸ್.ಆರ್.ನಾಥನ್ ಅವರು ಯಾವ ದೇಶದ ಮಾಜಿ ಅಧ್ಯಕ್ಷರು?

ಅ) ವಿಯಟ್ನಾಂ

ಆ) ಸಿಂಗಾಪುರ

ಇ) ಮಾರಿಷಸ್

ಈ) ಶ್ರೀಲಂಕಾ

ಸಿಂಗಾಪುರ

ಸಿಂಗಾಪುರದ ಮಾಜಿ ಅಧ್ಯಕ್ಷ ಎಸ್.ಆರ್.ನಾಥನ್ (92) ಅನಾರೋಗ್ಯದ ನಿಮಿತ್ತ ನಿಧನರಾದರು. 1924 ರಲ್ಲಿ ಮಲೇಷಿಯಾದಲ್ಲಿ ಹುಟ್ಟಿದ ನಾಥನ್, ಕುಟುಂಬದ ಜೊತೆ ಸಿಂಗಾಪುರಕ್ಕೆ ತೆರಳಿ ನೆಲಸಿದರು. 1999 ರಿಂದ 2011ರ ವರೆಗೆ ಸಿಂಗಾಪುರದ ಅಧ್ಯಕ್ಷರಾಗಿದ್ದರು. ನಾಥನ್ ಸಿಂಗಾಪುರ ಇತಿಹಾಸದಲ್ಲೇ ದೀರ್ಘಕಾಲ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದ ಕೀರ್ತಿ ಹೊಂದಿದ್ದಾರೆ.

210. ಈ ಕೆಳಗಿನ ಯಾರು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ನ ಮೊದಲ ಮುಸ್ಲಿಂ ಅಧ್ಯಕ್ಷರಾಗಿದ್ದಾರೆ?

ಅ) ಅಬ್ದುಲ್ ಕಲಾಂ ಅಜಾದ್

ಆ) ರಫಿ ಅಹಮ್ಮದ್ ಕಿದ್ವಾಯಿ

www.karunaduexams.com

ಇ) ಬಬ್ರುದ್ದೀನ್ ತ್ಯಾಬ್ಜಿ

ಈ) ಹಕೀಂ ಅಜ್ಮಲ್ ಖಾನ್

ಬಬ್ರುದ್ದೀನ್ ತ್ಯಾಬ್ಜಿ

ಬಬ್ರುದ್ದೀನ್ ತ್ಯಾಬ್ಜಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ನ ಮೊದಲ ಮುಸ್ಲಿಂ ಅಧ್ಯಕ್ಷರು. ತ್ಯಾಬ್ಜಿ ಅವರು 1867 ಮುಂಬೈನ ಮೊದಲ ಭಾರತೀಯ ಬ್ಯಾರಿಸ್ಟರ್ ಸಹ ಎನಿಸಿದ್ದರು. ಮುಂಬೈನ ಮುಖ್ಯ ನ್ಯಾಯಾಧೀಶ ಹುದ್ದೆಯನ್ನು ಅಲಂಕರಿಸಿದ ಮೊದಲ ಭಾರತೀಯ ಸಹ ಆಗಿದ್ದಾರೆ.

211. ಈ ಕೆಳಗಿನ ವ್ಯಕ್ತಿಗಳನ್ನು ಗಮನಿಸಿ:

I) ಜೇಮ್ಸ್ ಟೇಲರ್

II) ಸಿ.ಡಿ.ದೇಶ್ ಮುಖ್

III) ವೈ.ವಿ.ರೆಡ್ಡಿ

IV) ಉರ್ಜಿತ್ ಪಟೇಲ್

ಈ ಮೇಲಿನ ವ್ಯಕ್ತಿಗಳಿಗೆ ಸಂಬಂಧಿಸಿದಂತೆ ಸರಿಯಾದ ಸಂಬಂಧವನ್ನು ಗುರುತಿಸಿ?

ಅ) ಲಂಡನ್ ಸ್ಕೂಲ್ ಆಫ್ ಎಕಾನಮಿಕ್ಸ ನಲ್ಲಿ ಅರ್ಥಶಾಸ್ತ್ರದಲ್ಲಿ ಪದವೀದರರು

ಆ) ಆರ್ ಬಿಐ ನಲ್ಲಿ ಡೆಪ್ಯೂಟಿ ಗವರ್ನರ್ ಆಗಿ ಗವರ್ನರ್ ಹುದ್ದೆಗೆ ಆಯ್ಕೆಯಾಗಿದ್ದವರು

ಇ) ಅಂತಾರಾಷ್ಟ್ರೀಯ ಹಣಕಾಸು ನಿಧಿಯಲ್ಲಿ ಕಾರ್ಯನಿರ್ವಹಿಸಿ ಗವರ್ನರ್ ಆದವರು

ಈ) ಸಂಪುಟ ಕಾರ್ಯದರ್ಶಿಗಳಾಗಿದ್ದವರು

ಆರ್ ಬಿಐ ನಲ್ಲಿ ಡೆಪ್ಯೂಟಿ ಗವರ್ನರ್ ಆಗಿ ಗವರ್ನರ್ ಹುದ್ದೆಗೆ ಆಯ್ಕೆಯಾಗಿದ್ದವರುಜೇಮ್ಸ್ ಟೇಲರ್, ಸಿ.ಡಿ.ದೇಶ್ ಮುಖ್, ಬಿ.ಎನ್.ಅದರ್ಕರ್, ಉರ್ಜಿತ್ ಪಟೇಲ್, ಎ.ಘೋಷ್, ಸಿ.ರಂಗರಾಜನ್, ಉರ್ಜಿತ್ ಪಟೇಲ್ ಮತ್ತು ವೈ.ವಿ ರೆಡ್ಡಿ ಭಾರತೀಯ ರಿಸರ್ವ್ ಬ್ಯಾಂಕ್ ನ ಡೆಪ್ಯೂಟಿ ಗರ್ವನರ್ ಹುದ್ದೆಯಲ್ಲಿ ಕಾರ್ಯನಿರ್ವಹಿಸಿ ಬಳಿಕೆ ಗವರ್ನರ್ ಆಗಿ ನೇಮಕಗೊಂಡವರು. ಇತ್ತೀಚೆಗೆ ಗವರ್ನರ್ ಆಗಿ ನೇಮಕಗೊಂಡ ಉರ್ಜಿತ್ ಪಟೇಲ್ ಭಾರತೀಯ ರಿಸರ್ವ್ ಬ್ಯಾಂಕ್ ಗವರ್ನರ್ ಆಗಿ ನೇಮಕಗೊಂಡ 8ನೇ ಡೆಪ್ಯೂಟಿ ಗವರ್ನರ್.

212. ನ್ಯೂ ವರ್ಲ್ಡ್ ವೆಲ್ತ್ ವರದಿ ಪ್ರಕಾರ ವಿಶ್ವದ ಸಮೃದ್ಧ ರಾಷ್ಟ್ರಗಳ ಪೈಕಿ ಭಾರತ ಎಷ್ಟನೇ ಸಮೃದ್ಧ ರಾಷ್ಟ್ರವಾಗಿದೆ?

ಅ) ಎರಡನೇ

ಆ) ಐದನೇ

ಇ) ಏಳನೇ

ಈ) ಹತ್ತನೇ

ಏಳನೇ

www.karunaduexams.com

ನ್ಯೂ ವರ್ಲ್ಡ್ ವೆಲ್ತ್ ವರದಿ ಪ್ರಕಾರ ಜಗತ್ತಿನ 10 ಆರ್ಥಿಕ ಸಮೃದ್ಧ ರಾಷ್ಟ್ರಗಳ ಪೈಕಿ ಭಾರತ (5,600 ಡಾಲರ್) ಏಳನೇ ಸ್ಥಾನದಲ್ಲಿದೆ. ಪಟ್ಟಿಯ ಮೊದಲ ಸ್ಥಾನದಲ್ಲಿ ಅಮೆರಿಕ (48,900 ಬಿಲಿಯನ್ ಡಾಲರ್), ನಂತರ ಚೀನಾ (17,400 ಬಿಲಿಯನ್ ಡಾಲರ್), ತೃತೀಯ ಸ್ಥಾನದಲ್ಲಿ ಜಪಾನ್ (15,100 ಬಿಲಿಯನ್ ಡಾಲರ್), ನಾಲ್ಕನೇ ಸ್ಥಾನದಲ್ಲಿ ಬ್ರಿಟನ್ (9,200 ಬಿಲಿಯನ್ ಡಾಲರ್), ಐದನೇ ಸ್ಥಾನದಲ್ಲಿ ಜರ್ಮನಿ (9,100 ಬಿಲಿಯನ್ ಡಾಲರ್), ಆರನೇ ಸ್ಥಾನದಲ್ಲಿ ಫ್ರಾನ್ಸ್ (6,600 ಬಿಲಿಯನ್ ಡಾಲರ್) ಇವೆ. ಭಾರತದ ನಂತರದ 8 ನೇ ಸ್ಥಾನದಲಿ ಕೆನಡಾ (4,700 ಬಿಲಿಯನ್ ಡಾಲರ್), 9 ನೇ ಸ್ಥಾನದಲ್ಲಿ ಆಸ್ಟ್ರೇಲಿಯ (4,500 ಬಿಲಿಯನ್ ಡಾಲರ್) , 10 ನೇ ಸ್ಥಾನದಲ್ಲಿ ಇಟಲಿ (4,400 ಬಿಲಿಯನ್ ಡಾಲರ್) ಇವೆ.

213. ಇಂಟರ್ ನೆಟ್ ತಂತ್ರಜ್ಞಾನ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಆಗಸ್ಟ್ 23, 1991ರಂದು ಈ ಕೆಳಗಿನ ಯಾವುದನ್ನು ಅನ್ವೇಷಿಸಲಾಯಿತು?

ಅ) ಇ-ಮೇಲ್

ಆ) ವರ್ಲ್ಡ್ ವೈಡ್ ವೆಬ್ (www)

ಇ) ಕಂಪ್ಯೂಟರ್ ಡಿಸ್ಕ್ (ಸಿಡಿ)

ಈ) ಆಪ್ಟಿಕಲ್ ಫೈಬರ್

ವರ್ಲ್ಡ್ ವೈಡ್ ವೆಬ್ (www)

ಆಗಸ್ಟ್ 23, 1991 ರಂದು ವರ್ಲ್ಡ್ ವೈಡ್ ವೆಬ್ ಬಳಕೆಗೆ ಸಾರ್ವಜನಿಕರಿಗೆ ಅವಕಾಶ ಸಿಕ್ಕಿತ್ತು. ಈ ಅನ್ವೇಷಣೆಗೆ 25 ವರ್ಷ ತುಂಬಿದ್ದು, ಬೆಳ್ಳಿ ಹಬ್ಬದ ಸಂಭ್ರಮದಲ್ಲಿದೆ. ವರ್ಲ್ಡ್ ವೈಡ್ ವೆಬ್ ಅನ್ವೇಷಿಸಿದರು ಸರ್ ಟಿಮ್ ಬರ್ನರ್ಸ್ ಲೀ. ಇಂಟರ್ ನೆಟ್‌ನ ಮಹತ್ವದ ಸಂಶೋಧನೆ ಕೈಗೊಂಡಾಗ ಬರ್ನರ್ ಲೀ ಸ್ವಿಜರ್‌ಲೆಂಡ್‌ನ ಜಿನೇವಾದಲ್ಲಿರುವ ಯುರೋಪ್ ಪರಮಾಣು ಸಂಶೋಧನೆ (ಸೆರ್ನ್) ಕೇಂದ್ರದಲ್ಲಿ ಭೌತ ವಿಜ್ಞಾನಿಯಾಗಿದ್ದರು. ಕಂಪನಿಯಿಂದ ಸೂಕ್ತ ಮನ್ನಣೆ ಸಿಗದ ಹಿನ್ನೆಲೆಯಲ್ಲಿ ಇಂಟರ್ನೆಟ್ ಅನ್ನು ಸಾರ್ವಜನಿಕರ ಬಳಕೆಗೆ ನೀಡಿದರು. ವೆಬ್ ಬ್ರೌಸಿಂಗ್‌ಗೆ ಅನುಕೂಲ ವಾಗುವಂತೆ 1990ರಲ್ಲಿ ಸರ್ ಲೀ ಮೊದಲಿಗೆ ಎಚ್‌ಟಿಎಂಎಲ್, ಯುಆರ್‌ಎಲ್ ತಂತ್ರಜ್ಞಾನವನ್ನು ಮುಂದಿಟ್ಟರು. ಇದನ್ನು 1991ರ ಆ.6ರಂದು ಲೈವ್ ಆಗಿ ಪ್ರಾಯೋಗಿಕವಾಗಿ ಲೋಕಾರ್ಪಣೆ ಗೊಂಡಿತು. 1991ರ ಆ. 23ರಂದು ಸಾರ್ವಜನಿಕರ ಬಳಕೆಗೆ ಬಿಡುಗಡೆ ಗೊಳಿಸಲಾಯಿತು.

214. ಯಾವ ರಾಜ್ಯದ ಇತ್ತೀಚೆಗೆ ತನ್ನ ಸ್ವಂತ ಆಂತರಿಕ ಭದ್ರತಾ (Internal Security) ಕಾಯಿದೆಯ ಕರಡು ಸಿದ್ಧಪಡಿಸಿದ ದೇಶದ ಮೊದಲ ರಾಜ್ಯವೆನಿಸಿದೆ?

ಅ) ಮಹಾರಾಷ್ಟ್ರ

ಆ) ಪಶ್ಚಿಮ ಬಂಗಾಳ

ಇ) ಹಿಮಾಚಲ ಪ್ರದೇಶ

ಈ) ಗುಜರಾತ್

www.karunaduexams.com

ಮಹಾರಾಷ್ಟ್ರ

ಮಹಾರಾಷ್ಟ್ರ ಸರ್ಕಾರ ತನ್ನ ಸ್ವಂತ ಆಂತರಿಕ ಭದ್ರತಾ ಕಾಯಿದೆ "ಮಹಾರಾಷ್ಟ್ರ ರಕ್ಷಣೆ ಆಂತರಿಕ ಭದ್ರತೆ ಕಾಯಿದೆ (Maharashtra Protection Internal Security Act)" ಯ ಕರಡು ಸಿದ್ದಪಡಿಸಿದ್ದು, ತನ್ನದೇ ಆದ ಸ್ವಂತ ಆಂತರಿಕ ಭದ್ರತಾ ಕಾಯಿದೆ ರೂಪಿಸಿದ ಮೊದಲ ರಾಜ್ಯವೆನಿಸಿದೆ. ಸಾರ್ವಜನಿಕರ ಸಲಹೆ ಮತ್ತು ಆಕ್ಷೇಪಣೆಗಾಗಿ ಈ ಕಾಯಿದೆಯ ಕರಡು ಪ್ರತಿಯನ್ನು ವೆಬ್ ಸೈಟ್ ನಲ್ಲಿ ಪ್ರಕಟಿಸಲಾಗಿದೆ. ಕಾಯಿದೆ ಪ್ರಕಾರ ರಾಜ್ಯದ ಗಡಿ ಪ್ರದೇಶದೊಳಗೆ ಭಯೋತ್ಪಾದನೆ, ವಿದ್ವಂಸಕ ಕೃತ್ಯಗಳು, ಎರಡು ಗುಂಪುಗಳ ನಡುವೆ ಘರ್ಷಣೆ, ಅಮಾಯಕರ ಮೇಲೆ ಹಲ್ಲೆ, ಸಾರ್ವಜಿಕ ಅಥವಾ ಖಾಸಗಿ ಆಸ್ತಿಪಾಸ್ತಿಗಳ ದ್ವಂಸ ಸೇರಿದಂತೆ ಇನ್ನಾವುದೇ ಕೃತ್ಯಗಳಿಂದ ಶಾಂತಿ ಕದಡುವ ಸನ್ನಿವೇಶಗಳನ್ನು ಆಂತರಿಕ ಭದ್ರತೆಯಡಿ ಉಲ್ಲೇಖಿಸಲಾಗಿದೆ.

215. 2016 ದ್ರೋಣಚಾರ್ಯ ಪ್ರಶಸ್ತಿಗೆ ಆಯ್ಕೆಯಾಗಿರುವ ಬಿಶ್ವೇಶರ್ ನಂದಿ ಯಾವ ಕ್ರೀಡೆಗೆ ಸಂಬಂಧಿಸಿದ್ದಾರೆ?

ಅ) ಕ್ರಿಕೆಟ್

ಆ) ಜಿಮ್ನಾಸ್ಟಿಕ್

ಇ) ಕುಸ್ತಿ

ಈ) ಶೂಟಿಂಗ್

ಜಿಮ್ನಾಸ್ಟಿಕ್

ಈ ಬಾರಿಯ ದ್ರೋಣಚಾರ್ಯ ಪ್ರಶಸ್ತಿಗೆ ಆರು ಜನರನ್ನು ಆಯ್ಕೆಮಾಡಲಾಗಿದೆ. ವಿರಾಟ್ ಕೊಹ್ಲಿ ರವರ ಗುರು ರಾಜ್ ಕುಮಾರ್ ಶರ್ಮಾ (ಕ್ರಿಕೆಟ್), ದೀಪಾ ಕಮರ್ಕರ್ ಅವರ ಕೋಚ್ ಬಿಶೇಶ್ವರ್ ನಂದಿ (ಜಿಮ್ನಾಸ್ಟಿಕ್ಸ್), ಉಳಿದಂತೆ ನಾಗಪುರಿ ರಮೇಶ್ (ಅಥ್ಲೆಟಿಕ್ಸ್), ಸಾಗರ್ ಮಲ್ ದಯಾಳ್ (ಬಾಕ್ಸಿಂಗ್), ಎಸ್ ಪ್ರದೀಪ್ ಕುಮಾರ್ (ಈಜು) (ಜೀವಮಾನ ಸಾಧನೆ) ಮತ್ತು ಮಹಾಬೀರ್ ಸಿಂಗ್- ಕುಸ್ತಿ (ಜೀವಮಾನ ಸಾಧನೆ).

216. ಪಿಂಚಣಿ ನಿಧಿ ನಿಯಂತ್ರಣ ಮತ್ತು ಅಭಿವೃದ್ದಿ ಪ್ರಾಧಿಕಾರ (Pension Fund Regulatory and Development Authority) ಕೇಂದ್ರ ಸ್ಥಳ ಎಲ್ಲಿದೆ?

ಅ) ಹೈದ್ರಾಬಾದ್

ಆ) ಕೊಚ್ಚಿ

ಇ) ಪುಣೆ

ಈ) ದೆಹಲಿ

ದೆಹಲಿ

ಪಿಂಚಣಿ ನಿಧಿ ನಿಯಂತ್ರಣ ಮತ್ತು ಅಭಿವೃದ್ದಿ ಪ್ರಾಧಿಕಾರವನ್ನು ಭಾರತ ಸರ್ಕಾರ ಆಗಸ್ಟ್ 23, 2003 ರಂದು ಸ್ಥಾಪಿಸಿದೆ. ಇದರ ಕೇಂದ್ರ ಕಚೇರಿ ನವದೆಹಲಿಯಲ್ಲಿದೆ. ಹೇಮಂತ್ ಕಂಟ್ರಾಕ್ಟರ್ ಈ ಪ್ರಾಧಿಕಾರದ ಈಗಿನ ಅಧ್ಯಕ್ಷರು.

www.karunaduexams.com

217. ಭಾರತೀಯ ಅಂಚೆ ಪಾವತಿ ಬ್ಯಾಂಕ್ಗಳ ಮಂಡಳಿಯ ಸ್ವತಂತ್ರ ನಿರ್ದೇಶಕರಾಗಿ ಈ ಕೆಳಗಿನ ಯಾರು ನೇಮಕಗೊಂಡಿದ್ದಾರೆ?

ಅ) ಆರ್.ಎಸ್.ಸೋಧಿ

ಆ) ಬಿಷಪ್ ಚೌಧರಿ

ಇ) ಕರಣ್ ಸಿಂಗ್

ಈ) ಸಂತೋಷ್ ಕುಮಾರ್

ಆರ್.ಎಸ್.ಸೋಧಿ

ಅಮುಲ್ ಮ್ಯಾನೇಜಿಂಗ್ ಡೈರೆಕ್ಟರ್ ಆರ್ ಎಸ್ ಸೋಧಿ ಅವರನ್ನು ಭಾರತೀಯ ಅಂಚೆ ಪಾವತಿ ಬ್ಯಾಂಕ್ಗಳ ಮಂಡಳಿಯ ಸ್ವತಂತ್ರ ನಿರ್ದೇಶಕರಾಗಿ ನೇಮಕಗೊಂಡಿದ್ದಾರೆ. ಭಾರತೀಯ ಅಂಚೆ ಪಾವತಿ ಬ್ಯಾಂಕ್ಗಳ ಮಂಡಳಿಯು ಒಟ್ಟು ಐದು ಸ್ವತಂತ್ರ ನಿರ್ದೇಶಕರನ್ನು ಹೊಂದಿರಲಿದ್ದು, ಸೋಧಿ ಮೊದಲಿಗರು. ಭಾರತೀಯ ಅಂಚೆ ಇಲಾಖೆ ಇತ್ತೀಚೆಗಷ್ಟೇ ಈ ಮಂಡಳಿಯನ್ನು ರಚಿಸಲು ಅನುಮತಿಯನ್ನು ಪಡೆದುಕೊಂಡಿದ್ದು, ಸೆಪ್ಟೆಂಬರ್ 2017 ರಿಂದ ಬ್ಯಾಂಕಿಂಗ್ ಕಾರ್ಯ ಆರಂಭಿಸಲಿದೆ.

218. ಫೋರ್ಬ್ಸ್ ನಿಯತಕಾಲಿಕೆಯ ವಿಶ್ವದ ಅತಿ ಹೆಚ್ಚು ಸಂಭಾವನೆ ಪಡೆಯುವ ವಿಶ್ವದ ನಟಿಯರ ಪಟ್ಟಿಯಲ್ಲಿ ಮೊದಲ ಸ್ಥಾನ ಯಾರಿಗೆ ಲಭಿಸಿದೆ?

ಅ) ಜೆನಿಫರ್ ಲಾರೆನ್ಸ್

ಆ) ಮೆಕಾರ್ಥಿ

ಇ) ಸ್ಕಾಲೆಟ್ ಜೋಹನ್ಸನ್

ಈ) ದೀಪಿಕಾ ಪಡುಕೋಣೆ

ಜೆನಿಫರ್ ಲಾರೆನ್ಸ್

ಹಾಲಿವುಡ್‌ನಟಿ ಜೆನ್ನಿಫರ್ ಲಾರೆನ್ಸ್ 46 ಮಿಲಿಯನ್ ಡಾಲರ್ ವಾರ್ಷಿಕ ಸಂಭಾವನೆ ಪಡೆಯುವ ಮೂಲಕ ಫೋರ್ಬ್ಸ್ ನಿಯತಕಾಲಿಕೆ ವಿಶ್ವ ಅತಿ ಹೆಚ್ಚು ಸಂಭಾವನೆ ಪಡೆಯುವ ನಟಿಯರ ಪಟ್ಟಿಯಲ್ಲಿ ಮೊದಲ ಸ್ಥಾನದಲ್ಲಿದ್ದಾರೆ. ಮತ್ತೋರ್ವ ಅಮೆರಿಕ ನಟಿ ಮೆಕಾರ್ಥಿ 33 ಮಿಲಿಯನ್ ಡಾಲರ್ ಸಂಭಾವನೆ ಪಡೆಯುವ ಮೂಲಕ ದ್ವಿತೀಯ ಸ್ಥಾನ ಅಲಂಕರಿಸಿದ್ದಾರೆ. ಮೂರನೇ ಸ್ಥಾನ ಕೂಡ ಅಮೆರಿಕದ ಪಾಲಾಗಿದ್ದು, ನಟಿ, ಮಾಡೆಲ್ ಸ್ಕಾರ್ಲೆಟ್ ಜೋಹಾನ್ಸನ್ ಪಡೆದುಕೊಂಡಿದ್ದಾರೆ. ಭಾರತದ ದೀಪಿಕಾ ಪಡುಕೋಣೆ (10 ಮಿಲಿಯನ್ ಡಾಲರ್) ನಾಲ್ಕನೇ ಸ್ಥಾನವನ್ನು ಪಡೆದುಕೊಂಡಿದ್ದಾರೆ. ಇನ್ನುಳಿದಂತೆ ನಾಲ್ಕನೇ ಸ್ಥಾನ ಅಮೆರಿಕದ ಜೆನ್ನಿಫರ್ ಅನಿಸ್ಟನ್ (21 ಮಿಲಿಯನ್ ಡಾಲರ್), ಐದನೇ ಸ್ಥಾನ ಚೀನಾದ ಗಾಯಕಿ, ನಿರ್ದೇಶಕಿ ಫ್ಯಾನ್ ಬಿಗ್ಬಿಂಗ್ (17 ಮಿಲಿಯನ್ ಡಾಲರ್), ಆರನೇ ಸ್ಥಾನ ದಕ್ಷಿಣ ಆಫ್ರಿಕಾದ ನಟಿ ಚಾರ್ಲಿಜ್ ಥರಾನ್ (16.6 ಮಿಲಿಯನ್ ಡಾಲರ್), ಏಳನೇ ಸ್ಥಾನ ಮೆರಿಕದ ನಟಿ ಏಮೀ ಆಡಮ್್ಸ

www.karunaduexams.com

(13.5 ಮಿಲಿಯನ್ ಡಾಲರ್), ಎಂಟನೇ ಸ್ಥಾನ ಅಮೆರಿಕದ ಜುಲಿಯಾ ರಾಬರ್ಟ್ಸ್ (12 ಮಿಲಿಯನ್ ಡಾಲರ್), ಅಮೆರಿಕದ ನಟಿ ಮಿಲಾ ಕುನಿಸ್ (11 ಮಿಲಿಯನ್ ಡಾಲರ್) ಒಂಬತ್ತನೇ ಸ್ಥಾನದಲ್ಲಿದ್ದಾರೆ.

219. ಗೋದಾವರಿ ಮತ್ತು ಅದರ ಉಪನದಿಗಳ ಮೇಲೆ ಮೂರು ಬ್ಯಾರೇಜ್ ಗಳ ನಿರ್ಮಾಣ ಮಾಡುವ ಒಪ್ಪಂದಕ್ಕೆ ಯಾವ ಎರಡು ರಾಜ್ಯಗಳು ಇತ್ತೀಚೆಗೆ ಸಹಿ ಹಾಕಿದವು?

ಅ) ಆಂಧ್ರಪ್ರದೇಶ ಮತ್ತು ತೆಲಂಗಣ

ಆ) ತೆಲಂಗಣ ಮತ್ತು ಮಹಾರಾಷ್ಟ್ರ

ಇ) ಮಹಾರಾಷ್ಟ್ರ ಮತ್ತು ಆಂಧ್ರ ಪ್ರದೇಶ

ಈ) ತೆಲಂಗಣ ಮತ್ತು ಓಡಿಶಾ

ತೆಲಂಗಣ ಮತ್ತು ಮಹಾರಾಷ್ಟ್ರ

ಗೋದಾವರಿ ಮತ್ತು ಅದರ ಉಪನದಿಗಳ ಮೇಲೆ ಮೂರು ಬ್ಯಾರೇಜ್ ಗಳ ನಿರ್ಮಾಣ ಮಾಡುವ ಐತಿಹಾಸಿಕ ಒಪ್ಪಂದಕ್ಕೆ ಮಹಾರಾಷ್ಟ್ರ ಮತ್ತು ತೆಲಂಗಣ ಸರ್ಕಾರ ಸಹಿ ಹಾಕಿವೆ. ಒಪ್ಪಂದದ ಅನ್ವಯ ತೆಲಂಗಣ ಸರ್ಕಾರ ಗೋದಾವರಿ ಮತ್ತು ಅದರ ಉಪನದಿಗಳಾದ ಪ್ರಣ್ಹಿತ ಮತ್ತು ಪೆನ್ ಗಂಗಾ ನದಿಗಳ ಮೇಲೆ ಮೂರು ಬ್ಯಾರೇಜ್ ಗಳನ್ನು ನಿರ್ಮಿಸಲಿದ್ದು, ಆ ಮೂಲಕ ಕೃಷಿ ಭೂಮಿಗೆ ನೀರಾವರಿ ಸೌಲಭ್ಯವನ್ನು ಕಲ್ಪಿಸಲಿದೆ. ಈ ಒಪ್ಪಂದದಡಿ ಮೇದಿಗಡ್ಡ ಬಳಿ ಗೋದಾವರಿ ನದಿ ಮೇಲೆ, ತುಮ್ಮಿದಹಟ್ಟಿ ಬಳಿ ಪ್ರಣ್ಹಿತ ನದಿ ಮೇಲೆ ಮತ್ತು ಚನಕ-ಕೊರಟ ಬಳಿ ಪೆನ್ ಗಂಗಾ ನದಿ ಮೇಲೆ ಬ್ಯಾರೇಜ್ ಗಳನ್ನು ನಿರ್ಮಿಸಲಾಗುವುದು.

220. ಪಶ್ಚಿಮ ಬಂಗಾಳದ ಕೋಚ್ ಬೆಹಾರ್ ಯಾವುದಕ್ಕೆ ಪ್ರಸಿದ್ದಿ ಹೊಂದಿದೆ?

ಅ) ಚರ್ಮದ ಉದ್ದಿಮೆ

ಆ) ರೇಷ್ಮೆ ಕೈಗಾರಿಗೆ

ಇ) ಗಾಜು ಕೈಗಾರಿಕೆ

ಈ) ಸೆಣಬು ಉದ್ದಿಮೆ

ರೇಷ್ಮೆ ಕೈಗಾರಿಗೆ

www.karunaduexams.com

221. ದಕ್ಷಿಣ ಭಾರತದ ಮೊದಲ ಮಕ್ಕಳ ನ್ಯಾಯಾಲಯ (Children Court)ವನ್ನು ಯಾವ ನಗರದಲ್ಲಿ ಆರಂಭಿಸಲಾಯಿತು?

ಅ) ಪುಣೆ

ಆ) ಬೆಂಗಳೂರು

ಇ) ಹೈದ್ರಾಬಾದ್

ಈ) ಚೆನ್ನೈ

ಹೈದ್ರಾಬಾದ್

ದಕ್ಷಿಣ ಭಾರತದ ಮೊದಲ ಮಕ್ಕಳ ನ್ಯಾಯಾಲಯ (Children Court)ವನ್ನು ಹೈದರಾಬಾದ್‌ನಲ್ಲಿ ಆರಂಭಿಸಲಾಯಿತು. ಮಕ್ಕಳಿಗೆ ಸಂಬಂಧಿಸಿದ ಪ್ರಕರಣಗಳನ್ನು ತ್ವರಿತವಾಗಿ ವಿಲೇವಾರಿ ಮಾಡುವ ಉದ್ದೇಶದಿಂದ ಈ ನ್ಯಾಯಾಲಯವನ್ನು ಆರಂಭಿಸಲಾಗಿದೆ. ದಕ್ಷಿಣ ಹೈದ್ರಾಬಾದ್ ನ ನಂಪಳ್ಳಿ ಕ್ರಿಮಿನಲ್ ಕೋರ್ಟ್ ಸಂಕೀರ್ಣದಲ್ಲಿ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ರಮೇಶ್ ರಂಗನಾಥನ್ ಹಾಗೂ ತೆಲಂಗಾಣದ ಡಿಜಿಪಿ ಅನುರಾಗ್ ಶರ್ಮಾ ಅವರು ನ್ಯಾಯಾಲಯಕ್ಕೆ ಚಾಲನೆ ನೀಡಿದರು. ಇದು ದಕ್ಷಿಣ ಭಾರತದಲ್ಲಿ ಮೊದಲನೆಯ ಮತ್ತು ದೇಶದ 6ನೇ ಮಕ್ಕಳ ನ್ಯಾಯಾಲಯವಾಗಿದೆ. ಮಕ್ಕಳ ನ್ಯಾಯಾಲಯವು ಮಕ್ಕಳಿಗೆ ಸಂಬಂಧಿಸಿದ ಪ್ರಕರಣಗಳನ್ನಷ್ಟೇ ವಿಚಾರಣೆ ನಡೆಸಲಿದೆ. Protection of Children from Sexual Offences (POSCO) Act-2012 ಯಡಿ ಕಡ್ಡಾಯವಾಗಿರುವ ಮಕ್ಕಳಸ್ನೇಹಿ ಕೊಠಡಿಗಳ ವ್ಯವಸ್ಥೆ, ವಿಡಿಯೋ ಕ್ಯಾಮರ ವಿಚಾರಣೆ ವ್ಯವಸ್ಥೆಯನ್ನು ಈ ನ್ಯಾಯಾಲಯ ಹೊಂದಿದೆ. ಪ್ರಸ್ತುತ ಮಕ್ಕಳ ನ್ಯಾಯಾಲಯ ಪ್ರಸ್ತುತ ಗೋವಾ ಮತ್ತು ದೆಹಲಿಯಲ್ಲಿ ಮಾತ್ರ ಇದ್ದು, ನಂತರದ ಸ್ಥಾನ ಇದೀಗ ತೆಲಂಗಾಣದ ಪಾಲಾಗಿದೆ.

222. ವೃತ್ತಿಪರ ತರಭೇತಿ ಸಂಬಂಧ ಭಾರತ ಈ ಕೆಳಗಿನ ಯಾವ ರಾಷ್ಟ್ರದೊಂದಿಗೆ ಇತ್ತೀಚೆಗೆ ಸಹಿ ಹಾಕಿದೆ?

ಅ) ಜರ್ಮನಿ

ಆ) ಆಸ್ಟ್ರೇಲಿಯಾ

ಇ) ಕೆನಡಾ

ಈ) ಜಪಾನ್

ಜರ್ಮನಿ

ವೃತ್ತಿಪರ ತರಭೇತಿ ಮೂಲಕ ಕೈಗಾರಿಕ ಸಮೂಹಗಳಲ್ಲಿ ಕೆಲಸವನ್ನು ಸುಧಾರಿಸುವ ಸಲುವಾಗಿ ಭಾರತ ಇತ್ತೀಚೆಗೆ ಜರ್ಮನಿಯೊಂದಿಗೆ ವೃತ್ತಿಪರ ತರಭೇತಿ ಒಪ್ಪಂದಕ್ಕೆ ಸಹಿಹಾಕಿದೆ. ಒಪ್ಪಂದದಡಿ ಭಾರತ-ಜರ್ಮನ್ ನಡುವೆ ಕೈಗಾರಿಕಾ ಸಂಸ್ಥೆ ಸಹಭಾಗಿತ್ವನ್ನು ಹೆಚ್ಚಿಸುವುದು ಹಾಗೂ ಸ್ಥಳೀಯ ತರಭೇತಿ ಸಂಸ್ಥೆಗಳ ಸಾಮರ್ಥ್ಯವನ್ನು ಬಲಪಡಿಸಲಾಗುವುದು.

www.karunaduexams.com

223. ವಿಶ್ವದ ಅತಿ ದೊಡ್ಡ ಒಳಾಂಗಣ ಥೀಮ್ ಪಾರ್ಕ್ (Indoor Theme Park) ಎಲ್ಲಿ ಸಿದ್ದುವಾಗುತ್ತಿದೆ?

ಅ) ನ್ಯೂಯಾರ್ಕ್

ಆ) ದುಬೈ

ಇ) ಸಿಡ್ನಿ

ಈ) ಬೀಜಿಂಗ್

ದುಬೈ

ವಿಶ್ವದ ಅತೀ ದೊಡ್ಡ ಒಳಾಂಗಣ ಥೀಮ್ ಪಾರ್ಕ್ ದುಬೈನಲ್ಲಿ ಸಿದ್ದವಾಗುತ್ತಿದ್ದು, ಮುಂದಿನ ಆಕ್ಟೋಬರಿನಲ್ಲಿ ಈ ಥೀಮ್ ಲೋಕಾರ್ಪಣೆಗೊಳ್ಳಲಿದೆ. ಪ್ರವಾಸಿಗರ ಕನಸಿನ ಲೋಕದಂತೆ ಈ ಉದ್ಯಾನವವ ರೂಪುಗೊಳ್ಳಲಾಗುತ್ತಿದೆ ಎಂದು ಹೇಳಲಾಗಿದೆ.

224. ಪ್ರಪ್ರಥಮ "ಏಷ್ಯಾನ್ ಸೈನ್ ಅಂಡ್ ಟೆಕ್ನಲಾಜಿ ಕಾನ್ಫರೆನ್ಸ್ ಫಾರ್ ಡಿಸೆಸ್ಟರ್ ರಿಸ್ಕ್ ರೆಡಕ್ಷನ್" ಯಾವ ದೇಶದಲ್ಲಿ ನೆಡಯಿತು?

ಅ) ಸಿಂಗಾಪುರ

ಆ) ಭಾರತ

ಇ) ಜಪಾನ್

ಈ) ಬಾಂಗ್ಲದೇಶ

ಥಾಯ್ಲೆಂಡ್ನ ಬ್ಯಾಂಕಾಕ್ ನಲ್ಲಿ ಮೊದಲ ಏಷ್ಯಾನ್ ಸೈನ್ ಅಂಡ್ ಟೆಕ್ನಲಾಜಿ ಕಾನ್ಫರೆನ್ಸ್ ಫಾರ್ ಡಿಸೆಸ್ಟರ್ ರಿಸ್ಕ್ ರೆಡಕ್ಷನ್" (Asian Science and Technology (S&T) Conference for Disaster Risk Reduction (DRR)) ಆಗಸ್ಟ್ 23-24 ರಂದು ನಡೆಯಿತು. ಈ ಸಮ್ಮೇಳನದಲ್ಲಿ ವಿಪತ್ತು ಭೀತಿ ನಿರ್ವಹಣೆಯ ಪ್ರಮುಖ ಸಮಸ್ಯೆಗಳು, ಸವಾಲುಗಳು ಮತ್ತು ನೀತಿ ರೂಪಿಸಲು ವಿಜ್ಞಾನದಡಿ ಇರುವ ಅವಕಾಶಗಳ ಬಗ್ಗೆ ಚರ್ಚಿಸಲಾಯಿತು. ಭಾರತದ ಪರವಾಗಿ ಕೇಂದ್ರ ಸಚಿವ ಕಿರೆನ್ ರೆಜಿಜು ಭಾಗವಹಿಸಿದ್ದರು.

225. ಫೋರ್ಬ್ಸ್ ನಿಯತಕಾಲಿಕೆಯ ಅತಿ ಹೆಚ್ಚು ಸಂಭಾವನೆ ಪಡೆಯುವ ವಿಶ್ವದ ನಟರ ಪಟ್ಟಿಯಲ್ಲಿ ಅತಿ ಹೆಚ್ಚು ಸಂಭಾವನೆ ಪಡೆಯುವ ಭಾರತದ ನಟ ಯಾರು?

ಅ) ರಜನೀಕಾಂತ್

ಆ) ಅಕ್ಷಯ್ ಕುಮಾರ್

ಇ) ಶಾರೂಖ್ ಖಾನ್

ಈ) ಸಲ್ಮಾನ್ ಖಾನ್

ಶಾರೂಖ್ ಖಾನ್

www.karunaduexams.com

ಫೋರ್ಬ್ಸ್ ನಿಯತಕಾಲಿಕೆ ಬಿಡುಗಡೆ ಮಾಡಿರುವ ಈ ವರ್ಷದ ವಿಶ್ವದ ಶ್ರೀಮಂತ ನಟರ ಟಾಪ್ 10ನಲ್ಲಿ ಬಾಲಿವುಡ್ ನಟರಾದ ಅಕ್ಷಯ್ ಕುಮಾರ್ ಮತ್ತು ಶಾರೂಖ್ ಖಾನ್ ಸ್ಥಾನ ಪಡೆದಿದ್ದಾರೆ. ವಿಶ್ವದ ಶ್ರೀಮಂತ ನಟರ ಪಟ್ಟಿಯಲ್ಲಿ ಶಾರೂಖ್ ಖಾನ್ 8ನೇ (33 ಮಿಲಿಯನ್ ಡಾಲರ್) ಸ್ಥಾನಗಳಿಸಿದ್ದು, ಆ ಮೂಲಕ ಅತಿ ಹೆಚ್ಚು ಸಂಭಾವನೆ ಪಡೆಯುವ ಭಾರತದ ನಟ ಎನಿಸಿದ್ದಾರೆ. ಅಕ್ಷಯ್ ಕುಮಾರ್ 10ನೇ (31.5 ಮಿಲಿಯನ್ ಡಾಲರ್) ಸ್ಥಾನವನ್ನು ಪಡೆದಿದ್ದಾರೆ. ಫೋರ್ಬ್ಸ್ ನಿಯತಕಾಲಿಕೆಯ ಮೊದಲ ಸ್ಥಾನದಲ್ಲಿ ಡ್ವಾಯ್ನೆ ಜಾನ್ಸನ್ ಮತ್ತು ಎರಡನೇ ಸ್ಥಾನದಲ್ಲಿ ಜಾಕಿ ಚಾನ್ ಇದ್ದಾರೆ.

226. ಈ ಕೆಳಗಿನ ಯಾವ ದೇಶದ ಪ್ರಥಮ "ಬ್ರಿಕ್ಸ್ ಸಿನಿಮೋತ್ಸವ (BRICS Festival)"ದ ಅತಿಥ್ಯ ವಹಿಸಲಿದೆ?

ಅ) ಭಾರತ

ಆ) ರಷ್ಯಾ

ಇ) ಚೀನಾ

ಈ) ದಕ್ಷಿಣ ಆಫ್ರಿಕಾ

ಭಾರತ

ಮೊದಲ ಬ್ರಿಕ್ಸ್ ಸಿನಿಮೋತ್ಸವವು ನವದೆಹಲಿಯ ಸಿರಿಫೋರ್ಟ್ ಆಡಿಟೋರಿಯಂ ಸಂಕೀರ್ಣದಲ್ಲಿ ಸೆಪ್ಟೆಂಬರ್ 2 ರಿಂದ 6 ವರೆಗೆ ನಡೆಯಲಿದೆ. ಬ್ರಿಕ್ಸ್ ಸದಸ್ಯ ರಾಷ್ಟ್ರಗಳ ಚಲನಚಿತ್ರೋದ್ಯಮದ ಜನರ ನಡುವೆ ಸಿನಿಮಾ ಮತ್ತು ಸಂಸ್ಕೃತಿ ಕ್ಷೇತ್ರದಲ್ಲಿ ಪರಸ್ಪರ ಸಹಕಾರ ವೃದ್ಧಿಸಲು ಇದು ವೇದಿಕೆಯಾಗಲಿದೆ. ಅಲ್ಲದೇ, ಸಿನಿಮಾ ಕ್ಷೇತ್ರಕ್ಕೆ ಅಘಣನೀಯ ಸೇವೆ ನೀಡಿದ ನಟ, ನಟಿಯರು, ನಿರ್ದೇಶಕರು ಮತ್ತು ನಿರ್ಮಾಪಕರಿಗೆ ಈ ಕಾರ್ಯಕ್ರಮದಲ್ಲಿ ಗೌರವಿಸಲಾಗುವುದು.

227. ದೃಷ್ಟಿ ಮಾಂದ್ಯರಿಗಾಗಿ ಯಾವ "ಇ-ಲೈಬ್ರರಿ (e-Library)ಯನ್ನು" ಕೇಂದ್ರ ಸರ್ಕಾರ ಇತ್ತೀಚೆಗೆ ಆರಂಭಿಸದೆ?

ಅ) ದಿವ್ಯ ಪುಸ್ತಕಾಲಯ

ಆ) ದೃಷ್ಟಿ ಪುಸ್ತಕಾಲಯ

ಇ) ಸುಗಮ್ಯ ಪುಸ್ತಕಾಲಯ

ಈ) ಸುಲಭ್ ಪುಸ್ತಕಾಲಯ

ಸುಗಮ್ಯ ಪುಸ್ತಕಾಲಯ

ದೃಷ್ಟಿ ಮಾಂದ್ಯರಿಗೆ ಓದುವ ಅವಕಾಶವನ್ನು ಕಲ್ಪಿಸುವ ದಿಸೆಯಿಂದ ಕೇಂದ್ರ ಸರ್ಕಾರ ಸುಗಮ್ಯ ಪುಸ್ತಕಾಲಯವನ್ನು ಇತ್ತೀಚೆಗೆ ಆರಂಭಿಸಿದೆ. ಇದೊಂದು ಆನ್ ಲೈನ್ ಲೈಬ್ರರಿಯಾಗಿದ್ದು, ಸುಮಾರು 2 ಲಕ್ಷಕ್ಕೂ ಹೆಚ್ಚು ಪುಸ್ತಕಗಳು ವಿವಿಧ ಭಾಷೆಯಲ್ಲಿ ಲಭಿಸಲಿವೆ. ದೃಷ್ಟಿ ಮಾಂದ್ಯರು ಕೇವಲ ಬಟನ್ ಒತ್ತುವ ಮೂಲಕ ತಮಗೆ ಬೇಕಾದ ಪುಸ್ತಕಗಳನ್ನು ಓದಬಹುದಾಗಿದೆ. ಮೊಬೈಲ್, ಟ್ಯಾಬ್ಲೆಟ್, ಕಂಪ್ಯೂಟರ್ ಮೂಲಕ ಸಹ ಪುಸ್ತಕಗಳನ್ನು ಓದಬಹುದಾಗಿದೆ. ಈ ಆನ್ ಲೈನ್ ಲೈಬ್ರರಿಯನ್ನು ಡೈಸಿ ಫೋರಂ ಆಫ್ ಇಂಡಿಯಾ ಮತ್ತು ಬುಕ್ ಶೇರ್ ಸಹಯೋಗದೊಂದಿಗೆ ಆರಂಭಿಸಲಾಗಿದೆ.

www.karunaduexams.com

228. ಈ ಕೆಳಗಿನ ಯಾವ ದೇಶ 2016 ಭಾರತ-ಅಂತಾರಾಷ್ಟ್ರೀಯ ಚಲನಚಿತ್ರೋತ್ಸವದ(International Film Festival of India) ಆದ್ಯತಾ ದೇಶವಾಗಿದೆ?

ಅ) ದಕ್ಷಿಣ ಕೊರಿಯಾ

ಆ) ರಷ್ಯಾ

ಇ) ಚೀನಾ

ಈ) ಪಾಕಿಸ್ತಾನ

ದಕ್ಷಿಣ ಕೊರಿಯಾ

47ನೇ ಭಾರತ-ಅಂತಾರಾಷ್ಟ್ರೀಯ ಚಲನಚಿತ್ರೋತ್ಸವ ನವೆಂಬರ್ ನಲ್ಲಿ ಗೋವಾದಲ್ಲಿ ನಡೆಯಲಿದೆ. ಈ ಬಾರಿಯ ಚಲನಚಿತ್ರೋತ್ಸವದಲ್ಲಿ ದಕ್ಷಿಣ ಕೊರಿಯಾ ಆದ್ಯತಾ ರಾಷ್ಟ್ರವಾಗಿದ್ದು, ದಕ್ಷಿಣ ಕೊರಿಯಾದ ಪ್ರಮುಖ ಸಿನಿಮಾಗಳನ್ನು ಪ್ರದರ್ಶಿಸಲಾಗುವುದು ಹಾಗೂ ಕೊರಿಯಾದ ಪ್ರಸಿದ್ಧ ಸಿನಿಮಾ ವ್ಯಕ್ತಿಗಳು ಭಾಗವಹಿಸಲಿದ್ದಾರೆ.

229. "ಥಿಯೇಟರ್ ಆಫ್ ಡೆಮೋಕ್ರಸಿ (Theatre of Democracy)" ಪುಸ್ತಕದ ಲೇಖಕರು _____?

ಅ) ಶಿವ್ ವಿಶ್ವನಾಥನ್

ಆ) ಕುಮಾರ ಚೌಧರಿ

ಇ) ಅಮಿತಾವ್ ಘೋಷ್

ಈ) ರವೀಂದ್ರ ಸಿಂಗ್

ಶಿವ್ ವಿಶ್ವನಾಥನ್

230. ಇತ್ತೀಚೆಗೆ ನಿಧನರಾದ ಕೆ.ಕೆ. ಶ್ರೀಧರನ್ ನಾಯರ್ ಯಾವ ಕ್ಷೇತ್ರಕ್ಕೆ ಸಂಬಂಧಿಸಿದ್ದಾರೆ?

ಅ) ಕ್ರೀಡೆ

ಆ) ಪತ್ರಿಕೋದ್ಯಮ

ಇ) ವಿಜ್ಞಾನ

ಈ) ಸಾಹಿತ್ಯ

ಪತ್ರಿಕೋದ್ಯಮ

ಕೆ.ಕೆ.ಶ್ರೀಧರನ್ ಅವರು ಮಲಯಾಳಂ ನ ಮಾತೃಭೂಮಿ ನಿಯತಕಾಲಿಕೆಯ ಮಾಜಿ ಸಂಪಾದಕರು. 86 ವರ್ಷದ ಶ್ರೀಧರನ್ ವಯೋಸಹಜ ಅನಾರೋಗ್ಯದಿಂದ ಬಳಲುತ್ತಿದ್ದರು. ಕೇರಳದ ಮಾತೃಭೂಮಿ ಪ್ರಿಂಟಿಂಗ್ ಮತ್ತು ಪಬ್ಲಿಷಿಂಗ್ ಸಂಸ್ಥೆ ಮಾತೃಭೂಮಿ ಸಾಪ್ತಾಯಿಕ ನಿಯತಕಾಲಿಕೆಯನ್ನು ಪ್ರಕಟಿಸುತ್ತಿದೆ.

www.karunaduexams.com

231. ವಿಶ್ವದ ಮೊದಲ ಚಾಲಕ ರಹಿತ ಟ್ಯಾಕ್ಸಿಯನ್ನು ಯಾವ ದೇಶದಲ್ಲಿ ಆರಂಭಿಸಲಾಯಿತು?

ಅ) ಸ್ವಿಟ್ಜರ್ಲ್ಯಾಂಡ್

ಆ) ಅಮೆರಿಕಾ

ಇ) ಸಿಂಗಾಪುರ

ಈ) ನಾರ್ವೆ

ಸಿಂಗಾಪುರ

ಸಿಂಗಾಪುರದಲ್ಲಿ ವಿಶ್ವದ ಮೊದಲ ವಿನೂತನ ಚಾಲಕ ರಹಿತ ಟ್ಯಾಕ್ಸಿ ಸೇವೆಯನ್ನು ಆರಂಭಿಸಿಲಾಗಿದೆ. ಸಿಂಗಾಪುರ ಮೂಲದ ಸ್ಟಾರ್ಟಪ್ ಸಂಸ್ಥೆ ನುಟುನೋಮಿ ಈ ಚಾಲಕ ರಹಿತ ಟ್ಯಾಕ್ಸಿ ಸೇವೆಯನ್ನು ಆರಂಭಿಸಿದೆ. ನುಟನೋಮಿ ಮೂಲತಃ ಅಮೆರಿಕದ ಎಂಐಟಿಯ ಪದವೀಧರರಾದ ಲ್ಯಾಗ್ನೆಮ್ಮಾ ಮತ್ತು ಎಮಿಲಿಯೋ ಎಂಬ ತಂತ್ರಜ್ಞರು 2013ರಲ್ಲಿ ಹುಟ್ಟುಹಾಕಿದ್ದ ಸಂಸ್ಥೆಯಾಗಿದೆ. ಈ ಸಂಸ್ಥೆ ಕಾರುಗಳನ್ನು ನಿರ್ಮಿಸುವುದಿಲ್ಲವಾದರೂ ಸಾಮಾನ್ಯ ಕಾರುಗಳಿಗೆ ಸೆನ್ಸರ್ ಮತ್ತು ಕ್ಯಾಮೆರಾ ಅಳವಡಿಸಿ, ಅದು ಸ್ವಯಂಚಾಲಿತವಾಗಿ ಚಲಿಸುವಂಥ ಸಾಫ್ಟ್ ವೇರ್ ಅಭಿವೃದ್ಧಿ ಪಡಿಸಿ ಕಾರಿಗೆ ಅಳವಡಿಸಿದೆ. ಈ ವಿನೂತನ ಪರಿಕಲ್ಪನೆಯ ಟ್ಯಾಕ್ಸಿ ಸೇವೆಗೆ ಕಳೆದ ತಿಂಗಳಷ್ಟೇ ಸಿಂಗಾಪುರ ಸರ್ಕಾರ ಅನುಮತಿ ನೀಡಿತ್ತು.

232. ಯಾವ ರಾಜ್ಯ ಇತ್ತೀಚೆಗೆ ಕುಸ್ತಿ ಪಟು ಸಾಕ್ಷಿ ಮಲಿಕ್ ಅವರನ್ನು "ಬೇಟಿ ಬಚವೊ ಬೇಟಿ ಪಡಾವೊ"ದ ರಾಯಭಾರಿಯಾಗಿ ನೇಮಿಸಿದೆ?

ಅ) ಹರಿಯಾಣ

ಆ) ಗುಜರಾತ್

ಇ) ಹಿಮಾಚಲ್ ಪ್ರದೇಶ

ಈ) ಉತ್ತರಖಂಡ

ಹರಿಯಾಣ

ಹರಿಯಾಣ ಸರ್ಕಾರ ರಿಯೋ ಒಲಂಪಿಕ್ಸ್ ನಲ್ಲಿ ಭಾರತಕ್ಕೆ ಮೊದಲ ಪದಕ ತಂದುಕೊಟ್ಟ ಮಹಿಳಾ ಕುಸ್ತಿಪಟು ಸಾಕ್ಷಿ ಮಲಿಕ್ ಅವರನ್ನು ಬಚವೊ ಬೇಟಿ ಪಡಾವೊ"ದ ರಾಯಭಾರಿಯಾಗಿ ನೇಮಿಸಿದೆ.

233.ಭಾರತದ ರಾಷ್ಟ್ರೀಯ ಪಾವತಿಗಳ ಕಾರ್ಪೊರೇಷನ್(NPCI) ಇತ್ತೀಚೆಗೆ ಮೊಬೈಲ್ ಮೂಲಕ ಪಾವತಿ ಮಾಡಲು UPI ಆಪ್ ಬಿಡುಗಡೆಗೊಳಿಸಿದೆ. UPI ಅಂದರೆ__________?

ಅ) Unified Payments Identity

ಆ) Unified Payments Interface

ಇ) Uniform Payments Identity



www.karunaduexams.com

ಈ) Unified Partial Identity

Unified Payments Interface

ಭಾರತದ ರಾಷ್ಟ್ರೀಯ ಪಾವತಿಗಳ ಕಾರ್ಪೊರೇಷನ್ (National Payment Corporation of India) UPI ಮೊಬೈಲ್ ಅಪ್ಲಿಕೇಷನ್ ಬಿಡುಗಡೆಗೊಳಿಸಿದ್ದು, ಈ ಆಪ್ ಮೂಲಕ ನಗದು ರಹಿತ ಹಣ ವರ್ಗಾವಣೆ ಸುಲಭವಾಗಲಿದೆ. UPI ಅಂದರೆ Unified Payments Interface ಎಂದರ್ಥ. ಇದು ರಿಸರ್ವ್ ಬ್ಯಾಂಕಿನ ಅಭಿಯಾನದ ಒಂದು ಭಾಗವಾಗಿದೆ. ಪ್ರಸ್ತುತ 21 ಬ್ಯಾಂಕುಗಳ ಗ್ರಾಹಕರು ಈ ಹೊಸ ಹಣ ಪಾವತಿ ಮಾರ್ಗವನ್ನು ಬಳಸಿಕೊಳ್ಳಬಹುದು. ಇನ್ನಷ್ಟು ಬ್ಯಾಂಕುಗಳು ಮುಂದಿನ ದಿನಗಳಲ್ಲಿ ಯುಪಿಐ ಸೇರುವ ನಿರೀಕ್ಷೆಯಿದೆ. ಯುಪಿಐ ಯೋಜನೆಗೆ ಇನ್ಫೋಸಿಸ್ ಸಹ ಸ್ಥಾಪಕ ನಂದನ್ ನೀಲೇಕಣಿ ಸಲಹಗಾರರಾಗಿದ್ದಾರೆ. ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ ಗವರ್ನರ್ ರಘುರಾಮ್ ರಾಜನ್ ಈ ಹೊಸ ಪಾವತಿ ತಂತ್ರಜ್ಞಾನವನ್ನು ಕಳೆದ ಏಪ್ರಿಲ್ ನಲ್ಲಿ ಆರಂಭಿಸಿದ್ದು, ಅದರ ನಂತರ ಪ್ರಾಯೋಗಿಕವಾಗಿ ನಡೆಸಲಾಗುತ್ತಿದೆ.

234. ಇತ್ತೀಚೆಗೆ ನಿಧನರಾದ ಎ.ಆರ್.ಕಿದ್ವಾಯಿ ರವರು _____?

ಅ) ರಾಜಕಾರಣಿ

ಆ) ಛಾಯಾಚಿತ್ರಗಾರ

ಇ) ಸಾಹಿತಿ

ಈ) ಶಾಸ್ತ್ರೀಯ ಸಂಗೀತಗಾರ

ರಾಜಕಾರಣಿ

ಸ್ವಾತಂತ್ರ ಹೋರಾಟಗಾರ, ಹಿರಿಯ ರಾಜಕಾರಣಿ ಡಾ.ಅಖ್ಲಕ್ ಉರ್ ರಹಮಾನ್ ಕಿದ್ವಾಯಿ ನಿಧನರಾದರು. ಕಿದ್ವಾಯಿ ಅವರು ಬಿಹಾರ, ಪಶ್ಚಿಮ ಬಂಗಾಳ, ಹರಿಯಾಣ ಮತ್ತು ರಾಜಸ್ಥಾನ ರಾಜ್ಯಗಳಲ್ಲಿ ರಾಜ್ಯಪಾಲರಾಗಿ ಸೇವೆ ಸಲ್ಲಿಸಿದ್ದರು. ಸುದೀರ್ಘ 17 ವರ್ಷಗಳ ಕಾಲ ರಾಜ್ಯಪಾಲರಾಗಿ ಕಾರ್ಯನಿರ್ವಹಿಸಿದ ಹಿರಿಮೆ ಅವರದು. ಇವರಿಗೆ ಭಾರತ ಸರ್ಕಾರ ಪದ್ಮ ವಿಭೂಷಣ ಪ್ರಶಸ್ತಿಯನ್ನು ನೀಡಿ ಗೌರವಿಸಿತ್ತು.

235. ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಟಾಕ್ಸಿಕಾಲಜಿ ರಿಸರ್ಚ್ ಎಲ್ಲಿದೆ?

ಅ) ಬೆಂಗಳೂರು

ಆ) ಮುಂಬೈ

ಇ) ಲಕ್ನೋ

ಈ) ನವದೆಹಲಿ

ಲಕ್ನೋ

ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಟಾಕ್ಸಿಕಾಲಜಿ ರಿಸರ್ಚ್ ಲಕ್ನೋ, ಉತ್ತರಪ್ರದೇಶದಲ್ಲಿದೆ.

www.karunaduexams.com

236. ಎಂಜಿನಿಯರಿಂಗ್ ನಲ್ಲಿ ವೈಶಿಷ್ಟ್ಯ ಸಾಧನೆ ತೋರಿದ್ದಕ್ಕಾಗಿ ಮೊದಲ IEE-IEEE ಪ್ರಶಸ್ತಿಗೆ ಯಾರನ್ನು ಆಯ್ಕೆಮಾಡಲಾಗಿದೆ?

ಅ) ಮಾಧವನ್ ನಾಯರ್

ಆ) ಕಿರಣ್ ಕುಮಾರ್

ಇ) ಸತೀಶ್ ರೆಡ್ಡಿ

ಈ) ಅರವಿಂದ್ ಸರಸ್ವತ್

ಸತೀಶ್ ರೆಡ್ಡಿ

ರಕ್ಷಣಾ ಸಚಿವರ ವೈಜ್ಞಾನಿಕ ಸಲಹೆಗಾರ ಮತ್ತು ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ (DRDO)ದ ಡೈರೆಕ್ಟರ್ ಜನರಲ್ ಆಗಿರುವ ಡಾ.ಜಿ.ಸತೀಶ್ ರೆಡ್ಡಿ ಅವರನ್ನು ಮೊದಲ IEE-IEEE (Institution of Engineers (India) and the Institute of Electrical and Electronics Engineers) ಪ್ರಶಸ್ತಿಗೆ ಆಯ್ಕೆಮಾಡಲಾಗಿದೆ. ಕ್ಷಿಪಣಿ ಮತ್ತು ಅಂತರಿಕ್ಷಯಾನ ಕ್ಷೇತ್ರದಲ್ಲಿ ರಾಷ್ಟ್ರಕ್ಕೆ ಇವರು ನೀಡಿರುವ ಕೊಡುಗೆಯನ್ನು ಗಮನಿಸಿ ಇವರನ್ನು ಪ್ರಶಸ್ತಿಗೆ ಪರಿಗಣಿಸಲಾಗಿದೆ. ಮಧ್ಯಮ ಶ್ರೇಣಿಯ ಭೂಮಿಯಿಂದ ಗಾಳಿಗೆ ಚಿಮ್ಮುವ ಕ್ಷಿಪಣಿ ವ್ಯವಸ್ಥೆ (Medium Range Surface-to-Air Weapon System) ಸೇರಿದಂತೆ ಗೈಡೆಡ್ ಬಾಂಬ್ ಅಭಿವೃದ್ಧಿಯಲ್ಲಿ ಇವರು ಪ್ರಮುಖ ಪಾತ್ರವಹಿಸಿದ್ದಾರೆ.

237. ಯಾವ ದೇಶ ಇತ್ತೀಚೆಗೆ FARC ಬಂಡುಕೋರರೊಂದಿಗೆ ಶಾಂತಿ ಒಪ್ಪಂದ ಮಾಡಿಕೊಳ್ಳುವ ಮೂಲಕ ಐವತ್ತು ವರ್ಷಗಳ ಅಶಾಂತಿ ಮತ್ತು ಹಿಂಸೆಯನ್ನು ಅಂತ್ಯಗೊಳಿಸಿತು?

ಅ) ದಕ್ಷಿಣ ಕೊರಿಯಾ

ಆ) ಕೊಲೊಂಬಿಯಾ

ಇ) ಕ್ಯೂಬಾ

ಈ) ನೈಜೀರಿಯಾ

ಕೊಲೊಂಬಿಯಾ

ಕೊಲೊಂಬಿಯಾ ಸರ್ಕಾರ ಮತ್ತು ಕೊಲೊಂಬಿಯಾದ ಪ್ರಮುಖ ಬಂಡುಕೋರ ದಳ FARC (Revolutionary Armed Forces of Colombia) ನಡುವೆ ಐತಿಹಾಸಿಕ ಶಾಂತಿ ಒಪ್ಪಂದಕ್ಕೆ ಸಹಿಹಾಕಲಾಗಿದೆ. ಆ ಮೂಲಕ ಕೊಲೊಂಬಿಯಾದಲ್ಲಿ ಸುಮಾರು 50 ವರ್ಷಗಳಿಂದ ಸರ್ಕಾರ ಮತ್ತು FARC ನಡುವಿನ ಸಂಘರ್ಷಕ್ಕೆ ಅಂತಿಮ ತೆರೆ ಬಿದ್ದಿದೆ. FARC ದಂಗೆಯಿಂದ ಕಳೆದ ಐದು ದಶಕಗಳಲ್ಲಿ ಸುಮಾರು 1.5 ಲಕ್ಷ ಜನರು ಸಾವನ್ನಪ್ಪಿದ್ದರು.

238. ಒಲಂಪಿಕ್ಸ್ ನಲ್ಲಿ ಕ್ರೀಡಾಸ್ಫೂರ್ತಿಗಾಗಿ ನೀಡಲಾಗುವ ಪ್ರತಿಷ್ಠಿತ "ಪೈರೆ ಡಿ ಕೋಬರ್ಟಿಯನ್" ಪ್ರಶಸ್ತಿ ಪಡೆದ ನಿಕ್ಕಿ ಹಾಂಬ್ಲಿನ್ ಯಾವ ದೇಶದವರು?

ಅ) ಅಮೆರಿಕಾ

www.karunaduexams.com

ಆ) ನ್ಯೂಜಿಲ್ಯಾಂಡ್

ಇ) ಜಪಾನ್

ಈ) ನಾರ್ವೆ

ನ್ಯೂಜಿಲ್ಯಾಂಡ್

ನ್ಯೂಜಿಲೆಂಡ್‌ನ ನಿಕ್ಕಿ ಹಾಂಬ್ಲಿನ್ ಹಾಗೂ ಅಮೆರಿಕದ ಅಬ್ಬೇ ಡಿ ಅಗೋಸ್ಟಿನೋ ಅವರಿಗೆ ಕ್ರೀಡಾಸ್ಪೂರ್ತಿಗಾಗಿ ನೀಡಲಾಗುವ ಪ್ರತಿಷ್ಠಿತ "ಪೈರೆ ಡಿ ಕೋಬರ್ಟಿಯನ್" ಪ್ರಶಸ್ತಿಯನ್ನು ನೀಡಲಾಗಿದೆ .ಈ ಇಬ್ಬರು ಅಥ್ಲೀಟ್ ಗಳು 5 ಸಾವಿರ ಮೀ. ಓಟದ ವೇಳೆ ಡಿಕ್ಕಿಯಾದ ಬಳಿಕ ಪರಸ್ಪರರ ಸಹಾಯದಿಂದ ಮತ್ತೆ ಓಟ ಮುಂದುವರಿಸಿ ಸ್ಪರ್ಧೆ ಮುಗಿಸಿದ ಒಲಿಂಪಿಕ್ಸ್‌ನಲ್ಲಿ ಕ್ರೀಡಾಸ್ಪೂರ್ತಿ ಮೆರೆದಿದ್ದರು. ಆಧುನಿಕ ಒಲಿಂಪಿಕ್ಸ್‌ನ ಪಿತಾಮಹಾ ಫ್ರಾನ್ಸ್‌ನ ಪೈರೆ ಡಿ ಕೋಬರ್ಟಿನ್ ಸ್ಮರಣಾರ್ಥ ನೀಡಲಾಗುವ ಪದಕ, ಈ ಹಿಂದೆ ಕೇವಲ 17 ಬಾರಿ ಪ್ರದಾನವಾಗಿದೆ.

239. ಬಾಂಗ್ಲದೇಶದ ಬಂಗಾಳಿ ಕೇಳುಗರಿಗಾಗಿ ಇತ್ತೀಚೆಗೆ ಭಾರತ ಯಾವ ಹೆಸರಿನ ಆಕಾಶವಾಣಿ ಚಾನೆಲ್ ಅನ್ನು ಆರಂಭಿಸಿದೆ?

ಅ) ಸ್ವರ ಚಾನೆಲ್

ಆ) ಮೈತ್ರಿ ಚಾನೆಲ್

ಇ) ಜನನಿ ಚಾನೆಲ್

ಈ) ಬಂಗಾ ಚಾನೆಲ್

ಮೈತ್ರಿ ಚಾನೆಲ್

ಬಂಗಾಳಿ ಕೇಳುಗರಿಗಾಗಿ ಆಕಾಶವಾಣಿ ಮೈತ್ರಿ ಚಾನೆಲ್ ಮತ್ತು ಅದರ ವೆಬ್‌ಸೈಟ್ ಅನ್ನು ರಾಷ್ಟ್ರಪತಿ ಪ್ರಣವ್ ಮುಖರ್ಜಿ ಅವರು ಕೋಲ್ಕತ್ತಾದಲ್ಲಿ ಉದ್ಘಾಟಿಸಿದರು. ಈ ಚಾನೆಲ್ ಉಭಯ ದೇಶಗಳ ನಡುವೆ ಸಾಂಸ್ಕೃತಿಕ, ಆರ್ಥಿಕ ಮತ್ತು ರಾಜಕೀಯ ಸಂಬಂಧವನ್ನು ಉತ್ತಮಪಡಿಸಲಿದೆ. 1000kw DRM ಟ್ರಾನ್ಸ್ಮಿಟರ್ ಮೂಲಕ ಮೈತ್ರಿ ಚಾನೆಲ್ ಪ್ರಸಾರಗೊಳ್ಳಲಿದ್ದು, ಸಂಪೂರ್ಣ ಬಾಂಗ್ಲಾ ದೇಶವನ್ನು ತಲುಪಲಿದೆ. ವೆಬ್‌ಸೈಟ್ ಮತ್ತು ಮೊಬೈಲ್ ಆ್ಯಪ್ ಮೂಲಕ ಜಗತ್ತಿನ ಎಲ್ಲ ಕೇಳುಗರನ್ನು ತಲುಪಲು ಯೋಜಿಸಲಾಗಿದೆ.

240. ರಿಯೋ ಒಲಂಪಿಕ್ಸ್ ಶೂಟಿಂಗ್ ನಲ್ಲಿ ಕಳಪೆ ಸಾಧನೆ ಕುರಿತು ರಚಿಸಲಾಗಿರುವ "ರಾಷ್ಟ್ರೀಯ ರೈಫಲ್ ಅಸೋಸಿಯೇಷನ್ ಆಫ್ ಇಂಡಿಯಾ" ಸಮಿತಿಯ ಅಧ್ಯಕ್ಷರು ಯಾರು?

ಅ) ಜಿತು ರಾಯ್

ಆ) ಅಭಿನವ್ ಬಿಂದ್ರಾ

ಇ) ಗಗನ್ ನಾರಂಗ್

ಈ) ರಾಜ್ಯವರ್ಧನ್ ಸಿಂಗ್ ರಾಥೋಡ್

www.karunaduexams.com

ಅಭಿನವ್ ಬಿಂದ್ರಾ

ರಿಯೋ ಒಲಂಪಿಕ್ಸ್ ಶೂಟಿಂಗ್ ನಲ್ಲಿ ಕಳಪೆ ಸಾಧನೆ ಕುರಿತು ಐದು ಜನ ಸದಸ್ಯರ ಸಮಿತಿಯನ್ನು "ರಾಷ್ಟ್ರೀಯ ರೈಫಲ್ ಅಸೋಸಿಯೇಷನ್ ಆಫ್ ಇಂಡಿಯಾ" ರಚಿಸಿದ್ದು, ಅಭಿನವ್ ಬಿಂದ್ರಾ ಈ ಸಮಿತಿಯ ಅಧ್ಯಕ್ಷರಾಗಿದ್ದಾರೆ. ಸಮಿತಿಯು ರಿಯೋ ಒಲಂಪಿಕ್ಸ್ ನಲ್ಲಿ ಶೂಟರ್ ಗಳು ಪದಕ ಗೆಲ್ಲದೆ ನಿರಾಸೆ ಮೂಡಿಸಿದ ವೈಫಲ್ಯತೆಯ ಬಗ್ಗೆ ಅಧ್ಯಯನ ನಡೆಸಲಿದೆ. ಅಲ್ಲದೇ, ಮುಂದಿನ ಒಲಂಪಿಕ್ಸ್ ಗಳಲ್ಲಿ ಮತ್ತೊಮ್ಮೆ ವೈಫಲ್ಯ ಆಗದಿರುವಂತೆ ತುರ್ತಾಗಿ ಕೈಗೊಳ್ಳಬೇಕಾದ ಕ್ರಮಗಳನ್ನು ಸಮಿತಿ ಶಿಫಾರಸ್ಸು ಮಾಡಲಿದೆ.

241. ಈ ಕೆಳಗಿನ ಯಾವುದು ಬೆಂಗಳೂರಿನಲ್ಲಿ ನಡೆಯಲಿರುವ 2017 ಪ್ರವಾಸಿ ಭಾರತೀಯ ದಿವಸ್ ನ ಧ್ಯೇಯ ವಾಕ್ಯ (Theme) ಆಗಿದೆ?

ಅ) ಪ್ರವಾಸಿ ಭಾರತೀಯರ ಸಂಬಂಧಗಳ ಹೊಸ ಆಯಾಮ

ಆ) ನಿಮ್ಮ ದೇಶ ನಿಮ್ಮ ಗೌರವ: ಅನಿವಾಸಿ ಭಾರತೀಯರೊಂದಿಗೆ ಬಾಂಧವ್ಯ

ಇ) ಭಾರತದ ಹೊಸ ಬೆಳವಣಿಗೆಗೆ ನಿಮ್ಮ ನೆರವು

ಈ) ಒಂದು ದೇಶ ವಿವಿದ ಸಂಬಂಧಗಳ ಆಯಾಮ

ಪ್ರವಾಸಿ ಭಾರತೀಯರ ಸಂಬಂಧಗಳ ಹೊಸ ಆಯಾಮ

ಬೆಂಗಳೂರಿನಲ್ಲಿ 2017 ಪ್ರವಾಸಿ ಭಾರತೀಯ ದಿವಸ್ ಅನ್ನು ಜನವರಿ 7, 8 ಮತ್ತು 9ರಂದು ಆಚರಿಸಲಾಗುವುದು. ಇದೇ ಮೊದಲ ಬಾರಿಗೆ ರಾಜ್ಯದಲ್ಲಿ ಪ್ರವಾಸಿ ಭಾರತ್ ದಿವಸ್ ಆಚರಣೆಮಾಡಲಾಗುತ್ತಿದೆ. "ಪ್ರವಾಸಿ ಭಾರತೀಯರ ಸಂಬಂಧಗಳ ಹೊಸ ಆಯಾಮ (Redefined Engagement With Indian Diaspora)" ಎಂಬ ಶೀರ್ಷಿಕೆಯಡಿ ಈ ಬಾರಿ ಪ್ರವಾಸಿ ಭಾರತ್ ದಿವಸ್ ಅನ್ನು ಆಚರಿಲಾಗುವುದು. ಜನವರಿ 9 ರಂದು ಮಹಾತ್ಮಗಾಂಧಿಜಿ ಅವರು ದಕ್ಷಿಣ ಆಫ್ರಿಕಾದಿಂದ ಭಾರತಕ್ಕೆ ಮರಳಿದ ದಿನವಾಗಿದ್ದು ಆ ದಿನದ ನೆನಪಿಗಾಗಿ ಮುಖ್ಯವಾಗಿ ಭಾರತದ ಅಭಿವೃದ್ಧಿಗೆ ಸಾಗರೋತ್ತರ ಭಾರತೀಯ ಸಮುದಾಯದ ಕೊಡುಗೆ ಗುರುತಿಸಲು 2003ರಿಂದ ಪ್ರತಿ ವರ್ಷ ಪ್ರವಾಸಿ ಭಾರತಿಯ ದಿವಸ್ ಆಚರಣೆಯನ್ನು ಮಾಡಲಾಗುತ್ತದೆ.

242. ಇತ್ತೀಚೆಗೆ ಬಿಡುಗಡೆಗೊಂಡ "2016 ವರ್ಲ್ಡ್ ರಿಸ್ಕ್ ಇಂಡೆಕ್ಸ್ (World Risk Index)"ನಲ್ಲಿ ಭಾರತ ಎಷ್ಟನೇ ಸ್ಥಾನದಲ್ಲಿದೆ?

ಅ) 55

ಆ) 66

ಇ) 77

ಈ) 112

77



www.karunaduexams.com

ವರ್ಲ್ಡ್ ರಿಸ್ಕ್ ರಿಪೋರ್ಟ್ನ ಭಾಗವಾದ ವರ್ಲ್ಡ್ ರಿಸ್ಕ್ ಇಂಡೆಕ್ಸ್ ನಲ್ಲಿ ಭಾರತ 77ನೇ ಸ್ಥಾನದಲ್ಲಿದೆ. ಯುನೈಟೆಡ್ ನೇಷನ್ಸ್ ಯೂನಿವರ್ಸಿಟಿ ಇನ್ಸ್ ಟಿಟ್ಯೂಟ್ ಫಾರ್ ಎನ್ವಿರ್ನಮೆಂಟ್ ಅಂಡ್ ಹ್ಯೂಮನ್ ಸೆಕ್ಯೂರಿಟಿ ಮತ್ತು ಜರ್ಮನಿಯ ಯೂನಿವರ್ಸಿಟಿ ಆಫ್ ಸ್ಟುಗ್ಗರ್ಟ್, ವರ್ಲ್ಡ್ ರಿಸ್ಕ್ ರಿಪೋರ್ಟ್ -2016ನ್ನು ಹೊರತಂದಿದ್ದು, 171 ರಾಷ್ಟ್ರಗಳ ಪೈಕಿ ಭಾರತ 77ನೇ ಸ್ಥಾನವನ್ನು ಪಡೆದುಕೊಂಡಿದೆ. ದ್ವೀಪ ರಾಜ್ಯ ವನೌಟು (Vanuatu) ಈ ಸೂಚ್ಯಂಕದಲ್ಲಿ ಮೊದಲ ಸ್ಥಾನದಲ್ಲಿದ್ದು, ವಿಪತ್ತಿನಿಂದ ಸಾಕಷ್ಟು ಸಂಕಷ್ಟಕ್ಕೆ ಸಿಲುಕಿದ ರಾಷ್ಟ್ರವೆನಿಸಿದೆ.

243. ಯಾವ ದೇಶ ಸಿರಿಯಾದಲ್ಲಿ ಐಎಸ್ಐಎಸ್ (ISIS)ಅನ್ನು ಮಟ್ಟಹಾಕುವ ಸಲುವಾಗಿ "ಆಪರೇಷನ್ ಯೂಪ್ರಟಿಸ್ ಶೀಲ್ಡ್ (Operation Euphrates Shield)" ಇತ್ತೀಚೆಗೆ ಆರಂಭಿಸಿದೆ?

ಅ) ಅಮೆರಿಕಾ

ಆ) ಇರಾನ್

ಇ) ಟರ್ಕಿ

ಈ) ಫ್ರಾನ್ಸ್

ಟರ್ಕಿ

ಸಿರಿಯಾದ ಪ್ರಮುಖ ನಗರ ಜರಬ್ಲಸ್ (Jarablus)ನಿಂದ ಇಸ್ಲಾಮಿಕ್ ಸ್ಟೇಟ್ ಆಫ್ ಇರಾಕ್ ಮತ್ತು ಸಿರಿಯಾ (ಐಎಸ್ಐಎಸ್) ಹೊರದೂಡುವ ಸಲುವಾಗಿ ಟರ್ಕಿ ದೇಶ ಆಪರೇಷನ್ ಯೂಪ್ರಟಿಸ್ ಶೀಲ್ಡ್ ಹೆಸರಿನಡಿ ಮಿಲಿಟರಿ ಕಾರ್ಯಾಚರಣೆಯನ್ನು ಆರಂಭಿಸಿದೆ. ಸಿರಿಯಾದಲ್ಲಿ ಐಎಸ್ಐಎಸ್ ವಿರುದ್ಧ ಟರ್ಕಿ ನಡೆಸುತ್ತಿರುವ ಐದನೇ ಮಿಲಿಟರಿ ಕಾರ್ಯಾಚರಣೆ ಇದಾಗಿದೆ.

244. "ಐ ವಾಂಟ್ ಟು ಬಿ ತೆಂಡೂಲ್ಕರ್ (I Want to Be Tendulkar)" ಪುಸ್ತಕದ ಲೇಖಕರು ಯಾರು?

ಅ) ಅಜಿತ್ ಅಗರ್ಕರ್

ಆ) ಮನೀಶ್ ಶರ್ಮಾ

ಇ) ಸಂಜಯ್ ಪಾಂಡೆ

ಈ) ಕೃಷ್ಣ ಕುಮಾರ್

ಮನೀಶ್ ಶರ್ಮಾ

www.karunaduexams.com

245. 2015-16 ಯುರೋಪ್ UEFA ಶ್ರೇಷ್ಠ ಆಟಗಾರ ಪ್ರಶಸ್ತಿಯನ್ನು ಯಾರು ಪಡೆದುಕೊಂಡಿದ್ದಾರೆ?

ಅ) ಲಿಯೊನೆಲ್ ಮೆಸ್ಸಿ

ಆ) ಕ್ರಿಸ್ಟಿಯಾನೋ ರೊನಾಲ್ಡೋ

ಇ) ಅಂಟೊನೆ ಗ್ರಿಜ್ಮನ್

ಈ) ಗರೇಟ್ ಬೇಲ್

ಕ್ರಿಸ್ಟಿಯಾನೋ ರೊನಾಲ್ಡೋ

ಪೋರ್ಚುಗೀಸ್ ಫುಟ್ಬಾಲ್ ಆಟಗಾರ ಕ್ರಿಸ್ಟಿಯಾನೋ ರೊನಾಲ್ಡೋ ಅವರು 2015-16 ಯುರೋಪ್ UEFA ಶ್ರೇಷ್ಠ ಆಟಗಾರ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಎರಡನೇ ಬಾರಿ ರೊನಾಲ್ಡೊ ಈ ಪ್ರಶಸ್ತಿಯನ್ನು ತಮ್ಮದಾಗಿಸಿಕೊಂಡಿದ್ದಾರೆ. ರಿಯಲ್ ಮ್ಯಾಡ್ರಿಡ್ ನ ಗರೇಟ್ ಬೇಲ್ ಹಾಗೂ ಅಟ್ಲೆಟಿಕೊ ಮ್ಯಾಡ್ರಿಡ್ ನ ಅಂಟೊನೆ ಗ್ರಿಜ್ಮನ್ ರನ್ನು ಹಿಂದಿಕ್ಕಿ ರೊನೊಲ್ಡೋ ಪ್ರಶಸ್ತಿ ಗಳಿಸಿದ್ದಾರೆ. ರೋನಾಲ್ಡೋ ಈ ಹಿಂದೆ 2013-14ರಲ್ಲಿ ಪ್ರಶಸ್ತಿಯನ್ನು ಗೆದಿದ್ದರು.

246. ಯಾವ ನಗರದಲ್ಲಿ "2016 ಮದರ್ ತೆರೆಸಾ ಅಂತಾರಾಷ್ಟ್ರೀಯ ಸಿನಿಮಾ ಉತ್ಸವ"ಕ್ಕೆ ಚಾಲನೆ ನೀಡಲಾಯಿತು?

ಅ) ಕೊಲ್ಕತ್ತ

ಆ) ಮುಂಬೈ

ಇ) ನವದೆಹಲಿ

ಈ) ಚೆನ್ನೈ

ಕೊಲ್ಕತ್ತ

4ನೇ ಮದರ್ ತೆರೆಸಾ ಅಂತಾರಾಷ್ಟ್ರೀಯ ಸಿನಿಮಾ ಉತ್ಸವ ಕೊಲ್ಕತ್ತಾದಲ್ಲಿ ಆರಂಭಗೊಂಡಿದೆ. ನಾಲ್ಕು ದಿನಗಳ ಸಿನಿಮೋತ್ಸವದಲ್ಲಿ ಮದರ್ ತೆರೆಸಾ ರವರಿಂದ ಸ್ಪೂರ್ತಿ ಪಡೆದ 23 ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಸಿನಿಮಾಗಳನ್ನು ಪ್ರದರ್ಶಿಸಲಾಗುವುದು.

247. ಭಾರತೀಯ ರಿಸರ್ವ್ ಬ್ಯಾಂಕ್ ಗವರ್ನರ್ ಹುದ್ದೆಯು ಅಧಿಕಾರ ಶ್ರೇಣಿಯಲ್ಲಿ ಈ ಕೆಳಗಿನ ಯಾವ ಹುದ್ದೆಗೆ ಸಮನಾಗಿದೆ?

ಅ) ಸಂಪುಟ ಸಚಿವರು

ಆ) ಸಂಪುಟ ಕಾರ್ಯದರ್ಶಿ

ಇ) ರಾಜ್ಯಪಾಲ

ಈ) ಮುಖ್ಯಚುನಾವಣಾಧಿಕಾರಿ

ಸಂಪುಟ ಕಾರ್ಯದರ್ಶಿ

www.karunaduexams.com

ಭಾರತೀಯ ರಿಸರ್ವ್ ಬ್ಯಾಂಕ್ ಗವರ್ನರ್ ಹುದ್ದೆಯು ಅಧಿಕಾರ ಶ್ರೇಣಿಯಲ್ಲಿ ಸಂಪುಟ ಕಾರ್ಯದರ್ಶಿಯ ಹುದ್ದೆಗೆ ಸಮನಾಗಿದೆ.

248. ಇತ್ತೀಚೆಗೆ "ಪೊಸ್ಕೊ ಇ-ಬಾಕ್ಸ್" ವ್ಯವಸ್ಥೆಯನ್ನು ಜಾರಿಗೆ ತಂದ ಕೇಂದ್ರ ಸಚಿವಾಲಯ ಯಾವುದು?

ಅ) ಹಣಕಾಸು ಸಚಿವಾಲಯ

ಆ) ವಿದೇಶಾಂಗ ವ್ಯವಹಾರಗಳ ಸಚಿವಾಲಯ

ಇ) ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯ

ಈ) ಗೃಹ ಸಚಿವಾಲಯ

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯ

ಲೈಂಗಿಕ ಶೋಷಣೆಯಿಂದ ಮಕ್ಕಳನ್ನು ರಕ್ಷಿಸುವ ಸಲುವಾಗಿ ಕೇಂದ್ರ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯ ಇ-ಬಾಕ್ಸ್ ವ್ಯವಸ್ಥೆಗೆ ನವದೆಹಲಿಯಲ್ಲಿ ಚಾಲನೆ ನೀಡಿದೆ. ಇ-ಬಾಕ್ಸ್ ಒಂದು ಆನ್ ಲೈನ್ ದೂರು ನಿರ್ವಹಣೆ ವ್ಯವಸ್ಥೆಯಾಗಿದ್ದು, ಮಕ್ಕಳ ಮೇಲಾಗುವ ಲೈಂಗಿಕ ಶೋಷಣೆಯ ದೂರನ್ನು ಸರಳವಾಗಿ ಮತ್ತು ನೇರವಾಗಿ ದಾಖಲಿಸಬಹುದಾಗಿದೆ. ಆ ಮೂಲಕ ಆರೋಪಿ ವಿರುದ್ಧ ಪೊಸ್ಕೊ (Protection of Children from Sexual Offenses) ಕಾಯಿದೆ ಅಡಿ ಕ್ರಮ ಜರುಗಿಸಬಹುದು.

249. 19ನೇ ಸಾರ್ಕ್ (SAARC) ಸಮ್ಮೇಳನವನ್ನು ಈ ಕೆಳಗಿನ ಯಾವ ದೇಶದಲ್ಲಿ ಆಯೋಜಿಸಲಾಗುತ್ತಿದೆ?

ಅ) ಭಾರತ

ಆ) ಬಾಂಗ್ಲದೇಶ

ಇ) ನೇಪಾಳ

ಈ) ಪಾಕಿಸ್ತಾನ

ಪಾಕಿಸ್ತಾನ

9ನೇ ಸಾರ್ಕ್ ಸಮ್ಮೇಳನ ನ.9 ಮತ್ತು 10ರಂದು ಪಾಕಿಸ್ತಾನದ ಇಸ್ಲಾಮಾಬಾದ್‌ನಲ್ಲಿ ನಡೆಯಲಿದೆ. ಸಾರ್ಕ್ ಸದಸ್ಯ ರಾಷ್ಟ್ರಗಳ ನಾಯಕರು ಮತ್ತು ಒಂಬತ್ತು ವೀಕ್ಷಣಾ ರಾಷ್ಟ್ರಗಳ ಪ್ರತಿನಿಧಿಗಳು ಈ ಸಮ್ಮೇಳನದಲ್ಲಿ ಭಾಗವಹಿಸಲಿದ್ದಾರೆ.

250. ಭಾರತೀಯ ರಿಸರ್ವ್ ಬ್ಯಾಂಕ್ (RBI) ಮಹಿಳಾ ಸ್ವಸಹಾಯ ಸಂಘಗಳಿಗೆ (ಎಸ್‌ಎಚ್ಜಿ) ವಾರ್ಷಿಕ ಶೇ ಎಷ್ಟರ ಬಡ್ಡಿದರದಲ್ಲಿ ಸಾಲ ನೀಡುವಂತೆ ಬ್ಯಾಂಕುಗಳಿಗೆ ಸೂಚನೆ ನೀಡಿದೆ?

ಅ) ಶೇ 3%

ಆ) ಶೇ 4%

ಇ) ಶೇ 6%

www.karunaduexams.com

ಈ) ಶೇ 7%

ಶೇ 7%

ಭಾರತೀಯ ರಿಸರ್ವ್ ಬ್ಯಾಂಕ್(RBI) ದೇಶದಲ್ಲಿರುವ ಮಹಿಳಾ ಸ್ವಸಹಾಯ ಸಂಘಗಳಿಗೆ (SHG) ವಾರ್ಷಿಕ ಶೇ. 7ರ ಬಡ್ಡಿದರದಲ್ಲಿ ಸಾಲ ನೀಡುವಂತೆ ಬ್ಯಾಂಕುಗಳಿಗೆ ಸೂಚನೆ ನೀಡಿದೆ. ಕೇಂದ್ರ ಸರ್ಕಾರದ 2016-17ರ ಪರಿಷ್ಕೃತ ಮಾರ್ಗಸೂಚಿಯಂತೆ ದೀನ್ ದಯಾಳ ಅಂತ್ಯೋದಯ ಯೋಜನೆ ಮತ್ತು ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಯೋಜನೆ ಅಡಿಯಲ್ಲಿ ಎಲ್ಲಾ ಮಹಿಳಾ ಸ್ವ ಸಹಾಯ ಸಂಘಗಳು ಶೇ. 7ರ ಬಡ್ಡಿದರದಲ್ಲಿ ರೂ. 3 ಲಕ್ಷದವರೆಗೆ ಸಾಲ ಪಡೆಯಲು ಅರ್ಹವಾಗಿವೆ ಆರ್ಬಿಐ ತಿಳಿಸಿದೆ.

251. ಇಸ್ರೋ ಇತ್ತೀಚೆಗೆ ಪರೀಕ್ಷಿಸಿದ ಸ್ಕ್ರಾಮ್ ಜೆಟ್ ಎಂಜಿನ್ ಗೆ ಸಂಬಂಧಿಸಿದಂತೆ ಯಾವ ಹೇಳಿಕೆ ಸರಿಯಾಗಿದೆ?

i) ಈ ಎಂಜಿನ್ ವಾತಾವರಣದ ಆಮ್ಲಜನಕ ಬಳಸಿ ಕಾರ್ಯನಿರ್ವಹಿಸಲಿದೆ

ii) ಇದರಿಂದ ರಾಕೆಟ್ ಉಡಾವಣೆಯ ವೆಚ್ಚದಲ್ಲಿ ಸಾಕಷ್ಟು ಇಳಿಕೆಯಾಗಲಿದೆ

ಕೆಳಗೆ ನೀಡಿರುವ ಕೋಡ್ ಗಳಿಂದ ಸರಿಯಾದ ಉತ್ತರವನ್ನು ಆರಿಸಿ:

ಅ) ಹೇಳಿಕೆ ಒಂದು ಮಾತ್ರ ಸರಿ

ಆ) ಹೇಳಿಕೆ ಎರಡು ಮಾತ್ರ ಸರಿ

ಇ) ಎರಡು ಹೇಳಿಕೆ ಸರಿಯಾಗಿವೆ

ಈ) ಎರಡು ಹೇಳಿಕೆ ತಪ್ಪಾಗಿವೆ

ಎರಡು ಹೇಳಿಕೆ ಸರಿಯಾಗಿವೆ

ಎಂಜಿನ್ ಇಂಧನವನ್ನು ಉರಿಸಲು ವಾತಾವರಣದ ಆಮ್ಲಜನಕವನ್ನು ಬಳಸುವ ಎಂಜಿನ್ ಆದ ಸ್ವದೇಶಿ ನಿರ್ಮಿತ ಸ್ಕ್ರೇಮ್ ಜೆಟ್ ನ ಪರೀಕಾರ್ಥ ಉಡಾವಣೆಯನ್ನು ಇಸ್ರೋ ಯಶಸ್ವಿಯಾಗಿ ಪೂರೈಸಿದೆ. ರಾಕೆಟ್ ವಿಮಾನದ ವಾತಾವರಣ ಹಂತದಲ್ಲಿ ಮಾತ್ರ ಇದನ್ನು ಬಳಸಲಾಗುತ್ತಿದ್ದು, ಆಕ್ಸಿಡೀಕರಣದ ಅಂಶವನ್ನು ಕಡಿಮೆ ಮಾಡಿ ಉಡ್ಡಯನ ವೆಚ್ಚವನ್ನು ಕಡಿಮೆ ಮಾಡುತ್ತದೆ. ಇಸ್ರೋದ ಮರುಬಳಕೆ ಉಡ್ಡಯನ ವಾಹಕಕ್ಕೆ ಶಬ್ದಾತೀತ ವೇಗದಲ್ಲಿ ವಿದ್ಯುತ್ ಪೂರೈಸಲು ಕೂಡ ಸ್ಕ್ರಾಪ್ ಜೆಟ್ ಎಂಜಿನ್ ನ್ನು ಬಳಸಲಾಗುತ್ತದೆ. ಈ ಎಂಜಿನ್ ವಾತಾವರಣದ ಆಮ್ಲಜನಕವನ್ನು ಬಳಸಿಕೊಂಡು ವಾಹಕವನ್ನು ಉಡಾಯಿಸುವಾಗ ಅದರ ಅರ್ಧದಷ್ಟು ತೂಕವನ್ನು ಕಡಿಮೆ ಮಾಡುತ್ತದೆ. ಕಕ್ಷೆಗೆ ಹೆಚ್ಚಿನ ತೂಕದ ಉಪಕರಣಗಳನ್ನು ಹೊತ್ತೊಯ್ಯಲು ಸಹಾಯ ಮಾಡುತ್ತದೆ. ಶಬ್ದಾತೀತ ವೇಗದಲ್ಲಿ ವಾಹಕಗಳನ್ನು ಉಡಾಯಿಸಲು ಸ್ಕ್ರಾಮ್ ಜೆಟ್ ಎಂಜಿನ್ ಸಹಾಯ ಮಾಡುತ್ತದೆ.

252.ವಿಶ್ವದ ಅತಿದೊಡ್ಡ "ಸಾಗರ ಸಂರಕ್ಷಿತ ಪ್ರದೇಶ (Marine Protected Area)"ವನ್ನು ಯಾವ ದೇಶ ಇತ್ತೀಚೆಗೆ ರಚಿಸಿದೆ?

ಅ) ಅಮೆರಿಕಾ

ಆ) ಇಂಡೋನೇಷಿಯಾ

ಇ) ರಷ್ಯಾ

ಈ) ನ್ಯೂಜಿಲ್ಯಾಂಡ್

ಅಮೆರಿಕಾ

ಜಗತ್ತಿನ ಅತಿದೊಡ್ಡ ಸಾಗರ ಸಂರಕ್ಷಿತ ಪ್ರದೇಶ ಪಾಪಾನೊಮೌಕ್ವುಕಿ ಸಾಗರ ರಾಷ್ಟ್ರೀಯ ಸ್ಮಾರಕ (Papahanaumokuakea Marine National Monument)ವನ್ನು ಅಮೆರಿಕಾದಲ್ಲಿ ರಚಿಸಲಾಗಿದೆ. ಪ್ರಸ್ತುತ ಇರುವ ಹವಾಯಿ ರಾಷ್ಟ್ರೀಯ ಸ್ಮಾರಕದ ಪ್ರದೇಶವನ್ನು ಅಮೆರಿಕಾದ ಅಧ್ಯಕ್ಷ ಬರಾಕ್ ಒಬಾಮರವರು ವಿಸ್ತರಿಸಿದ್ದು, ಪಾಪಾನೊಮೌಕ್ವುಕಿ ಸಾಗರ ರಾಷ್ಟ್ರೀಯ ಸ್ಮಾರಕ ವಿಶ್ವದ ಅತಿದೊಡ್ಡ ಸಾಗರ ಸಂರಕ್ಷಿತ ಪ್ರದೇಶವೆನಿಸಿದೆ. ಈ ಪ್ರದೇಶದ ಒಟ್ಟು ವಿಸ್ತೀರ್ಣ 5,82,578 ಚದರ ಮೀಟರ್ ಗಳಿದ್ದು, ಫ್ರಾನ್ಸ್ ದೇಶದ ವಿಸ್ತೀರ್ಣಕ್ಕಿಂತಲೂ ದೊಡ್ಡದಿದೆ ಎನ್ನಲಾಗಿದೆ. ಸುಮಾರು 7000ಕ್ಕೂ ಹೆಚ್ಚು ಪ್ರಭೇದಗಳು ಈ ಸಂರಕ್ಷಿತ ಪ್ರದೇಶದಲ್ಲಿ ರಕ್ಷಣೆ ಪಡೆಯಲಿವೆ. ಅಲ್ಲದೇ ಹವಳದ ಬಂಡೆಗಳಿಗೆ, ಅಪರೂಪದ ತಿಮಿಂಗಿಲಗಳಿಗೆ ಮತ್ತು ಸಮುದ್ರ ಆಮೆಗಳಿಗೆ ಶಾಶ್ವತವಾಗಿ ನೆಲೆ ಕಲ್ಪಿಸಲಿದೆ. 2006ರಲ್ಲಿ ಮೊದಲ ಬಾರಿಗೆ ಜಾರ್ಜ್ ಬುಷ್ ಅವರು ಈ ಪ್ರದೇಶವನ್ನು ಸಾಗರ ಸಂರಕ್ಷಿತ ಪ್ರದೇಶವೆಂದು ಘೋಷಿಸಿದ್ದರು. ಆಗ ಇದನ್ನು ನಾರ್ಥ್ ವೆಸ್ಟರ್ನ್ ಐಲ್ಯಾಂಡ್ಸ್ ಮೆರೈನ್ ನ್ಯಾಷನಲ್ ಮೊನುಮೆಂಟ್ ಎಂದು ಹೆಸರಿಡಲಾಗಿತ್ತು.

253.ಕನೆಕ್ಟಿಕಟ್ ಓಪನ್ (Connecticut Open) ಟೂರ್ನಿಯ ಮಹಿಳೆಯರ ಡಬಲ್ಸ್ ನಲ್ಲಿ ಪ್ರಶಸ್ತಿಯನ್ನು ಗೆದ್ದ ಜೋಡಿ ಯಾವುದು?

ಅ) ಸಾನಿಯಾ ಮಿರ್ಝಾ, ಮೋನಿಕಾ ನಿಕ್ಯೂಲೆಸ್ಕೋ

ಆ) ಕ್ಯಾಥೆರ್ನಾ ಬೊಂಡಾರೆಂಕೊ, ಚುಯಂಗ್ ಚಿಯಾ

ಇ) ಕ್ಯಾಥೆರ್ನಾ ಬೊಂಡಾರೆಂಕೊ, ಸಾನಿಯಾ ಮಿರ್ಝಾ

ಈ) ಚುಯಂಗ್ ಚಿಯಾ, ಮಾರ್ಟೀನಾ ಹಿಂಗೀಸ್

ಸಾನಿಯಾ ಮಿರ್ಝಾ, ಮೋನಿಕಾ ನಿಕ್ಯೂಲೆಸ್ಕೋ

ಭಾರತದ ಟೆನಿಸ್ ತಾರೆ ಸಾನಿಯಾ ಮಿರ್ಝಾ ಅವರು ತನ್ನ ಜೊತೆಗಾರ್ತಿ ರೂಮೇನಿಯಾದ ಮೋನಿಕಾ ನಿಕ್ಯೂಲೆಸ್ಕೋ ಜೊತೆಗೂಡಿ ಕನೆಕ್ಟಿಕಟ್ ಓಪನ್ ಮಹಿಳೆಯರ ಡಬಲ್ಸ್ ಪ್ರಶಸ್ತಿ ಗೆದ್ದುಕೊಂಡರು. ಸಾನಿಯಾ ಮತ್ತು ಮೋನಿಕಾ ಅವರು ಉಕ್ರೈನ್ನ ಕ್ಯಾಥೆರ್ನಾ ಬೊಂಡಾರೆಂಕೊ ಮತ್ತು ತೈವಾನ್ನ ಚುಯಂಗ್ ಚಿಯಾ ವಿರುದ್ಧ 7-5, 6-4 ಸೆಟ್ಗಳಿಂದ ಜಯ ದಾಖಲಿಸಿ ಪ್ರಶಸ್ತಿ ಬಾಚಿಕೊಂಡಿದ್ದಾರೆ.

254. ಯಾವ ನಟಿ ದಕ್ಷಿಣ ಭಾರತದ ಮಹಿಳೆಯರಿಗಾಗಿರುವ ವಿಶ್ವಸಂಸ್ಥೆಯ ಸದ್ಭಾವನ ರಾಯಭಾರಿ (Goodwill Ambassador) ಆಗಿ ನೇಮಕಗೊಂಡಿದ್ದಾರೆ?

ಅ) ಐಶ್ವರ್ಯ ಧನುಷ್

ಆ) ದೀಪಿಕಾ ಪಡುಕೋಣೆ



www.karunaduexams.com

ಇ) ಜಯಾ ಬಚ್ಚನ್

ಈ) ರಮ್ಯಾ

ಐಶ್ವರ್ಯ ಧನುಷ್

ನಟ ರಜನೀಕಾಂತ್ ಅವರ ಹಿರಿಯ ಪುತ್ರಿ ಮತ್ತು ತಮಿಳು ನಟ ಧನುಷ್ ಪತ್ನಿ ಐಶ್ವರ್ಯ ಆರ್. ಧನುಷ್ ದಕ್ಷಿಣ ಭಾರತದ ಮಹಿಳೆಯರಿಗಾಗಿರುವ ವಿಶ್ವಸಂಸ್ಥೆಯ ಸದ್ಭಾವನ ರಾಯಭಾರಿಯಾಗಿ ನೇಮಕವಾಗಿದ್ದಾರೆ. ಐಶ್ವರ್ಯ ಅವರು ಮೂರು ತಮಿಳು ಚಿತ್ರಗಳನ್ನು ನಿರ್ದೇಶಿಸಿದ್ದಾರೆ. ಸಾಮಾಜಿಕ ಕ್ಷೇತ್ರದಲ್ಲಿ ಜನಪೋಕಾರಿ ಕೆಲಸಗಳಲ್ಲೂ ತೊಡಗಿಸಿಕೊಂಡಿದ್ದಾರೆ

255. ದೇಶದಲ್ಲಿ ಕಾರ್ಡ್ ಮೂಲಕ ಪಾವತಿಯನ್ನು ಉತ್ತೇಜಿಸುವ ಸಲುವಾಗಿ ಶಿಪಾರಸ್ಸು ಮಾಡಲು ಕೇಂದ್ರ ಸರ್ಕಾರ ಯಾರ ನೇತೃತ್ವದಲ್ಲಿ ಉನ್ನತ ಮಟ್ಟದ ಸಮಿತಿಯನ್ನು ರಚಿಸಿದೆ?

ಅ) ಅರವಿಂದ್ ಪಗಾರಿಯಾ

ಆ) ರಘುರಾಮ್ ರಾಜನ್

ಇ) ರತನ್ ಪಿ ವಟಲ್

ಈ) ಉರ್ಜಿತ್ ಪಟೇಲ್

ರತನ್ ಪಿ ವಟಲ್

ನಗದು ವ್ಯವಹಾರವನ್ನು ಸ್ಥಿರಗೊಳಿಸಿ ಕಾರ್ಡ್ ಮೂಲಕ ಪಾವತಿಯನ್ನು ಉತ್ತೇಜಿಸಲು ಶಿಫಾರಸ್ಸು ಮಾಡುವಂತೆ ಕೇಂದ್ರ ಸರ್ಕಾರ 11 ಸದಸ್ಯರನ್ನು ಒಳಗೊಂಡ ಉನ್ನತಮಟ್ಟದ ಸಮಿಯನ್ನು ರಚಿಸಿದೆ. ಮಾಜಿ ಹಣಕಾಸು ಕಾರ್ಯದರ್ಶಿ ಮತ್ತು ಪ್ರಸ್ತುತ ನೀತಿ ಆಯೋಗದ ಸಾಮಾಜಿಕ ವಲಯಕ್ಕೆ ಪ್ರಧಾನ ಸಲಹೆಗಾರರಾಗಿರುವ ರತನ್ ಪಿ ವಟಲ್ ಅವರು ಈ ಸಮಿತಿಯ ಅಧ್ಯಕ್ಷರಾಗಿದ್ದಾರೆ. ಕಾರ್ಡ್ ಮತ್ತು ಡಿಜಿಟಲ್ ವಲಯದ ಮೂಲಕ ಪಾವತಿ ವ್ಯವಸ್ಥೆಯನ್ನು ಪ್ರೋತ್ಸಾಹಿಸಲು ಅಗತ್ಯ ಕ್ರಮಗಳನ್ನು ಶಿಫಾರಸ್ಸು ಮಾಡುವ ಹೊಣೆಗಾರಿಕೆಯನ್ನು ಸಮಿತಿಗೆ ನೀಡಲಾಗಿದೆ.

256. "ದಪ್ಪು ನೃತ್ಯ (Dappu Dance)" ಯಾವ ರಾಜ್ಯದ ಪ್ರಸಿದ್ಧ ನೃತ್ಯವಾಗಿದೆ?

ಅ) ತೆಲಂಗಣ

ಆ) ಕೇರಳ

ಇ) ಮಧ್ಯ ಪ್ರದೇಶ

ಈ) ಮಹಾರಾಷ್ಟ್ರ

ತೆಲಂಗಣ

ದಪ್ಪು ನೃತ್ಯ ತೆಲಂಗಣ ರಾಜ್ಯದ ಪ್ರಸಿದ್ಧ ಸಾಂಪ್ರದಾಯಿಕ ನೃತ್ಯ.

www.karunaduexams.com

257.ವಿವಿಎಸ್ ಲಕ್ಷಣ್ ಅವರು ಯಾವ ದೇಶದ ವಿರುದ್ಧ ದಾಖಲಿಸಿದ್ದ 281 ರನ್ ಶತಮಾನದ ಬೆಸ್ಟ್ ಇನ್ನಿಂಗ್ಸ್ ಎಂದು ಗುರುತಿಸಲಾಗಿದೆ?

ಅ) ಪಾಕಿಸ್ತಾನ

ಆ) ಆಸ್ಟ್ರೇಲಿಯಾ

ಇ) ಇಂಗ್ಲೆಂಡ್

ಈ) ದಕ್ಷಿಣ ಆಫ್ರಿಕಾ

ಆಸ್ಟ್ರೇಲಿಯಾ

ಕಲಾತ್ಮಕ ಬ್ಯಾಟ್ಸ್‌ಮನ್ ವಿವಿಎಸ್ ಲಕ್ಷ್ಮಣ್ ಕೋಲ್ಕತಾದ ಈಡನ್ ಗಾರ್ಡನ್ಸ್‌ನಲ್ಲಿ 2001ರಲ್ಲಿ ಆಸ್ಟ್ರೇಲಿಯ ವಿರುದ್ಧದ ಟೆಸ್ಟ್‌ನಲ್ಲಿ ದಾಖಲಿಸಿದ್ದ 281 ರನ್ ಶತಮಾನದಲ್ಲಿ ದಾಖಲಾದ ಅತ್ಯುತ್ತಮ ಇನಿಂಗ್ಸ್ ಆಗಿ ಗುರುತಿಸಿಕೊಂಡಿದೆ. ಜನವರಿ 2000 ರಿಂದ ಹಲವು ಮಂದಿ ಬ್ಯಾಟ್ಸ್‌ಮನ್‌ಗಳ ದಾಖಲಿಸಿದ್ದ ಸ್ಮರಣೆಯ ಇನಿಂಗ್ಸ್‌ಗಳನ್ನು ಪರಿಗಣಿಸಲಾಗಿತ್ತು. ಇದರಲ್ಲಿ 37 ಮಂದಿ ಸದಸ್ಯರ ಸಮಿತಿಯು 2000 ಜನವರಿ 1ರಿಂದ ಇನಿಂಗ್ಸ್‌ಗಳನ್ನು ಆಯ್ಕೆಮಾಡಿತ್ತು. ಈ ಪೈಕಿ ಲಕ್ಷ್ಮಣ್ 2001, ಮಾರ್ಚ್ 11ರಿಂದ 15ರ ತನಕ ನಡೆದ ಎರಡನೆ ಟೆಸ್ಟ್‌ನ ಎರಡನೆ ಇನಿಂಗ್ಸ್‌ನಲ್ಲಿ ದ್ವಿಶತಕ ದಾಖಲಿಸಿದ್ದ ಇನ್ನಿಂಗ್ಸ್ ಬೆಸ್ಟ್ ಇನ್ನಿಂಗ್ಸ್ ಆಗಿ ಆಯ್ಕೆಯಾಗಿದೆ. 631 ನಿಮಿಷಗಳ ಕಾಲ ಕ್ರೀಸ್‌ನಲ್ಲಿ ತಳವೂರಿದ್ದ ಲಕ್ಷ್ಮಣ್ 452 ಎಸೆತಗಳನ್ನು ಎದುರಿಸಿ 44 ಬೌಂಡರಿಗಳ ಸಹಾಯದಿಂದ 281 ರನ್ ದಾಖಲಿಸಿದ್ದರು.

258.2016 ಬೆಲ್ಜಿಯಂ ಗ್ರ್ಯಾಂಡ್ ಪ್ರಿಕ್ಸ್ ಫಾರ್ಮೂಲ ಓನ್ ರೇಸ್ ಗೆದ್ದವರು ಯಾರು?

ಅ) ನಿಕೋ ರೊಸ್ಬರ್ಗ್

ಆ) ಲೆವಿಸ್ ಹ್ಯಾಮಿಲ್ಟನ್

ಇ) ಕೆವಿನ್ ಮ್ಯಾಗ್ನುಸೆನ್

ಈ) ಸೆಬಾಸ್ಟಿಯನ್ ವೆಟಲ್

ನಿಕೋ ರೊಸ್ಬರ್ಗ್

ಜರ್ಮನಿಯ ಮರ್ಸಿಡೆಸ್ ಡ್ರೈವರ್ ನಿಕೋ ರೊಸ್ಬರ್ಗ್ ಅವರು 2016 ಬೆಲ್ಜಿಯಂ ಗ್ರ್ಯಾಂಡ್ ಪ್ರಿಕ್ಸ್ ಫಾರ್ಮೂಲ ಓನ್ ರೇಸ್ ನಲ್ಲಿ ಪ್ರಥಮ ಸ್ಥಾನಗಳಿಸುವ ಮೂಲಕ ಪ್ರಶಸ್ತಿಯನ್ನು ತಮ್ಮದಾಗಿಸಿಕೊಂಡರು. ರೊಸ್ಬರ್ಗ್ ಗೆ ಇದು ಮೊದಲ ಬೆಲ್ಜಿಯಂ ಗ್ರ್ಯಾಂಡ್ ಪ್ರಿಕ್ಸ್ ಪ್ರಶಸ್ತಿ. ರೆಡ್ ಬುಲ್ ನ ಡೆನಿಯಲ್ ರಿಕ್ಕಿಯಾರ್ಡೊ ದ್ವಿತೀಯ ಸ್ಥಾನಕ್ಕೆ ತೃಪ್ತಿಪಟ್ಟುಕೊಂಡರೆ, ಲೆವಿಸ್ ಹ್ಯಾಮಿಲ್ಟನ್ ತೃತೀಯ ಸ್ಥಾನವನ್ನು ಪಡೆದುಕೊಂಡರು.

www.karunaduexams.com

259. ಭಾರತದ ಸಾಕತ್ ಮೈನೇನಿ ಅವರು ಯಾವ ಕ್ರೀಡೆಗೆ ಸಂಬಂಧಿಸಿದ್ದಾರೆ?

ಅ) ಬ್ಯಾಡ್ಮಿಂಟನ್

ಆ) ಟೆನ್ನಿಸ್

ಇ) ಹಾಕಿ

ಈ) ಪುಟ್ಬಾಲ್

ಟೆನ್ನಿಸ್

ಸಾಕೇತ್ ಮೈನೇನಿ ಭಾರತದ ಟೆನ್ನಿಸ್ ಆಟಗಾರ. ಮೈನೇನಿ ಪ್ರತಿಷ್ಠಿತ ಅಮೆರಿಕ ಓಪನ್ ಟೆನಿಸ್ ಪಂದ್ಯಾವಳಿಯ ಪ್ರಧಾನ ಘಟ್ಟಕ್ಕೆ ಅರ್ಹತೆ ಪಡೆದಿದ್ದಾರೆ. ಪುರುಷರ ಸಿಂಗಲ್ಸ್ ವಿಭಾಗದ ಅರ್ಹತಾ ಸುತ್ತಿನ ಮೂರನೇ ಸುತ್ತಿನ ಪಂದ್ಯದಲ್ಲಿ ಸರ್ಬಿಯಾ ಆಟಗಾರ ಪೆಡ್ಜಾ ಕ್ರಿಸ್ಟಿನ್ ಎದುರು ಆಕ್ರಮಣಕಾರಿ ಆಟವಾಡಿದ ಸಾಕೇತ್, 6-3, 6-0 ಸೆಟ್ಗಳ ಗೆಲುವಿನೊಂದಿಗೆ ಪ್ರಧಾನ ಹಂತಕ್ಕೆ ಅರ್ಹತೆ ಪಡೆದರು. ಯೂಕಿ ಬಾಬ್ರಿ ನಂತರ ಅಮೆರಿಕ ಓಪನ್ ಟೆನಿಸ್ ಪಂದ್ಯಾವಳಿಯ ಪ್ರಧಾನ ಘಟ್ಟಕ್ಕೆ ಅರ್ಹತೆ ಪಡೆದ ಎರಡನೇ ಆಟಗಾರ ಇವರು.

260. ನಮ್ಚಿಕ್-ನಮ್ ಪುಕ್ (Namchik-Namphuk) ಕಲ್ಲಿದ್ದಲು ಪ್ರದೇಶ ಯಾವ ರಾಜ್ಯದಲ್ಲಿದೆ?

ಅ) ಅರುಣಾಚಲ ಪ್ರದೇಶ

ಆ) ಆಂಧ್ರ ಪ್ರದೇಶ

ಇ) ಜಾರ್ಖಂಡ್

ಈ) ಪಶ್ಚಿಮ ಬಂಗಾಳ

ಅರುಣಾಚಲ ಪ್ರದೇಶ

261. ಯಾವ ದೇಶದೊಂದಿಗೆ ಭಾರತ ಇತ್ತೀಚೆಗೆ ಸಾಂಪ್ರದಾಯಿಕ ಔಷಧ ಪದ್ಧತಿ (Traditional Medicine System)ಗೆ ಸಂಬಂಧಿಸಿದ ಒಡಂಬಡಿಕೆಗೆ ಸಹಿ ಹಾಕಿದೆ?

ಅ) ಜಪಾನ್

ಆ) ಮಯನ್ಮಾರ್

ಇ) ಭೂತಾನ್

ಈ) ನೇಪಾಳ

ಮಯನ್ಮಾರ್

ಸಾಂಪ್ರದಾಯಿಕ ಔಷಧ ಪದ್ಧತಿ, ನವೀಕರಿಸಬಹುದಾದ ಇಂಧನ ಮತ್ತು ಸೇತುವೆಗಳ ನಿರ್ಮಾಣಕ್ಕೆ ಸಂಬಂಧಿಸಿದಂತೆ ಪರಸ್ಪರ ಸಹಕಾರ ನೀಡುವ ಒಡಂಬಡಿಕೆಗೆ ಭಾರತ ಮತ್ತು ಮಯನ್ಮಾರ್ ಸಹಿ ಹಾಕಿದವು. ಭಾರತ ಪ್ರವಾಸದಲ್ಲಿರುವ



www.karunaduexams.com

ಮಯನ್ಮಾರ್ ಅಧ್ಯಕ್ಷ ಯು ಟಿನ್ ಕ್ಯಾವ್ ಮತ್ತು ಭಾರತದ ಪ್ರಧಾನಿ ನರೇಂದ್ರ ಮೋದಿ ಅವರ ನಡುವೆ ನಡೆದ ಮಾತುಕತೆ ಬಳಿಕೆ ಈ ಒಪ್ಪಂದಕ್ಕೆ ಸಹಿಹಾಕಲಾಯಿತು.

262. ಅಂತಾರಾಷ್ಟ್ರೀಯ ಪರಮಾಣು ವಿರೋಧಿ ದಿನವನ್ನು ಯಾವ ದಿನದಂದು ಆಚರಿಸಲಾಗುತ್ತದೆ?

ಅ) ಜುಲೈ 20

ಆ) ಆಗಸ್ಟ್ 21

ಇ) ಆಗಸ್ಟ್ 29

ಈ) ನವೆಂಬರ್ 12

ಆಗಸ್ಟ್ 29

ಅಂತಾರಾಷ್ಟ್ರೀಯ ಪರಮಾಣು ವಿರೋಧಿ ದಿನವನ್ನು ಪ್ರತಿವರ್ಷ ಆಗಸ್ಟ್ 29 ರಂದು ಆಚರಿಸಲಾಗುತ್ತಿದೆ. ಡಿಸೆಂಬರ್2, 2009 ರ ವಿಶ್ವಸಂಸ್ಥೆಯ ಸಾಮಾನ್ಯ ಸಭೆಯ 64ನೇ ಅಧಿವೇಶನದ ನಿರ್ಣಯದಲ್ಲಿ ಆಗಸ್ಟ್ 29 ಅನ್ನು ಅಂತಾರಾಷ್ಟ್ರೀಯ ಪರಮಾಣು ವಿರೋಧಿ ದಿನವೆಂದು ಆಚರಿಸಲು ನಿರ್ಧರಿಸಲಾಯಿತು. ಆಗಸ್ಟ್ 29, 1991 ರಲ್ಲಿ ಸೋವಿಯತ್ ಒಕ್ಕೂಟದ ಸೆಮಿಪಲಟಿಸ್ಕ್ ಪರಮಾಣು ಪರೀಕ್ಷಾ ಕೇಂದ್ರವನ್ನು (Semipalatinsk Nuclear Test Site) ಮುಚ್ಚಿದರ ಸ್ಮರಣಾರ್ಥ ಈ ದಿನವನ್ನು ಅಂತಾರಾಷ್ಟ್ರೀಯ ಪರಮಾಣು ವಿರೋಧಿ ದಿನವೆಂದು ಆಚರಿಸಲಾಗುತ್ತಿದೆ.

263. ಈ ಕೆಳಗಿನ ಯಾರು ಹಾಲಿ ಸುಪ್ರೀಂಕೋರ್ಟ್ ನ್ಯಾಯಾಧೀಶರುಗಳ ಪೈಕಿ ಏಕೈಕ ಮಹಿಳಾ ನ್ಯಾಯಾಧೀಶರಾಗಿದ್ದಾರೆ?

ಅ) ನ್ಯಾ.ಆರ್ ಭಾನುಮತಿ

ಆ) ನ್ಯಾ.ರೇಖಾ ದೋಷಿತ್

ಇ) ನ್ಯಾ.ಜಿ ರೋಹಿಣಿ

ಈ) ನ್ಯಾ.ಟಿ ಮೀನಾ ಕುಮಾರಿ

ಆರ್ ಭಾನುಮತಿ

ಪ್ರಸ್ತುತ ಸುಪ್ರೀಂಕೋರ್ಟ್ನ 31 ನ್ಯಾಯಾಧೀಶರುಗಳ ಪೈಕಿ 28 ನ್ಯಾಯಾಧೀಶರುಗಳು ಮಾತ್ರ ಕಾರ್ಯನಿರ್ವಹಿಸುತ್ತಿದ್ದು, ಇವರಲ್ಲಿ ನ್ಯಾ.ಆರ್ ಭಾನುಮತಿ ಅವರು ಏಕೈಕ ಮಹಿಳಾ ನ್ಯಾಯಾಧೀಶರಾಗಿದ್ದಾರೆ. ಆ ಮೂಲಕ ಸುಪ್ರೀಂಕೋರ್ಟ್ನಲ್ಲಿ ಮಹಿಳಾ ನ್ಯಾಯಾಧೀಶರ ಅನುಪಾತ ಶೇ 4% ಕ್ಕಿಂತಲೂ ಕಡಿಮೆ ಇದೆ. ಅಷ್ಟೇ ಅಲ್ಲದೇ ದೇಶದಲ್ಲಿರುವ 24 ಹೈಕೋರ್ಟಗಳಲ್ಲಿ 534 ಪುರುಷ ನ್ಯಾಯಾಧೀಶರಿದ್ದರೆ, ಮಹಿಳಾ ನ್ಯಾಯಾಧೀಶರ ಸಂಖ್ಯೆ ಕೇವಲ 61 ಇದೆ.

www.karunaduexams.com

264. ಯಾವ ರಾಜ್ಯ ಸರ್ಕಾರ ತನ್ನ ರಾಜ್ಯದ ಗ್ರಾಮೀಣ ಭಾಗದಲ್ಲಿ ಉದ್ಯಾನವನ ಮತ್ತು ಜಿಮ್ನಾಷೀಯಂಗಳನ್ನು ಸ್ಥಾಪಿಸುವುದಾಗಿ ಘೋಷಿಸಿದೆ?

ಅ) ಕೇರಳ

ಆ) ತಮಿಳುನಾಡು

ಇ) ಪಂಜಾಬ್

ಈ) ಉತ್ತರ ಪ್ರದೇಶ

ತಮಿಳುನಾಡು

ತಮಿಳುನಾಡಿನ ಗ್ರಾಮೀಣ ಪ್ರದೇಶದಲ್ಲಿ ಅಮ್ಮ ಉದ್ಯಾನವನ ಮತ್ತು ಅಮ್ಮ ಜಿಮ್ ಗಳನ್ನು ಸ್ಥಾಪಿಸುವುದಾಗಿ ತಮಿಳುನಾಡು ಮುಖ್ಯಮಂತ್ರಿ ಜಯಲಲಿತಾ ಘೋಷಿಸಿದ್ದಾರೆ. ಹೊಸ ಯೋಜನೆಯಡಿ ಪ್ರತಿ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಒಂದು ಅಮ್ಮಾ ಪಾರ್ಕ್ ನಿರ್ಮಿಸಲಾಗುವುದು. ಅಮ್ಮಾ ಪಾರ್ಕ್ ಗಳಲ್ಲಿ ಶುದ್ದ ಕುಡಿಯುವ ನೀರು, ಶೌಚಾಲಯ, ಮಕ್ಕಳಿಗೆ ಆಟವಾಡಲು ಸೌಕರ್ಯ ಇರಲಿದೆ. ಇನ್ನು ರಾಜ್ಯದ ಗ್ರಾಮೀಣ ಪ್ರದೇಶದಲ್ಲಿ 500 ಅಮ್ಮಾ ಜಿಮ್ ಗಳನ್ನು ಸ್ಥಾಪಿಸಲು ನಿರ್ಧರಿಸಲಾಗಿದ್ದು, ಪ್ರತಿ ಜಿಮ್ಗೆ ರೂ 10 ಲಕ್ಷ ವ್ಯಯಿಸಲಾಗುವುದು.

265. ಇಸ್ರೋ ಇತ್ತೀಚೆಗೆ ಈ ಕೆಳಗಿನ ಯಾವ ರಾಕೆಟ್ ಬಳಸಿ ವಿನೂತನ ತಂತ್ರಜ್ಞಾನದ ಸ್ಕ್ರಾಮ್ ಜೆಟ್ ಅನ್ನು ಯಶಸ್ವಿಯಾಗಿ ಪರೀಕ್ಷಿಸಿತು?

ಅ) RH 560

ಆ) ATV 560

ಇ) SH 130

ಈ) SH 560

RH 560

ಭಾರತೀಯ ಬಾಹ್ಯಕಾಶ ಸಂಶೋಧನಾ ಸಂಸ್ಥೆ (ಇಸ್ರೋ) ಸ್ವದೇಶಿ ನಿರ್ಮಿತ ಸ್ಕ್ರಾಮ್ ಜೆಟ್ ಅನ್ನು ಯಶಸ್ವಿಯಾಗಿ ಪರೀಕ್ಷಿಸಿದೆ. ಸೂಪರ್ ಸಾನಿಕ್ ಕಂಬಸ್ಟನ್ ರಾಮ್ ಜೆಟ್ ಅನ್ನೇ ಸ್ಕ್ರಾಮ್ ಜೆಟ್ ಎನ್ನಲಾಗುತ್ತದೆ. ಈ ಸ್ವದೇಶಿ ನಿರ್ಮಿತ ಎಂಜಿನನ್ನು ಇಸ್ರೋ RH 560 ರಾಕೆಟ್ ಬಳಸಿ ಪರೀಕ್ಷಿಸಿದೆ. ಈ ಎಂಜಿನ್ ವಾತಾವರಣದ ಆಮ್ಲಜನಕವನ್ನು ಬಳಸಿಕೊಂಡು ವಾಹಕವನ್ನು ಉಡಾಯಿಸುವಾಗ ಅದರ ಅರ್ಧದಷ್ಟು ತೂಕವನ್ನು ಕಡಿಮೆ ಮಾಡುತ್ತದೆ. ಕಕ್ಷೆಗೆ ಹೆಚ್ಚಿನ ತೂಕದ ಉಪಕರಣಗಳನ್ನು ಹೊತ್ತೊಯ್ಯಲು ಸಹಾಯ ಮಾಡುತ್ತದೆ. ಶಬ್ದಾತೀತ ವೇಗದಲ್ಲಿ ವಾಹಕಗಳನ್ನು ಉಡಾಯಿಸಲು ಸ್ಕ್ರಾಮ್ ಜೆಟ್ ಎಂಜಿನ್ ಸಹಾಯ ಮಾಡುತ್ತದೆ.

www.karunaduexams.com

266. 2016 ಕನೆಕ್ಟಿಕಟ್ ಓಪನ್ (Connecticut Open) ಟೂರ್ನಿಯ ಮಹಿಳೆಯರ ಸಿಂಗಲ್ಸ್ ನಲ್ಲಿ ಪ್ರಶಸ್ತಿ ಗೆದ್ದವರು ಯಾರು?

ಅ) ಎಲಿನಾ ಸ್ವಿಟೊಲಿನ

ಆ) ಅಗ್ನಿಯ್ಝ್ಕ ರಡ್ವನ್ಸ್ಕ

ಇ) ಸೆರೆನಾ ವಿಲಿಯಮ್ಸ್

ಈ) ವಿಕ್ಟೋರಿಯಾ ಅಝೆರೆಕಾ

ಅಗ್ನಿಯ್ಝ್ಕ ರಡ್ವನ್ಸ್ಕ

ಅಗ್ರ ಶ್ರೇಯಾಂಕಿತ ಆಟಗಾರ್ತಿ ಅಗ್ನಿಯ್ಝ್ಕ ರಡ್ವನ್ಸ್ಕ ಅವರು ಎಲಿನಾ ಸ್ವಿಟೊಲಿನ ಅವರನ್ನು 6-1, 7-6 (3) ಸೆಟ್ ನಿಂದ ಸೋಲಿಸುವ ಮೂಲಕ 2016 ಕನೆಕ್ಟಿಕಟ್ ಓಪನ್ (Connecticut Open) ಟೂರ್ನಿಯ ಮಹಿಳೆಯರ ಸಿಂಗಲ್ಸ್ ನಲ್ಲಿ ಪ್ರಶಸ್ತಿ ಗೆದ್ದುಕೊಂಡರು. ರಡ್ವನ್ಸ್ಕಗೆ ಇದು 19ನೇ ಪ್ರಶಸ್ತಿಯಾಗಿದೆ.

267. ಇತ್ತೀಚೆಗೆ ನಿಧನರಾದ ಮೊಹಮ್ಮದ್ ಷಫಿ ಖುರೇಷಿ ಯಾವ ರಾಜ್ಯದ ಮಾಜಿ ರಾಜ್ಯಪಾಲ?

ಅ) ಮಧ್ಯ ಪ್ರದೇಶ

ಆ) ರಾಜಸ್ತಾನ

ಇ) ಕೇರಳ

ಈ) ಮಹಾರಾಷ್ಟ್ರ

ಮಧ್ಯ ಪ್ರದೇಶ

ಹಿರಿಯ ರಾಜಕಾರಣಿ ಮತ್ತು ಮಾಜಿ ಕೇಂದ್ರ ಸಚಿವ ಮೊಹಮ್ಮದ್ ಷಫಿ ಖುರೇಷಿ ನಿಧನರಾದರು. 1993 ರಿಂದ 1998 ರವರೆಗೆ ಖುರೇಷಿ ಮಧ್ಯ ಪ್ರದೇಶದ 19ನೇ ರಾಜ್ಯಪಾಲರಾಗಿ ಕಾರ್ಯನಿರ್ವಹಿಸಿದ್ದರು.

268. ದೇಶದಲ್ಲೇ ಅತಿ ಹೆಚ್ಚು ಅಭಯಾರಣ್ಯ ಮತ್ತು ರಾಷ್ಟ್ರೀಯ ಉದ್ಯಾನವಗಳನ್ನು ಹೊಂದಿರುವ ರಾಜ್ಯ ಯಾವುದು?

ಅ) ಉತ್ತರ ಪ್ರದೇಶ

ಆ) ಕರ್ನಾಟಕ

ಇ) ಮಧ್ಯ ಪ್ರದೇಶ

ಈ) ಮಹಾರಾಷ್ಟ್ರ

ಮಧ್ಯ ಪ್ರದೇಶ

www.karunaduexams.com

269. ಯಾವ ವಿಶ್ವವಿದ್ಯಾಲಯಕ್ಕೆ 2015-16 ಮೌಲನ ಅಬ್ದುಲ್ ಕಲಾಂ ಅಜಾದ್ ಟ್ರೋಫಿ ಅನ್ನು ನೀಡಲಾಗಿದೆ?

ಅ) ಪಾಟಿಯಾಲ ವಿಶ್ವವಿದ್ಯಾಲಯ

ಆ) ಬೆಂಗಳೂರು ವಿಶ್ವವಿದ್ಯಾಲಯ

ಇ) ದೆಹಲಿ ವಿಶ್ವವಿದ್ಯಾಲಯ

ಈ) ಜವಹಾರ್ ಲಾಲ್ ನೆಹರೂ ವಿಶ್ವವಿದ್ಯಾಲಯ

ಪಾಟಿಯಾಲ ವಿಶ್ವವಿದ್ಯಾಲಯ

ಅತ್ಯುತ್ತಮ ಕ್ರೀಡಾ ಪ್ರದರ್ಶನಕ್ಕೆ ನೀಡಲಾಗುವ ಮೌಲನ ಅಬ್ದುಲ್ ಕಲಾಂ ಅಜಾದ್ ಟ್ರೋಫಿಯನ್ನು 2015-16ನೇ ಸಾಲಿಗೆ ಪಂಜಾಬ್ ನ ಪಾಟಿಯಾಲ ವಿಶ್ವವಿದ್ಯಾಲಯಕ್ಕೆ ನೀಡಲಾಗಿದೆ. ಸತತವಾಗಿ ನಾಲ್ಕನೇ ಬಾರಿ ಪಾಟಿಯಾಲ ವಿವಿ ಈ ಪ್ರಶಸ್ತಿಗೆ ಭಾಜನವಾಗಿದೆ.

270. ಮಂಡಲ್ ಆಯೋಗವನ್ನು ರಚಿಸಿದ ವೇಳೆ ಭಾರತದ ಪ್ರಧಾನಿಯಾಗಿದ್ದವರು ಯಾರು?

ಅ) ರಾಜೀವ್ ಗಾಂಧಿ

ಆ) ಇಂದಿರಾ ಗಾಂಧಿ

ಇ) ಮೊರಾರ್ಜಿ ದೇಸಾಯಿ

ಈ) ವಿ ಪಿ ಸಿಂಗ್

ಮೊರಾರ್ಜಿ ದೇಸಾಯಿ

ಮಂಡಲ್ ಆಯೋಗವನ್ನು 1978ರಲ್ಲಿ ಅಂದಿನ ಪ್ರಧಾನಮಂತ್ರಿ ಮೊರಾರ್ಜಿ ದೇಸಾಯಿ ಅವರು ರಚಿಸಿದರು. 1980ರಲ್ಲಿ ಕೇಂದ್ರ ಸರ್ಕಾರಕ್ಕೆ ವರದಿ ಸಲ್ಲಿಸಿದ ಈ ಆಯೋಗ 3,743 ಹಿಂದುಳಿದ ಜಾತಿಗಳನ್ನು ಗುರುತಿಸಿತು. ಅಷ್ಟೇ ಅಲ್ಲ ಮೀಸಲಾತಿಯ ಪ್ರಮಾಣ ಹೆಚ್ಚಿಸಲು ಪ್ರಥಮ ಬಾರಿಗೆ ಶಿಫಾರಸು ಮಾಡಿತು. ಹಿಂದುಳಿದ ವರ್ಗಗಳಿಗೆ ಶೇ.27ರಷ್ಟು ಪ್ರತ್ಯೇಕ ಮೀಸಲು ನೀಡುವುದರೊಂದಿಗೆ ಒಟ್ಟು ಮೀಸಲು ಪ್ರಮಾಣವನ್ನು ಶೇ.49.5ಕ್ಕೆ ಹೆಚ್ಚಿಸಲು ಶಿಫಾರಸು ಮಾಡಿತು.ಮುಂದೆ ಪ್ರಧಾನಿಯಾದ ವಿ.ಪಿ.ಸಿಂಗ್ 1989ರಲ್ಲಿ ಮಂಡಲ್ ವರದಿ ಜಾರಿಗೊಳಿಸಿದರು. ಈ ಮೂಲಕ ಒಬಿಸಿ ವರ್ಗಕ್ಕೆ ಶೇ.27 ಪ್ರತ್ಯೇಕ ಮೀಸಲಾತಿ ನೀಡುವ ಪರಿಪಾಠ ಚಾಲನೆಗೆ ಬಂತು.

271. ಸುಮಾರು 3450 ವರ್ಷಗಳ ಹಿಂದೆ ಸುನಾಮಿಯಿಂದ ನಾಶವಾದ ವಿಶ್ವದ ಮೊದಲ ನಗರವನ್ನು ಯಾವ ರಾಜ್ಯದಲ್ಲಿ ಪತ್ತೆಹಚ್ಚಲಾಗಿದೆ?

ಅ) ಕರ್ನಾಟಕ

ಆ) ರಾಜಸ್ತಾನ

ಇ) ಗುಜರಾತ್

ಈ) ಹರಿಯಾಣ

www.karunaduexams.com

ಗುಜರಾತ್

ಪುರಾತತ್ವ ಇಲಾಖೆಯವರು ಗುಜರಾತ್ ರಾಜ್ಯದ ಕಚ್ಛ್‌ನ ರಣ್ ಎಂಬ ನಗರದ ಸಮೀಪವಿರುವ ಧೋಲಾವೀರಾ ಎಂಬಲ್ಲಿ ಕ್ರಿಸ್ತಪೂರ್ವ 15ನೇ ಶತಮಾನದ ಸುಮಾರಿನಲ್ಲಿ ಸುನಾಮಿ ದಾಳಿಗೆ ನಾಶವಾದ ಪುರಾತನ ನಗರವನ್ನು ಪತ್ತೆಹಚ್ಚಿದ್ದಾರೆ. ಹರಪ್ಪನ್ ಕಾಲಕ್ಕೆ ಸೇರಿದ ಈ ನಗರ 3450 ವರ್ಷಗಳ ಹಿಂದೆ ಸುನಾಮಿಯಿಂದ ನಾಶಗೊಂಡಿತ್ತು. ಈ ರೀತಿ ನಾಶವಾದ ವಿಶ್ವದ ಮೊದಲ ನಗರ ಅದಾಗಿದೆ ಎಂದು ಪುರಾತತ್ವ ಇಲಾಖೆಯ ಅಧಿಕಾರಿಗಳು ಅಭಿಪ್ರಾಯಪಟ್ಟಿದ್ದಾರೆ.ಧೋಲಾವೀರಾದಲ್ಲಿ ಅವಶೇಷವಾಗಿ ಉಳಿದುಕೊಂಡಿರುವ ಪ್ರಾಚೀನ ಪಟ್ಟಣವು 5 ಸಾವಿರ ವರ್ಷಗಳ ಹಿಂದೆ ಬಹಳ ವೈಭವ ಹೊಂದಿತ್ತೆನ್ನಲಾಗಿದೆ. 14-18 ಮೀಟರ್‌ನಷ್ಟು ದಪ್ಪವಿರುವ ಗೋಡೆಯೊಂದು ಇಲ್ಲಿದೆ. ಆ ಪುರಾತನ ನಗರದಲ್ಲಿ ಸುನಾಮಿ ಭೀತಿ ಮೊದಲಿಂದಲೂ ಇತ್ತೆಂಬುದಕ್ಕೆ ಈ ಗೋಡೆಯೇ ಸಾಕ್ಷಿಯಾಗಿರುವಂತಿದೆ.

272.ಕೇಂದ್ರ ಗೃಹ ಸಚಿವಾಲಯದ ಮಾಹಿತಿ ಪ್ರಕಾರ ದೇಶದ ಕೋಮು ಸೂಕ್ಷ್ಮ ರಾಜ್ಯಗಳ ಪೈಕಿ ಮೊದಲ ಸ್ಥಾನದಲ್ಲಿರುವ ರಾಜ್ಯ ಯಾವುದು?

ಅ) ಉತ್ತರ ಪ್ರದೇಶ

ಆ) ಕರ್ನಾಟಕ

ಇ) ಮಹಾರಾಷ್ಟ್ರ

ಈ) ಒಡಿಶಾ

ಉತ್ತರ ಪ್ರದೇಶ

ದೇಶದ ಕೋಮು ಸೂಕ್ಷ್ಮ ರಾಜ್ಯಗಳ ಪೈಕಿ ಉತ್ತರಪ್ರದೇಶ ಮೊದಲ ಸ್ಥಾನದಲ್ಲಿದ್ದು, ಮಹಾರಾಷ್ಟ್ರ ಎರಡನೇ ಸ್ಥಾನದಲ್ಲಿದೆ. ಕರ್ನಾಟಕ ಕೋಮು ಸೂಕ್ಷ್ಮ ರಾಜ್ಯಗಳ ಪೈಕಿ ಮೂರನೇ ಸ್ಥಾನದಲ್ಲಿದೆ ಎಂಬ ಅಂಶ ಕೇಂದ್ರ ಗೃಹ ಸಚಿವಾಲಯ ಹೊರತಂದಿರುವ ಮಾಹಿತಿಯಿಂದ ಬಹಿರಂಗಗೊಂಡಿದೆ.2013ರಿಂದ 2016ರವರೆಗೆ ಕೋಮು ಸಂಘರ್ಷ ಪ್ರಕರಣಗಳ ಸಂಖ್ಯೆಯನ್ನು ಇಟ್ಟುಕೊಂಡು ಸ್ಥಾನಗಳನ್ನು ನೀಡಲಾಗಿದೆ. ಕರ್ನಾಟಕದಲ್ಲಿ 291 ಪ್ರಕರಣ ದಾಖಲಾಗಿದ್ದು, 19 ಮಂದಿ ಮೃತಪಟ್ಟರೆ, 865 ಮಂದಿಗೆ ಗಾಯಗಳಾಗಿವೆ. ಈ ಪಟ್ಟಿಯಲ್ಲಿ ಹತ್ತನೇ ಸ್ಥಾನದಲ್ಲಿರುವ ತಮಿಳುನಾಡಿನಲ್ಲಿ 57 ಪ್ರಕರಣಗಳು ನಡೆದಿವೆ.

273. ಈ ಕೆಳಗಿನ ಯಾವ ಪ್ಯಾರಮಿಲಿಟರಿ ಪಡೆ ಪಿ.ವಿ.ಸಿಂಧು ಅವರನ್ನು ರಾಯಭಾರಿ ಹಾಗೂ ಕಮಾಂಡೆಂಟ್ ಆಗಿ ನೇಮಿಸಲು ನಿರ್ಧರಿಸಿದೆ?

ಅ) ಕೇಂದ್ರಿಯ ಪೊಲೀಸ್ ಮೀಸಲು ಪಡೆ

ಆ) ಗಡಿ ಭದ್ರತಾ ಪಡೆ

ಇ) ಇಂಡೋ-ಟಿಬೆಟಿಯನ್ ಬಾರ್ಡರ್ ಪೊಲೀಸ್

www.karunaduexams.com

ಈ) ಕೇಂದ್ರ ಕೈಗಾರಿಕ ಭದ್ರತಾ ಪಡೆ

ಕೇಂದ್ರಿಯ ಪೊಲೀಸ್ ಮೀಸಲು ಪಡೆ

ಬ್ಯಾಡ್ಮಿಂಟನ್ ತಾರೆ ಪಿವಿ ಸಿಂಧುವನ್ನು ದೇಶದ ಅತಿದೊಡ್ಡ ಪ್ಯಾರಾಮಿಲಿಟರಿ ದಳವಾದ ಕೇಂದ್ರೀಯ ಮೀಸಲು ಪೊಲೀಸ್ ಪಡೆ ಗೌರವ ಕಮಾಂಡೆಂಟ್ ಆಗಿ ನೇಮಿಸಲು ನಿರ್ಧರಿಸಿದೆ. ಇದೇ ಅಲ್ಲದೆ ಕೇಂದ್ರಿಯ ಪೊಲೀಸ್ ಮೀಸಲು ಪಡೆ ರಾಯಭಾರಿಯಾಗಿಯೂ ಸಿಂಧುವನ್ನು ಆಯ್ಕೆ ಮಾಡಲು ತೀರ್ಮಾನಿಸಿದ್ದು ಈಗಾಗಲೇ ಕೇಂದ್ರ ಗೃಹ ಸಚಿವಾಲಯಕ್ಕೆ ತನ್ನ ಶಿಫಾರಸನ್ನು ಸಲ್ಲಿದೆ. ಕೇಂದ್ರಿಯ ಪೊಲೀಸ್ ಮೀಸಲು ಪಡೆ ಕಮಾಂಡೆಂಟ್ ಶ್ರೇಣಿ ಪೊಲೀಸ್ ವರಿಷ್ಠಾಧಿಕಾರಿ(ಎಸ್ಪಿ) ಮಟ್ಟದ ಸ್ಥಾನವಾಗಿದ್ದು ಫೀಲ್ಡ್ ಆಪರೇಷನ್ ವೇಳೆ 1 ಸಾವಿರ ಸದಸ್ಯರ ಬೆಟಾಲಿಯನ್ ಅನ್ನು ಮುನ್ನಡೆಸುವ ಕಮಾಂಡ್ ಅಧಿಕಾರಿಯಾಗಲಿದ್ದಾರೆ.

274. ಇತ್ತೀಚೆಗೆ ಭಾರತ ಯಾವ ದೇಶದೊಂದಿಗೆ “ಲಾಜಿಸ್ಟಿಕ್ಸ್ ಎಕ್ಸ್‌ಚೇಂಜ್ ಮೆಮೋರಾಂಡಂ ಆಫ್ ಅಗ್ರಿಮೆಂಟ್ (LEMOA)” ಎಂಬ ಐತಿಹಾಸಿಕ ದ್ವಿಪಕ್ಷೀಯ ರಕ್ಷಣಾ ಒಪ್ಪಂದಕ್ಕೆ ಸಹಿ ಹಾಕಿತು?

ಅ) ಕೆನಡಾ

ಆ) ಜಪಾನ್

ಇ) ಮಯನ್ಮಾರ್

ಈ) ಅಮೆರಿಕ

ಅಮೆರಿಕ

ಲಾಜಿಸ್ಟಿಕ್ಸ್ ಎಕ್ಸ್‌ಚೇಂಜ್ ಮೆಮೋರಾಂಡಂ ಆಫ್ ಅಗ್ರಿಮೆಂಟ್ (ಎಲ್ಇಎಂಓಎ ಅಥವಾ ಲೆಮೋವಾ) ಎಂಬ ಈ ಐತಿಹಾಸಿಕ ಮೈಲುಗಲ್ಲಿನ ದ್ವಿಪಕ್ಷೀಯ ರಕ್ಷಣಾ ಒಪ್ಪಂದಕ್ಕೆ ಭಾರತದ ರಕ್ಷಣಾ ಸಚಿವ ಮನೋಹರ್ ಪರ್ರೀಕರ್ ಮತ್ತು ಅಮೆರಿಕದ ರಕ್ಷಣಾ ಸಚಿವ ಆಷ್ಟನ್ ಕಾರ್ಟರ್ ಅವರು ಸಹಿ ಹಾಕಿದರು. ಈ ಒಪ್ಪಂದದ ಅನ್ವಯ ಭಾರತ ಮತ್ತು ಅಮೆರಿಕ ಪರಸ್ಪರರ ಭೂ, ವಾಯು ಹಾಗೂ ನೌಕಾ ನೆಲೆಗಳನ್ನು ದುರಸ್ತಿ ಹಾಗೂ ಮರುಪೂರೈಕೆಯ ಉದ್ದೇಶಗಳಿಗೆ ಬಳಸಿಕೊಳ್ಳಬಹುದಾಗಿದೆ. ಆ ಮೂಲಕ ಉಭಯತರ ನಡುವಿನ ದ್ವಿಪಕ್ಷೀಯ ರಕ್ಷಣಾ ಬಾಂಧವ್ಯ ಇನ್ನಷ್ಟು ಗಟ್ಟಿಯಾಗಿದೆ. ಲೆಮೋವಾ ಒಪ್ಪಂದವು ಭಾರತ ಮತ್ತು ಅಮೆರಿಕದ ಸೇನೆಗಳಿಗೆ ರಕ್ಷಣಾ ಸಾರಿಗೆ ಸೌಕರ್ಯ, ಬೆಂಬಲ, ಪೂರೈಕೆ ಹಾಗೂ ಇನ್ನಿತರ ಬಗೆಯ ಆವಶ್ಯಕ ಸೇವೆಗಳನ್ನು ಪರಸ್ಪರ ಪೂರೈಸುವುದಕ್ಕೆ ಮತ್ತು ಬಳಸಿಕೊಳ್ಳುವುದಕ್ಕೆ, ಖರ್ಚು ಭರಿಸಿಕೊಳ್ಳುವುದಕ್ಕೆ ಮತ್ತು ಆಡಳಿತಾತ್ಮಕ ಚೌಕಟ್ಟನ್ನು ಒದಗಿಸುವುದಕ್ಕೆ ಅವಕಾಶ ಕಲ್ಪಿಸುತ್ತದೆ.

www.karunaduexams.com

275. ಒಂದು ಟಿ20 ಋತುವಿನಲ್ಲಿ ಅತಿ ಹೆಚ್ಚು ವಿಕೆಟ್ ಗಳಿಸಿ ದಾಖಲೆ ನಿರ್ಮಿಸಿದ ಕ್ರಿಕೆಟ್ ಆಟಗಾರ ಯಾರು?

ಅ) ರವಿಚಂದ್ರನ್ ಅಶ್ವಿನ್

ಆ) ಜಸ್ ಪ್ರೀತ್ ಬುಮ್ರಾ

ಇ) ಭುವನೇಶ್ವರ್ ಕುಮಾರ್

ಈ) ಆರ್ ವಿನಯ್ ಕುಮಾರ್

ಜಸ್ ಪ್ರೀತ್ ಬುಮ್ರಾ

ಅಮೆರಿಕದಲ್ಲಿ ವೆಸ್ಟ್ ಇಂಡೀಸ್ ವಿರುದ್ಧ ನಡೆದ ಟಿ20 ಕ್ರಿಕೆಟ್ ಸರಣಿಯಲ್ಲಿ ಅತೀ ಹೆಚ್ಚು ವಿಕೆಟ್ ಗಳಿಸುವ ಮೂಲಕ ಬುಮ್ರಾ ಒಂದು ಟಿ20 ಋತುವಿನಲ್ಲಿ ಅತೀ ಹೆಚ್ಚು ವಿಕೆಟ್ ಗಳಿಸಿದ ಆಟಗಾರ ಎನಿಸಿದ್ದಾರೆ. ಈ ಋತುವಿನಲ್ಲಿ ಬುಮ್ರಾ ಆಡಿದ 21 ಅಂತಾರಾಷ್ಟ್ರೀಯ ಟಿ20 ಪಂದ್ಯಗಳಲ್ಲಿ 28 ವಿಕೆಟ್ ಕಬಳಿಸಿದ್ದಾರೆ. 2010ರ ಋತುವಿನಲ್ಲಿ ಆಸ್ಟ್ರೇಲಿಯಾದ ಡರ್ಕ್ ನಾನ್ನೆಸ್ 27 ವಿಕೆಟ್ ಪಡೆದ ದಾಖಲೆಯನ್ನು ಬುಮ್ರಾ ಅಳಿಸಿ ಹಾಕಿದ್ದಾರೆ.

276. ಈ ಕೆಳಗಿನ ಯಾವುದು ಬಿಮ್ ಸ್ಟೆಕ್ (Bay of Bengal Initiative for Multi-Sectoral Technical and Economic Cooperation) ಸದಸ್ಯ ರಾಷ್ಟ್ರವಲ್ಲ?

ಅ) ಭಾರತ

ಆ) ಶ್ರೀ ಲಂಕಾ

ಇ) ಚೀನಾ

ಈ) ಬಾಂಗ್ಲದೇಶ

ಚೀನಾ

ಬಿಮ್ ಸ್ಟೆಕ್ (BIMSTEC) ದಕ್ಷಿಣ ಏಷ್ಯಾ ಮತ್ತು ಆಗ್ನೇಯಾ ಏಷ್ಯಾದ ಏಳು ರಾಷ್ಟ್ರಗಳನ್ನು ಒಳಗೊಂಡ ಒಂದು ಅಂತಾರಾಷ್ಟ್ರೀಯ ಒಕ್ಕೂಟವಾಗಿದೆ. ಬಾಂಗ್ಲದೇಶ, ಭಾರತ, ಮಯನ್ಮಾರ್, ಶ್ರೀಲಂಕಾ, ಥಾಯ್ಲೆಂಡ್, ಭೂತಾನ್ ಮತ್ತು ನೇಪಾಳ ಬಿಮ್ ಸ್ಟೆಕ್ ಸದಸ್ಯ ರಾಷ್ಟ್ರಗಳು. ಜೂನ್ 6, 1997 ರಂದು ಇದನ್ನು ಸ್ಥಾಪಿಸಲಾಗಿದ್ದು, ಇದರ ಕೇಂದ್ರ ಕಚೇರಿ ಡಾಕಾದಲ್ಲಿದೆ.

277. ಈ ಕೆಳಗಿನ ಯಾವ ಸಮಿತಿ ಭಾರತ ಮತ್ತು ಪಾಕಿಸ್ತಾನ ನಡುವೆ ಗಡಿ ಭದ್ರತೆಯನ್ನು ಬಲಗೊಳಿಸುವ ಸಲುವಾಗಿ ತನ್ನ ಶಿಫಾರಸ್ಸನ್ನು ಕೇಂದ್ರ ಸರ್ಕಾರಕ್ಕೆ ಇತ್ತೀಚೆಗೆ ಸಲ್ಲಿಸಿತು?

ಅ) ಈಶ್ವರ್ ಚಂದ್ರ ಸಮಿತಿ

ಆ) ಮಧುಕರ್ ಗುಪ್ತ ಸಮಿತಿ

ಇ) ಕಮಲೇಶ್ ಚಂದ್ರ ಸಮಿತಿ

ಈ) ಸುಧೀರ್ ಗೋಕರ್ಣ ಸಮಿತಿ

www.karunaduexams.com

ಮಧುಕರ್ ಗುಪ್ತ ಸಮಿತಿ

ಭಾರತ ಮತ್ತು ಪಾಕಿಸ್ತಾನ ನಡುವೆ ಗಡಿ ಭದ್ರತೆಯನ್ನು ಬಲಗೊಳಿಸುವ ಸಲುವಾಗಿ ಕೇಂದ್ರ ಸರ್ಕಾರ ನೇಮಿಸಿದ್ದ ಕೇಂದ್ರದ ಮಾಜಿ ಗೃಹ ಕಾರ್ಯದರ್ಶಿ ನೇತೃತ್ವದ ಮಧುಕರ್ ಗುಪ್ತ ಸಮಿತಿ ತನ್ನ ವರದಿಯನ್ನು ಸರ್ಕಾರ ಸಲ್ಲಿಸಿದೆ. ಭಾರತ- ಪಾಕ್ ಗಡಿಯ ಬೇಲಿಗಳು ದುರ್ಬಲವಾಗಿವೆ ಮತ್ತು ಉಗ್ರರು ನುಸುಳಬಹುದಾದ ಸಂದುಗಳು ಇವೆ ಎಂದು ಮಧುಕರ್ ಗುಪ್ತ ಅವರ ನೇತೃತ್ವದ ಸಮಿತಿ ಗುರುತು ಮಾಡಿದೆ. ಜತೆಗೆ ಗಡಿಯಲ್ಲಿ ವೈಜ್ಞಾನಿಕ ತಂತ್ರಜ್ಞಾನ ಮತ್ತು ತೀಕ್ಷ್ಣ ಕಣ್ಗಾವಲು ಇರಿಸಬೇಕಿದೆ ಎಂದು ಸಲಹೆ ನೀಡಿದೆ. ಉಗ್ರರು ಒಳನುಸುಳುವಿಕೆ ನಡೆಸಿದ ಜಾಗದಲ್ಲಿ ವೈಜ್ಞಾನಿಕ ವಿಧಾನಗಳಾದ ಲೇಸರ್ ಗೋಡೆಗಳನ್ನು ಅಳವಡಿಸಲಾಗಿರಲಿಲ್ಲ. ನದಿಗಳು ಪಾತ್ರದ ಜವುಗು ಪ್ರದೇಶಗಳಲ್ಲಿ ಬೇಲಿಗಳನ್ನು ಇದುವರೆಗೂ ಅಳವಡಿಸಲಾಗಿಲ್ಲ. ಪಾಕಿಸ್ಥಾನದ ಜತೆ ಗಡಿ ಹಂಚಿಕೊಳ್ಳುವ ಜಮ್ಮು-ಕಾಶ್ಮೀರ, ರಾಜಸ್ಥಾನ, ಗುಜರಾತ್ ಮತ್ತು ಪಂಜಾಬ್ಗಳು ಒಂದೊಂದು ರೀತಿಯ ಸಮಸ್ಯೆಗಳನ್ನು ಎದುರಿಸುತ್ತಿವೆ ಎಂದು ಸಮಿತಿ ತಿಳಿಸಿದೆ.

278. ಇತ್ತೀಚೆಗೆ ನಿಧನರಾದ ಖ್ಯಾತ ಚಿತ್ರಕಾರ, ಲೇಖಕ ಮತ್ತು ಕಲಾ ಚರಿತ್ರೆಕಾರ ದೀನನಾಥ ಪಥಿ ಯಾವ ರಾಜ್ಯದವರು?

ಅ) ಒಡಿಶಾ

ಆ) ಜಾರ್ಖಂಡ್

ಇ) ಪಶ್ಚಿಮ ಬಂಗಾಳ

ಈ) ಕೇರಳ

ಒಡಿಶಾ

ಒಡಿಶಾದ ಖ್ಯಾತ ಖ್ಯಾತ ಚಿತ್ರಕಾರ, ಲೇಖಕ ಮತ್ತು ಕಲಾ ಚರಿತ್ರೆಕಾರ ದೀನನಾಥ ಪಥಿ ಹೃದಯಸ್ತಂಭನದಿಂದ ನಿಧನರಾದರು. ಲಲಿತಾಕಲಾ ಅಕಾಡೆಮಿ ದೆಹಲಿ ಮತ್ತು ಭುವನೇಶ್ವರದ ಮಾಜಿ ಕಾರ್ಯದರ್ಶಿಯಾಗಿದ್ದ ಪಥಿ ಒಡಿಶಾದಲ್ಲಿ ಕಲಾ ಚಳುವಳಿಯ ಆದ್ಯ ಪ್ರವರ್ತಕರಾಗಿದ್ದರು. ಪಥಿ ಅವರು ಒಡಿಯಾ, ಇಂಗ್ಲೀಷ್ ಮತ್ತು ಜರ್ಮನಿ ಭಾಷೆಯಲ್ಲಿ ಸುಮಾರು 60ಕ್ಕೂ ಹೆಚ್ಚು ಪುಸ್ತಕಗಳನ್ನು ಬರೆದಿದ್ದರು. ಭಾರತೀಯ ಕಲಾ ಚರಿತ್ರೆಯ ಸಂಶೋಧಬೆಗೆ ನೀಡಿದ ಕೊಡುಗೆಗಾಗಿ ಅವರು ಸ್ವಿಟ್ಜರ್ಲ್ಯಾಂಡ್ನ ರೈಟ್ಬರ್ಗ್ ಸೊಸೈಟಿಯ ಪ್ರತಿಷ್ಠಿತ ರೈಟ್ ಬರ್ಗ್ ಪ್ರಶಸ್ತಿಗೆ ಭಾಜನರಾಗಿದ್ದರು.

279. "ಓಲ್ಡ್ ಹಿಸ್ಟರಿ, ನ್ಯೂ ಜಿಯಾಗ್ರಫಿ: ಬೈಫರ್ಕೆಂಟಿಗ್ ಆಂಧ್ರ ಪ್ರದೇಶ (Old History, New Geography: Bifurcating Andhra Pradesh)' ಪುಸ್ತಕದ ಲೇಖಕರು ಯಾರು?

ಅ) ರಾಮಚಂದ್ರ ಗುಹ

ಆ) ಜೈರಾಂ ರಮೇಶ್

ಇ) ಚಿದಂಬರಂ

ಈ) ಅಮೀರ್ ಗುಪ್ತ

www.karunaduexams.com

ಜೈರಾಂ ರಮೇಶ್

ಮಾಜಿ ಕೇಂದ್ರ ಪರಿಸರ ಮತ್ತು ಅರಣ್ಯ ಸಚಿವ ಹಾಗೂ ಕಾಂಗೇಸ್ ಹಿರಿಯ ನಾಯಕ ಜೈರಾಮ್ ರಮೇಶ್ ಅವರು "ಓಲ್ಡ್ ಹಿಸ್ಟರಿ, ನ್ಯೂ ಜಿಯಾಗ್ರಫಿ: ಬೈಫರ್ಕೆಂಟಿಗ್ ಆಂಧ್ರ ಪ್ರದೇಶ" ಪುಸ್ತಕದ ಲೇಖಕರು. "Making Sense of Chindia: Reflections on China and India" ಮತ್ತು "Mobilising Technology for World Development" ರಮೇಶ್ ಅವರ ಇತರೆ ಪುಸ್ತಕಗಳು.

280. ಸ್ಕಾರ್ಪೀನ್ ಜಲಾಂತರ್ಗಾಮಿ ಮಾಹಿತಿ ಸೋರಿಕೆ ಪ್ರಕರಣ ತನಿಖೆ ನಡೆಸಲು ರಕ್ಷಣಾ ಸಚಿವಾಲಯ ರಚಿಸಿರುವ ಉನ್ನತ ಮಟ್ಟದ ಸಮಿತಿಯ ಅಧ್ಯಕ್ಷರು ಯಾರು?

ಅ) ಸುನೀಲ್ ಲಂಬಾ

ಆ) ಅಶೋಕ್ ಕುಮಾರ್

ಇ) ಸುಖವೀರ್ ಸಿಂಗ್

ಈ) ಚಂದ್ರಕುಮಾರ್ ರಾಥೋಡ್

ಅಶೋಕ್ ಕುಮಾರ್

ಭಾರತದ ನೌಕಾಪಡೆಯ ಸ್ಕಾರ್ಪೀನ್ ಶ್ರೇಣಿಯ ಜಲಾಂತರ್ಗಾಮಿಯ ದತ್ತಾಂಶ ಸೋರಿಕೆ ಪ್ರಕರಣಕ್ಕೆ ಸಂಬಂಧಿಸಿದಂತೆ ತನಿಖೆ ನಡೆಸಲು ಕೇಂದ್ರ ರಕ್ಷಣಾ ಸಚಿವಾಲಯ ಡೆಪ್ಯೂಟಿ ಚೀಫ್ ಆಫ್ ನಾವಲ್ ಸ್ಟಾಫ್ ಅಡ್ಮಿರಲ್ ಅಶೋಕ್ ಕುಮಾರ್ ನೇತೃತ್ವದಲ್ಲಿ ಉನ್ನತ ಮಟ್ಟದ ಸಮಿತಿಯನ್ನು ರಚಿಸಿದೆ. ಸಮಿತಿಯು ಎಷ್ಟರ ಮಟ್ಟಿಗೆ ಮಾಹಿತಿ ಸೋರಿಕೆಯಾಗಿದೆ ಎಂಬುದರ ಬಗ್ಗೆ ಅಧ್ಯಯನ ನಡೆಸಲಿದ್ದು, ಮುಂದಿನ ತಿಂಗಳಲ್ಲಿ ತನ್ನ ವರದಿಯನ್ನು ಕೇಂದ್ರ ರಕ್ಷಣಾ ಸಚಿವ ಮನೋಹರ್ ಪಣಿಕ್ಕರ್ ಅವರಿಗೆ ಸಲ್ಲಿಸಲಿದ್ದಾರೆ.

281. ಯಾವ ಬ್ಯಾಂಕ್ ಇತ್ತೀಚೆಗೆ ಯುನಿಫೈಡ್ ಪೇಮೆಂಟ್ಸ್ ಇಂಟರ್‌ಫೇಸ್ (ಯುಪಿಐ) ಸೌಲಭ್ಯ ನೀಡುವ "ಎಂಪವರ್" ಹೆಸರಿನ ಮೊಬೈಲ್ ಆಫ್ ಪರಿಚಯಿಸಿತು?

ಅ) ಸಿಂಡಿಕೇಟ್ ಬ್ಯಾಂಕ್

ಆ) ಕೆನರಾ ಬ್ಯಾಂಕ್

ಇ) ವಿಜಯಾ ಬ್ಯಾಂಕ್

ಈ) ಭಾರತೀಯ ಸ್ಟೇಟ್ ಬ್ಯಾಂಕ್

ಕೆನರಾ ಬ್ಯಾಂಕ್

ಕರ್ನಾಟಕ ಮೂಲದ ಕೆನರಾ ಬ್ಯಾಂಕ್ ಯುನಿಫೈಡ್ ಪೇಮೆಂಟ್ಸ್ ಇಂಟರ್‌ಫೇಸ್ (ಯುಪಿಐ) ಸೌಲಭ್ಯ ನೀಡುವ "ಎಂಪವರ್" ಹೆಸರಿನ ಮೊಬೈಲ್ ಆಫ್ ಪರಿಚಯಿಸಿದೆ. ಎಂಪವರ್' (empower) ಆ್ಯಪ್ ಅನ್ನು ಗೂಗಲ್ ಪ್ಲೇ ಸ್ಟೋರ್‌ನಿಂದ ಡೌನ್‌ಲೋಡ್ ಮಾಡಿಕೊಂಡು ಬ್ಯಾಂಕ್ ಖಾತೆಯ ವಿವರಗಳನ್ನು ಬಹಿರಂಗಪಡಿಸದೆ ಸುಲಭವಾಗಿ ಹಣ

www.karunaduexams.com

ರವಾನಿಸಬಹುದು. ಕೆನರಾ ಬ್ಯಾಂಕ್‌ನ ಗ್ರಾಹಕರಲ್ಲದವರೂ ಈ ಅಪ್ಲಿಕೇಷನ್ ನೆರವಿನಿಂದ ಇತರ ಬ್ಯಾಂಕ್‌ಗಳಲ್ಲಿನ ತಮ್ಮ ಖಾತೆಗಳ ಮೂಲಕ ಹಣಕಾಸು ಸೇವೆಗಳನ್ನು ನಿರ್ವಹಿಸಬಹುದಾಗಿದೆ.

282. ಅಂತಾರಾಷ್ಟ್ರೀಯ ನಿಸರ್ಗ ಸಂರಕ್ಷಣ ಸಂಸ್ಥೆ (IUCN) ನೀಡುವ ಹೆರಿಟೇಜ್ ಹೀರೋಸ್ ಪ್ರಶಸ್ತಿಗೆ ನಾಮನಿರ್ದೇಶನಗೊಂಡಿರುವ ಏಷ್ಯಾದ ಮೊದಲಿಗ ಯಾರು?

ಅ) ಉಲ್ಲಾಸ್ ಕಾರಂತ್

ಆ) ಬಿಭೂತಿ ಲಹ್ಕರ್

ಇ) ಆಂಡ್ರ್ಯೂ ಥಾಮ್ಸನ್

ಈ) ಕೇವಿನ್ ಪೀಟರ್

ಬಿಭೂತಿ ಲಹ್ಕರ್

ಪರಿಸರವಾದಿ ಮತ್ತು ಪರಿಸರ ಸಂರಕ್ಷಣಗಾರ ಭಾರತದ ಡಾ. ಬಿಭೂತಿ ಲಹ್ಕರ್ ಅವರು ಅಂತಾರಾಷ್ಟ್ರೀಯ ನಿಸರ್ಗ ಸಂರಕ್ಷಣ ಸಂಸ್ಥೆ ನೀಡುವ ಹೆರಿಟೇಜ್ ಹೀರೋಸ್ (Heritage Heroes) ಪ್ರಶಸ್ತಿಗೆ ನಾಮನಿರ್ದೇಶನಗೊಂಡಿದ್ದಾರೆ. ಆ ಮೂಲಕ ಈ ಪ್ರತಿಷ್ಠಿತ ಪ್ರಶಸ್ತಿಗೆ ನಾಮನಿರ್ದೇಶನಗೊಂಡ ಏಷ್ಯಾದ ಅದರಲ್ಲೂ ಅಸ್ಸಾಂನ ಮೊದಲಿಗರೆನಿಸಿದ್ದಾರೆ. ಪ್ರಶಸ್ತಿಯನ್ನು ವಿಶ್ವದಾದ್ಯಂತ ಪರಿಸರ ಸಂರಕ್ಷಣೆಗೆ ಅಗಾಧ ಕೊಡುಗೆ ನೀಡುವ ಪರಿಸರ ಸಂರಕ್ಷಣಗಾರರಿಗೆ ನೀಡಲಾಗುತ್ತಿದೆ. ಡಾ.ಬಿಭೂತಿ ಲಹ್ಕರ್ ಅವರು ಮಾನಸ ರಾಷ್ಟ್ರೀಯ ಉದ್ಯಾನವನದಲ್ಲಿ ಹುಲ್ಲುಗಾವಲು, ಸಸ್ಯ ಮತ್ತು ಪ್ರಾಣಿ ಸಂಕುಲಗಳ ಸಂರಕ್ಷಣೆಗೆ ಸತತ ಎರಡು ದಶಕಗಳಿಂದ ಶ್ರಮಿಸುತ್ತಿದ್ದಾರೆ.

283. ಯಾವ ದೇಶದಲ್ಲಿ "2016 ಟೊಕಿಯೊ ಇಂಟರ್ ನ್ಯಾಷನಲ್ ಕಾನ್ಫೆರನ್ಸ್ ಆನ್ ಆಫ್ರಿಕನ್ ಡೆವಲಪ್ಮೆಂಟ್ (2016 Tokyo International Conference on African Development (TICAD)"ಅನ್ನು ಇತ್ತೀಚೆಗೆ ಆಯೋಜಿಸಲಾಗಿತ್ತು?

ಅ) ಜಪಾನ್

ಆ) ನೈಜೀರಿಯಾ

ಇ) ಕೀನ್ಯಾ

ಈ) ತಾಂಜಾನಿಯ

ಕೀನ್ಯಾ

6ನೇ ಟೊಕಿಯೊ ಇಂಟರ್ ನ್ಯಾಷನಲ್ ಕಾನ್ಫೆರನ್ಸ್ ಆನ್ ಆಫ್ರಿಕನ್ ಡೆವಲಪ್ಮೆಂಟ್ ಕೀನ್ಯಾದ ನೈರೋಬಿಯಲ್ಲಿ ಆಗಸ್ಟ್ 27-28 ರಂದು ನಡೆಯಿತು. ಇದೇ ಮೊದಲ ಬಾರಿಗೆ ಆಫ್ರಿಕಾದಲ್ಲಿ ಈ ಸಮ್ಮೇಳನವನ್ನು ಆಯೋಜಿಸಲಾಗಿತ್ತು. ಆರ್ಥಿಕ ವಿಭಿನ್ನತೆ ಮತ್ತು ಕೈಗಾರೀಕರಣದ ಮೂಲಕ ಆರ್ಥಿಕತೆ ಸುಧಾರಿಸುವುದು ಮತ್ತು ಗುಟಮಟ್ಟದ ಜೀವನಕ್ಕಾಗಿ ಆರೋಗ್ಯ ವ್ಯವಸ್ಥೆಯನ್ನು ಉತ್ತಮಪಡಿಸುವುದು ಈ ಸಮ್ಮೇಳನದ ಮೂಲ ತಿರುಳಾಗಿದೆ.

www.karunaduexams.com

284. ಈ ಕೆಳಗಿನ ಯಾವ ದೇಶ ಮುಂದಿನ ಏಷ್ಯನ್ ಟೆನ್ನಿಸ್ ಟೂರ್ ಟೂರ್ನಿಯ ಆತಿಥ್ಯವಹಿಸಲಿದೆ?

ಅ) ಬಾಂಗ್ಲದೇಶ

ಆ) ನೇಪಾಳ

ಇ) ಭೂತಾನ್

ಈ) ಭಾರತ

ಭೂತಾನ್

ಮುಂಬರುವ ಏಷ್ಯನ್ ಟೆನಿಸ್ ಟೂರ್ ಟೂರ್ನಿಯು ಭೂತಾನ್‌ನಲ್ಲಿ ನಡೆಯಲಿದೆ. ಇದರೊಂದಿಗೆ ಭೂತಾನ್ ಪ್ರತಿಷ್ಠಿತ ಟೂರ್ನಿಯ ಆತಿಥ್ಯ ವಹಿಸುತ್ತಿರುವ ಏಷ್ಯಾದ ನಾಲ್ಕನೇ ರಾಷ್ಟ್ರ ಎನಿಸಿದೆ. ಈ ಮೊದಲು ಭಾರತ, ಥಾಯ್ಲೆಂಡ್ ಮತ್ತು ಇರಾನ್‌ನಲ್ಲಿ ಟೂರ್ನಿ ನಡೆದಿತ್ತು. ಎಟಿಟಿ ಟೂರ್ನಿ ಸೆಪ್ಟೆಂಬರ್ 16ರಿಂದ 18 ರವರೆಗೆ ನಡೆಯಲಿದ್ದು, ಭೂತಾನ್ ನಲ್ಲಿ ಆಯೋಜನೆಯಾಗಿರುವ ಪ್ರಥಮ ಅಂತರರಾಷ್ಟ್ರೀಯ ಟೂರ್ನಿಯಾಗಿದೆ.

285.ಭಾರತದ ಮೊದಲ ಜವಳಿ ವಿಶ್ವವಿದ್ಯಾಲಯ(Textile University) ಯಾವ ರಾಜ್ಯದಲ್ಲಿ ಸ್ಥಾಪನೆಯಾಗಲಿದೆ?

ಅ) ಕರ್ನಾಟಕ

ಆ) ಗುಜರಾತ್

ಇ) ಮಧ್ಯ ಪ್ರದೇಶ

ಈ) ಜಾರ್ಖಂಡ್

ಗುಜರಾತ್

ಗುಜರಾತ್ನ ಸೂರತ್ ನಲ್ಲಿ ದೇಶದ ಮೊದಲ ಜವಳಿ ವಿಶ್ವವಿದ್ಯಾಲಯ ಸ್ಥಾಪನೆಗೊಳ್ಳಲಿದೆ. ಸುಮಾರು ರೂ 800-900 ಕೋಟಿ ವೆಚ್ಚವನ್ನು ಗುಜರಾತ್ ಸರ್ಕಾರ ಇದಕ್ಕಾಗಿ ವ್ಯಯಿಸಲಿದ್ದು, ಮುಂದಿನ ವರ್ಷದ ಅಂತ್ಯಕ್ಕೆ ಕಾರ್ಯಾರಂಭ ಮಾಡಲಿದೆ. ಜವಳಿ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಸಂಶೋಧನೆ, ತಂತ್ರಜ್ಞಾನ ಮತ್ತು ನುರಿತ ನೌಕರ ಸಂಪನ್ಮೂಲ ಅಭಿವೃದ್ಧಿ ಮಾಡುವ ಉದ್ದೇಶದೊಂದಿಗೆ ಈ ವಿಶ್ವವಿದ್ಯಾಲಯವನ್ನು ಸ್ಥಾಪಿಸಲಾಗುತ್ತಿದೆ.

286. ರಾಷ್ಟ್ರೀಯ ಕ್ರೀಡಾ ದಿನವನ್ನು ಯಾವ ದಿನದಂದು ಆಚರಿಸಲಾಗುತ್ತದೆ?

ಅ) ಆಗಸ್ಟ್ 26

ಆ) ಆಗಸ್ಟ್ 27

ಇ) ಆಗಸ್ಟ್ 29

ಈ) ಆಗಸ್ಟ್ 29

ಆಗಸ್ಟ್ 29

www.karunaduexams.com

ರಾಷ್ಟ್ರೀಯ ಕ್ರೀಡಾ ದಿನವನ್ನು ಪ್ರತಿವರ್ಷ ಆಗಸ್ಟ್ 29 ರಂದು ಆಚರಿಸಲಾಗುತ್ತದೆ. ಹಾಕಿ ದಂತಕಥೆ ಮೇಜರ್ ಧ್ಯಾನ್ ಚಂದ್ ಅವರ ಹುಟ್ಟಹಬ್ಬವನ್ನು ಕ್ರೀಡಾದಿನವೆಂದು ಆಚರಿಸಲಾಗುವ ಮೂಲಕ ಗೌರವಸಲ್ಲಿಸಲಾಗುತ್ತಿದೆ. ಈ ದಿನದಂದು ರಾಷ್ಟ್ರಪತಿಗಳು ಕ್ರೀಡಾ ಕ್ಷೇತ್ರದಲ್ಲಿ ವಿಶಿಷ್ಟ ಸಾಧನೆಗೈದವರಿಗೆ ರಾಷ್ಟ್ರೀಯ ಕ್ರೀಡಾ ಪ್ರಶಸ್ತಿಗಳನ್ನು ವಿತರಿಸುವರು.

287.2015ನೇ ಸಾಲಿನ ಪ್ರತಿಷ್ಠಿತ ಸರಸ್ವತಿ ಸಮ್ಮಾನ್ ಪ್ರಶಸ್ತಿಯನ್ನು ಯಾರಿಗೆ ನೀಡಲಾಗಿದೆ?

ಅ) ವಿವೇಕ್ ಸೇಠ್

ಆ) ಪದ್ಮ ಸಚ್ದೇವ

ಇ) ದೀನನಾಥ ದೇಸಾಯಿ

ಈ) ಸುಚಿತ್ರ ಭೂಷಣ್

ಪದ್ಮ ಸಚ್ದೇವ

ಖ್ಯಾತ ಡೊಗ್ರಿ ಭಾಷೆಯ ಕವಯತ್ರಿ ಮತ್ತು ಕಾದಂಬರಿಗಾರ್ತಿ ಪದ್ಮ ಸಚ್ದೇವ್ ಅವರಿಗೆ ಪ್ರತಿಷ್ಠಿತ 2015ನೇ ಸಾಲಿನ ಸರಸ್ವತಿ ಸಮ್ಮಾನ್ ಪ್ರಶಸ್ತಿಯನ್ನು ಪ್ರಧಾನ ಮಾಡಲಾಯಿತು. ಸಚ್ದೇವ್ ಅವರ ಆತ್ಮಕತೆ ಚಿತ್-ಚೇಟೆ (Chit-Chete)ಗಾಗಿ ಈ ಪ್ರಶಸ್ತಿ ಆಯ್ಕೆಯಾಗಿದೆ. ಚಿತ್-ಚೇಟೆ ಕೃತಿಯನ್ನು ಡೊಗ್ರಿ ಭಾಷೆಯಲ್ಲಿ ರಚಿಸಲಾಗಿದ್ದು, 2007 ರಲ್ಲಿ ಪ್ರಕಟಗೊಂಡಿದೆ.

288. ಯಾವ ರಾಜ್ಯದಲ್ಲಿ ಇತ್ತೀಚೆಗೆ ಪ್ರಧಾನಿ ಮೋದಿ ರವರು “ಸೌನಿ” ನೀರಾವರಿ ಯೋಜನೆಗೆ ಚಾಲನೆ ನೀಡಿದರು?

ಅ) ಗುಜರಾತ್

ಆ) ರಾಜಸ್ತಾನ

ಇ) ಪಂಜಾಬ್

ಈ) ಹರಿಯಾಣ

ಗುಜರಾತ್

ಸೌರಾಷ್ಟ್ರ ನರ್ಮದಾ ಅವತರಣ್ ಇರಿಗೇಷನ್ (ಸೌನಿ) ಯೋಜನೆಯ ಮೊದಲ ಹಂತಕ್ಕೆ ಪ್ರಧಾನಿ ಮೋದಿ ಅವರು ಗುಜರಾತ್ ನ ಜಾಮ್ ನಗರದ ಸನೊದರ ಬಳಿ ಚಾಲನೆ ನೀಡಿದರು. ಸೌನಿ ಯೋಜನೆ ಗುಜರಾತ್ನ ಬರಪೀಡಿತ ಪ್ರದೇಶವಾದ ಸೌರಾಷ್ಟ್ರ ಭಾಗದ ನೀರಿನ ಸಮಸ್ಯೆಗಳನ್ನು ಬಗೆಹರಿಸುವ ವಿವಿಧೋದ್ದೇಶ ಯೋಜನೆಯಾಗಿದೆ. ಸರ್ದಾರ್ ಸರೋವರ ಅಣೆಕಟ್ಟಿನಿಂದ ಹೆಚ್ಚಿನ ನೀರನ್ನು ಸೌರಾಷ್ಟ್ರ ಭಾಗದ 115 ಅಣೆಕಟ್ಟುಗಳಿಗೆ ಹರಿಸಿ ತುಂಬಿಸುವ ಉದ್ದೇಶವನ್ನು ಈ ಯೋಜನೆ ಹೊಂದಿದೆ. ಸೌನಿ ಯೋಜನೆಯನ್ನು 2012ರಲ್ಲಿ ನರೇಂದ್ರ ಮೋದಿ ಅವರು ಗುಜರಾತ್ ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಘೋಷಿಸಲಾಗಿತ್ತು. ಸೌರಾಷ್ಟ್ರ ಭಾಗವು 11 ಜಿಲ್ಲೆಗಳನ್ನು ಒಳಗೊಂಡಿದ್ದು, ತೀವ್ರ ಮಳೆಯ ಕೊರತೆಯಿಂದ ಜಲಕ್ಷಾಮ ಎದಿರುಸುತ್ತಿರುವ ಭಾಗವಾಗಿದೆ.

www.karunaduexams.com

289. ಈ ಕೆಳಗಿನ ಯಾವ ರಾಜ್ಯದಲ್ಲಿ "2016 ಬ್ರಿಕ್ಸ್ ಕನ್ವೆನ್ಷನ್ ಆನ್ ಟೂರಿಸಂ (BRICS Convention on Tourism)"ಗೆ ಇತ್ತೀಚೆಗೆ ಚಾಲನೆ ನೀಡಲಾಯಿತು?

ಅ) ತೆಲಂಗಣ

ಆ) ಆಂಧ್ರ ಪ್ರದೇಶ

ಇ) ಮಧ್ಯ ಪ್ರದೇಶ

ಈ) ಮಹಾರಾಷ್ಟ್ರ

ಮಧ್ಯ ಪ್ರದೇಶ

ಮಧ್ಯಪ್ರದೇಶದ ಖಜುರಾಹೋ 2016 ಬ್ರಿಕ್ಸ್ ಕನ್ವೆನ್ಷನ್ ಆನ್ ಟೂರಿಸಂಗೆ ಚಾಲನೆ ನೀಡಲಾಯಿತು. ಸೆಪ್ಟೆಂಬರ್ 1 ರಿಂದ ಆರಂಭಗೊಂಡ ಎರಡು ದಿನಗಳ ಈ ಸಮ್ಮೇಳನದಲ್ಲಿ ಬ್ರಿಕ್ಸ್ ರಾಷ್ಟ್ರಗಳ ನಡುವೆ ಪ್ರವಾಸೋದ್ಯಮ ಪ್ರೋತ್ಸಾಹಿಸುವ ಸಲುವಾಗಿ ಚರ್ಚೆ ನಡೆಯಲಿದೆ.

290. ಭಾರತದ ಮೊದಲ ಮಿಲಿಟರಿ ಪರಂಪರೆಯ ವೆಬ್ ಸೈಟ್ ಅನ್ನು ಈ ಕೆಳಗಿನ ಯಾವ ಸಂಸ್ಥೆ ಆರಂಭಿಸಿದೆ?

ಅ) Glory Foundation

ಆ) Colors Foundation

ಇ) Sports Coaching Foundation

ಈ) New India Foundation

Glory Foundation

Glory Foundation

ದೇಶದ ಮೊದಲ ಮಿಲಿಟರಿ ಪರಂಪರೆ ವೆಬ್ ಸೈಟ್ Colorsofglory.org ಅನ್ನು ಗ್ಲೋರಿ ಫೌಂಡೇಷನ್ ಆರಂಭಿಸಿದೆ. ದೇಶದ ಪ್ರಮುಖ ನಗರಗಳಲ್ಲಿ ದೇಶದ ಮಿಲಿಟರಿ ಇತಿಹಾಸ ಮತ್ತು ಪರಂಪರೆಯ ಬಗ್ಗೆ ಜಾಗೃತಿ ಮೂಡಿಸುವ ಕಾರ್ಯಕ್ರಮಗಳನ್ನು ಈ ಸಂಸ್ಥೆ ಹಮ್ಮಿಕೊಳ್ಳಲಿದೆ.

291. 2016 ಲಾಜಿಸ್ಟಿಕ್ ಸಾಧನೆ ಸೂಚ್ಯಂಕ (Logistic Performance Index)ದಲ್ಲಿ ಭಾರತ ಎಷ್ಟನೇ ಸ್ಥಾನದಲ್ಲಿದೆ?

ಅ) 23

ಆ) 66

ಇ) 35

ಈ) 78

35

www.karunaduexams.com

ವಿಶ್ವಬ್ಯಾಂಕ್ ಇತ್ತೀಚೆಗೆ ಹೊರತಂದಿರುವ 2016 ಲಾಜಿಸ್ಟಿಕ್ ಸಾಧನೆ ಸೂಚ್ಯಂಕದಲ್ಲಿ 160 ದೇಶಗಳ ಪೈಕಿ ಭಾರತ 35ನೇ ಸ್ಥಾನವನ್ನು ಪಡೆದುಕೊಂಡಿದೆ. "ಕನೆಕ್ಟಿಂಗ್ ಟು ಕಂಪ್ಲೀಟ್-2016" ಹೆಸರಿನಡಿ ಈ ವರದಿಯನ್ನು ಬಿಡುಗಡೆಗೊಳಿಸಲಾಗಿದೆ. ಈ ಸೂಚ್ಯಂಕವನ್ನು ವಿಶ್ವಬ್ಯಾಂಕ್ ಎರಡು ವರ್ಷಗಳಿಗೊಮ್ಮೆ ಬಿಡುಗಡೆಗೊಳಿಸುತ್ತಿದ್ದು, 2014 ರ ಸೂಚ್ಯಂಕದಲ್ಲಿ ಭಾರತ 54ನೇ ಸ್ಥಾನದಲ್ಲಿತ್ತು. 2016 ಸೂಚ್ಯಂಕದಲ್ಲಿ ಜರ್ಮನಿ ಪ್ರಥಮ ಸ್ಥಾನವನ್ನು ಪಡೆದುಕೊಂಡಿದೆ.

292. ಭಾರತದ ಮೊದಲ ನದಿ ದ್ವೀಪ ಜಿಲ್ಲೆ ಎನಿಸಿರುವ "ಮಜುಲಿ (Majuli)" ಯಾವ ರಾಜ್ಯದಲ್ಲಿದೆ?

ಅ) ಅಸ್ಸಾಂ

ಆ) ಅರುಣಾಚಲ ಪ್ರದೇಶ

ಇ) ಮಣಿಪುರ

ಈ) ಸಿಕ್ಕಿಂ

ಅಸ್ಸಾಂ

ಪ್ರಪಂಚದ ಅತಿದೊಡ್ಡ ದ್ವೀಪ ಪ್ರದೇಶ ಮಜುಲಿಯನ್ನು ಜಿಲ್ಲೆಯನ್ನಾಗಿ ಪರಿವರ್ತಿಸಲು ಅಸ್ಸಾಂ ಸರ್ಕಾರ ತೀರ್ಮಾನಿಸಿದ್ದು, ಸೆಪ್ಟೆಂಬರ್ 8 ರಿಂದ ಜಿಲ್ಲೆ ಸ್ಥಾನಮಾನವನ್ನು ಅಧಿಕೃತವಾಗಿ ಪಡೆದುಕೊಳ್ಳಲಿದೆ. ಆ ಮೂಲಕ ಭಾರತದ ಮೊದಲ ನದಿ ದ್ವೀಪ ಜಿಲ್ಲೆ ಎಂಬ ಖ್ಯಾತಿಗೆ ಮಜುಲಿ ಪಾತ್ರವಾಗಿದೆ. ಬ್ರಹ್ಮಪುತ್ರ ನದಿ ತಿರುವಿನಿಂದ ಮಜುಲಿ ದ್ವೀಪ ಪ್ರದೇಶ ಉಂಟಾಗಿದೆ. ಮಿಶಿಂಗ್ ಹೆಸರಿನ ಬುಡಕಟ್ಟು ಜನರು ಹೆಚ್ಚಾಗಿ ಈ ದ್ವೀಪ ಪ್ರದೇಶದಲ್ಲಿ ಕಂಡುಬರುತ್ತಾರೆ.

293. ಉಜಲ (UJALA) ಯೋಜನೆಯಡಿ ಎರಡು ಕೋಟಿ ಎಲ್ಇಡಿ ಬಲ್ಬ್ ಗಳನ್ನು ವಿತರಿಸಿದ ಮೊದಲ ರಾಜ್ಯ ಯಾವುದು?

ಅ) ಗುಜರಾತ್

ಆ) ಕರ್ನಾಟಕ

ಇ) ತಮಿಳು ನಾಡು

ಈ) ಆಂಧ್ರ ಪ್ರದೇಶ

ಗುಜರಾತ್

ಕೇಂದ್ರ ಸರ್ಕಾರದ "ಉನ್ನತ್ ಜ್ಯೋತಿ ಬೈ ಅಪರ್ಡಬಲ್ ಎಲ್ಇಡಿ ಬಲ್ಬ್ಸ್ ಫಾರ್ ಆಲ್" ಅಥವಾ ಉಜಲ ಯೋಜನೆಯಡಿ ಎರಡು ಕೋಟಿ ಎಲ್ಇಡಿ ಬಲ್ಬ್ ಗಳನ್ನು ವಿತರಿಸಿದ ಮೊದಲ ರಾಜ್ಯ ಎಂಬ ಹೆಗ್ಗಳಿಕೆಗೆ ಗುಜರಾತ್ ಪಾತ್ರವಾಗಿದೆ. ಕೇವಲ 96 ದಿನಗಳಲ್ಲಿ 42 ಲಕ್ಷ ಕುಟುಂಬಗಳಿಗೆ ಬಲ್ಬ್ಸ್ ವಿತರಿಸುವ ಮೂಲಕ ಈ ಸಾಧನೆಗೈದಿದೆ.

www.karunaduexams.com

294. “ಪ್ರಕಂಪನ (Prakampana)-2016” ವಿಪತ್ತು ನಿರ್ವಹಣಾ ಅಭ್ಯಾಸ ಇತ್ತೀಚೆಗೆ ಎಲ್ಲಿ ಆರಂಭಗೊಂಡಿತು?

ಅ) ಚೆನ್ನೈ

ಆ) ವಿಶಾಖಪಟ್ಟಣಂ

ಇ) ಕಾರವಾರ

ಈ) ಮುಂಬೈ

ವಿಶಾಖಪಟ್ಟಣಂ

ಪ್ರಕಂಪನ ಹೆಸರಿನ ವಾರ್ಷಿಕ ಜಂಟಿ ವಿಪತ್ತು ನಿರ್ವಹಣಾ ಅಭ್ಯಾಸವನ್ನು ವಿಶಾಖಪಟ್ಟಣದ ಈಸ್ಟರ್ನ್ ನಾವಲ್ ಕಮಾಂಡ್ನಲ್ಲಿ ಆರಂಭಿಸಲಾಗಿದೆ. ಪ್ರಕಂಪನ ಎಂದರೆ ಸಂಸ್ಕೃತಿಯಲ್ಲಿ ಸೈಕ್ಲೋನ್ ಎಂದರ್ಥ. ಸೂಪರ್ ಚಂಡಮಾರುತ ಸಂದರ್ಭದಲ್ಲಿ ವಿಪತ್ತು ನಿರ್ವಹಣೆ ಮತ್ತು ಹೇಗೆ ಸಹಾಯ ಮಾಡಬೇಕು ಎನ್ನುವ ಬಗ್ಗೆ ತರಭೇತಿಯನ್ನು ಈ ಅಭ್ಯಾಸದಲ್ಲಿ ನೀಡಲಾಗುವುದು. ಭಾರತೀಯ ನೌಕಪಡೆ ಈ ಅಭ್ಯಾಸವನ್ನು ಆಯೋಜಿಸುತ್ತಿದೆ.

295. “ದಿ ಅಸಸಿನೇಷನ್ ಆಫ್ ರಾಜೀವ್ ಗಾಂಧಿ: ಆನ್ ಇನ್ಸೈಡ್ ಜಾಬ್ (The Assassination of Rajiv Gandhi: An Inside Job)” ಪುಸ್ತಕದ ಲೇಖಕರು ಯಾರು?

ಅ) ನೀನಾ ಗೋಪಾಲ್

ಆ) ಜೈರಾಮ್ ರಮೇಶ್

ಇ) ದಿಗ್ವಿಜಯ್ ಸಿಂಗ್

ಈ) ತರುಣ್ ಗುಪ್ತ

ನೀನಾ ಗೋಪಾಲ್

ಖ್ಯಾತ ಪತ್ರಕರ್ತೆ ನೀನಾ ಗೋಪಾಲ್ ಅವರು “ದಿ ಅಸಸಿನೇಷನ್ ಆಫ್ ರಾಜೀವ್ ಗಾಂಧಿ: ಆನ್ ಇನ್ಸೈಡ್ ಜಾಬ್” ಪುಸ್ತಕದ ಲೇಖಕರು. ನೀನಾ ಗೋಪಾಲ್ ಗಲ್ಫ್ ಯುದ್ದ ಮತ್ತು ಕುವೈತ್ ವಿಮೋಚನೆಯನ್ನು ಪ್ರಕಟಿಸಿದ ಮೊದಲ ಮಹಿಳಾ ಪತ್ರಕರ್ತೆ. ಈ ಪುಸ್ತಕದಲ್ಲಿ ಲೇಖಕರು ರಾಜೀವ್ ಗಾಂಧಿ ಅವರ ಹತ್ಯೆಗೆ ಸಂಬಂಧಿಸಿದ ಒಳಸಂಚು ಮತ್ತು ಗಾಂಧಿ ಅವರನ್ನು ಯಾವ ಕಾರಣಕ್ಕೆ ಕೊಲ್ಲಲಾಯಿತು ಎನ್ನುವುದರ ಬಗ್ಗೆ ವಿವರಿಸಲಾಗಿದೆ.

296. ಇತ್ತೀಚೆಗೆ ಏಕದಿನ ಪಂದ್ಯದ ಇನ್ನಿಂಗ್ಸ್ ಒಂದರಲ್ಲಿ 444 ರನ್ ಗಳಿಸಿ ವಿಶ್ವ ದಾಖಲೆ ನಿರ್ಮಿಸಿದ ದೇಶ ಯಾವುದು?

ಅ) ಪಾಕಿಸ್ತಾನ

ಆ) ಇಂಗ್ಲೆಂಡ್

ಇ) ನ್ಯೂಜಿಲ್ಯಾಂಡ್

ಈ) ಆಸ್ಟ್ರೇಲಿಯಾ

www.karunaduexams.com

ಇಂಗ್ಲೆಂಡ್

ಪಾಕಿಸ್ತಾನ ವಿರುದ್ಧದ ಮೂರನೇ ಏಕದಿನ ಪಂದ್ಯದಲ್ಲಿ ಇಂಗ್ಲೆಂಡ್ ತಂಡ 444 ರನ್ ಗಳಿಸುವ ಮೂಲಕ ವಿಶ್ವ ದಾಖಲೆ ನಿರ್ಮಿಸಿದೆ. ಅಲೆಕ್ಸ್ ಹೇಲ್ಸ್ ಅವರ 171 ರನ್ ನೆರವಿನಿಂದ ಇಂಗ್ಲೆಂಡ್ ತಂಡ ಈ ಸ್ಕೋರ್ ಮಾಡಿದೆ. ಇದಕ್ಕೂ ಮುನ್ನ 2006 ರಲ್ಲಿ ನೆದರ್ಲೆಂಡ್ಸ್ ವಿರುದ್ಧ ಶ್ರೀಲಂಕಾ ತಂಡ 443/9 ಗಳಿಸಿದ್ದು ಏಕದಿಕ ಕ್ರಿಕೆಟ್ ನಲ್ಲಿ ಗರಿಷ್ಠ ಮೊತ್ತ ಎನಿಸಿತ್ತು.

297.ಮೈಕೆಲ್ ಟೆಮೆರ್ (Michael Temer) ಯಾವ ದೇಶದ ನೂತನ ಅಧ್ಯಕ್ಷರಾಗಿ ನೇಮಕಗೊಂಡರು?

ಅ) ಬ್ರೆಜಿಲ್

ಆ) ಕ್ಯೂಬಾ

ಇ) ಸ್ವೀಡನ್

ಈ) ಇಂಡೋನೇಷಿಯಾ

ಬ್ರೆಜಿಲ್

ಬ್ರೆಜಿಲ್ ನ ಮಾಜಿ ಉಪಾಧ್ಯಕ್ಷ ಮೈಕೆಲ್ ಟೆಮೆರ್ ಅವರು ದೇಶದ ನೂತನ ಅಧ್ಯಕ್ಷರಾಗಿ ಪ್ರಮಾಣ ವಚನ ಸ್ವೀಕರಿಸಿದರು. ಬ್ರೆಜಿಲ್ನ ಅಧ್ಯಕ್ಷೆಯಾಗಿದ್ದ ದಿಲ್ಮಾ ರೂಸೆಫ್ ಅವರ ವಿರುದ್ಧ ಮಂಡಿಸಲಾಗಿ ಪದಚ್ಯುತಿಯನ್ನು ಸಂಸತ್ತು ಅಂಗೀಕರಿಸಿದ ಕಾರಣ ದಿಲ್ಮಾ ರೂಸೆಪ್ ಅವರು ಹುದ್ದೆಯಿಂದ ವಜಾಗೊಂಡಿದ್ದರು. ಟೆಮೆರ್ ಅವರು 2018 ರಲ್ಲಿ ನಡೆಯಲಿರುವ ಚುನಾವಣೆ ತನಕ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಲಿದ್ದಾರ.

298. ಇತ್ತೀಚೆಗೆ ಪರಿವರ್ತಿತ ಡೀಸೆಲ್-ವಿದ್ಯುತ್ಚಾಲಿತ ಆಕ್ರಮಣಕಾರಿ ಜಲಾಂತರ್ಗಾಮಿಗಳನ್ನು ಖರೀದಿಸುವ ಸಲುವಾಗಿ ಪಾಕಿಸ್ತಾನ ಯಾವ ರಾಷ್ಟ್ರದೊಂದಿಗೆ ಒಪ್ಪಂದಕ್ಕೆ ಸಹಿಹಾಕಿತು?

ಅ) ರಷ್ಯಾ

ಆ) ಚೀನಾ

ಇ) ಅಮೆರಿಕಾ

ಈ) ಫ್ರಾನ್ಸ್

ಚೀನಾ

ಪಾಕಿಸ್ತಾನವು ಎಂಟು ಪರಿವರ್ತಿತ ಡೀಸೆಲ್-ವಿದ್ಯುತ್ಚಾಲಿತ ಆಕ್ರಮಣಕಾರಿ ಜಲಾಂತರ್ಗಾಮಿಗಳನ್ನು ಖರೀದಿಸುವ ಸಲುವಾಗಿ ಚೀನಾದೊಂದಿಗೆ ಒಪ್ಪಂದಕ್ಕೆ ಸಹಿಹಾಕಿದೆ. ಸುಮಾರು 500 ಕೋಟಿ ಅಮೆರಿಕನ್ ಡಾಲರ್ (ರೂ 34 ಸಾವಿರ ಕೋಟಿ) ಮೌಲ್ಯದ ಈ ಜಲಾಂತರ್ಗಾಮಿಗಳನ್ನು 2028ರ ವೇಳೆಗೆ ಚೀನಾದಿಂದ ಪಡೆದುಕೊಳ್ಳಲು ಪಾಕಿಸ್ತಾನ ಒಪ್ಪಂದ ಮಾಡಿಕೊಂಡಿದೆ. ಇದು ಚೀನಾದೊಂದಿಗೆ ಪಾಕಿಸ್ತಾನ ನಡೆಸಿರುವ ಅತಿ ದೊಡ್ಡ ಶಸ್ತ್ರಾಸ್ತ್ರ ಒಪ್ಪಂದವಾಗಿದೆ.

www.karunaduexams.com

299. ಇತ್ತೀಚೆಗೆ ಸುದ್ದಿಯಲ್ಲಿದ್ದ "ಅಸ್ಲಿ ತರಕ್ಕಿ (Asli Tarakki)" ಅಭಿಯಾನವನ್ನು ಕೇಂದ್ರದ ಯಾವ ಸಚಿವಾಲಯ ಜಾರಿಗೊಳಿಸಲಿದೆ?

ಅ) ಕೇಂದ್ರ ಗ್ರಾಮೀಣಭಿವೃದ್ಧಿ ಸಚಿವಾಲಯ

ಆ) ಕೇಂದ್ರ ನಗರಾಭಿವೃದ್ಧಿ ಸಚಿವಾಲಯ

ಇ) ಕೇಂದ್ರ ಗೃಹ ಸಚಿವಾಲಯ

ಈ) ಕೇಂದ್ರ ಹಣಕಾಸು ಸಚಿವಾಲಯ

ಕೇಂದ್ರ ನಗರಾಭಿವೃದ್ಧಿ ಸಚಿವಾಲಯ

ಸ್ವಚ್ಚ ಭಾರತ ಮಿಷನ್ ಅಡಿ "ಅಸ್ಲಿ ತರಕ್ಕಿ" ಎಂಬ ಹೆಸರಿನ ನೂತನ ಅಭಿಯಾನವನ್ನು ಕೇಂದ್ರ ನಗರಾಭಿವೃದ್ಧಿ ಸಚಿವಾಲಯ ಜಾರಿಗೊಳಿಸಲಿದೆ. ಮೊದಲ ಹಂತದಲ್ಲಿ ನ್ಯಾಷನಲ್ ಕ್ಯಾಪಿಟಲ್ ರಿಜನ್ ನ ಆರು ನಗರಗಳಲ್ಲಿ ಈ ಅಭಿಯಾನವನ್ನು ಅನುಷ್ಟಾನಗೊಳಿಸಿ, ನಂತರದ ದಿನಗಳಲ್ಲಿ ಇತರೆ ನಗರಗಳಲ್ಲಿ ಅಭಿಯಾನವನ್ನು ಆರಂಭಿಸಲಾಗುವುದು. ಈ ಅಭಿಯಾನದಡಿ ಉತ್ತಮ ಸಂವಹನ ಕೌಶಲ್ಯ ಮತ್ತು ನಾಯಕತ್ವ ಗುಣಹೊಂದಿರುವ 450 ಯುವ ಪುರುಷ ಮತ್ತು ಮಹಿಳೆಯರನ್ನು ಆಯ್ಕೆಮಾಡಿಕೊಳ್ಳುವ ಮೂಲಕ ಸ್ವಚ್ಚ ಭಾರತ ಮಿಷನ್ ಧ್ಯೇಯದ ಬಗ್ಗೆ ಅರಿವು ಮೂಡಿಸಲಾಗುವುದು.

300. ಈಗಿನ "ದಕ್ಷಿಣ ಏಷ್ಯಾ ಪ್ರಾದೇಶಿಕ ರಾಷ್ಟ್ರಗಳ ಒಕ್ಕೂಟ (SAARC)ನ ಸೆಕ್ರಟರಿ ಜನರಲ್ ಯಾರು?

ಅ) ಅರ್ಜುನ್ ಬಹದೂರ್ ಥಾಪ

ಆ) ಅಬ್ದುಲ್ ಹಮೀರ್ ಖಾನ್

ಇ) ಥಾಮ್ಸನ್ ಡಿಸೋಜಾ

ಈ) ಶಿವಚಂದ್ರ ನಾರಾಯಣ್

ಅರ್ಜುನ್ ಬಹದೂರ್ ಥಾಪ

www.karunaduexams.com